ಕರ್ನಾಟಕ ಸಾಹಿತ್ಯ ಅಕಾಡೆಮಿ

# ಡಾ.ಗೀತಾ ನಾಗಭೂಷಣ

## ಪ್ರಮೀಳಾ ಮಾಧವ್



ಅಕಾಡೆಮಿ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ

# ಡಾ. ಗೀತಾ ನಾಗಭೂಷಣ

ಪ್ರಧಾನ ಸಂಪಾದಕರು
ಪ್ರೊ. ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ

ಲೇಖಕರು
ಪ್ರಮೀಳಾ ಮಾಧವ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ:080–22211730/22106460
www.karnatakasahithyaacademy.org
Email: sahithya.academy@gmail.com

**Dr. GEETHA NAGABHUSHAN**
**Written by : Pramila Madav**

Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | |
|---|---|
| ಪುಟಗಳು | : xii+೧೬೦ |
| ಬೆಲೆ | : ₹ ೧೧೦/- |
| ಮೊದಲ ಮುದ್ರಣ | : ೨೦೧೬ |
| ಪ್ರತಿಗಳು | : ೫೦೦ |
| ಮುಖಪುಟ ವಿನ್ಯಾಸ | : ಅರುಣ್ ಕುಮಾರ್ ಜಿ. |

| | |
|---|---|
| Pages | : xii+160 |
| Price | : ₹ 110/- |
| First impression | : 2016 |
| Copies | : 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು-560 059.
080- 28483133 / 28484518

## ಅಧ್ಯಕ್ಷೀಯ ನುಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾಗಿದ್ದು 1961ರಲ್ಲಿ. ಅದು ಭಾಷಾವಾರು ಪ್ರಾಂತ ರಚನೆಯಾಗಿ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಕುತೂಹಲ, ಅಭಿಮಾನ, ಪ್ರೀತಿ ಸ್ಫೋಟಗೊಂಡ ಸಮಯ. ನಾಡು ನುಡಿ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟಿ ಬೆಳೆಸುವ ಹುಮ್ಮಸ್ಸಿನ ದಿನಗಳಾಗಿದ್ದವು ಅವು. ಜನರ ಬೇಡಿಕೆಗೆ ಸ್ಪಂದಿಸಿ ಅಂದಿನ ಸರಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ್ದನ್ನು ನಾವು ಇಂದು ಕೃತಜ್ಞತೆಗಳೊಂದಿಗೆ ನೆನೆಯಬೇಕು. ಆನಂತರದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಗೌಡ, ಶ್ರೀ ಕೆ.ಎಚ್. ಶ್ರೀನಿವಾಸ್ ಹಾಗೂ ಶ್ರೀ ಆರ್. ಗುಂಡೂರಾವ್‌ರಂಥ ಹಿರಿಯ ರಾಜಕಾರಣಿಗಳು ಸಾಹಿತ್ಯ ಅಕಾಡೆಮಿಯ ಸೂತ್ರಧಾರಿತ್ವ ವಹಿಸಿ ಸಮರ್ಥವಾಗಿ ಮುನ್ನಡೆಸಿದರು.

ಕನ್ನಡದ ದಿಗ್ಗಜ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯರು, ಶ್ರೀರಂಗರು ಅಕಾಡೆಮಿಗೆ ಭದ್ರಬುನಾದಿ ಹಾಕಲು ಪ್ರಯತ್ನಿಸಿದರು. ನಂತರ ಅಧ್ಯಕ್ಷರಾದ ಡಾ. ಹಾ.ಮಾ. ನಾಯಕ, ಡಾ. ನಿಸಾರ್ ಅಹಮದ್ ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಅವರುಗಳು ಅಕಾಡೆಮಿಗೆ ಖಚಿತವಾದ ರೂಪರೇಷೆಗಳ ಚೌಕಟ್ಟನ್ನು ನಿರ್ಮಿಸಿದರು. ಸಮಯದ ಬೇಡಿಕೆಗಳಿಗನುಸಾರವಾಗಿ ಹೊಸ ಯೋಜನೆಗಳನ್ನು ಕೈಗೊಂಡರು. ಅವರು ಪ್ರಕಟಿಸಿದ ಉತ್ತಮೋತ್ತಮ ಗ್ರಂಥಗಳು ಇಂದಿಗೂ ಬೇಡಿಕೆಯಲ್ಲಿವೆ. ನಂತರ ಅಧ್ಯಕ್ಷ ಸ್ಥಾನ ಸ್ವೀಕರಿಸಿದ ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಶಾಂತರಸ ಮತ್ತು ಡಾ. ಗುರುಲಿಂಗ ಕಾಪಸೆಯವರಂಥ ಹಿರಿಯ ಸುಪ್ರಸಿದ್ಧ ಸಾಹಿತಿಗಳು ತಮ್ಮ ನಿಷ್ಠೆ, ಪರಿಶ್ರಮಗಳಿಂದಾಗಿ ಅಕಾಡೆಮಿಗೆ ಘನತೆ, ಗೌರವ ತಂದುಕೊಟ್ಟರು. ಡಾ. ಗೀತಾ ನಾಗಭೂಷಣ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯರಂಥ ಸಾಹಿತಿ, ವಿದ್ವಾಂಸರು ಸಾಹಿತ್ಯ ಅಕಾಡೆಮಿಯ ತೇರನ್ನು ಮುನ್ನಡೆಸಿದರು. ಇವರೆಲ್ಲರ ಸೇವೆಯನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ನನ್ನ ಅವಧಿಯಲ್ಲಿ (2014–17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಶಿವಮೊಗ್ಗೆಯಲ್ಲಿ ಆಗಸ್ಟ್ 3, 2014 ರಂದು ಸಕಲ ಸಡಗರಗಳೊಂದಿಗೆ ನೆರವೇರಿಸಲಾಯ್ತು.

ಡಾ. ಕೆ.ವಿ. ನಾರಾಯಣರಂಥ ಹಿರಿಯ ಸಾಹಿತಿ, ವಿದ್ವಾಂಸರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಇದೇ ವೇದಿಕೆಯಲ್ಲಿ ಡಾ. ಗುರುಲಿಂಗ ಕಾಪಸೆ, ಡಾ. ಗಿರಡ್ಡಿ ಗೋವಿಂದರಾಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯ್ತು (ಡಾ. ನಿಸಾರ್ ಅಹಮದ್ ಮತ್ತು ಡಾ. ಗೀತಾ ನಾಗಭೂಷಣ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯ್ತು). ಆ ನಂತರ ಮುಂದಿನ ಎರಡು ವರ್ಷದ ಅವಧಿಯಲ್ಲಿ ಸುವರ್ಣ ಸಂಭ್ರಮದ ಯೋಜನೆಯಡಿ ಕವಿಗೋಷ್ಠಿ, ಕಮ್ಮಟ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು.

ಸುವರ್ಣ ಮಹೋತ್ಸವದ ಅಂಗವಾಗಿ ಸಮಾರೋಪ ಸಂದರ್ಭದಲ್ಲಿ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದ್ದೇವೆ.

1. ಸಾಹಿತ್ಯ ಅಕಾಡೆಮಿಯ ಹಿಂದಿನ ಹದಿನೆಂಟು ಜನ ಅಧ್ಯಕ್ಷರ ಪರಿಚಯ, ಸಾಹಿತ್ಯ ಸಾಧನೆ ಮತ್ತು ಸಾಹಿತ್ಯ ಅಕಾಡೆಮಿಗೆ ಅವರ ಸೇವೆ ಕುರಿತ ಪುಸ್ತಕ ಮಾಲೆಯನ್ನು ಪ್ರಕಟಿಸಿದ್ದೇನೆ.
2. ಕಳೆದ ಅರ್ಧ ಶತಮಾನದ ಕಾಲಾವಧಿಯಲ್ಲಿ ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳು ಜನಮನದ ಮೇಲೆ ಬೀರಿದ ಪರಿಣಾಮ ಕುರಿತ "ಪರಿಣಾಮ ಅಧ್ಯಯನ" ಗ್ರಂಥವನ್ನು ಪ್ರಕಟಿಸಿದ್ದೇನೆ.
3. ಸಾಹಿತ್ಯ ಅಕಾಡೆಮಿಯನ್ನು ಕುರಿತ ಸಾಕ್ಷ್ಯಚಿತ್ರ ನಿರ್ಮಾಣ.
4. ಕನ್ನಡ ಸಾಹಿತ್ಯ ಸಂವೇದನೆ ಕುರಿತ ರೂಪಕದ ರಂಗಪ್ರಯೋಗ.

ಸುವರ್ಣ ಮಹೋತ್ಸವದ ಉದ್ಘಾಟನೆ ಹಾಗೂ ಈ ಮಹೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಸರಣಿ ಕಾರ್ಯಕ್ರಮಗಳಲ್ಲದೆ, ಈಗ ಸಮಾರೋಪ ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲ ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಮತ್ತು ಸುವರ್ಣ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಸಲಹೆ ನೀಡಿದ ತಜ್ಞ ಸಾಹಿತಿಗಳಾದ ಡಾ. ಹಂ.ಪ. ನಾಗರಾಜಯ್ಯ, ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಅಕಾಡೆಮಿಯ ಸದಸ್ಯರಾದ ಶ್ರೀಮತಿ ಬಿ.ಟಿ. ಜಾಹ್ನವಿ ಅವರುಗಳನ್ನು ಮನಃಪೂರ್ವಕ ನೆನೆಯುತ್ತೇನೆ. ನಮ್ಮ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಮತ್ತು ಜಂಟಿ

ನಿರ್ದೇಶಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನದಲ್ಲಿ ತರಲು ಅಪಾರ ಪರಿಶ್ರಮ ವಹಿಸಿದ ರಿಜಿಸ್ಟ್ರಾರರಾದ ಶ್ರೀಮತಿ ಸಿ.ಎಚ್. ಭಾಗ್ಯ ಅವರಿಗೂ ಹೃದಯಪೂರ್ವಕ ವಂದನೆಗಳು. ಸಾಹಿತ್ಯ ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀಮತಿ ಟಿ. ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ವಿ. ಹರೀಶ್‌ಕುಮಾರ್, ಶ್ರೀ ಕೃಷ್ಣಪ್ಪ ಡಿ., ಶ್ರೀ ಹರೀಶ್ ಮತ್ತು ಶ್ರೀಮತಿ ಎಸ್.ಜಿ. ಸುಚಿತ್ರ ಇವರೆಲ್ಲರೂ ಕೈಜೋಡಿಸದಿದ್ದರೆ ಇಂಥ ಬೃಹತ್ ಕಾರ್ಯಕ್ರಮಗಳು ಅಸಾಧ್ಯ. ಇವರೆಲ್ಲರ ನಿಷ್ಠೆ, ಪರಿಶ್ರಮಗಳನ್ನು ಮನಃಪೂರ್ವಕ ನೆನೆಯುತ್ತೇನೆ. ಹಾಗೆಯೇ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016

**ಮಾಲತಿ ಪಟ್ಟಣಶೆಟ್ಟಿ**
ಅಧ್ಯಕ್ಷರು

## ಸಂಪಾದಕೀಯ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ ಇದು ಅಪರಂಜಿ ವರುಷ. ಐವತ್ತು ವರುಷ ತುಂಬಿದ ಈ ಸಾರ್ಥಕ ಸಾಧನೆಯ ಸಂದರ್ಭದಲ್ಲಿ ಸಂಸ್ಥೆಯು ತನ್ನನ್ನು ಈ ಎತ್ತರಕ್ಕೆ ಬೆಳೆಸಿದ ಹಿಂದಿನ ಅಧ್ಯಕ್ಷರುಗಳ ಸಾಧನೆಗಳನ್ನು ಕುರಿತು ಹೊತ್ತಗೆಗಳನ್ನು ಹೊರತರುತ್ತಿರುವುದು ಸಂತಸದ ಸಂಗತಿ. ಆರಂಭಕ್ಕೆ ಮಂತ್ರಿ ಮಹೋದಯರುಗಳು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಯನ್ನು ಮುನ್ನೋಟದಿಂದ ನಡೆಸಿದರು. ನಂತರ ಅಧ್ಯಕ್ಷರ ಸ್ಥಾನಕ್ಕೆ ನಾಡಿನ ಹಿರಿಯ ಸಾಹಿತಿ ಮುತ್ಸದ್ದಿಗಳನ್ನು ಆಯ್ಕೆ ಮಾಡುವ ಕ್ರಮ ಜಾರಿಗೆ ಬಂತು. ಹೀಗಾಗಿ ಈ ಪ್ರತಿಷ್ಠಿತ ಅಕಾಡೆಮಿಗೆ ಇದುವರೆಗೆ 18 ಮಂದಿ ಅಧ್ಯಕ್ಷರಾಗಿ ಅಕಾಡೆಮಿಯನ್ನು ಭಾರತ ದೇಶದ ಗಮನಾರ್ಹ ಸಾಹಿತ್ಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.

**'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ'** ಎನ್ನುವ ನಾಮನಿರ್ದೇಶನದಡಿ ಈ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿದೆ. ಒಂದು ಸಂಸ್ಥೆ ನಾಡಿನೊಳಗೆ ಸರ್ವಾಂಗೀಣವಾಗಿ, ಸಮೃದ್ಧವಾಗಿ ಬೆಳೆದು ನಾಡಿನ ಜನರ ಮೇಲೆ ದೀರ್ಘಕಾಲಿಕ ಪ್ರಭಾವವನ್ನು ಬೀರಬೇಕಾದರೆ ಅದರ ಮುಂಚೂಣಿಯಲ್ಲಿ ನಿಂತು ನಡೆಸುವ ಅಧ್ಯಕ್ಷೀಯ ಸ್ಥಾನದ ಪಾತ್ರ ಮಹತ್ವವಾದದ್ದು. ಹಾಗೆಯೇ ಒಂದು ಸಂಸ್ಥೆಯ ಇತಿಹಾಸದಲ್ಲಿ ಐವತ್ತು ವರ್ಷಗಳ ಕಾಲಮಾನ ಕೂಡ ಒಂದು ಮೈಲಿಗಲ್ಲು. ಹೀಗಾಗಿ ಇಂತಹ ಸಂದರ್ಭದಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ನಡೆಸಿದ ಹಿಂದಿನ ಅಧ್ಯಕ್ಷರುಗಳಾಗಿದ್ದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಹಾ.ಮಾ. ನಾಯಕ, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಗುರುಲಿಂಗ ಕಾಪಸೆ, ಡಾ. ರಾ.ಶಿ. (ಎಂ. ಶಿವರಾಂ), ಡಾ. ಶಾಂತರಸ, ನಾಡೋಜ ಗೀತಾ ನಾಗಭೂಷಣ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರುಗಳ ಸಾಧನೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಸೂಕ್ತವೂ, ಸಮಂಜಸವೂ ಆಗಿದೆ. ಈ ಕೃತಿಗಳನ್ನು ಶ್ರದ್ಧೆಯಿಂದ ರಚಿಸಿದ ನಾಡಿನ ವಿವಿಧ ಭಾಗದ ಬರಹಗಾರರಾದ ಶಾ.ಮಂ. ಕೃಷ್ಣರಾವ್, ಕೆ.ಎಂ. ವಿಜಯಲಕ್ಷ್ಮಿ, ಡಾ. ಪದ್ಮಾಶೇಖರ್, ಡಾ. ರಾಮಚಂದ್ರ ಗಣಾಪುರ, ಶೂದ್ರ ಶ್ರೀನಿವಾಸ್, ಎಸ್. ಮಾರುತಿ, ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಗುರುಪಾದ ಮರಿಗುದ್ದಿ, ಡಾ. ಪ್ರಭು ಖಾನಾಪುರೆ, ಡಾ. ಪ್ರಮೀಳಾ ಮಾಧವ್, ಡಾ. ಎಲ್.ಜಿ. ಮೀರಾ ಈ ಎಲ್ಲರಿಗೂ ಕೃತಜ್ಞತೆಗಳು.

ಈ ಜವಾಬ್ದಾರಿಯನ್ನು ನನಗಿತ್ತು ಈ ಕಾರ್ಯದಲ್ಲಿ ಸಂಪೂರ್ಣ ನೆರವು ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗಕ್ಕೆ ನನ್ನ ನಮ್ರ ಪ್ರಣಾಮಗಳು.

ಪ್ರೊ. ಕೆ.ಎಸ್. ಮಧುಸೂದನ
ಸಂಪಾದಕರು

# ನನ್ನ ಎರಡು ಮಾತು

ಕನ್ನಡ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಶುಭಾವಸರದಲ್ಲಿ ಅಕಾಡೆಮಿಯ ಅಧ್ಯಕ್ಷರಾಗಿದ್ದ ನಾಡೋಜ ಡಾ. ಗೀತಾನಾಗಭೂಷಣರ ಬಗ್ಗೆ ಕೃತಿಯೊಂದನ್ನು ಬರೆದು ಕೊಡಲು ನನಗೆ ತುಂಬ ಸಂತೋಷವಾಗ್ತಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಾದ ಗೀತಾ ನಾಗಭೂಷಣರು ಓರ್ವ ದಿಟ್ಟೆದೆಯ ಕ್ರಾಂತಿಕಾರೀ ಬರಹಗಾರ್ತಿಯೆಂಬುದು ಗೊತ್ತಿದ್ದರೂ ಇದುವರೆಗೂ ಅವರ ಸಮಗ್ರ ಕೃತಿಗಳನ್ನು ಓದುವ ಅವಕಾಶ ನನಗೆ ಲಭಿಸಿರಲಿಲ್ಲ.

ಮೂರುತಿಂಗಳ ಹಿಂದೆ ನನ್ನ ಹಿರಿಯ ಸಹೋದ್ಯೋಗಿಯೂ ಆತ್ಮೀಯರೂ ಆದ ಪ್ರೊ. ಕೆ.ಎಸ್.ಮಧುಸೂದನ ಅವರು ಗೀತಾ ನಾಗಭೂಷಣರವರ ಬದುಕು ಬರಹಗಳಿಗೆ ಸಂಬಂಧಿಸಿದಂತೆ ಒಂದು ಕೃತಿಯನ್ನು ಬರೆಯಲು ಹೇಳಿದ ಬೆನ್ನಿಗೇ 21.03.16 ರಂದು ಅಕಾಡೆಮಿಯಿಂದ ಕಳುಹಿಸಿದ ಆದೇಶ ಪತ್ರವೂ ನನ್ನ ಕೈಸೇರಿತು. ಆದರೆ ಬರವಣಿಗೆಗೆ ನೀಡಿದ ಕಾಲಾವಕಾಶ ನೋಡಿ ಹೌಹಾರಿದೆ. ಗೀತಾರವರು ಸುಮಾರು 50 ಕಥೆಗಳನ್ನೂ 31 ಕಾದಂಬರಿಗಳನ್ನೂ ಸಂಶೋಧನೆ, ಸಂಪಾದನೆಗಳೆಂದು ಇನ್ನಿತರ ಕೃತಿಗಳನ್ನೂ ಬರೆದಿದ್ದು ನನ್ನ ಬಳಿಯಲ್ಲಿ ಅವರ ಯಾವ ಕೃತಿಯೂ ಇರಲಿಲ್ಲ. ಎಲ್ಲವನ್ನೂ ಸಂಗ್ರಹಿಸಿ ಓದಿ ಅರಗಿಸಿ ಅಧಿಕೃತವಾಗಿ ಬರೆಯಬೇಕೆಂದರೆ ಕನಿಷ್ಠ ಮೂರು ತಿಂಗಳಾದರೂ ಬೇಕು. ಎಷ್ಟು ಉತ್ಸಾಹದಿಂದ ಬರೆಯಲು ಹೊರಟಿದ್ದೆನೋ ಅಷ್ಟೇ ಗಾಬರಿ, ನಿರಾಶೆಗಳಿಂದ ಪ್ರೊ. ಮಧುಸೂದನರನ್ನು ಸಂಪರ್ಕಿಸಿದರೆ ಅವರು ಯಾವ ಒತ್ತಡವನ್ನೂ ಹೇರದೆ ಧೈರ್ಯ, ಭರವಸೆಗಳನ್ನು ನೀಡಿದರು. ಅವರ ಸಲಹೆ, ಸೂಚನೆಯನ್ವಯ ಪುಸ್ತಕಗಳ ಸಂಗ್ರಹ ಕಾರ್ಯ ಮಾಡಿದೆ. ಬೆಂಗಳೂರಿನ ಪುಸ್ತಕ ಮಳಿಗೆಗಳನ್ನಲ್ಲದೆ ಧಾರವಾಡ, ಗುಲ್ಬರ್ಗಾ, ಮಂಗಳೂರು ಕಡೆಯೆಲ್ಲ ಸಂಪರ್ಕಿಸಿದೆ. ಅನೇಕ ಗ್ರಂಥಾಲಯಗಳಿಗೆ ನನ್ನ ವಿದ್ಯಾರ್ಥಿಗಳನ್ನೂ ಮಿತ್ರರನ್ನೂ ಕಳುಹಿಸಿದೆ. ಸಪ್ನಾದವರು 5 ಹೊಸ ಪ್ರಕಟಣೆಗಳನ್ನು ಕಳುಹಿಸಿಕೊಟ್ಟರು. ಆದರೆ ನನಗೆ ಬೇಕಾದ ಪುಸ್ತಕಗಳು ಅಲಭ್ಯವಾದಾಗ ಡಾ. ಗೀತಾ ನಾಗಭೂಷಣರನ್ನೇ ಸಂಪರ್ಕಿಸಿದೆ. ಅವರ ಸಲಹೆಯಂತೆ ಸಿವಿಜಿ, ವಿದ್ಯಾನಿಧಿ ಮುಂತಾದ ಪ್ರಕಾಶಕರನ್ನು ಸಂಪರ್ಕಿಸಿದರೆ ಏನೂ ಪ್ರಯೋಜನವಾಗಲಿಲ್ಲ. ಅಕಾಡೆಮಿಯವರಿಂದ ಕೆಲವು ಮಾಹಿತಿಗಳು ದೊರಕಿದುವೇ ವಿನಾ ಕೃತಿಗಳು ಸಿಗಲಿಲ್ಲ. ಆಮೇಲೊಂದು ದಿನ ಗೀತಾರವರೇ 15 ಕೃತಿಗಳನ್ನು ಕೊರಿಯರ್ ಮೂಲಕ ಕಳುಹಿಸಿಕೊಟ್ಟುದು ನನ್ನ ಉತ್ಸಾಹಕ್ಕೆ ಕೋಡು ಮೂಡಿಸಿದಂತಾಯ್ತು.

ಉಳಿದಂತೆ ಕೆಲವನ್ನು ನನ್ನ ವಿದ್ಯಾರ್ಥಿಗಳೂ, ಸಹೋದ್ಯೋಗಿಮಿತ್ರರೂ ತಂದುಕೊಟ್ಟರು. ಇಷ್ಟಾದರೂ ನನಗೆ ಎಲ್ಲ ಕೃತಿಗಳು ಲಭಿಸಲಿಲ್ಲ. ಆದರೂ ದೊರಕಿದ ಪುಸ್ತಕಗಳಿಂದಲೇ ಅವರ ಬದುಕು ಬರಹಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿದೆ. ಕೃತಿಗಳನ್ನು ಓದುತ್ತಿದ್ದಂತೆ ಅವುಗಳ ವಸ್ತು, ಭಾಷೆಗಳಿಗೆ ಮಾರುಹೋದೆ. ಶಿಷ್ಟಭಾಷೆಯಲ್ಲಿ ರಚಿಸಿದ ಕೃತಿಗಳು ಅವಷ್ಟಕ್ಕೇ ನಿರರ್ಗಳವಾಗಿ ಓದಿಸಿಕೊಂಡು ಹೋದರೆ ಗ್ರಾಮ್ಯಭಾಷೆಯ ಸೊಗಸು ಇನ್ನಿಲ್ಲದಂತೆ ಆಕರ್ಷಿಸಿತು. ಗೀತಾರ ವಸ್ತು, ಭಾಷೆ, ಶೈಲಿಗಳ ಗಟ್ಟಿತನಕ್ಕೆ, ವೈಚಾರಿಕ ನಿಲುವಿಗೆ ಬೆರಗಾದೆ. ಗುಲ್ಬರ್ಗಾದ ಗ್ರಾಮ್ಯಭಾಷೆಯ ಅಂದಚೆಂದ, ರುಚಿಗಳನ್ನು ಇಷ್ಟು ಚೆನ್ನಾಗಿ ಆಸ್ವಾದಿಸಿದ್ದು ಇದೇ ಮೊತ್ತಮೊದಲು. ಮತ್ತೆ ಮತ್ತೆ ಓದಬೇಕೆಂಬ ಉತ್ಸಾಹಕ್ಕೆ ಕಡಿವಾಣ ಹಾಕಿ ಬರೆಯಲು ಪ್ರಾರಂಭಿಸಿದೆ. ಸುಮಾರು ಎರಡೂವರೆ ತಿಂಗಳ ಕಾಲ ನಿರಂತರ ಅಧ್ಯಯನ ಮತ್ತು ಬರವಣಿಗೆಗಳಲ್ಲಿ ನನ್ನನ್ನು ತೊಡಗಿಸಿಕೊಂಡೆ. ಗೀತಾರವರ ಸಮಗ್ರ ಕೃತಿಗಳನ್ನು ದೊರಕಿಸಲಾಗದ ಕೊರತೆಯ ಬಗ್ಗೆ ವಿಷಾದವಿದೆ. ಇಷ್ಟು ಪರಿಮಿತವಾದ ಕಾಲಾವಕಾಶದಲ್ಲಿ ಗೀತಾರವರಂಥ ಶ್ರೇಷ್ಠ ಬರಹಗಾರ್ತಿಯ ಜೀವನ ಸಾಧನೆಯನ್ನು ಕುರಿತು ಬರೆದುದರಿಂದ ಲೋಪದೋಷಗಳು ಹಣಕಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾರೆ. ಅದಕ್ಕಾಗಿ ಸಹೃದಯರ ಕ್ಷಮೆಯನ್ನು ಕೋರುತ್ತೇನೆ.

ಈ ಕೃತಿರಚನೆಗೆ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ, ಸಹಕಾರಗಳನ್ನು ನೀಡಿದವರನ್ನು ಪ್ರೀತಿಯಿಂದ ಸ್ಮರಿಸುವುದು ನನ್ನ ಕರ್ತವ್ಯ. ಅದಕ್ಕಾಗಿ ಮೊತ್ತಮೊದಲಿಗೆ ಕೆ.ಎಸ್.ಮಧುಸೂದನರವರಿಗೆ ವಂದಿಸುತ್ತ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಭಾಗ್ಯಾ ಮತ್ತು ಇತರ ಕಾರ್ಯನಿರ್ವಾಹಕರನ್ನು, ಪುಸ್ತಕಗಳನ್ನು ದೊರಕಿಸಿದ ನನ್ನ ಸಹೋದ್ಯೋಗಿ ಮಿತ್ರರಾದ ಪ್ರೊ. ಶ್ರೀನಿವಾಸ ಮೂರ್ತಿ, ಡಾ. ಸುರೇಶ್ ಪಾಟೀಲ ಮತ್ತು ಡಾ. ಸಿದ್ದರಾಜುರವರನ್ನು, ವಿದ್ಯಾರ್ಥಿಗಳಾದ ಡಾ. ಶಾರದಾ ಮತ್ತು ರಾಮಮೂರ್ತಿಯವರನ್ನು, ಮಂಗಳೂರಿನ ನನ್ನ ಗೆಳತಿ ಶ್ರೀಮತಿ ಅರುಂಧತಿಯನ್ನು, ಮುಖ್ಯವಾಗಿ ಡಾ. ಗೀತಾ ನಾಗಭೂಷಣರವರ ವಿಶ್ವಾಸವನ್ನು ಹೃದಯಪೂರ್ವಕವಾಗಿ ನೆನೆಯುತ್ತೇನೆ.

ಬರವಣಿಗೆಗೆ ಸಹಕರಿಸಿದ ಕುಟುಂಬವರ್ಗಕ್ಕೂ ಸಹೃದಯರಾದ ತಮಗೂ ಪ್ರೀತಿಯ ನೆನಕೆಗಳು.

10–06–16 ಪ್ರಮೀಳಾ ಮಾಧವ್

## ಪರಿವಿಡಿ


| | |
|---|---|
| ಅಧ್ಯಕ್ಷೀಯ ನುಡಿ | iii |
| ಸಂಪಾದಕೀಯ | vii |
| ನನ್ನ ಎರಡು ಮಾತು | ix |
| ಸಾಧನೆಯ ಶಿಖರದಲ್ಲಿ ನಾಡೋಜ<br>ಡಾ. ಗೀತಾ ನಾಗಭೂಷಣ | 1–160 |

## ಸಾಧನೆಯ ಶಿಖರದಲ್ಲಿ ನಾಡೋಜ ಡಾ. ಗೀತಾ ನಾಗಭೂಷಣ

**ಬದುಕು:**

ಭಾರತದ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಪರಿತ್ಯಕ್ತ ಜನರ ಶೋಷಣೆಯ ಬದುಕನ್ನು ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ತೆರೆದಿಟ್ಟ ಅನನ್ಯ ಬರಹಗಾರ್ತಿ ನಾಡೋಜ ಡಾ. ಗೀತಾ ನಾಗಭೂಷಣರು. ಮಹಿಳಾ ಕೃತಿಗಳನ್ನು ಅಡುಗೆ ಮನೆಯ ಕೃತಿಗಳೆಂದು ಹೀಗಳೆಯುವ ಕಾಲವೊಂದಿತ್ತು. ಪುರುಷ ಪ್ರಧಾನ ವ್ಯವಸ್ಥೆಯ ಪೂರ್ವಗ್ರಹಪೀಡಿತ ಸಮಾಜ ಮಹಿಳೆಯರನ್ನು ಎಲ್ಲ ಬೌದ್ಧಿಕ ಚಟುವಟಿಕೆಗಳಿಂದ ದೂರವಿಟ್ಟು ವಂಚಿಸಿದರೂ ತಮ್ಮ ಸತತ ಹೋರಾಟದ ಫಲವಾಗಿ ಕಳೆದ ಶತಮಾನದ ಉತ್ತರಾರ್ಧದಿಂದ ಮಹಿಳೆಯರು ಇತರ ಕ್ಷೇತ್ರಗಳಂತೆ ಸಾಹಿತ್ಯ ಕ್ಷೇತ್ರದಲ್ಲೂ ಯಶಸ್ಸಿನ ದುಂದುಭಿಯನ್ನು ಮೊಳಗಿಸುತ್ತಿದ್ದಾರೆ. ಅಂಥ ಯಶಸ್ವೀ ಮಹಿಳೆಯರಲ್ಲಿ ಅಗ್ರಗಣ್ಯರು ಗೀತಾ ನಾಗಭೂಷಣರು.

ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಸೇರಿದಂತೆ ಹೈದ್ರಾಬಾದ್ ಕರ್ನಾಟಕದ ಭಾಷೆ, ಬದುಕು, ಸಂಸ್ಕೃತಿ ಉಳಿದ ಕರ್ನಾಟಕಕ್ಕಿಂತ ಭಿನ್ನ ಮತ್ತು ವಿಶಿಷ್ಟ. ನಿಜಾಮರ ಆಳ್ವಿಕೆಗೊಳಪಟ್ಟಿದ್ದ ಈ ಪ್ರಾಂತ್ಯ ಆರ್ಥಿಕತೆಯ ಕೊರತೆಯಷ್ಟೇ ಮೌಢ್ಯಾಚರಣೆಗಳಿಗೂ ಬಲಿಯಾಗಿದೆ. ಉರಿಯುವ ಬಿಸಿಲು, ಬಿರುಕುಬಿಟ್ಟ ಭೂಮಿ, ಬರಗಾಲ, ಅನಾವೃಷ್ಟಿ. ಬಡತನ, ಅನಕ್ಷರತೆಯೊಂದಿಗೆ ಪುರೋಹಿತಶಾಹೀ ಜನವರ್ಗದ ತುಳಿತಕ್ಕೊಳಗಾಗಿ ಜಾತೀಯತೆಯ ಕರಾಳ ವ್ಯವಸ್ಥೆಯೊಂದಿಗೆ ರಾಜಿಮಾಡಿಕೊಂಡು ಬತ್ತಲೆ ಸೇವೆ, ದೇವದಾಸಿ, ಜೋಗತಿ ಪದ್ಧತಿಗಳಿಂದ ಜೀವಚ್ಛವಗಳಂತೆ ಬಾಳುವ ನಿಮ್ನಾತಿನಿಮ್ನ ಜನವರ್ಗ. ಈ ಶೋಷಿತ ಜನಾಂಗದಲ್ಲಿ ಹುಟ್ಟಿ ಯಜಮಾನ ಪದ್ಧತಿಯ ಅನ್ಯಾಯ, ಶೋಷಣೆ, ದಬ್ಬಾಳಿಕೆ, ಹುಳುಕುಗಳನ್ನು ಬಯಲಿಗೆಳೆದು ಹಿಂದುಳಿದ ವರ್ಗದ ಬದುಕಿನ ತವಕ, ತಲ್ಲಣ, ದುಃಖ ದುಮ್ಮಾನಗಳ ಸರಮಾಲೆಯನ್ನು 50ಕ್ಕಿಂತಲೂ ಹೆಚ್ಚಿನ ಕೃತಿಗಳಲ್ಲಿ ಬಿಚ್ಚಿಟ್ಟ ಗೀತಾ ನಾಗಭೂಷಣರು ತಮ್ಮ ಕ್ರಿಯಾಶೀಲತೆ ಮತ್ತು ಸೃಜನಶೀಲತೆಗಳಿಂದ ಸಮಾಜದ ಅತ್ಯಂತ ನಿಕೃಷ್ಟ ಜನವರ್ಗದ ಬದುಕಿನ ಅತಿ ಸೂಕ್ಷ್ಮ ಮಜಲುಗಳನ್ನೂ ಯಾವುದೇ ಮುಲಾಜಿಲ್ಲದೆ ಅಕ್ಷರಗಳ ಮೂಲಕ ಸಾಕ್ಷಾತ್ಕರಿಸಿ ಕ್ರಾಂತನಿಲುವಿನ ಬರಹಗಾರ್ತಿ ಎನಿಸಿಕೊಂಡಿದ್ದಾರೆ.

50 ದಶಕಗಳಿಂದ ಕುಂದದ ಉತ್ಸಾಹ, ಲವಲವಿಕೆಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲೇ ಬಂದಿರುವ ಗೀತಾರವರು 75ರ ಹೊಸ್ತಿಲಲ್ಲಿ ಕಾಲಿಟ್ಟು ತಮ್ಮ ಬದುಕಿನ ವಜ್ರಮಹೋತ್ಸವವನ್ನು ಆಚರಿಸುವ ಸಂಭ್ರಮದ ವರ್ಷದಲ್ಲೇ ಅವರ ಕುರಿತಾದ ಕೃತಿಯೊಂದನ್ನು ರಚಿಸುವ ಸದವಕಾಶ ಲಭಿಸಿರುವುದು ನನ್ನ ಸೌಭಾಗ್ಯ.

ಗೀತಾ ನಾಗಭೂಷಣರ ಮೂಲ ಹೆಸರು ಶಾಂತಾ. ಗುಲ್ಬರ್ಗಾ ಜಿಲ್ಲೆಯ ಸಾವಳಗಿ ಎಂಬ ಗ್ರಾಮದ ಅತ್ಯಂತ ಹಿಂದುಳಿದ ತಳವಾರ (ಗಂಗಾ ಮಾತಾ) ಜನಾಂಗದ ಅನಕ್ಷರಸ್ಥ ಕುಟುಂಬದ ಶಾಂತಪ್ಪ ಮತ್ತು ಶರಣವ್ವರ ಚೊಚ್ಚಿಲ ಮಗಳಾಗಿ ಮಾರ್ಚಿ 25, 1942ರಲ್ಲಿ ಜನಿಸಿದ ಶಾಂತಾ ವಿದ್ಯಾವಂತಳಾಗಿ, ಬರಹಗಾರ್ತಿಯಾಗಿ, ಕನ್ನಡ ಸೃಜನಶೀಲ ಸಾಹಿತ್ಯ ಕ್ಷೇತ್ರ ಗುರುತಿಸುವ ಗೀತಾನಾಗಭೂಷಣರಾಗಿ, ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ, ಅಖಿಲಭಾರತದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿ ನಾಡೇ ಹೆಮ್ಮೆ ಪಡುವ ಗೌರವಾನ್ವಿತ ಮಹಿಳೆಯಾದರೆಂದರೆ ಅವರ ಸಾಧನೆಗೆ ಅವರೇ ಸಾಟಿ.

ಗೀತಾ ನಾಗಭೂಷಣರ ಬದುಕು ಮತ್ತು ಸಾಧನೆಯ ಹಾದಿಯೇನೂ ಸುಲಭವಾಗಿರಲಿಲ್ಲ. ಶೈಶವದಲ್ಲಿ ಸದಾ ಅನಾರೋಗ್ಯದಲ್ಲಿ ಬಳಲುತ್ತಿದ್ದು ಸಾವಳಗಿ ಮಠದ ಸ್ವಾಮೀಜಿಯ ಆಶೀರ್ವಾದದಿಂದ ಚೇತರಿಸಿಕೊಂಡುದೇ ಒಂದು ವಿಶೇಷ. ಅಸ್ಪೃಶ್ಯತೆಯ ವಾತಾವರಣದಲ್ಲಿ ಊಳಿಗಮಾನ್ಯ ವ್ಯವಸ್ಥೆಗೆ ಒಳಪಟ್ಟ ಬದುಕಿನಲ್ಲಿ ಬಾಲ್ಯದಿಂದಲೇ ಶೋಷಣೆಯ ನರಕ. ಮೇಲುಜಾತಿಯ ಶ್ರೀಮಂತರ ಮನೆಯಲ್ಲಿ ಜೀತಮಾಡುವ ತಾಯಿಗೆ ಅಕ್ಷರವೆಂದರೆ 'ಕಾಗೆ ಕಾಲು ಗುಬ್ಬಿ ಕಾಲು.' ಅವರಿಗೆ ಮಗಳು ಮನೆಕೆಲಸ ಕಲಿತು ಸಂಸಾರ ನಿರ್ವಹಿಸಿದರೆ ಸಾಕು ಎನ್ನುವ ಭಾವನೆ. ಐವತ್ತು ಅರವತ್ತರ ದಶಕದಲ್ಲಿ ಹೆಣ್ಣು ಮಕ್ಕಳು ವಿದ್ಯೆ ಕಲಿಯುವುದೂ ಬೆಕ್ಕಿಗೆ ರೆಕ್ಕೆ ಬಂದು ಹಾರುವುದೂ ಒಂದೆ. ಅದರಲ್ಲೂ ಇಬ್ಬಗೆಯ ಶೋಷಣೆಯ ಬೆಂಕಿಯಲ್ಲಿ ಹೆಜ್ಜೆಯಿಡುವ ದಲಿತ ಹೆಣ್ಣುಮಕ್ಕಳ ಪಾಡಂತೂ ಹೇಳಬೇಕಿಲ್ಲ. 'ನವಿಲು ಕುಣಿತಾದಂತ ಕೋಳೀನೂ ಕುಣೀಲಿಕ್ಕ ಹೋಗಿ ಕಾಲು ಮುರ್ಕೊಂಡಂಗಾಗ್ತದ,' ಎಂದು ಮಗಳು ಶಾಲೆಗೆ ಹೋಗದಿರುವಂತೆ ತಾಯಿ ದೇವರಿಗೆ ಹರಕೆಹೊತ್ತರೆ ಗುಲ್ಬರ್ಗಾದ ಎಂ.ಎಸ್,ಕೆ. ಬಟ್ಟೆಗಿರಣಿಯ ಕಾರ್ಮಿಕನಾದ ತಂದೆಗೆ ಮಗಳ ಭವಿಷ್ಯದ ಬಗ್ಗೆ ಸುಂದರವಾದ ಆಸೆ, ನಿರೀಕ್ಷೆಗಳಿದ್ದುವು. ಸ್ವಾತಂತ್ರ್ಯ ಚಳುವಳಿಯಲ್ಲಿ ಜೈಲು ಶಿಕ್ಷೆ ಅನುಭವಿಸಿದ ಅವರು ವಿದ್ಯಾವಂತರ, ಬುದ್ಧಿವಂತರ ಸಂಪರ್ಕದಿಂದ ವಿದ್ಯೆಯ ಮಹತ್ವವನ್ನು

ಅರಿತಿದ್ದರು. ಅವರಿಗೆ ರಾಮಾಯಣ, ಮಹಾಭಾರತಗಳ ಪರಿಚಯವಾಗಿತ್ತು. ತಂದೆಯಿಂದ ವಿದ್ಯಾಭ್ಯಾಸದ ಹಾದಿಗೆ ಹಸಿರು ನಿಶಾನೆ ದೊರಕಿದುದರಿಂದ ಗೀತಾ ದಲಿತಜನಾಂಗದ ಏಕೈಕ ವಿದ್ಯಾವಂತ ಹೆಣ್ಣುಮಗಳಾದರು. ತಳವಾರ ಮನೆತನದಲ್ಲಿ ಜನಿಸಿದರೂ ಬ್ರಾಹ್ಮಣರ ಕೇರಿಯ ಮೂಲೆಯಲ್ಲಿ ವಾಸಮಾಡುತ್ತಿದ್ದ ಅವರಿಗೆ ಮನೆಯಲ್ಲಿ ಓದಲು ಅನುಕೂಲವಿಲ್ಲದಾಗ ಇಂದಿರಾಬಾಯಿ ಎಂಬ ಹೃದಯವಂತ ಬ್ರಾಹ್ಮಣ ಹೆಂಗಸು ತಮ್ಮ ಮಕ್ಕಳ ಜತೆ ಓದುವ ಅವಕಾಶ ಕೊಟ್ಟರೆ ಆಕೆಯ ನಾದಿನಿ ಮಡಿಹೆಂಗಸು ಸುಂದ್ರಾಬಾಯಿಗೆ ಅದು ಸಹ್ಯವಾಗುತ್ತಿರಲಿಲ್ಲ. ಆಕೆಯಿಂದ 'ಏ$ ಶೂದ್ರ ಮುಂಡೇದೇ.. ದೂರ ಕೂಡು ಅಕಾಡಿ.. ನಮ್ಮ ಹುಡ್ರ ಸರಿಜೋಡಿ ಕುಂತು ಓದ್ತೀಯೇನೇ.. ಥೂ.. ಸಲಿಗಿ ಕೊಟ್ಟ ನಾಯಿ ತಲಿಮೂಸಿ ನೋಡಿತಂತೆ.. ಈ ಕೆಳಮಂದೀಗೆಲ್ಲ ಸಮೀಪ ಕರ್ಕೋಬ್ಯಾಡ್ರೋ ಅಂದ್ರ ನನ್ನ ಮಾತೆಲ್ಲಿ ಕೇಳ್ತಾನಾ ನನ ಮಗಾ.... ನಮ್ಮ ಪಾರುಗೋಳ ಜತಿ ಆಕಿನೂ ಓದ್ಕೋಲಿ ಪಾಪ.. ಅಂತಾನ... ಹಿಟ್ಟೊ ಬೂದಿ ಸಮಾಯೇನು?' ಎಂಬ ಭರ್ತ್ಸನೆಯನ್ನು ದಿನವೂ ಕೇಳಬೇಕು. ಜಾತೀಯತೆಯ ನೋವು ಗೀತಾರವರನ್ನು ಎಷ್ಟು ಬಾಧಿಸುತ್ತಿತ್ತು ಎಂಬುದಕ್ಕೆ ಆ ಮನೆಯಲ್ಲಿ ನಡೆದ ಉಪ್ಪಿಟ್ಟಿನ ಪ್ರಕರಣವೇ ಸಾಕ್ಷಿ. ತಮ್ಮ 'ಬಾಕಿ' ಕಾದಂಬರಿಯಲ್ಲಿ ಅಸ್ಪೃಶ್ಯತೆಯ ಅನೇಕ ನೆನಪುಗಳನ್ನು ತುಂಬ ಹೃದಯವೇಧಕವಾಗಿ ದಾಖಲಿಸುವ ಗೀತಾ 'ಬದುಕಿನಲ್ಲಿ ತಾವು ಉಂಡದ್ದೆಲ್ಲ ಬಹುಪಾಲು ಬೇವೇ, ಅಷ್ಟಿಷ್ಟು ಬೆಲ್ಲ ದೊರೆತರೂ ಬೇವಿನ ದಟ್ಟ ಕಹಿಯಲ್ಲಿ ಅದರ ಸಿಹಿ ಕರಗಿಯೇ ಹೋಗಿದೆ' ಎಂದು ಕೊರಗುತ್ತಾರೆ.

ಕಲ್ಬುರ್ಗಿಯ ಕನ್ಯಾ ಸರಕಾರಿ ಶಾಲೆಯ ವಿದ್ಯಾರ್ಥಿನಿಯಾಗಿದ್ದ ಗೀತಾ ಪಠ್ಯೇತರ ಚಟುವಟಿಕೆಗಳಲ್ಲೂ ನಿಸ್ಸೀಮೆಯಾಗಿದ್ದರು. ಶಾಲಾ ದಿನಗಳಿಂದಲೇ ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದು ಅತ್ಯುತ್ತಮ ನಟಿಯಾಗಿ ಜನಪ್ರಿಯತೆಯನ್ನು ಗಳಿಸಿದ್ದರು. ಆತ್ಮೀಯ ಗೆಳತಿಯಾಗಿದ್ದ ಇಂದಿರಾ ಮಾನ್ವಿಕರ್ ಮತ್ತು ಇತರರ ಜತೆಯಲ್ಲಿ ಆಡಿದ 'ರೊಟ್ಟಿತುತ್ತು' ಎನ್ನುವ ನಾಟಕ ಅಂತರಕಾಲೇಜಿನಲ್ಲಿ ಪ್ರಥಮಬಹುಮಾನವನ್ನು ಗಳಿಸಿದ್ದನ್ನು ಬಹಳ ಉತ್ಸಾಹದಿಂದಲೇ ಜ್ಞಾಪಿಸುತ್ತಾರೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲಿಯೇ ಮುಗಿಸಿದ ಗೀತಾ ಬಡತನದ ಕಾರಣದಿಂದ ಗುಲ್ಬರ್ಗಾದ ಕಲೆಕ್ಟರ್ ಆಫೀಸಿನಲ್ಲಿ ಗುಮಾಸ್ತೆಯ ಕೆಲಸಕ್ಕೆ ಸೇರಬೇಕಾಯ್ತು. ದುಡಿಯುತ್ತಲೇ ಶರಣಬಸವೇಶ್ವರ ಕಲಾಕಾಲೇಜಿನಲ್ಲಿ

ವಿದ್ಯಾಭ್ಯಾಸವನ್ನು ಮುಂದುವರಿಸಿ ಪದವೀಧರೆಯಾದರು. ಗೀತಾರವರ ಉದ್ಯೋಗದ ಹಾದಿಯೂ ಸುಗಮವಾಗಿರಲಿಲ್ಲ. ಅರವತ್ತರ ದಶಕದಲ್ಲಿ ಮೇಲುಜಾತಿಯವರ ಹೊಲಗದ್ದೆಗಳಲ್ಲಿ ಜೀತಮಾಡುತ್ತ, ಅವರ ಮನೆಯ ಕಸಮುಸುರೆ ತೊಳೆಯುತ್ತ ಅವರು ಎಸೆದ ಎಂಜಲನ್ನವನ್ನು ತಿನ್ನುತ್ತ ಜೀವನಯಾಪನೆ ಮಾಡಬೇಕಾದ ದಲಿತ ಹುಡುಗಿ ಕಛೇರಿಯಲ್ಲಿ ನೌಕರಿ ಮಾಡುವುದೆಂದರೇನು? ನೆರೆಮನೆಯವರ ಕಟುನುಡಿ, ಹೆತ್ತವರ ಅಳುನುಡಿ, ಸಹೋದ್ಯೋಗಿಗಳ ಕುಹಕ, ಸಹಪಾಠಿಗಳ ವ್ಯಂಗ್ಯ, ಒಡನಾಡಿಗಳ ಟೀಕೆಗಳ ಕಲ್ಲುಮುಳ್ಳುಗಳಲ್ಲಿ ಹೆಜ್ಜೆಯಿಡುತ್ತಲೇ ಸಾಗಿದ ಗೀತಾರ ಸಾಧನೆಯ ಪಥದಲ್ಲಿ ತಂದೆ ಮತ್ತು ಕೆಲವೇ ಕೆಲವು ಹಿತೈಷಿಗಳ ಸಹಕಾರ ಮಾತ್ರವೇ ದಿಕ್ಸೂಚಿಯಾಗಿತ್ತು.

ಹಳ್ಳಿಯ ಅಸ್ಪೃಶ್ಯತೆ, ಮೂಢನಂಬಿಕೆ, ಅರ್ಥಹೀನ ಕಂದಾಚಾರಗಳ ಮಧ್ಯದಲ್ಲೇ ಬಳೆದು ದೊಡ್ಡವರಾದ ಗೀತಾರವರಲ್ಲಿ ಬಾಲ್ಯದಿಂದಲೇ ಮಾನವೀಯ ಹಪಾಹಪಿ, ಪ್ರತಿಭಟನೆಯ ಮನೋಭಾವಗಳು ಮೊಳಕೆಯೊಡೆಯುತ್ತಿದ್ದುವು. ಅಜ್ಜಿ ರಾಜರಾಣಿಯರ ಕಥೆಯನ್ನು ಹೇಳಹೊರಟರೆ ಮೊಮ್ಮಗಳು ಜನಸಾಮಾನ್ಯರ ಕಥೆ ಹೇಳೆಂದು ಪೀಡಿಸುತ್ತಿದ್ದರು. (ಬಾಕಿ–178) ಊರ ಜಾತ್ರೆಯಲ್ಲಿ ನಡೆಯುತ್ತಿದ್ದ ಜೋಗತಿ, ಬೆತ್ತಲೆ ಸೇವೆಯನ್ನು ನೋಡುವಾಗ ಅವರ 'ಅಂತರಂಗದ ಅಂಗಿ ಕಿಸೆಯೊಳಗೆ ಒಂದು ಸೂಡು ಪ್ರಶ್ನೆಗಳಿರುತ್ತಿದ್ದುವು.... ಅನುಮಾನಗಳಿರುತ್ತಿದ್ದುವು...'

ಆತ್ಮವಿಶ್ವಾಸ, ಛಲ, ಸ್ವಾಭಿಮಾನ, ಅನ್ಯಾಯವನ್ನು ಪ್ರತಿಭಟಿಸುವ ಎದೆಗಾರಿಕೆ ಗೀತಾರವರಿಗೆ ತಾವು ಓದಿದ ವಿದ್ಯೆಯಿಂದ ಮಾತ್ರ ಲಭಿಸಿದ್ದಲ್ಲ. ಅದು ವಂಶದ ಬಳುವಳಿ. ತಾಯಿ ಶಾಣಮ್ಮನ ಧೈರ್ಯ, ತಂದೆ ಶಾಂತಪ್ಪನ ವಿನಯ, ವಿವೇಕ ಅವರಲ್ಲಿ ರಕ್ತಗತವಾಗಿತ್ತು. (122) ವಿದ್ಯೆ, ವಿವೇಕ, ಆತ್ಮವಿಶ್ವಾಸ, ಧೈರ್ಯ, ಸ್ವಾಭಿಮಾನ, ವೈಚಾರಿಕತೆಗಳು ಅವರ ಅಂತರಂಗದ ಶಕ್ತಿ, ಸಾಮರ್ಥ್ಯಗಳನ್ನು ಉದ್ದೀಪಿಸಿದರೆ ಉದ್ಯೋಗ, ಅಧಿಕಾರಗಳು ಸಾಧನೆಯ ಹಾದಿಯ ಕಂಟಕಗಳನ್ನು ನಿವಾರಿಸಿ ಅವರನ್ನು ಯಶಸ್ಸಿನ ಶಿಖರಕ್ಕೆ ಕರೆದೊಯ್ದುವು.

ಬಿ.ಎ. ಮುಗಿಸಿದ ಕೂಡಲೇ ಗೀತಾ ಗುಮಾಸ್ತೆಯ ಹುದ್ದೆಯನ್ನು ತೊರೆದು ಶರಣಬಸಪ್ಪ ಸಂಸ್ಥೆಯಲ್ಲಿ ತಮಗಿಷ್ಟವಾಗಿದ್ದ ಶಿಕ್ಷಕವೃತ್ತಿಗೆ ಸೇರಿ

ಬಿ.ಎಡ್ ಮಾಡಿದರು. ಸೊಲ್ಲಾಪುರದ ಕಾಲೇಜಿನಿಂದ ಸ್ನಾತಕೋತ್ತರ ಪದವೀಧರೆಯಾಗಿ ಗುಲ್ಬರ್ಗಾದ ನಾಗೇಶ್ವರ ಸಂಯುಕ್ತ ಪದವೀಪೂರ್ವ ಕಾಲೇಜಿನಲ್ಲಿ ಅಧ್ಯಾಪಿಕೆಯಾಗಿ ಅನಂತರ ಅಲ್ಲಿಯೇ ಪ್ರಾಂಶುಪಾಲರಾಗಿ ಮೂವತ್ತು ವರ್ಷ ಸೇವೆ ಸಲ್ಲಿಸಿ ನಿವೃತ್ತರಾದರು.

ಅ.ನ.ಕೃ. ಕಾರಂತ, ಕುವೆಂಪು, ಎಂ.ಕೆ. ಇಂದಿರಾ, ತ್ರಿವೇಣಿ ಮುಂತಾದವರ ಕೃತಿಗಳನ್ನು ಓದುವ ಹವ್ಯಾಸವಿದ್ದ ಗೀತಾ ವಿದ್ಯಾರ್ಥಿ ದೆಸೆಯಿಂದಲೇ ಸುಧಾ, ತರಂಗ, ಮಯೂರ, ಮಂಗಳ ಮುಂತಾದ ಮಾಸಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿ ಜನಪ್ರಿಯ ಕಥೆಗಾರ್ತಿಯಾದರು. ಶಿಕ್ಷಕಿಯಾಗಿ ಸಾವಿರಾರು ವಿದ್ಯಾರ್ಥಿಗಳನ್ನು ಸನ್ಮಾರ್ಗದಲ್ಲಿ ಬೆಳೆಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಗೀತಾರಿಗೆ ಮಾನವೀಯತೆ, ಸಮಾನತೆ, ಸ್ವಾತಂತ್ರ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ತಮ್ಮ ಒಳಗಿನ ಭಾವನೆಗಳಿಗೆ ಆಕಾರವನ್ನು ಕೊಡುವುದು ಕಷ್ಟವಾಗಲಿಲ್ಲ. 1968ರಲ್ಲಿ 'ತಾವರೆಯ ಹೂವು' ಎಂಬ ತಮ್ಮ ಮೊದಲ ಕಾದಂಬರಿಯನ್ನು ಪ್ರಕಟಿಸಿದ ಅವರು ಪ್ರಾರಂಭದ ಹಂತದಲ್ಲಿ 'ಏರಿಳಿತಗಳು', 'ಬದಲಾಗದ ಬಣ್ಣಗಳು', 'ನನ್ನ ನಿನ್ನ ನಡುವೆ', 'ಆಘಾತ', 'ಅಭಿಮಾನ', 'ಮೋಹ್ವಾ', 'ನಿನ್ನ ತೋಳುಗಳಲ್ಲಿ', 'ನನ್ನ ಒಲವು ನಿನ್ನ ಚೆಲುವು' ಮುಂತಾದ ಥಳಕು ಬೆಳಕಿನ ಕೃತಿಗಳನ್ನೇ ರಚಿಸಿದರು. ಆ ಕೃತಿಗಳಿಂದ ಅವರು ಜನಪ್ರಿಯ ಕಾದಂಬರಿಕಾರ್ತಿಯಾದರೂ ಶೋಷಿತ ಲೋಕದ ಅನ್ಯಾಯ, ಅವಮಾನಗಳನ್ನು ಅನುಭವಿಸಿದ ಬಂಡಾಯ ಮನಸ್ಸಿಗೆ ಸಾಂಪ್ರದಾಯಿಕ ಕಥೆ, ಕಾದಂಬರಿಗಳು ತೃಪ್ತಿ ನೀಡಲಿಲ್ಲ. ತಮ್ಮನ್ನು ನಿರಂತರ ಕಾಡುತ್ತಿದ್ದ ಬಡವರ, ನಿರ್ಗತಿಕರ, ಕೂಲಿಕಾರ್ಮಿಕರ, ಕೆಳವರ್ಗದ ಜೋಪಡಿಪಟ್ಟಿಯಲ್ಲಿನ ಹೆಣ್ಣುಮಕ್ಕಳ ಬದುಕಿನ ಕಟುವಾಸ್ತವದ ಚಿತ್ರಗಳನ್ನು, ಮೇಲುಜಾತಿಯ ಶ್ರೀಮಂತರ ಕಾಮಲಾಲಸೆಗೂ ಮನೆಯ ಗಂಡಸರ ದಬ್ಬಾಳಿಕೆಗೂ ಬಲಿಯಾಗುವ ಹೆಣ್ಣುಮಕ್ಕಳ ನೋವಿನ ಕತೆಗಳನ್ನು ಅಭಿವ್ಯಕ್ತಿಸಬೇಕೆಂದು ಮನಸ್ಸು ತುಡಿಯುತ್ತಿತ್ತು. 'ಹಾಂಗ ಬರೆಯೋದಾದರೆ ನೀನು ಮತ್ತೆ ಬರೆಯೋದೇ ಬ್ಯಾಡ. ನೀನು ಬರೆಯುತ್ತಿಲ್ಲ ಅಂತ ಯಾರೂ ಅಳುತ್ತಿಲ್ಲ. ನೀನು ಬರೆಯಬೇಕಾಗಿರೋದು ಹಿಂದಿನಂಥದ್ದಂತೂ ಅಲ್ಲವೇ ಅಲ್ಲ ನೀ ಬರೆಯೋದು ಬ್ಯಾರೆ ಏನೋ ಅದ.. ಅದನ್ನು ಹುಡುಕು.. ಅದನ್ನೇ ಬರಿ.. (ಬಾಕಿ–542) 'ಜೋಪಡಿ ಪಟ್ಟಿಯ ಜನಗಳ ಬಗ್ಗೆ ಬರಿ.. ಹೆಜ್ಜೆ ಹೆಜ್ಜೆಗೂ ನಿನಗೆ ಬಾರುಕೋಲಿನಿಂದ ಹೊಡೆದೂ ಹೊಡೆದೂ ಪಾಠ ಕಲಿಸ್ಯಾದಲ್ಲ ಬದುಕು.. ನಿನ್ನ

ಈ ಬದುಕಿನ ಕ್ರೌರ್ಯದ ಬಗ್ಗೆ, ಹಿಂಸೆಯ ಬಗ್ಗೆ ಬರೀ.. ಪುರುಷ ಪ್ರಧಾನ ವ್ಯವಸ್ಥೆ ಹುಟ್ಟುಹಾಕಿರುವ ಹೆಂಗಸರ ಶೋಷಣೆಯ ರೀತಿ ರಿವಾಜುಗಳ ಬಗ್ಗೆ.. ಅವರ ಹಲ್ಕಟ್ ಹುನ್ನಾರಗಳ ಬಗ್ಗೆ ಬರೀ..' (543) ಎನ್ನುವ ಮನಸ್ಸಾಕ್ಷಿಯ ಎಚ್ಚರಿಕೆಯನ್ನು ಧಿಕ್ಕರಿಸಲಾರದೆ ಎಂಬತ್ತರ ದಶಕದಿಂದ ಜನಾಂಗದ ಹೆಣ್ಣುಮಕ್ಕಳ ಪ್ರತಿನಿಧಿಯಾಗಿ ಸಮಾಜದ ವ್ಯವಸ್ಥೆಗೆ, ಸನಾತನವಾದಿಗಳಿಗೆ ಸವಾಲು ಹಾಕಿ ಬರೆಯತೊಡಗಿದರು. ಬರವಣಿಗೆಯಲ್ಲಿ ಪಳಗಿದಂತೆ ತಿದಿಯಿಂದ ಚಿಮ್ಮುವ ಕಿಡಿಯಂತೆ ಪ್ರತಿರೋಧದ ಕಿಡಿ ಹೊಮ್ಮತೊಡಗಿತು. ತಮ್ಮ ದಂಗೆಯೆಬ್ಬಿಸುವ ಬರಹಗಳಿಂದ ಗೀತಾ ಕೊಳಚೆಗೇರಿಯ ಸಾವಿರಾರು ಹೆಣ್ಣುಮಕ್ಕಳ ಪ್ರತಿನಿಧಿಯಾಗಿ ಬಾಯಿಲ್ಲದವರಿಗೆ ಬಾಯಿಯಾದರು; ವಿಚಾರವಂತರಿಗೆ ಆತ್ಮಸಾಕ್ಷಿಯಾದರು. ದಲಿತ–ಬಂಡಾಯ ಚಳುವಳಿ, ಬಸವಣ್ಣ, ಅಂಬೇಡ್ಕರ್ ವಿಚಾರಧಾರೆಗಳು ಸಾಣೆ ಹಿಡಿದ ಖಡ್ಗದಂತೆ ಅವರ ಲೇಖನಿಗೆ ಶಕ್ತಿ, ಸತ್ವವನ್ನು ನೀಡಿದುವು. ಮನಸ್ಸಿನಾಳದ ನೋವು, ದ್ವೇಷ, ಸಿಟ್ಟು, ರೋಷಗಳು ಬಿರಿದ ಅಣೆಕಟ್ಟಿನಿಂದ ಚಿಮ್ಮುವ ನೀರಧಾರೆಯಂತೆ 'ನೆಲದಿಂದುಕ್ಕುವ ಲಾವಾರಸದಂತೆ' ಚಿಮ್ಮಿ ಹರಿಯತೊಡಗಿದುವು. ವೈಯಕ್ತಿಕ ನೋವುಗಳ ಜತೆಯಲ್ಲಿ ಕೊಳೆಗೇರಿಯ ಅನ್ಯಾಯ, ಶೋಷಣೆ, ಹಾದರ, ಕಳ್ಳತನ, ಜಗಳ, ಬಡಿದಾಟ, ಮುಗ್ಧತೆ, ಮೌಢ್ಯ, ಪುರುಷ ಸಮಾಜದ ಹುಳುಕು, ಹುನ್ನಾರ, ವಿಷಯಲಾಲಸೆ, ಕಪಟನಾಟಕ, ಗೋಮುಖವ್ಯಾಘ್ರತನ ಇತ್ಯಾದಿ ಹಸಿ ಬಿಸಿ ವಸ್ತುಗಳಿಂದ, ಭಾಷೆ, ಶೈಲಿಗಳಿಂದ ಹೊಮ್ಮಿದ ಮೈ ಜುಮ್ಮೆನ್ನಿಸುವ ಬರಹಗಳು ಓದುಗರನ್ನು, ವಿಮರ್ಶಕರನ್ನು, ಮಾಧ್ಯಮದವರನ್ನು ಬೆಚ್ಚಿಸಿದುವು, ಮೆಚ್ಚಿಸಿದುವು.

ಗೀತಾರವರ ಮೊತ್ತ ಮೊದಲ ಬಂಡಾಯ ಕಾದಂಬರಿ 'ನೀಲಗಂಗಾ'. ಅನಂತರ 'ಹಸಿಮಾಂಸ ಮತ್ತು ಹದ್ದುಗಳು', 'ಮಾಪುರತಾಯಿ ಮಕ್ಕಳು' 'ದಂಗೆ', 'ಧುಮ್ಮಸು', ಆಸರೆಗಳು– ಹೀಗೆ ಬರೆಯುತ್ತಲೇ ಹೋದರು. 'ಹಸಿಮಾಂಸ ಮತ್ತು ಹದ್ದುಗಳು' ತರಂಗ ಪತ್ರಿಕೆಯಲ್ಲಿ ಧಾರವಾಹಿಯಾಗಿ ಮುಕ್ತಾಯಗೊಳ್ಳುವ ಮೊದಲೇ ದೊರೈ ಭಗವಾನ್ ನಿರ್ದೇಶನದಲ್ಲಿ 'ಹೆಣ್ಣಿನ ಕೂಗು' ಎಂಬ ಹೆಸರಿನಲ್ಲಿ ಚಲನಚಿತ್ರವಾಗಿ ಅತ್ಯಂತ ಯಶಸ್ವಿಯೂ ಆಯ್ತು.

'ಮಾಪುರತಾಯಿಯ ಮಕ್ಕಳು' ಕಾದಂಬರಿಯ ಮೂಲಕ 'ಹೆಣ್ಣು ದೇವತೆಯ ಹೆಸರಿನ ಮೇಲೆ ದಲಿತ ಹೆಣ್ಣುಗಳ ಬಟ್ಟೆ ಬಿಚ್ಚಿಸಿ, ಬೆತ್ತಲೆ ಮಾಡಿ, ಚುಂಚೂರು ಜಾತ್ರೆಯಲ್ಲಿ (ಲೇಖಕಿಯ ತಾಯಿ ಊರು) ನೆತ್ತಿಯ ಮೇಲೆ

ಸೊಡ್ಡಾರತಿ ಹೊರೆಸಿ ಅವಳ ಮೆರವಣಿಗೆ ಮಾಡಿ ಮೋಜುನೋಡುವ ರೀತಿ ರಿವಾಜು ಹರಕೆಗಳನ್ನು ದೇವಿಯ ಹೆಸರಿನ ಮೇಲೆ ಅದೇ ತಾನೆ ಮೈನೆರೆದ ಹದಿಹರೆಯದ ಹಸಿ ಮೈಯ ಹೆಣ್ಣುಗಳನ್ನು ಸೂಳೆಯಾಗಿಸಿ ಹಾದರಕ್ಕಿಳಿಸುವ ಹುನ್ನಾರುಗಳನ್ನು ಜೋಗಿಣಿ, ಜೋಗವ್ವ, ಜೋಗತಿಯೆಂದು ಕರೆದು ಅವರ ಮಾನ ಮರ್ಯಾದೆಯನ್ನು ಭರ್ರ ಬಜಾರಿನಲ್ಲಿ ಹರಾಜು ಹಾಕುವ ಹಲ್ಕಟ್ ಗಿರಿಯನ್ನು ಸಾರಾಸಗಟಾಗಿ ಬಯಲಿಗಿಟ್ಟರು' (ಬಾಕಿ. 545) ಸುಧಾ ಪತ್ರಿಕೆಯ ಸಂಪಾದಕರಾದ ಎಂ.ಬಿ. ಸಿಂಗ್, ತರಂಗದ ಸಂಪಾದಕರಾದ ಸಂತೋಷಕುಮಾರ್ ಗುಲ್ವಾಡಿ, ಮಯೂರದ ಜಿ. ಸದಾಶಿವಯ್ಯ, ಹಾಯ್ ಬೆಂಗಳೂರಿನ ರವಿಬೆಳಗೆರೆ ಮುಂತಾದವರ ಪ್ರೋತ್ಸಾಹದಿಂದ ಹಿಂದೆಂದೂ ಕಾಣದ ಯಾವ ಲೇಖಕರೂ ಯೋಚಿಸದ ಹಾದಿಯಲ್ಲಿ ತಮ್ಮ ಪ್ರತಿರೋಧದ ಫಿರಂಗಿಗಳನ್ನು ಸಿಡಿಸುತ್ತ ಸಾಗಿದರು. ಮೇಲುವರ್ಗದವರ ಬದುಕು ಮತ್ತು ಅವರು ಬರೆಯುವ ವಿಚಾರಗಳಷ್ಟೇ ಸಾಹಿತ್ಯವಲ್ಲ ಅತ್ಯಂತ ಕೆಳಸ್ತರದ ಜನರ ಜೀವನವೂ ಅಷ್ಟೇ ಮುಖ್ಯವೆಂದು ಸಾರಿದ ಗೀತಾ ತಮ್ಮ ಸುತ್ತಮುತ್ತಲಿನ ನೈಜಘಟನೆಗಳನ್ನೇ ಸೃಜನಶೀಲ ಕಲೆಯಾಗಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸ್ವೀಕಾರ ಸಂದರ್ಭದಲ್ಲಿ ತಮ್ಮ ಸಾಹಿತ್ಯರಚನೆಯ ಹಿನ್ನೆಲೆಯ ಬಗ್ಗೆ ಅವರು ಹೇಳಿದ ಮಾತುಗಳು ಇವು: 'ಇಡೀ ಕರ್ನಾಟಕದಲ್ಲಿ ನಾನೊಬ್ಬಳೇ ಶೂದ್ರ ಕಾದಂಬರಿಕಾರ್ತಿ ಮತ್ತು ಶೂದ್ರ ಮಹಿಳೆಯರ ನೋವುಗಳನ್ನು ಅಕ್ಷರಗಳಲ್ಲಿ ದಾಖಲಿಸಿದ್ದು....ಕಾದಂಬರಿಗಳನ್ನು ನಾನು ಬರೀ ನನ್ನ ಖುಷಿಗಾಗಿ ಬರೆಯಲಿಲ್ಲ. ಬದುಕುವುದಕ್ಕಾಗಿಯೂ ಬರೆಯಲಿಲ್ಲ. ನನ್ನ ಬದುಕಿಗೆ ನೌಕರಿ ಇತ್ತು. ನನ್ನ ಅನಕ್ಷರಸ್ಥ, ಅಮಾಯಕ, ಕೆಳವರ್ಗದ ಮತ್ತು ದಲಿತ ಹೆಂಗಸರ ಶೋಷಣೆಯನ್ನು ಅವರೆದೆಯಲ್ಲಿ ಹೆಪ್ಪುಗಟ್ಟಿರುವ ಸಂಕಟವನ್ನು ಕೃತಿಗಳಲ್ಲಿ ದಾಖಲಿಸಿ ಜನತೆಯ ಮುಂದೆ ಇಡಬೇಕೆಂಬ ಛಲದಿಂದ ಮತ್ತು ದೌರ್ಜನ್ಯಕ್ಕೆ ಕಾರಣರಾಗಿರುವವರ ಕಚ್ಚೆಹರಕುತನ, ಹಲ್ಕಟ್ ಗಿರಿಗಳನ್ನು ಜನರು ಅರಿಯಬೇಕೆಂಬ ಹಟದಿಂದ ಬರೆಯುತ್ತಿದ್ದೇನೆ.' ಸಾಹಿತ್ಯಲೋಕದಲ್ಲಿ ಒಮ್ಮೆಗೇ ಭೋರ್ಗರೆದ ವಿನೂತನ ವಿಚಾರಧಾರೆಯ ಸುನಾಮಿ ಅಲೆಗಳು ಗೀತಾರನ್ನು ಸಾಹಿತ್ಯ ಲೋಕದ ಎತ್ತರೆತ್ತರಕ್ಕೆ ಕರೆದೊಯ್ದುವು. ಅವರ 'ಸಣ್ಣಕಥೆಗಳು ಆಗತಾನೆ ಕರಿದ ಮಳೆಗಾಲದ ಬಿಸಿಬಿಸಿ ಮಿರ್ಚಿ, ಭಜಿಗಳಂತೆ ಖರ್ಚಾದರೆ ಕಾದಂಬರಿಗಳು ದಟ್ಟ ಜನಜಂಗುಳಿಯ ಮಾರ್ಕೆಟ್ಟಿನ ನಡುವಿನ ಚಿಕನ್ ಕಾರ್ನರ್‌ಗಳಲ್ಲಿಯ ದಮಕಾ ಮುರ್ಗಿಗಳಂತೆ ಮಾರಾಟವಾಗತೊಡಗಿದುವು.' (ಬಾಕಿ:548) 'ಹಸಿಮಾಂಸ ಮತ್ತು ಹದ್ದುಗಳು',

'ಧುಮ್ಮಸು', 'ಚಿಕ್ಕಿಯ ಹರೆಯದ ದಿನಗಳು', 'ದಂಗೆ', 'ಆಸರೆಗಳು', 'ನೀಲಗಂಗಾ', 'ಬದುಕು', 'ಕಾಗೆ ಮುಟ್ಟಿತು' ಮುಂತಾದ ಕೃತಿಗಳು ಈ ದೃಷ್ಟಿಯಿಂದ ಅಧ್ಯಯನಯೋಗ್ಯವಾಗಿವೆ.

ಗೀತಾರವರು ಈ ಬಗೆಯ ಕಾದಂಬರಿಗಳ ಮೂಲಕ ಸಾಹಿತ್ಯ ವಲಯದಲ್ಲಿ ತಮ್ಮದೇ ಛಾಪನ್ನು ಮೂಡಿಸುತ್ತ ಗಟ್ಟಿಗೊಳ್ಳುತ್ತ ಹೋದರು. ತಮ್ಮ ಅನುಭವಲೋಕವನ್ನು ವಿಸ್ತರಿಸಲು, ಬರಹಗಳಿಗೆ ಸತ್ವ, ಶಕ್ತಿಗಳನ್ನು ತುಂಬಲು ಸುತ್ತುಮುತ್ತಲಿನ ಅನೇಕ ಝೋಪಡಿಪಟ್ಟಿಗಳ, ಕೊಳಚೆಗೇರಿಗಳ ಮಹಿಳೆಯರನ್ನು ಭೇಟಿಮಾಡಿದರು, ಅವರ ದುಃಖ, ಸಂಕಟಗಳಿಗೆ ಕಿವಿಯಾದರು; ನೋವು ನಲಿವುಗಳಲ್ಲಿ ಸಹಭಾಗಿಯಾದರು. ಆದರೆ ಇದರಿಂದ ನಿಜಜೀವನದಲ್ಲಿ ಅನೇಕ ಬಗೆಯ ಅವಮಾನ, ಮಾನಸಿಕ ಹಿಂಸೆಗಳನ್ನೂ ಅನುಭವಿಸಿದರು. ಸಮಕಾಲೀನ ಬದುಕಿನ ಸ್ಥಾಪಿತ ಮೌಲ್ಯಗಳನ್ನು ಒಪ್ಪದ ಗೀತಾರವರಿಗೆ ಗಂಡನಿಗೆ ಗುಲಾಮಳಾಗಿ ಬದುಕುವ ಅಥವಾ ಸಮಸ್ಯೆಗಳೊಂದಿಗೆ ರಾಜಿಮಾಡಿಕೊಳ್ಳುವ ಗುಣವಿಲ್ಲದೆ ವೈವಾಹಿಕ ಜೀವನದಲ್ಲೂ ಸೋಲನ್ನೇ ಅನುಭವಿಸಿದರು. ಮನೆಯವರಿಂದ, ಆತ್ಮೀಯರಿಂದ ದೂರವಾದರು. ಗೀತಾರವರ ಬದುಕಿನಲ್ಲಿ ವಿಧಿಯಾಟ ಎರಡು ಮದುವೆಗಳನ್ನು ಮಾಡಿಸಿತು. ಆದರೂ ಅವರ ವೈವಾಹಿತ ಬದುಕು ಸುಸಂಪನ್ನವಾಗಲಿಲ್ಲ. ಮೊದಲ ಮದುವೆ ಎರಡೇ ವರ್ಷದಲ್ಲಿ ಮುಕ್ತಾಯಗೊಂಡು ಎರಡನೆಯ ವಿವಾಹದಿಂದ ಇಬ್ಬರು ಮಕ್ಕಳನ್ನು ಪಡೆದರೂ ದಾಂಪತ್ಯಜೀವನದಲ್ಲಿ ಕಂಡ ಕನಸುಗಳೆಲ್ಲ ಭ್ರಮನಿರಸನವಾದ ನೋವು ಅವರನ್ನು ಕೊನೆಯವರೆಗೂ ಕಾಡುತ್ತಲೇ ಇತ್ತು. ತಮ್ಮ ನಿರ್ಭಿಡೆಯ ಬರಹಗಳಿಂದಾಗಿ ನಿಂದೆ, ಅಪಮಾನ, ಬೆದರಿಕೆಗಳಿಗೆ ಬಲಿಯಾದ ಗೀತಾ ಅನೇಕರ ದ್ವೇಷವನ್ನೂ ಕಟ್ಟಿಕೊಂಡರು. 'ಛೆ.. ಒಬ್ಬಳು ಹೆಣ್ಣುಮಗಳಾಗಿ ಕಾಮದ ಬಗ್ಗೆ, ಲೈಂಗಿಕತೆಯ ಬಗ್ಗೆ ಹ್ಯಾಗ್ ಮುಲಾಜಿಲ್ಲದೆ ಬರೀತಾಳಲ್ಲ ಕೋಡಿ... ಅಸಹ್ಯ..' ಎಂದು ಮುಖ ಸಿಂಡರಿಸಿದವರಿದ್ದರು. 'ಕತಿಪತಿ ಬರ್ದರ ಬರ್ದವರ ಬದುಕೂ ಮೂರಾಬಟ್ಟಿ ಆಗ್ತದಂತ ಮಗಾ.. ಅದರಾಗ ನೀ ಅಂತೂ ಯಾವಾಗಲೂ ಅಳ್ದಕ್ಕಿ ಕತಿಗೋಳೇ ಬರೀತಿ ಕೋಡಿ. ಅದಕ್ಕೇ ನಿನ್ ಬಾಳ್ಯಾನೂ ಬೆಂಗಾಡಾಯ್ತೋ ಏನೋ ಕೋಡಿ 'ಎಂದು ಹೆತ್ತ ತಾಯಿ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿದ್ದರು. 'ಹಸಿಮಾಂಸ ಮತ್ತು ಹದ್ದುಗಳು' ಚಲನಚಿತ್ರವಾಗಿ ಗುಲ್ಬರ್ಗಾದ ಲಕ್ಷ್ಮೀ ಟಾಕೀಸಿನಲ್ಲಿ ಪ್ರದರ್ಶನವಾಗುತ್ತಿದ್ದ ಸಮಯದಲ್ಲಿ ಗಂಡನಿಂದಲೇ 'ಹಿಂತಾ ಹಲ್ಕಟ್ ಕಾದಂಬರಿ, ಕತಿ ಬರೀತ್ಯಾ..ನಾಚಿಗ್ಗೇಡಿ.. ನನ್ನ

ಮಾನ ಮರ್ವಾದಿ ಹರಾಜ ಹಾಕ್ತ್ಯಾ?... ಹಾದರಗಿತ್ತೀ' ಅಂತನ್ನಿಸಿಕೊಂಡು ಏಟು ತಿನ್ನಬೇಕಾದ ಪ್ರಸಂಗವನ್ನು ತುಂಬ ನೋವಿನಿಂದಲೇ ಗೀತಾರವರು ನೆನಪಿಸಿಕೊಳ್ಳುತ್ತಾರೆ. (ಬಾಕಿ: 549–550)ತರಕಾರಿ ಮಾರುವ ಹೆಂಗಸರು ಅನುಭವಿಸುವ ಕಿರುಕುಳ, ಕುದುರೆಮೋತಿಯ ಬೆತ್ತಲೆಸೇವೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮನೆಯವರ ವಿರೋಧ ಮಾತ್ರವಲ್ಲ ಪೋಲೀಸರ ಬೆದರಿಕೆ, ಸಾರ್ವಜನಿಕರ ನಿಂದೆ, ಕಟಕಿಗಳನ್ನೂ ಕೇಳಬೇಕಾಯ್ತು.

ಜೀವನಪ್ರೀತಿ ಮತ್ತು ಮಾನವೀಯ ಮೌಲ್ಯಗಳ ನಿರಂತರ ಹುಡುಕಾಟದಲ್ಲಿ ಬದುಕಿನ ಕಷ್ಟಕೋಟಲೆಗಳು, ಅವಮಾನದ ಏಟುಗಳು, ಕಹಿ ಘಟನೆಗಳು ಮನಸ್ಸನ್ನು ಛಿದ್ರಗೊಳಿಸಿದರೂ ಅವರ ವ್ಯಕ್ತಿತ್ವ ಬಂಡೆಗಲ್ಲಿನಂತೆ ಅನಾಹತವಾಗಿ ನಿಂತು ಉಂಡ ನೋವು, ಅವಮಾನ, ಭರ್ತ್ಸನೆಗಳನ್ನು ಪ್ರಚಂಡ ಶಕ್ತಿಯಾಗಿ ಪರಿವರ್ತಿಸಿತು. ಸಂಘಟನೆ ಮತ್ತು ಸಾಮೂಹಿಕ ಹೋರಾಟಕ್ಕಿಂತ ಸ್ವಶಕ್ತಿಯಲ್ಲಿ ಭರವಸೆಯಿಟ್ಟಿರುವ ಗೀತಾರವರ ಧೀಶಕ್ತಿ ನೆಲದ ಅಂತಸ್ಸತ್ವದೊಂದಿಗೆ ಪುಟನೆಗೆದು ಅತ್ಯಂತ ಶಕ್ತಿಪೂರ್ಣವಾದ ಕೃತಿಗಳನ್ನು ಹೊರತಂದು 'ಕನ್ನಡಿಗರ ಹೆಮ್ಮೆ', 'ನಾಡಿನ ಲೇಖಕಿಯರ ಆತ್ಮವಿಶ್ವಾಸ', 'ದಿಟ್ಟ ವ್ಯಕ್ತಿತ್ವದ ದಟ್ಟ ಬರಹಗಾರ್ತಿ' 'ಕನ್ನಡ ಸಾಹಿತ್ಯದ ಪೂರ್ಣಚಂದ್ರ' ಇತ್ಯಾದಿಯಾಗಿ ಸಹೃದಯ ವಿಮರ್ಶಾಲೋಕ ಗುರುತಿಸುವಂತೆ, ಗೌರವಿಸುವಂತೆ ಮಾಡಿತು.

ಗೀತಾ ನಾಗಭೂಷಣರ ಸಾಹಿತ್ಯ ಬದುಕು ಸಮುನ್ನತವಾದುದು. ಬಹುಶಃ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಅವರಿಗೆ ಸಂದಷ್ಟು ಪ್ರಶಸ್ತಿ, ಗೌರವಗಳು ಮತ್ತಾವ ಮಹಿಳಾ ಲೇಖಕಿಗೂ ಸಂದಿಲ್ಲ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ನಾಡೋಜ ಪ್ರಶಸ್ತಿ ಪಡೆದ ಕನ್ನಡದ ಪ್ರಥಮ ಮಹಿಳಾ ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ ಪಡೆದ ಪ್ರಥಮ ಮಹಿಳಾ ಸಾಹಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನ ಪಡೆದ ಪ್ರಥಮ ಮಹಿಳಾ ಲೇಖಕಿ, ಕೋಲ್ಕತ್ತಾದ ಭಾರತೀಯ ಭಾಷಾ ಪರಿಷದ್ ಕೋಲ್ಕತ್ತಾದ 'ರಚನಾ ಸಮಗ್ರ ಪ್ರಶಸ್ತಿ– 2011–12' ಪಡೆದ ಕನ್ನಡದ ಪ್ರಥಮ ಮಹಿಳಾ ಸಾಹಿತಿ, ಅಖಿಳ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಹೈದ್ರಾಬಾದ್ ಕರ್ನಾಟಕದ ಮೊದಲ ಮಹಿಳಾ ಸಾಹಿತಿ–ಹೀಗೆ ಅನೇಕ ಪ್ರಥಮಗಳನ್ನು ಪಡೆದ ಹೆಗ್ಗಳಿಕೆ ಅವರದು.

## ಬರಹ

ಸುಮಾರು ಎರಡೂವರೆ ಸಾವಿರ ವರ್ಷಗಳ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸುವರ್ಣಯುಗ, ವಚನಯುಗ, ದಾಸಯುಗಗಳೆಲ್ಲ ಕಳೆದು 20ನೆಯ ಶತಮಾನ ನವೋದಯ, ಪ್ರಗತಿಶೀಲ, ಬಂಡಾಯ, ನವ್ಯವೆಂದು ವಿಕಸನಗೊಂಡಿದ್ದರೂ ಈ ಕಾಲದಲ್ಲೆಲ್ಲ ಮಹಿಳೆಯರ ಬೌದ್ಧಿಕ, ಕ್ರಿಯಾತ್ಮಕ, ಚಿಂತನಶೀಲ ಚಟುವಟಿಕೆಗಳೆಲ್ಲವೂ ಹತ್ತು ಹಲವು ಸಮಸ್ಯೆ, ಸಂಕೀರ್ಣತೆಗಳ ಮಧ್ಯೆದಲ್ಲಿಯೇ ನಲುಗುತ್ತಿದ್ದುವು. 20ನೆಯ ಶತಮಾನದ ಉತ್ತರಾರ್ಧದಿಂದ ಬಿಡುಗಡೆಯ ಗಾಳಿಯನ್ನು ಸೇವಿಸುತ್ತಿದ್ದರೂ ಸಮಾಜದ ಸ್ಥಾಪಿತ ಮೌಲ್ಯಗಳಿಗೆ ಶಿರಬಾಗಿ ಪುರುಷಪ್ರಧಾನ ಸಮಾಜ ಹೇರಿದ ಕಟ್ಟುಪಾಡುಗಳೊಳಗೆಯೇ ತಮ್ಮ ಅಂತಶ್ಶಕ್ತಿಯನ್ನು ಕ್ರಿಯಾಶೀಲಗೊಳಿಸಬೇಕಾದ ಅನಿವಾರ್ಯತೆಯಿಂದ ಮಹಿಳೆ ಮುಕ್ತಳಾಗಿಲ್ಲ. ಇಂಥ ಇಕ್ಕಟ್ಟು ಬಿಕ್ಕಟ್ಟುಗಳ ಮಧ್ಯೆಯೇ ಪ್ರತಿಕೂಲ ಪರಿಸ್ಥಿತಿಯೊಂದಿಗೆ ಮುಖಾಮುಖಿಯಾಗಿ ನಿಂತು ಗೀತಾರವರು ಮೂವತ್ತಕ್ಕೂ ಹೆಚ್ಚು ಕಾದಂಬರಿಗಳನ್ನೂ ಐವತ್ತಕ್ಕೂ ಹೆಚ್ಚು ಸಣ್ಣಕಥೆಗಳನ್ನೂ ರಚಿಸಿದ್ದಾರೆಂದರೆ ಅವರ ಸಾಧನೆ ಹಾಗೂ ಸಂಕಲ್ಪಶಕ್ತಿ ಯಾರನ್ನಾದರೂ ಬೆರಗುಗೊಳಿಸದೆ ಇರದು. ಅವರ ಪ್ರತಿಯೊಂದು ಕೃತಿಯೂ ಪ್ರತ್ಯೇಕವಾಗಿ ಅಧ್ಯಯನ ಮಾಡುವಷ್ಟು ವಿಪುಲವಾದ ಮಾಹಿತಿಯನ್ನು ಒಳಗೊಂಡಿವೆ.

### ಸಣ್ಣಕತೆಗಳು

ಗೀತಾ ನಾಗಭೂಷಣರ ಸಣ್ಣಕತೆಗಳು 'ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು' ಎಂಬ ಸಮಗ್ರಕಥಾಸಂಕಲನವಾಗಿ ಸಿವಿಜಿ ಪ್ರಕಾಶನದಿಂದ ಪ್ರಕಟವಾಗಿದೆ. ಇದಕ್ಕೆ ಡಾ. ಎಚ್. ಎಸ್. ರಾಘವೇಂದ್ರರಾಯರ ಸುದೀರ್ಘವಾದ ಮುನ್ನುಡಿಯಿದೆ. ಕೇದಿಗೆ ಬನವೆಂದರೆ ಹಾವುಗಳು ನಿರಂತರ ಹರಿದಾಡುವ ಸ್ಥಳ. ಅಲ್ಲಿ ಅರಳುವ ಕೇದಗೆಯ ಅಂಚಿನಲ್ಲೆಲ್ಲ ಚುಚ್ಚುವ ಮುಳ್ಳುಗಳು. ಸದಾ ಈ ಹಾವು, ಮುಳ್ಳುಗಳ ಭಯದ ನೆರಳಿನಲ್ಲೇ ಕೇದಗೆ ಅರಳಿ ನಳನಳಿಸುವಂತೆ ಅಸ್ಪೃಶ್ಯತೆ ಮತ್ತು ಶೋಷಣೆಯ ಕಲ್ಲುಮುಳ್ಳುಗಳಲ್ಲಿ ಜೀವನಯಾಪನೆ ಮಾಡುವ ಅಮಾಯಕ, ದುರ್ಬಲ, ಜನವರ್ಗದ ಬದುಕಿನ ನೋವು, ಸಂಕಟ, ದುಃಖ ದುಮ್ಮಾನಗಳಿಗೆ ಕನ್ನಡಿ ಹಿಡಿದ ಗೀತಾರವರು ಈ ಕೃತಿಯ ಬಗ್ಗೆ ಮಾತನಾಡುತ್ತ 'ಕೆಳವರ್ಗ ಮತ್ತು ದಲಿತರನ್ನೊಳಗೊಂಡ ಇಡೀ ಶೂದ್ರ ಸಮುದಾಯಗಳ ಬದುಕಿನ ಅಸಲಿ ತುಣುಕುಗಳು ಇಲ್ಲಿ ಕತೆಯಾಗಿವೆ. ಇವುಗಳಲ್ಲಿ ನೋವಿದೆ, ಸಂಘರ್ಷವಿದೆ. ಕೆಲವೆಡೆ ರಾಜಿಯೂ ಇದೆ. ಅಂತೆಯೇ

ಶೋಷಣೆಯ ಹಲವಾರು ಮಗ್ಗಲುಗಳ ಬೆತ್ತಲೆಯೂ ಇದೆ. ಕಪ್ಪು ಮಂದಿಯ ಬದುಕಿನ ಕತ್ತಲೆಯೂ ಇದೆ. ಉಳಿಯುವಿಕೆಗಾಗಿ ನಡೆಸುವ ಬಡಿದಾಟದ ವಿವಿಧ ಸ್ತರಗಳ ಸಾಚಾತನವೆಲ್ಲ ಇಲ್ಲಿ ಕತೆಯ ಅಚ್ಚಿನಲ್ಲಿ ಆಕಾರ ತಳೆದು ನಿಂತಿವೆ.' ಎನ್ನುತ್ತಾರೆ.

**ಬದುಕು ನುಂಗುವ ಮಂದಿ**

ಸಂಕಲನದ ಮೊದಲ ಕತೆ ಇದು. ಆರು ವರ್ಷದ ಮಗಳು ಕಜರಿಯನ್ನು ತಾತ ಕುಂಟಬಸಪ್ಪನ ಸುಪರ್ದಿಗೆ ಬಿಟ್ಟು ತಾಯಿ ಮುಂಬೈಗೆ ಓಡಿಹೋದ ಮೇಲೆ ಅನಾಥೆಯಾದ ಹುಡುಗಿಯ ಬಾಲ್ಯ ನಿಂದೆ, ಮೂದಲಿಕೆ, ಹಳಸಿನ ಅನ್ನವನ್ನುಂಡು ಹೇಗೋ ಕಳೆದು ಹೋಗುತ್ತದೆ. ಮೊಗ್ಗು ಹೂವಾಗಿ ಊರ ಪುಂಡು ಪೋಕರಿಗಳ ತೊಡೆಸಂದುಗಳಿಗೆ ಕಟ್ಟಿರುವೆಗಳನ್ನು ಕಡಿಸಿದರೂ ಹೂವು ಮಾರಿ ಬದುಕು ಸಾಗಿಸುವ ಕಜರಿಗೆ ಇಜ್ಜತ್ತಿನಿಂದ ದುಡಿದು ಬದುಕುವಾಸೆ. ಕಳ್ಳರ, ಕಿಸೆಗಳ್ಳರ, ಪುಂಡರ ಸಹವಾಸ ಮತ್ತು ಆ ಬಗೆಯ ಬದುಕು ಅಸಹ್ಯವೆನಿಸಿ ಅವರ ಆಸೆ, ಬಯಕೆಗಳಿಗೆ ಸೊಪ್ಪುಹಾಕದ ಆಕೆ ಕೋತಿ ಆಡಿಸುವ ಠುಕ್ಯಾನನ್ನು ಇಷ್ಟಪಡುತ್ತಾಳೆ. ಇನ್ನೇನು ನಾಳೆ ಮದುವೆ ಅನ್ನುವಾಗ ರಾತ್ರೋರಾತ್ರಿಯೇ ಕಾಮ್ಯಾ, ವಚ್ಚ್ಯಾ, ಕರೀಮ ಎಂಬ ದುಷ್ಟರಿಂದ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾಗುತ್ತಾಳೆ. ಮರುದಿನ ಹಣಮನ್ ದೇವರ ಗುಡಿಯಲ್ಲಿ ತಾಳಿಕಟ್ಟಲು ಬಂದ ಠುಕ್ಯಾ ಮರಣಾವಸ್ಥೆಯಲ್ಲಿರುವ ಕಜರಿಯನ್ನು ನೋಡಿ ಗಾಬರಿಯಾಗುತ್ತಾನೆ. ತನ್ನ ಮೇಲೆ ಆಕ್ರಮಣ ಮಾಡಿದವರ ಹೆಸರನ್ನು ಉಚ್ಚರಿಸುತ್ತಲೇ ಕಜರಿ ಅಸುನೀಗುತ್ತಾಳೆ. ಠುಕ್ಯಾ ಪೋಲಿಸ್ ಸ್ಟೇಷನ್‌ನತ್ತ ದೌಡಾಯಿಸುತ್ತಾನೆ.

ತಮ್ಮ ಸೀಮಿತ ಬಯಕೆಗಳನ್ನೂ ಪೂರೈಸಲಾಗದ ಕೆಳವರ್ಗದ ಜನರ ಬಡತನ, ಅಸಹಾಯಕತೆ, ಶ್ರೀಮಂತರ ದರ್ಪ, ದೌಲತ್ತುಗಳು, ಧರ್ಮರಕ್ಷಣೆಯ ಪರಿಧಿಯಲ್ಲೇ ಸೆರಗು ಹಾಸುವ ಅಧರ್ಮ, ಅತ್ಯಾಚಾರಗಳು–ಇತ್ಯಾದಿಗಳ ಮೂಲಕ ಕತೆಗಾರ್ತಿ ಸಮಾಜದ ಕ್ರೌರ್ಯ ಮತ್ತು ಸ್ವಾರ್ಥವನ್ನು ಬಯಲಿಗೆಳೆಯುತ್ತಾರೆ.

**ದಾಳ**

ತಮ್ಮ ಹಳ್ಳಿಯನ್ನು ಸರಕಾರ ಮೀಸಲು ಕ್ಷೇತ್ರವೆಂದು ಘೋಷಿಸಿದಾಗ ಚುನಾವಣೆಗೆ ನಿಲ್ಲಲಾಗದ ಊರ ಗೌಡ ಒಂದಷ್ಟು ಓದು ಬರಹ ಕಲಿತ ಹೊಲಗೇರಿಯ ಕಾಶಿ ಎಂಬ ಮಹಿಳೆಯನ್ನು ತಮ್ಮ ಪಕ್ಷದ ಅಭ್ಯರ್ಥಿಯಾಗಿ

ಆಯ್ಕೆ ಮಾಡುತ್ತಾನೆ. ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ವೇಶ್ಯೆಯರ ಸಹವಾಸ ಮಾಡುತ್ತಿದ್ದ ಗಂಡ ಗೆಂಡೆಪ್ಪನ ದುರ್ಗುಣಗಳನ್ನು ಸಹಿಸುತ್ತಿದ್ದರೂ ಆತ ಬೇರೊಂದು ಹೆಣ್ಣನ್ನು ಮದುವೆಯಾಗಿ ಮನೆಗೆ ಕರೆತಂದಾಗ ಪಂಚಾಯಿತಿ ಕೂಡಿಸಿ ಹತ್ತುವರ್ಷಗಳ ಹಿಂದೆಯೇ ವಿಚ್ಛೇದನ ಪಡೆದಿದ್ದ ಕಾಶಿ ತನಗೆ ಇಷ್ಟವಿಲ್ಲದಿದ್ದರೂ ಗೆಳತಿಯರ ಮತ್ತು ಊರಗೌಡನ ಮಾತನ್ನು ತಳ್ಳಿ ಹಾಕಲಾಗದೆ ಚುನಾವಣೆಯ ಕಣಕ್ಕೆ ಇಳಿಯುತ್ತಾಳೆ. ಕಾಶಿಯ ಸಜ್ಜನಿಕೆ, ಸ್ವಭಾವಗಳು ಊರವರ ಪ್ರೀತಿ, ವಿಶ್ವಾಸಗಳನ್ನು ಗಳಿಸಿ ಅವಳನ್ನು ಚುನಾವಣೆಗೆ ಇಳಿಸುತ್ತವೆ. ಆದರೆ ವಿರೋಧ ಪಕ್ಷದ ಗೌಡನ ಅಭ್ಯರ್ಥಿಯಾದ ಗೆಂಡೆಪ್ಪ ಗೌಡನ ಹೇಳಿಕೆಯಂತೆ ನಾಮಪತ್ರ ವಾಪಸ್ಸು ಪಡೆಯಲು ಒತ್ತಾಯಿಸಿದಾಗ ಕಾಶಿ ನಿರಾಕರಿಸುತ್ತಾಳೆ. ರೊಟ್ಟಿಯನ್ನು ಪಕ್ಷದ ಚಿಹ್ನೆಯಾಗಿ ಆರಿಸಿದ ಕಾಶಿಗೆ ವಿಜಯದ ಮುನ್ಸೂಚನೆಗಳು ಕಾಣಿಸುತ್ತವೆ. ಹೆಣ್ಣಿನ ಮುಂದೆ ಸೋಲೊಪ್ಪಲು ಸಿದ್ಧನಿಲ್ಲದ ವಿರೋಧಪಕ್ಷದ ಗೌಡನ ಕುಮ್ಮಕ್ಕಿನಿಂದ ಗೆಂಡೆಪ್ಪ ರಾತ್ರೋರಾತ್ರಿ ಅವಳ ಮೇಲೆ ಅತ್ಯಾಚಾರ ಮಾಡಿ ಬರ್ಬರವಾಗಿ ಹತ್ಯೆಗೈಯುತ್ತಾನೆ.

ನ್ಯಾಯದ ಹಾದಿಯಲ್ಲಿ ಹೆಜ್ಜೆಯಿಟ್ಟ, ಉತ್ತಮ ಗುಣಗಳಿದ್ದ ಮಹಿಳೆಯೊಬ್ಬಳು ಸಮಾಜದ ಶ್ರೀಮಂತ ಜಮೀನ್ದಾರರ ರಾಜಕೀಯ ಸ್ವಾರ್ಥಸಾಧನೆಗೆ ದಾಳವಾಗುವುದನ್ನು ಚಿತ್ರಿಸಿ ಸಮಾಜದಲ್ಲಿ ಹೆಣ್ಣುಮಕ್ಕಳ ಯಶಸ್ಸಿನ ಹಾದಿ ಎಷ್ಟು ದುರ್ಗಮವೆಂಬುದನ್ನು ಕಥೆ ಸಾಬೀತುಗೊಳಿಸುತ್ತದೆ.

**ಹುಲಿಗ್ಯಾ**

'ಹುಲಿಗ್ಯಾ ಸೀದಾ ಸಾಫ ಸರಳ ಮನಶ್ಯಾ..ಏಚು ಪೇಚು ಹಿಂದಾ ಮುಂದಾ, ಸುಳ್ಳಾ ಸೊಗಡಾ, ಹುಷಾರು ಚಾಲಾಕು–.. ಒಂದೂ ಗೊತ್ತಿಲ್ಲದ ಭೋಳ್ಯಾ ಮನಶ್ಯಾ.. ಕುಕ್ಕಣ್ಣಿ ಸಾಕಿದ ನಾಯಿ ಕಾಳ್ಯಾ ಯಾರರೆ ಹೊಡೆದರೆ ತಿರಗಿ ನಿಂತು.. ಬಾಲಾ ನಿಗರಿಸಿ, ಗುರ್ರೆಂದತ್ತು ಖರೇ, ಆದರೆ ಈ ಹುಲಿಗ್ಯಾ ಮಾತರೆ ಯಾರ ಮುಂದನೂ ತೆಲಿಯೆತ್ತಿ, ಜೊಗ್ಗಿ ಮಾತಾಡಿದ್ದು ಯಾರೂ ಕಂಡಿಲ್ಲ.. ಭೀಮನ್ನಂತಾ ಆಕಾರಿದ್ದರೂ ಮನಸ್ಸು ಮಾತ್ರ ಹಸಿಗೂಸಿದ್ದಂತೆ.' ಇಂಥ ಆಳುಮಗ ತನ್ನ ಯಜಮಾನನನ್ನೇ ಕೊಂದ ಕತೆ 'ಹುಲಿಗ್ಯಾ'.

ಹುಲಿಗ್ಯಾ ತಂದೆಯಿಲ್ಲದೆ ತಾಯಿಯ ಆರೈಕೆಯಲ್ಲಿ ಬೆಳೆದವನು. ಕುಂಡಿ ತೊಳೆಯಲು ಬರದ ಪ್ರಾಯದಲ್ಲೇ ರಾಮಪ್ಪ ಕುಕ್ಕಣ್ಣಿಯ ಮನೆಯ ದನಕಾಯುತ್ತ ಎಂಜಿಲನ್ನ ತಿನ್ನುತ್ತ ಆತನ ಖಾಸಾ ಆಳುಮಗನಾಗುತ್ತಾನೆ. 'ಕುಕ್ಕಣ್ಣಿ ತನ್ನ ಕೊಬ್ಬಿದ ನಾಯಿಯನ್ನು ಕಂಡು ಹಿಗ್ಗುವಂತೆ ಹುಲಿಗ್ಯಾನನ್ನೂ

ಕಂಡು ಹಿಗ್ಗುತ್ತಿದ್ದ, ಮೈ ಸವರುತ್ತಿದ್ದ. ಹುಲಿಗ್ಯಾ ಪ್ರಾಯಕ್ಕೆ ಬಂದಾಗ ತಾಯಿ ಕಂಟಿವ್ವ ಹಳ್ಳಿಯ ಅನಾಥ ಹುಡುಗಿ ಲಕ್ಕಿಯನ್ನು ತಂದು ಮದುವೆ ಮಾಡಿಸಿ ನಾಲ್ಕಾರು ವರ್ಷ ಕಳೆದರೂ ಬಾಳೆ ಸುಳಿಯಂಥ ಸೊಸೆಯ ಹೊಟ್ಟೆಯಲ್ಲಿ ಚಿಗುರೊಂದು ಹುಟ್ಟದ ಚಿಂತೆಯಲ್ಲಿ ಕೊರಗಿ ತೀರಿಹೋಗುತ್ತಾಳೆ. ಊರಿನ ಮಠದ ಸ್ವಾಮಿಗೂ ಕುಕ್ಕಣ್ಣಿಗೂ ಸಂಗವ್ವನೆಂಬ ಹೆಣ್ಣಿನ ಕಾರಣಕ್ಕೆ ಜಗಳವಾಗಿ ಕುಕ್ಕಣ್ಣಿಯ ಕಡೆಯಿಂದ ಸ್ವಾಮಿಯ ಕೊಲೆಯ ಪ್ರಯತ್ನ ನಡೆಯುತ್ತದೆ. ಕೊಲೆಗಾರರ ತಂಡದಲ್ಲಿದ್ದ ಹುಲಿಗ್ಯಾ ಕೊಲೆ ಕೇಸಿನಲ್ಲಿ 5 ವರ್ಷ ಜೈಲುವಾಸವನ್ನು ಅನುಭವಿಸುತ್ತಾನೆ.

ಊರಲ್ಲಿ ಬರಗಾಲ ಬಂದು ಕೊಳೆಗೇರಿ, ಕೆಳಗೇರಿಯ ಜನರೆಲ್ಲ ಗುಳೆ ಹೋದಾಗ ಮನೆಯಲ್ಲೇ ಉಳಿದ ಹರೆಯದ ರೂಪಸಿ ಲಕ್ಕಿಯ ಜವಾಬ್ದಾರಿ ಹೊತ್ತ ಕುಕ್ಕಣ್ಣಿ ಅವಳನ್ನು ಒಲಿಸಿ ಒಂದು ಮಗುವನ್ನೂ ದಯಪಾಲಿಸುತ್ತಾನೆ. ತನ್ನ ಒಳ್ಳೆಯತನದಿಂದಾಗಿ ಅವಧಿಗೆ ಮೊದಲೇ ಬಿಡುಗಡೆಯಾದ ಹುಲಿಗ್ಯಾ ಮನೆಯಲ್ಲಿ ನಡೆದ ಅವಾಂತರದಿಂದ ಕುಗ್ಗಿ, ಕೋಪಿಸಿ ಕೇರಿಯ ಪಂಚಮುಕಂಡ ಫಕೀರಪ್ಪನಲ್ಲಿ ತನಗಾದ ಅನ್ಯಾಯವನ್ನು ಕುರಿತು ದೂರು ಹೇಳುತ್ತಾನೆ. ಅದಕ್ಕೆ ಆತ 'ಯಾರಿಗೆಲೋ ಅನ್ಯಾಯ ಆಗಿರಾದು? ನಾನು, ನನ್ನಪ್ಪ, ನನ್ ಮುತ್ತ್ಯಾ, ಅವನ ಮುತ್ತ್ಯಾಗೋಳ ತೆಲಿಲಿಂದಲೂ ಇದು ಹಿಂಗೇ ನಡೆದುಕೊಂಡು ಬಂದಾದ.. ಮಗನೇ.. ನಮ್ಮೆಂಡ್ರಿರಾದೇ ಆ ಹಾರ್‍ರ ಗಂಡಸರ ಮಗ್ಗಲ ಬೆಚ್ಚಗೆ ಮಾಡ್ಲಿಕ್ಕ.. ನಮ್ಮ ಗಂಡಗೋಳಿರಾದೇ ಅವರ ಮೆಟ್ಟಿನ ಕೆಳಗ ದುಡೀಲಿಕ್ಕೆ..ತಿಳೀತೇನೋ..' ಎಂದು ಉತ್ತರಿಸುತ್ತಾನೆ. ಆದರೆ ಇಂಥ ಬದುಕಿನೊಂದಿಗೆ ರಾಜಿ ಮಾಡಿಕೊಳ್ಳಲು ಮನಸ್ಸೊಪ್ಪದ ಹುಲಿಗ್ಯಾ ಕುಕ್ಕಣ್ಣಿಯ ಬಳಿಗೆ ಹೋಗಿ 'ನನ್ ಹೆಣ್ತಿ ಮೈಯಂಬಾದು ನೀವು ನಾಕೊರ್ಸತನಕಾ ಮೇಯ್ದಿರಿ . ಅದಕ್ಕ$ ಒಂದೇ ಒಂದು ದಿನಾ.. ಒಂದ ದಿನಾ.. ನನಗ ನಿಮ್ಮ ಹೆಣ್ತೀಗಿ ಕುಡ್ರಿ..' ಎಂದು ಸವಾಲು ಹಾಕುತ್ತಾನೆ. ಆದರೆ ಬಡವನ ಕೋಪ ದವಡೆಗೆ ಮೂಲವೆಂದು ಉದ್ವೇಗದ ಮನಸ್ಸಿಗೆ ವಿವೇಕದ ಕಡಿವಾಣ ಹಾಕಿ ಪ್ರತೀಕಾರದ ಸರ್ಪವನ್ನು ನಿಗ್ರಹಿಸಿ ಮತ್ತೆ ಯಜಮಾನನ ಸೇವೆಗೆ ನಿಲ್ಲುತ್ತಾನೆ.

ಹೆಂಡತಿಯನ್ನು ಕೆಡಿಸಿದ ಕುಕ್ಕಣ್ಣಿ ಊರಿನ ಇನ್ನೊಬ್ಬ ಹೆಣ್ಣಿನ ಮೇಲೂ ಕಣ್ಣು ಹಾಕಿದಾಗ ಹುಲಿಗ್ಯಾನ ಪ್ರತೀಕಾರದ ಸರ್ಪ ಮತ್ತೆ ಹೆಡೆಯೆತ್ತುತ್ತದೆ. ಕೊಬ್ಬಿದ ಎತ್ತುಗಳನ್ನು ಹಾಯಿಸಿ ಕುಕ್ಕಣ್ಣಿಯನ್ನು ಸಾಯಿಸುತ್ತಾನೆ.

ಹಸುಗೂಸಿನಂಥಾ ಹುಲಿಗ್ಯಾನ ಸವಾಲು ಮತ್ತು ಗೆಲುವು ದಲಿತ ಸಮುದಾಯದ ಜಾಗೃತ ಪ್ರಜ್ಞೆ ಮತ್ತು ಶಕ್ತಿಗೆ ಸಂಕೇತವಾಗುತ್ತದೆ.

**ಮೂಡಿ ಬರ್ತಾನಾ ಚಂದ್ರಮಾ ನೋಡ$**

ಒಂದು ಸುಂದರ ಹೃದ್ಯ ಕಥೆ ಇದು. ಈ ಕಥೆಯ ನಾಯಕ ಕುಣಿಗೇರಿ ಝೋಪಡಿಪಟ್ಟಿಯ ಅನಾಥಹುಡುಗ ಬೆಳ್ಳ್ಯಾ. ಕಟ್ಟಡ ಕಟ್ಟುವ ಕೆಲಸದಲ್ಲಿದ್ದ ಆತ ತನ್ನ ಒಳ್ಳೆಯತನದಿಂದ ಸರಕಾರೀ ಆಸ್ಪತ್ರೆಯ ಮುರಲಿ ಎಂಬ ಡಾಕ್ಟರರ ಮನವನ್ನು ಗೆಲ್ಲುತ್ತಾನೆ. ಅವರ ಔದಾರ್ಯದಿಂದ ಕುದುರೆಗಾಡಿಯನ್ನು ಖರೀದಿಸಿ ವಾರಸುದಾರರಿಲ್ಲದ ಹೆಣಗಳನ್ನು ಸುಡುಗಾಡಿಗೆ ತೆಗೆದುಕೊಂಡು ಹೋಗಿ ಹೂಳುವ ಕೆಲಸವನ್ನು ಮಾಡುತ್ತಾನೆ. ಒಮ್ಮೆ ಗಂಗಾ ಎಂಬ ಹುಡುಗಿ ತಂದೆಯ ಶವಸಂಸ್ಕಾರ ಮಾಡಲಾಗದೆ ಅಳುತ್ತಿರುವುದನ್ನು ನೋಡಿ ಅವಳಿಗೆ ಸಹಾಯ ಮಾಡಿ ಮನೆಗೆ ಕರೆತಂದು ಮದುವೆಯಾಗುತ್ತಾನೆ. ನಾಲ್ಕೈದು ವರ್ಷಗಳಾದರೂ ಸಂತಾನ ಭಾಗ್ಯ ಕಾಣದ ಗಂಗಾಗೆ ಆಸ್ಪತ್ರೆಯಲ್ಲಿ ಕಾಯಿಲೆಪೀಡಿತನಾದ ಚಂದೂ ಎಂಬ ಹುಡುಗನಿಂದ ತಾಯ್ತನ ಜಾಗೃತವಾಗುತ್ತದೆ. ಹುಡುಗ ಸತ್ತು ಹೋದ ವಿಚಾರ ತಿಳಿದು ಜರ್ಜರಿತಳಾದ ಆಕೆಗೆ ಅದೇ ಸಮಯದಲ್ಲಿ ತಾನು ಬಸಿರಾಗಿರುವುದು ತಿಳಿಯುತ್ತದೆ. ಚಂದೂ ಸಾಯುವ ಸಮಯದಲ್ಲೇ ತನಗೆ ಬಸಿರು ನಿಂತುದರಿಂದ ಆ ಹುಡುಗನೇ ತನ್ನ ಹೊಟ್ಟೆಯಲ್ಲಿ ಹುಟ್ಟಿಬಂದನೆಂದು ಸಂತೋಷಪಟ್ಟ ಗಂಗಾ ಗಂಡನನ್ನು ಕರೆದು 'ಚಂದ್ರಾಮ ಮೂಡಿ ಬರ್ಲಕ್ಹತ್ತಿಯಾನ..' ಅನ್ನುತ್ತಾಳೆ.

ಸಜ್ಜನ, ನಂಬಿಕಸ್ಥ, ಹೃದಯವಂತ ಬೆಳ್ಳ್ಯಾನ ಒಳ್ಳೆಯತನದ ವಿವರಣೆ ಕಥಾಶಿಲ್ಪದಲ್ಲಿ ತುಂಬ ಸೊಗಸಾಗಿ ಮೂಡಿದೆ.

**ಈ ಲೋಕವೆಲ್ಲ ಘೋರ$....**

ಬಂಗಲೆಗಳಲ್ಲಿ ವಾಸಿಸುವ ಶ್ರೀಮಂತರದೊಂದು ಸುಖದ ಬದುಕಾದರೆ ಬೀದಿಯ ಕೆಸರಲ್ಲಿ ಬದುಕುವ ಬಡವರದೂ ಒಂದುರೀತಿಯ ಸುಖದ ಬದುಕೇ. ಆದರೆ ಆ ಬದುಕನ್ನು ಸ್ವಾರ್ಥಸಾಧಕರು ಎಷ್ಟು ಘೋರವಾಗಿಸುತ್ತಾರೆಂಬುದನ್ನು ಈ ಕತೆ ನಿರೂಪಿಸುತ್ತದೆ. ಚಿಂದಿ ಆಯುವ ಶಾಣಪ್ಪ ಪಿಕ್ ಪಾಕೆಟ್ ಮಾಡಿ ಜೈಲು ಸೇರಿದಾಗ ಹೆಂಡತಿ ಪುಟ್ಟ ಮಗಳು ಲವಂಗಿಯೊಂದಿಗೆ ಗುಲ್ಬರ್ಗಾ ಸೇರುತ್ತಾಳೆ. ಜೈಲಿನಿಂದ ಹೊರಬಂದಮೇಲೂ ಅದೇ ದಂಧೆ ಮಾಡಿ ತಪ್ಪಿಸಿಕೊಂಡು ಓಡಿ ಲಾರಿಯಡಿಗೆ ಸಿಕ್ಕಿ ಶಾಣಪ್ಪ ಸತ್ತುಹೋದಾಗ ಲವಂಗಿಯ

ತಾಯಿ ಯಾವನನ್ನೋ ಕಟ್ಟಿಕೊಂಡು ಮುಂಬೈಗೆ ಹೋಗುತ್ತಾಳೆ. ಒಂಟಿಯಾದ ಲವಂಗಿ ಕಲ್ಬುರ್ಗಿಯಲ್ಲೇ ನೆಲಸಿ ತನ್ನದೇ ದಂಧೆಯ ನಾನ್ಯಾ ಎಂಬವನನ್ನು ವಿವಾಹವಾಗಿ ಸಿದ್ದನೆಂಬ ಮಗನನ್ನು ಹಡೆಯುತ್ತಾಳೆ. ನಾನ್ಯಾ ಹಿಜಡಾರ ಸಂಪರ್ಕವನ್ನು ಮಾಡಿ ಊರುಬಿಟ್ಟು ಹೋದಾಗ ಲವಂಗಿಯೇ ಮಗನನ್ನು ಸಾಕುತ್ತಾಳೆ. ಚಿಂದಿ ಆಯುವುದರೊಂದಿಗೆ ಚಿಕ್ಕಪುಟ್ಟ ಕಳ್ಳತನಗಳಲ್ಲಿ ಪಳಗಿದ ಅವಳಿಗೆ ಹೊಟ್ಟೆ ತುಂಬಿಸುವುದು ಕಷ್ಟವಾಗದಿದ್ದರೂ ತಮ್ಮಂಥವರ ಬದುಕಿನಲ್ಲಿ ಭವಿಷ್ಯವೆನ್ನುವುದೇ ಇಲ್ಲವಲ್ಲ ಎಂಬ ಯೋಚನೆ ಕಾಡುತ್ತದೆ. ಹರೆಯದ ಆಸೆ, ಬಯಕೆಗಳು ದೇಹದ ತುಂಬೆಲ್ಲ ಹರಿದಾಡುತ್ತಿದ್ದರೂ ಲವಂಗಿ ಹಾದಿ ತಪ್ಪುವುದಿಲ್ಲ. ನಾಲ್ಕು ವರ್ಷಗಳ ಬಳಿಕ ಮರಳಿ ಬಂದ ಗಂಡ 'ಆಪರೇಷನ್ ಮಾಡಿಸಿ ಹಿಜಡಾ ಆದೆ' ಎಂದಾಗ ಮಾತ್ರ ಅವಳು ನಖಶಿಖಾಂತ ಉರಿದು ಒಳಗಿನಿಂದ ಕಸಪೊರಕೆ ತಂದು ಅವನನ್ನು ಝಾಡಿಸಿ ಅಟ್ಟುತ್ತಾಳೆ.

ಯಾವ ಆಸೆ, ಭರವಸೆ, ಭದ್ರತೆಗಳೂ ಇಲ್ಲದೆ ಮಳೆಗಾಲದಲ್ಲಿ ಕೊಚ್ಚಿಕೊಂಡು ಹೋಗುವ ಕಸಕಡ್ಡಿಗಳಂತೆ ಬದುಕುವ ಒಂದು ಸಮುದಾಯದ ನೋವು, ನಲಿವುಗಳು ಈ ಕತೆಯಲ್ಲಿ ತುಂಬ ಹೃದಯಸ್ಪರ್ಶಿಯಾಗಿ ಮೂಡಿವೆ. ಶ್ರೀಮಂತರ, ಪ್ರತಿಷ್ಠಿತರ ಬದುಕಿನಲ್ಲಿ ಜಾತಿ, ನೀತಿ, ಥಳಕು ಬಳುಕುಗಳು ತೆಕ್ಕೆ ಹಾಕಿದ್ದರೆ ಎಂಜಿಲನ್ನದಲ್ಲೇ ಸ್ವರ್ಗಸುಖ ಕಾಣುವ, ಕಳ್ಳತನವೇ ಜೀವನೋಪಾಯವಾಗಿರುವ ಬದುಕಿನಲ್ಲಿ ತಪ್ಪು ಒಪ್ಪುಗಳಿಗೆ ಮನಸ್ಸನ್ನು ಕೆಡಿಸುವವರು ಕಡಿಮೆ. ಅವರಿಗೆ ಈರದೇವನೂ ಒಂದೇ ಪೀರದೇವನೂ ಒಂದೆ. ಆಕಾಶದ ಕಡುಗಪ್ಪಿನಲ್ಲಿ ಎಲ್ಲಾದರೂ ಚಂದಿರ ಮೂಡಿಬರುತ್ತಾನೋ ಎಂಬ ನಿರೀಕ್ಷೆ. ನಿರೀಕ್ಷೆ, ನಿರಾಶೆಗಳೇ ಬಾಳಿನ ಬುತ್ತಿಯಾದ ಲವಂಗಿಯ ಕತೆಯಂತೆ ಎಲ್ಲ ನಿಮ್ನಾತಿನಿಮ್ನ ಬಡವರ ಬದುಕೂ ಇದೇ ಎನ್ನುವ ವಿಚಾರ ಮೂಗೇಟಿನಂತೆ ಹೃದಯವನ್ನು ಹಿಂಡುತ್ತದೆ.

**ವಾಸ್ತವ**

ಜೀವನದಲ್ಲಿ ಪ್ರೀತಿ ಮತ್ತು ಭರವಸೆಯನ್ನು ಮೂಡಿಸುವ ಸುಂದರ ಕಥೆ ಇದು. ಹೆಂಡತಿ ಶಾಣಮ್ಮ, ಇಬ್ಬರು ಮಕ್ಕಳು ಮತ್ತು ಮುದಿ ತಾಯಿಯೊಂದಿಗೆ ಹಳ್ಳಿಯಲ್ಲಿ ಬದುಕಲಾಗದೆ ಗುಲ್ಬರ್ಗಾ ಸೇರಿದ ಹೊನ್ನಪ್ಪ ಮಾರುತಿ ಝೋಪಡಿಪಟ್ಟಿಯಲ್ಲಿ ಹತ್ತು ರೂಪಾಯಿ ಬಾಡಿಗೆಯ ಕೋಣೆಯಲ್ಲಿ ವಾಸಿಸುತ್ತ ಸೈಕಲ್ ರಿಕ್ಷಾ ತುಳಿದು ದಿನಕ್ಕೆ 50 ರೂ. ಸಂಪಾದಿಸುತ್ತಾನೆ. ಮಡದಿ ಶಾಣಮ್ಮ

ಬ್ರಾಹ್ಮಣರ ಮನೆಗಳಿಗೆ ಕಸಮುಸುರೆಗೆಂದು ಹೋಗುತ್ತಾಳೆ. ಮುದಿ ತಾಯಿ ಮನೆಯಲ್ಲೇ ಕೋಳಿ ಸಾಕುತ್ತಾಳೆ. ಬಾಡಿಗೆಸೈಕಲ್‌ನಿಂದ ಸ್ವಂತ ಸೈಕಲ್‌ರಿಕ್ಷಾದ ಒಡೆಯನಾದ ಹೊನ್ನಪ್ಪ ನೆಮ್ಮದಿಯ ಉಸಿರುಬಿಡುವಾಗಲೇ ಬಂತು ಧಕ್ಕೆ. ನಗರಕ್ಕೆ ಆಟೋಗಳು ಬಂದು ಜನಗಳನ್ನು ಆಕರ್ಷಿಸಿದಾಗ ಹೊನ್ನಪ್ಪ ಹತಾಶನಾಗಿ ಸೈಕಲ್‌ರಿಕ್ಷಾ ಮಾರಿ ತಳ್ಳುಗಾಡಿಯಲ್ಲಿ ತರಕಾರಿ ವ್ಯಾಪಾರ ಆರಂಭಿಸುತ್ತಾನೆ.

ಈ ಕತೆ ಒಂದು ಆದರ್ಶ ಸಂಸಾರಕ್ಕೆ ಕನ್ನಡಿ. ಯಾವುದೇ ಬೇನೆ, ಬೇಸರಿಕೆಗಳಿಗೆ ಅವಕಾಶವಿಲ್ಲದೆ ಒಗ್ಗಟ್ಟಿನಿಂದ ಬಾಳುವೆಮಾಡುವ ಸಂಸಾರ ಅಂದರೆ ಹೊನ್ನಪ್ಪನ ಸಂಸಾರ ಎನ್ನುವ ಮೆಚ್ಚಿಗೆಯನ್ನು ಗಳಿಸಿದ ಕುಟುಂಬ. ಕೆಟ್ಟ ಚಟಗಳಿಲ್ಲದ, ಮನೆಮಂದಿಯನ್ನು ಪ್ರೀತಿಸುವ, ಪ್ರತಿವಾರ ಸಂತೋಷವಾಗಿ 'ಸಂಡೇ' ಮಾಡುವ ಹೊನ್ನಪ್ಪ, ಬದುಕು ಹದಗೆಟ್ಟಾಗಲೂ ಹತಾಶಳಾಗದೆ ಬದುಕುವ ದಾರಿಯನ್ನು ತಿಳಿಸಿ ಗಂಡನನ್ನು ತನ್ನ ಬೆಚ್ಚಗಿನ ಸಾನ್ನಿಧ್ಯದಲ್ಲಿ ಸಂತೈಸುವ ಶಾಣಮ್ಮನ ಸ್ವಭಾವ ಎಲ್ಲವೂ ಸೊಗಸಾಗಿ ನಿರೂಪಿತವಾಗಿದೆ. ಕಾದ ತಗಡಿನಂತಹ ರಸ್ತೆ, ಬೆಂಕಿ ಹಚ್ಚಿದಂಥ ನಗರದ ಸುಡುವ ಬಿಸಿಲು ಬದುಕಿನ ಕಷ್ಟಗಳನ್ನು ಸಂಕೇತಿಸಿದರೆ ಶಾಣಮ್ಮನ ಆತ್ಮವಿಶ್ವಾಸ, ನಂಬಿಕೆ, ಧೈರ್ಯ, ಬುದ್ಧಿ, ವಿವೇಕಗಳು ಭರವಸೆಯ ತಂಗಾಳಿಯಾಗುತ್ತವೆ. ಮೊದಲು ಸೈಕಲ್ ರಿಕ್ಷಾ ಓಡಿಸುವಾಗ ತನ್ನ ಪ್ರತಿಸ್ಪರ್ಧಿಯಂತೆ ಆಟೋ ಮುಂದೆ ಹಾಯುತ್ತಿದ್ದರೆ ಅದಕ್ಕೆ ಹಿಡಿಶಾಪ ಹಾಕುತ್ತಿದ್ದ ಹೊನ್ನಪ್ಪನಿಗೆ ಈಗ ಆಟೋ ಆವಾಜು ಮಾಡಿ ತನ್ನ ಮುಂದೆಯೇ ಹೋದರೂ ಕೋಪ ಬರುವುದಿಲ್ಲ. ಬದುಕು ಅಸಹನೀಯವಾದಾಗ ಇಡೀ ಜಗತ್ತೇ ಶತ್ರುವಿನಂತೆ ಗೋಚರಿಸಿದರೆ ನೆಮ್ಮದಿಯ ಬದುಕಿನಲ್ಲಿ ಅದೇ ಜಗತ್ತು ಮಿತ್ರನಂತೆ ಕಾಣುತ್ತದೆ. ಬದುಕಿನಲ್ಲಿ ಕಷ್ಟಸುಖಗಳೆರಡೂ ಇವೆ. ಕಷ್ಟಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ ಬದುಕನ್ನು ಸಮಾನವಾಗಿ ಸ್ವೀಕರಿಸಬೇಕೆನ್ನುವ ನೀತಿಯನ್ನು ಕತೆ ತಿಳಿಸುತ್ತದೆ. ಇದೇ ವಾಸ್ತವ.

**ಮಾನಾಪಮಾನ ನಿಮ್ಮದಯ್ಯಾ........**

ಇಬ್ಬರು ಮಕ್ಕಳು ಮತ್ತು ಮಡದಿ ತಾಯವ್ವಳೊಂದಿಗೆ ಹಳ್ಳಿಯೂರಿನಿಂದ ಜೀವನೋಪಾಯಕ್ಕಾಗಿ ಪಟ್ಟಣಕ್ಕೆ ಬಂದ ಮಾದಿಗ ಜಾತಿಯ ಮಾನಿಂಗ ಇಸಕಂಟಪ್ಪನೆಂಬ ಸಾವ್ಕಾರನಲ್ಲಿ ಕೆಲಸಕ್ಕೆ ಸೇರಿ ಆತನ ಬಲಗೈ

ಬಂಟನಾಗುತ್ತಾನೆ. ಯಜಮಾನನ ಔದಾರ್ಯದಿಂದ ಮಗ ಶಾಂತವೀರಪ್ಪ ವಿದ್ಯಾವಂತನಾಗುತ್ತಾನೆ. ಗಂಡ ಮಾನಿಂಗ ನಾಗರಹಾವು ಕಚ್ಚಿ ಸತ್ತು ಹೋದಾಗ ಧೈರ್ಯಗೆಡದ ತಾಯವ್ವ ಮಗನನ್ನು ಓದಿಸುತ್ತಾಳೆ. ಸಾವ್ಕಾರ ತನ್ನ ಮೇಲೆ ಕಣ್ಣು ಹಾಕಿದರೂ ಸೊಪ್ಪುಹಾಕದೆ ಮಾನವಂತಳಾಗಿಯೇ ಬದುಕುತ್ತಾಳೆ. ತನ್ನನ್ನು ನಿರಾಕರಿಸಿದ ತಾಯವ್ವನ ಮೇಲೆ ಮುನಿಸು, ದ್ವೇಷ ಹತ್ತಿದರೂ ಸಾವ್ಕಾರ ಸುಮ್ಮನಾಗುತ್ತಾನೆ. ಆದರೆ ಪಟ್ಟಣದ ಕಾಲೇಜಿನಲ್ಲಿ ಓದುತ್ತಿದ್ದ ಶಾಂತವೀರ ಸಾವ್ಕಾರನ ಮಗಳು ನೀಲಮ್ಮನನ್ನು ಮದುವೆಯಾಗುವನೆಂಬ ಸುದ್ದಿ ಹುಲ್ಲು ಬಣವೆಗೆ ಕಿಡಿ ಹಚ್ಚಿದಂತೆ ಊರೆಲ್ಲ ಹರಡಿದಾಗ ತಾಯವ್ವನಿಗೆ ಸಾವ್ಕಾರನ ಭಯ ಕಾಡುತ್ತದೆ. '..ಒಮ್ಮೆ ಖೂನಿಯಂತೆ ಬಂದು ಕುತ್ತಿಗೆಗೆ ಕೊಡಲಿ ಹಾಕಿದರೆ ಮತ್ತೊಮ್ಮೆ ಪಟ್ಟೆಹುಲಿಯಾಗಿ ಬಂದು ಮೈಮ್ಯಾಲೆ ಬಿದ್ದು ಗಂಟಲಿಗೆ ಬಾಯಿ ಹಾಕುತ್ತಿತ್ತು. ಮತ್ತೊಮ್ಮೆ ಏಳ್ಹೆಡೆಯ ಸರ್ಪ ಆಗಿ ಬಂದು ಮೈಗೆ ಸುತ್ತುತ್ತ ಬಿಗಿದು'ಕೊಳ್ಳುತ್ತಿತ್ತು.'(82) ಇಂಥ ಮಾನಸಿಕ ಉದ್ವಿಗ್ನತೆಯಲ್ಲಿ ವಿಲವಿಲನೆ ಒದ್ದಾಡಿದ ತಾಯವ್ವ ಮಗನ ಯೋಗಕ್ಷೇಮದ ಬಗ್ಗೆ ಆತಂಕಗೊಳ್ಳುತ್ತಾಳೆ. ಶಾಂತವೀರ ನೀಲಮ್ಮನನ್ನು ರಿಜಿಸ್ಟರ್ ಮದುವೆಯಾದನೆಂಬ ಸುದ್ದಿ ತಲಪಿದ ತಕ್ಷಣವೇ ಇಸಕಂಟಯ್ಯ ಕೋಪದಿಂದ ಧಗಧಗನೆ ಉರಿದು ತಾಯವ್ವನ ತುರುಬು ಹಿಡಿದು ದರದರನೆ ಎಳೆತಂದು ಸಾರ್ವಜನಿಕರ ಮಧ್ಯೆಯೇ ಬೆತ್ತಲೆ ಮಾಡುತ್ತಾನೆ. ಮುರುಗವ್ವನ ಗುಡಿಯ ವರೆಗೆ ಮೆರವಣಿಗೆ ಮಾಡಿಸಿ ಒಳಗೆ ದಬ್ಬಿ ಒದ್ದು ಮುಖಕ್ಕೆ ಉಗುಳಿ ಮೀಸೆ ತಿರುವುಕೊಂಡು ಹೊಲಸುನಗೆ ನಕ್ಕು ಹೊರಟುಹೋಗುತ್ತಾನೆ. ಪ್ರಜ್ಞಾಹೀನಳಾದ ತಾಯವ್ವ ಮರುದಿನ ಬೆಳಗಾಗುವುದರೊಳಗೆ ಬೇವಿನ ಮರದ ಟೊಂಗೆಗೆ ನೇಣುಹಾಕುತ್ತಾಳೆ.

ಬಸವಣ್ಣನ ಕಾಲದ ಅಂತರ್ಜಾತೀಯ ವಿವಾಹದಿಂದಾದ ಘೋರಪರಿಣಾಮ ಕತೆಯಲ್ಲಿ ಪ್ರಸ್ತಾಪಿತವಾಗುತ್ತದೆ. ಮಾನ ಅಪಮಾನಗಳು ಪ್ರಶ್ನಿತವಾಗಿ ಕತೆಗೆ ಒಂದು ವಿಶಿಷ್ಟವಾದ ಮೊನಚನ್ನು ನೀಡುತ್ತದೆ. ಅಂತರಜಾತೀಯ ವಿವಾಹದ ದುರಂತವನ್ನು ರಾಚಿದರೂ ಸಾಮಾಜಿಕ ಪರಿವರ್ತನೆಗೆ ಒತ್ತುನೀಡುವ ಕತೆ ಇದು.

### ಇದು ಎಂಥಾ ಲೋಕವಯ್ಯಾ

ಆಕಸ್ಮಿಕವಾಗಿ ಸಂಭವಿಸಿದ ಅನಾಹುತಕ್ಕೆ ಪರಿಹಾರವಾಗಿ ಒಂದು ಸಂಸಾರವನ್ನೇ ಹೆಗಲಿಗೇರಿಸಿಕೊಂಡ ವಿಚಿತ್ರ ಕಥೆ ಇದು. ಆತುರಾತುರವಾಗಿ

ಟ್ರ್ಯಾಕ್ಟರ್ ಓಡಿಸುತ್ತಿದ್ದ ಮರ್‍ಯಾನ ಗಾಡಿಗೆ ಕುಡಿದು ಮತ್ತೇರಿದ ಯಲ್ಲ್ಯಾ ಅಡ್ಡ ಬಂದು ಸತ್ತುಹೋಗುತ್ತಾನೆ. ಊರ ಪಂಚರೆಲ್ಲ ಸೇರಿ ನ್ಯಾಯತೀರ್ಮಾನ ಮಾಡುತ್ತಾರೆ: 'ಯಲ್ಲಪ್ಪ ದುಡೀತಿದ್ದ ಸಾವ್ಕಾರನ ಮನ್ಯಾಗ ಅವನ ಬದಲಿ ಇಂವಾ ಆಳಾಗಿ ದುಡೀಬೇಕು..... ಮುದುಕಿ ಈರವ್ವಗ ಮಗಾ ಆಗಿ ಸಿಂಪೆವ್ವಗೆ ಗಂಡ ಆಗಿ ಕಡೀ ತನಕಾ ಯಲ್ಲಪ್ಪನ ಸಂಸಾರ ಸಂಭಾಳಿಸ್ಬೇಕು..'(99) 'ಕಲ್ಲಿನ ಮ್ಯಾಲೆ ಗೆರಿ ಕೊರೆದ್ಹಂಗೆ.' ಎಂಬತ್ತು ವರ್ಷ ದಾಟಿದ ಹಿರಿಗೌಡನ ಹೇಳಿಕೆಗೆ ಬದಲೆಂಬುದೇ ಇಲ್ಲ. ಪಂಚಾಯಿತಿಯ ಆದೇಶದಂತೆ ತಾಳಿಗೆ ಕೊರಳೊಡ್ಡಿದರೂ ಗಂಡನನ್ನು ಸಾಯಿಸಿದವನೆಂಬ ಕೋಪಕ್ಕೆ ಮರ್‍ಯಾನನ್ನು ಮನೆಯಾಚೆಯೇ ಇರಿಸುತ್ತಾಳೆ ಸಿಂಪಿ. ದಿಕ್ಕುದೆಸೆಯಿಲ್ಲದ ಮರ್‍ಯಾ ಹೊಸ ಸಂಸಾರವನ್ನು ಸಾಕುವ ಹೊಣೆಯನ್ನು ಸಂತೋಷವಾಗಿಯೇ ವಹಿಸಿಕೊಂಡು ಸಾವ್ಕಾರನ ಮನೆಯಲ್ಲಿ ಜೀತ ಮಾಡುತ್ತಾನೆ. ತನ್ನ ಗುಣ, ಸ್ವಭಾವಗಳಿಂದ ಎಲ್ಲರ ಅಭಿಮಾನ ಗಳಿಸುತ್ತಾನೆ. 'ಈ ಮರ್‍ಯಾಮಗಾ ಲಗಸಿಮಿ ಪುತ್ರ ಅದಾನಾ. ಇಂವಾ ಕಾಲಿಟ್ಟಲ್ಲೆಲ್ಲಾ ಅನಾಜ ಬೆಳೀತಾದ. ಆ ಯಲ್ಲ್ಯಾನ ಬದಲಾಗಿ ನಮ್ಮ ಆಳುಮಗಾ ಅರೆ ಇವನಲಿಂದ ಸಾಯ್ಬಾರ್ದಿತ್ತಾ?(101) ಅಂತ ಊರ ಹೊಲಮನೆಗಳಿದ್ದ ಸಾವ್ಕಾರರು ಕುದ್ದುಕೊಳ್ಳುವಷ್ಟು ಪ್ರಾಮಾಣಿಕನಾಗಿ ಕೆಲಸಮಾಡುತ್ತಾನೆ.

ಮರ್‍ಯಾ ಎಷ್ಟು ನಂಬಿಕಸ್ಥನೋ ಅಷ್ಟೇ ಕರುಣಾಳು. ಕಾಯಿಲೆಯಿಂದ ನರಳುವ ಸಿಂಪಿಯ ಅತ್ತೆಯನ್ನು ಸ್ವಂತ ತಾಯಿಯೆಂಬಷ್ಟು ಪ್ರೀತಿಯಿಂದ ಆಸ್ಪತ್ರೆಗೆ ಕರೆದೊಯ್ದು ಔಷಧಿ ಕೊಡಿಸುತ್ತಾನೆ. ಅವಳಿಗೆ ಇಷ್ಟವಾದ ಊಟೋಪಚಾರಗಳನ್ನು ಮಾಡುತ್ತಾನೆ. ಮುದುಕಿ ಆತನ ಒಳ್ಳೆಯತನವನ್ನು ಹಾಡಿ ಹಾಡಿ ಹೊಗಳುತ್ತಾಳೆ. ಮರ್‍ಯಾನ ಸಜ್ಜನಿಕೆ, ಸಹಕಾರಗಳಿಂದ ಸಿಂಪಿಯ ಮನಸ್ಸು ವಿಚಲಿತಗೊಳ್ಳುತ್ತದೆ. ಆದರೂ ಆಕೆ ಮುಂಬೈಯ ರಾಜಾಬಾಬು ಎಂಬವನನ್ನು ಪ್ರೀತಿಸುತ್ತಿದ್ದು ಅದಾಗಲೇ ಅವನಿಂದ ಗರ್ಭವತಿಯಾಗಿ ಅವನ ಜತೆ ಮುಂಬೈಗೆ ಹೋಗುವ ಹಂಚಿಕೆ ಹಾಕುತ್ತಾಳೆ. ಆದರೆ ಕೊನೆ ಗಳಿಗೆಯಲ್ಲಿ ಅವನಿಂದ ಮೋಸಹೋಗುತ್ತಾಳೆ. ಮರ್‍ಯಾ ಅವಳ ತಪ್ಪುಗಳನ್ನು ಕ್ಷಮಿಸಿದ್ದಲ್ಲದೆ ಅವಳ ಹೊಟ್ಟೆಯಲ್ಲಿದ್ದ ಮಗುವಿಗೆ ತಂದೆಯಾಗುತ್ತೇನೆಂದೂ ಮಾತುಗೊಡುತ್ತಾನೆ.

ಗ್ರಾಮೀಣ ಲೋಕದ ನ್ಯಾಯ ತೀರ್ಮಾನ ಎಷ್ಟು ವಿಚಿತ್ರವಾಗಿದೆಯೋ ಅಷ್ಟೇ ವಿಚಿತ್ರವಾದ ವ್ಯಕ್ತಿಯಾಗಿ ಗೋಚರಿಸುತ್ತಾನೆ ಮರ್‍ಯಾ. ಸ್ಥಾನ ಮಾನ,

ಪ್ರತಿಷ್ಠೆ, ಪ್ರಭಾವಗಳಲ್ಲಿ ಮೆರೆಯುವ ಜನರು ಒಳಗೊಂದು ಹೊರಗೊಂದು ಮುಖವಾಡ ಹಾಕಿದರೆ ಮಾನ, ಮರ್ಯಾದೆಗಳ ಬಗ್ಗೆ ಗಂಭೀರವಾಗಿ ಯೋಚಿಸದ ಮರ‍್ಯಾನಂಥ ಮುಗ್ಧರು ಮನಸ್ಸಿನ ಭಾವನೆಗಳಿಗೆ ಬಣ್ಣಕೊಡದೆ ಸಾಚಾ, ಸೀದಾ ಆಗಿರುತ್ತಾರೆಂಬುದಕ್ಕೆ ಈ ಕತೆ ಸಾಕ್ಷಿ.

**ಚಕ್ಕರ ಕಟ್ಟಾ ಚೌಕ್**

ದುರಂತವಾದರೂ ಅನಿರೀಕ್ಷಿತ ತಿರುವನ್ನು ಪಡೆದ ವಿಶಿಷ್ಟ ಕತೆ. ಮುಂಬೈಯ ಕಲ್ಯಾಣ ನಗರಿಯ ಸಮೀಪದ ಅರಣ್ಯದ ಮಧ್ಯೆ ನಾಲ್ಕು ರಸ್ತೆಗಳು ಕೂಡುವ ಸ್ಥಳವೇ ಚಕ್ಕರ ಚೌಕ. ಬರಗಾಲದಲ್ಲಿ ಗುಳೆಯೆದ್ದು ಹೊಟ್ಟೆಪಾಡಿಗಾಗಿ ಎಲ್ಲೆಲ್ಲೋ ವಲಸೆಹೋಗುವ ಬಡಕುಟುಂಬಗಳಲ್ಲಿ ಒಂದಾದ ನಿಂಗವ್ವ ಚಂದಪ್ಪನ ಕುಟುಂಬದಲ್ಲಿ ಮಗಳು ಹರೆಯದ ಹುಡುಗಿ ಚಂದ್ರಿ. ಮಗ ಎದೆಚೀಪುವ ಹಸುಗೂಸು. ಚಕ್ಕರ ಚೌಕಿಯ ಕಾಡಿನ ಕಾರ್ಖಾನೆಯ ಮೇಸ್ತ್ರಿ ಬಾಬುರಾವ್ ಚಂದಪ್ಪನಿಗೆ ವಾಚ್‌ಮೇನ್ ಕೆಲಸ ಕೊಡಿಸುತ್ತಾನೆ. ಅಲ್ಲೇ ಒಂದು ಗುಡಿಸಲು ಕಟ್ಟಿ ಹತ್ತಿಪ್ಪತ್ತು ಕುಟುಂಬಗಳೊಂದಿಗೆ ನೆಮ್ಮದಿಯ ಬದುಕನ್ನು ಸಾಗಿಸುತ್ತಿರುವಾಗಲೇ ಅನಿರೀಕ್ಷಿತ ಘಟನೆಗಳು ನಡೆದು ಕುಟುಂಬ ಚೆಲ್ಲಾಡುತ್ತದೆ.

ಗೆಳತಿಯರೊಡನೆ ಸಂತೆಗೆ ಹೋದ ಚಂದ್ರಿ ನೆರೆಮನೆಯ ಅಪ್ಪಾಪೋಲಿ ಮನೋಹರನೊಂದಿಗೆ ಓಡಿಹೋಗುತ್ತಾಳೆ. ಲಾರಿಯಿಂದ ಸಿಮೆಂಟ್ ಮೂಟೆಗಳನ್ನು ಕೆಳಗಿಳಿಸುತ್ತಿದ್ದ ಚಂದಪ್ಪನ ಮೇಲೆ ಸಿಮೆಂಟು ಮೂಟೆಗಳು ಬಿದ್ದು ಆತ ಅದರಡಿಯಲ್ಲಿ ಸಿಲುಕಿ ಸಮಾಧಿಯಾಗುತ್ತಾನೆ. ಹೆಂಡತಿ ಸತ್ತು ಎಂಟುವರ್ಷಗಳಾದರೂ ಮತ್ತೊಬ್ಬ ಹೆಣ್ಣಿಗೆ ಕಣ್ಣುಹಾಕದ ಬಿಗಿಕಚ್ಚೆಯ ಮನುಷ್ಯ ಬಾಬುರಾವ್ ಈಗ ಗಂಡ ಮಗಳನ್ನು ಕಳೆದುಕೊಂಡ ನಿಂಗಮ್ಮನನ್ನು 'ಉಡುಕಿ' ಮಾಡಲು ಮುಂದೆ ಬರುತ್ತಾನೆ ಆದರೆ ನಿಂಗಮ್ಮ ಚಕ್ಕರ ಚೌಕದ ಸಂಬಂಧವನ್ನೇ ತೊರೆದು ಮಗುವಿನೊಂದಿಗೆ ತನ್ನೂರಿಗೆ ಹೊರಡುತ್ತಾಳೆ. ಕಲ್ಯಾಣದ ಸ್ಟೇಷನ್‌ನಲ್ಲಿ ವಿಮಲಾಬಾಯಿ ಎಂಬಾಕೆ ಮಗುವನ್ನು ಅಪಹರಿಸಿದಾಗ ಮೂರು ಹಗಲು ಮೂರು ರಾತ್ರಿ ಅಲ್ಲೇ ಎದೆ ಎದೆ ಬಡಿದುಕೊಂಡು ಗೋಳಾಡುತ್ತ ಕಳೆದ ನಿಂಗಮ್ಮ ಊರಿಗೆ ಹೋಗುವ ಯೋಚನೆಯನ್ನು ಬಿಟ್ಟು ಬಾಬುರಾವ್‌ನ ಆಸರೆಯನ್ನು ನೆಚ್ಚಿ ಮರಳಿ ಚಕ್ಕರ್ ಕಟ್ಟಾ ಚೌಕದ ಬಸ್ಸನ್ನು ಹತ್ತುತ್ತಾಳೆ.

ಕರುಳಿರಿಯುವಂಥ ದೃಶ್ಯಾವಳಿಗಳನ್ನು ಹೆಣೆಯುತ್ತಲೇ ಸಕಾರಾತ್ಮಕ ನಿಲುವನ್ನು ಧ್ವನಿಸುವ ಕತೆ ಇದು. ಸಾವಿನ ಕತ್ತಲೆಯೇ ಶರಣೆನ್ನುವ ಜೀವಕ್ಕೆ ಎಲ್ಲಿಂದಲೋ ಬದುಕಿನ ಬೆಳಕು ಗೋಚರಿಸುವುದು ಅರ್ಥಪೂರ್ಣವಾಗಿದೆ. ಅಲೆಮಾರಿ ಜನರ ಬದುಕಿನ ಏಳು ಬೀಳುಗಳನ್ನೂ ಬದುಕಿನ ವಿಪರ್ಯಾಸಗಳನ್ನೂ ಈ ಕತೆ ಹೃದಯಂಗಮವಾಗಿ ಅನಾವರಣ ಮಾಡುತ್ತದೆ. 'ಆಕಾಸೆಂಬೊ ಆಕಾಸೆಲ್ಲಾ ಬೆಂಕಿಕೊಂಡದಂತಾಗಿ ಸೂರ್ಯ ಅಂಬಾಂವ ಬೆಂಕಿ ಉಂಡಿಯಾಗಿ ನಿಗಿ ನಿಗಿ ಉರಿಯತೊಡಗಿದಾಗ ನೆಲದೆದೆ ಸೀಳಿ ಕೆರೆಬಾವಿಗಳೆಲ್ಲ ನೀರೊಣಗಿಸಿ ತಮ್ಮ ಮೈಯ ಸಂದಿಗೊಂದಿಗಳನ್ನೆಲ್ಲ ಬಯಲಿಗಿಟ್ಟಾಗ..' ಎಂಬ ವರ್ಣನೆ ಅದ್ಭುತವಾಗಿದೆ.

### ಕಳ್ಳು ಬಳ್ಳಿಯ ಕುಡಿಗಳು

ತಾಯ್ತನದ ಮಹತ್ವವನ್ನು ತೆರೆದಿಡುವ ಹೃದಯಸ್ಪರ್ಶಿ ಕಥೆ. ಹುಟ್ಟಿದ ನಾಲ್ಕು ಮಕ್ಕಳೂ ಹೆಣ್ಣಾದಾಗ ಇನ್ನು ಮಕ್ಕಳು ಬೇಡವೆಂದು ಆಪರೇಷನ್ ಮಾಡಿಸಿಕೊಂಡರೂ ರೂಪ್ಲಿಬಾಯಿ ಮತ್ತೆ ಬಸುರಾಗುತ್ತಾಳೆ. ಕಳ್ಳಬಟ್ಟಿ ತಯಾರಿಸಿ ಸಿಕ್ಕಿಬಿದ್ದು ಆಗಾಗ್ಗೆ ಜೈಲು ಸೇರುವ ತುಳಸೀರಾಮ ಹೆಣ್ಣುಮಗು ಹುಟ್ಟಿತೆಂದು ಮನೆಗೇ ಬರುವುದಿಲ್ಲ. ಆದರೆ 'ಹಸಿವಿನ ಬೆತ್ತಲೆ ಮೆರವಣಿಗೆ ನಡೆಯುವಾಗ ದಾರಿದ್ರ್ಯ ಚಪ್ಪಾಳೆ ತಟ್ಟಿ ಕುಣಿಯುವಾಗ' ಹಸಿ ಮೈಯನ್ನು ಹೊತ್ತುಕೊಂಡ ತಾಯಿ ಕಾಡಿಗೆ ಹೋಗಿ ಕಟ್ಟಿಗೆ ಹೊತ್ತು ತಂದು ಮಕ್ಕಳಿಗೆ ಹಿಟ್ಟಿನ ಗಂಜಿಯನ್ನು ಕುಡಿಸಲು ಹೆಣಗಾಡುತ್ತಾಳೆ. ಒಂದು ದಿನ ಮನೆಗೆ ಬಂದ ತುಳಸೀರಾಮ ಮಕ್ಕಳಿಲ್ಲದವರಿಗೆ ಮಗುವನ್ನು ಮಾರಿ ಸಿಕ್ಕುವ ಹಣದಲ್ಲಿ ಉಳಿದ ಮಕ್ಕಳನ್ನು ಚೆನ್ನಾಗಿ ಸಾಕಬಹುದು, ತಾಯಿಯಾದವಳು ಮಕ್ಕಳ ಸುಖವನ್ನು ಯೋಚಿಸುತ್ತಾಳೆಯೇ ಹೊರತು ಸಾವನ್ನಲ್ಲ ಎಂದು ಮಾತಿನ ಕತ್ತಿಯಿಂದ ನಾಲಗೆಯನ್ನು ಕುಯ್ದಾಗ ರೂಪ್ಲಿ ಮೌನಸಮ್ಮತಿ ನೀಡುತ್ತಾಳೆ. ಆದರೆ ಎದೆಯಲ್ಲಿ ಹಾಲು ತುಂಬಿ ನೋವು ನರನರಗಳನ್ನು ಬಿಗಿದು ಸೆಟಸಿದಾಗ ಕರುಳು ಕಿತ್ತುಬಂದ ನೋವಿನಿಂದ ವಿಹ್ವಲಳಾಗುತ್ತಾಳೆ. ಪಶ್ಚಾತ್ತಾಪದಿಂದ ದಗ್ಧಳಾದ ಆಕೆಗೆ ಮಲಗಿದರೆ ನಿದ್ರೆ ಬರುವುದಿಲ್ಲ. ಎಷ್ಟೋ ಹೊತ್ತು ಮನೆಯಾಚೆ ಇದ್ದು ಬಂದು ನೋವಿನ ಮೂಟೆಯಾಗಿ ಬಿದ್ದುಕೊಂಡಿದ್ದಾಗ ಗಂಡನ ಗೊರಕೆ ಕೇಳಿಸುತ್ತದೆ. ತನ್ನೆದೆಯಲ್ಲಿ ನೋವು, ಸಂಕಟ ಹುತ್ತಕಟ್ಟುತ್ತಿದ್ದರೂ ಗಂಡ ನಿರುಮ್ಮಳನಾಗಿ ನಿದ್ರೆ ಮಾಡುವುದನ್ನು ನೋಡಿ ರೋಷವೇರುತ್ತದೆ. 'ಮಾಯಾ ಮಮತಾ ಕರುಣಾ ಕಕ್ಕುಲಾತಿಯಿಲ್ಲದ ಗಂಡನನ್ನು ಮೈಮಾರಿ ನೋಡದೆ ಸಿಕ್ಕಲ್ಲೆಲ್ಲ ಲಕ್ಷ್ಮಿಜಬರಿಲಿಂದ

ರಿಮ್ಮ ರಿಮ್ಮನೆ ಬಾರಿಸಿ ಮೈ ತುಂಬ ನೆತ್ತರು ಝಿಲ್ಲೆಂದು ಚಿಮ್ಮಿ ಅವನು ಯವ್ವೋ.. ಯಪ್ಪೋ ... ಅಂತ ಅಳುವುದನ್ನು ನೋಡಬೇಕೆನ್ನಿಸುತ್ತದೆ. (124) ಮಗುವನ್ನು ಮಾರಿದ ಪಾಪಪ್ರಜ್ಞೆಯಲ್ಲಿ ನರಳುತ್ತ ನೀರು ಕೂಳಿಲ್ಲದೆ ಒಳಗೊಳಗೇ ಟೊಳ್ಳಾಗುತ್ತ ಈಗಲೋ ಆಗಲೋ ಕುಸಿದು ಬೀಳುವ ಮರದಂತಾಗುತ್ತಾಳೆ ರೂಪ್ಲಿ. ಒಂದು ರಾತ್ರಿ ಯಾವುದೋ ಹೊತ್ತಿನಲ್ಲಿ ತನ್ನ ಮೈಮೇಲೆ ಭಾರವೊಂದು ಬಿದ್ದಂತಾಗಿ ನೋಡಿದರೆ ಗಂಡ. ನೋವು, ದುಃಖ, ರೋಷಗಳಿಂದ ಅವನನ್ನು ದೂರ ತಳ್ಳಿ ತನ್ನನ್ನು ಮುಟ್ಟಬಾರದೆಂದು ಸಿಂಹಿಣಿಯಂತೆ ಗರ್ಜಿಸಿದಾಗ ತುಳಸೀರಾಮ ಬಾಲ ಮುದುರಿದ ಬೆಕ್ಕಿನಂತೆ ದೂರ ಸರಿಯುತ್ತಾನೆ.

ನಿಟ್ಟುಸಿರ ಬೇಗೆಯಿಂದ ಆಕಾಶದತ್ತ ನೋಡಿದ ರೂಪ್ಲಿಗೆ ಕರಿಯಾಗಸದಲ್ಲಿ ಹರಡಿದ ನಕ್ಷತ್ರಗಳು ಬಿಳಿಜೋಳದ ರೊಟ್ಟಿಯ ತುಣುಕುಗಳಂತೆಯೂ ಹೊಳಪು ಕಳೆದುಕೊಂಡ ಚಂದ್ರಾಮ ತನ್ನ ಮಕ್ಕಳು ಉಣ್ಣುವ ಅಂಚು ನೆಗ್ಗಿದ ಸಿಲಾವರ ಗಂಗಾಳಿನಂತೆಯೂ ಕಾಣಿಸುತ್ತದೆ. ಅತ್ಯಂತ ವರ್ಣನೆ ವಿಶಿಷ್ಟವಾಗಿದ್ದು ಕಥೆಯ ಈ ಮೌಲ್ಯವನ್ನು ಹೆಚ್ಚಿಸಿದೆ. ಗಂಡನನ್ನು ದೂರತಳ್ಳುವಲ್ಲಿ ರೂಪ್ಲಿ ತೋರುವ ಧೈರ್ಯ ಅರ್ಥಪೂರ್ಣ.

**ಐಬು**

ತನ್ನ ದೋಷವನ್ನು ಮುಚ್ಚಿಡಲು ಮನುಷ್ಯ ಯಾವ ಹಂತಕ್ಕೂ ಹೋಗಬಲ್ಲ ಎಂಬುದಕ್ಕೆ ಈ ಕತೆ ಸಾಕ್ಷಿ. ಕತೆ ದೀರ್ಘವಾಗಿದ್ದು ಅನೇಕ ಸನ್ನಿವೇಶಗಳು ಮತ್ತು ಘಟನೆಗಳು ಒಂದರೊಳಗೊಂದು ತಳುಕು ಹಾಕುತ್ತವೆ. ಊರಿಗೇ ದೊಡ್ಡ ಶ್ರೀಮಂತನಾದ ಅಪ್ಪಾರಾಯ ಅರಮನೆಯಂಥ ಮನೆಯಲ್ಲಿ ವಾಸಮಾಡುತ್ತಾನೆ. ಮೊದಲನೆ ಹೆಂಡತಿ ನಿಗೂಢವಾಗಿ ಸಾವನ್ನಪ್ಪಿದಾಗ ಬಡವರ ಹುಡುಗಿ ನೀಲಗಂಗಾಳನ್ನು ಹೆಂಡತಿಯಾಗಿ ಮನೆತುಂಬಿಸುತ್ತಾನೆ. ಆದರೆ ಒಣಗಿದ ಕಟ್ಟಿಗೆಯಂಥ ಅಪ್ಪಾರಾಯನ ಜತೆ ಬಾಳುವುದು ನೀಲಗಂಗಾಳಿಗೆ ಹಿಂಸೆಯಾಗುತ್ತದೆ. ತನ್ನಲ್ಲಿದ್ದ ಐಬನ್ನು ಮುಚ್ಚಿಡುವ ಸಲುವಾಗಿಯೇ ಹೆಂಗಸರ ಸಹವಾಸವನ್ನು ಬಯಸುವ ಅಪ್ಪಾರಾಯ ತನ್ನ ದರ್ಪ, ದೌಲತ್ತು ಮತ್ತು ಹಣದ ಬಲದಿಂದ ಹಳ್ಳಿಯ ಅನೇಕ ಹೆಣ್ಣುಗಳನ್ನು ತೋಟದ ಮನೆಗೆ ಕರೆಸಿಕೊಂಡರೆ ನೀಲಗಂಗಾ ಗಂಡನಿಂದ ಸಿಗದ ಸುಖವನ್ನು ಆಳುಮಗ ಧಡೂನಿಂದ ಪೂರೈಸುತ್ತಾಳೆ. ಇದನ್ನು ನೋಡಿದ ಅಪ್ಪಾರಾಯ

ಇಬ್ಬರನ್ನೂ ಕತ್ತರಿಸಿ ಹೊಳೆಗೆ ಹಾಕುವ ತಾಕತ್ತಿದ್ದರೂ ಹಾಗೆ ಮಾಡದೆ ಸಾಕಷ್ಟು ಹಣ, ಒಡವೆಗಳನ್ನು ಕೊಟ್ಟು ಇಬ್ಬರನ್ನೂ ದೂರದ ಊರಿಗೆ ಕಳುಹಿಸುತ್ತಾನೆ. ಮುಂಬೈಗೆ ಬಂದ ನೀಲಗಂಗಾ ಮತ್ತು ಧಡೂ ನಲವತ್ತು ವರ್ಷಗಳ ಕಾಲ ದಾಂಪತ್ಯಜೀವನ ನಡೆಸುತ್ತಾರೆ. ಹುಟ್ಟಿದ ಮಕ್ಕಳೆಲ್ಲ ಸತ್ತು ಕೊನೆಗೆ ಬಾಬು ಎನ್ನುವ ಒಬ್ಬನೇ ಮಗನಲ್ಲಿ ಜೀವವಿಟ್ಟು ಬದುಕುವಾಗಲೇ ಸುಖ ಸಮಾಪ್ತಿಯಾದಂತೆ ಮನೆಕಟ್ಟುವ ಕೆಲಸದಲ್ಲಿದ್ದ ಧಡೂ ಅಘಘಾತದಿಂದ ಸಾವನ್ನಪ್ಪುತ್ತಾನೆ. ಬಾಬುವಿನೊಂದಿಗೆ ಊರಿಗೆ ಮರಳಿದ ನೀಲಗಂಗಾಗೆ ಅಪ್ಪಾರಾಯ ಸತ್ತು ಹೋಗಿರುವುದು, ಆಸ್ತಿಯನ್ನು ತನಗೆ ಮತ್ತು ತನ್ನ ಮಕ್ಕಳಿಗೆಂದು ಬರೆದಿಟ್ಟಿರುವುದು ತಿಳಿದು ಮಗನೊಂದಿಗೆ ಆ ಅರಮನೆಗೆ ಬರುತ್ತಾಳೆ.

ತನ್ನ ಐಬಿನಿಂದಲೇ ಮೊದಲನೆಯ ಹೆಂಡತಿಯ ನಿಗೂಢ ಸಾವಿಗೆ ಕಾರಣನಾದ ಅಪ್ಪಾರಾಯ ತಾನು ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಅಂಶ ಇಲ್ಲಿ ಗಮನಾರ್ಹ.

**ಸಿರಿಸಂಪತ್ತು**

ಪ್ರೀತಿಪ್ರೇಮಗಳೇ ಸಿರಿ ಸಂಪತ್ತು ಎಂಬುದನ್ನು ಸಾರುವ ಕತೆ ಇದು. ಈ ಕತೆಯಲ್ಲಿ ಬರುವ ಮುಖ್ಯ ಪಾತ್ರಗಳು ಕತ್ತಲ ಮತ್ತು ಮಾನಿಂಗಿ. ಹುಟ್ಟುತ್ತಲೇ ಹೆತ್ತವರಿಂದ ತಿಪ್ಪೆಗುಂಡಿಗೆ ಎಸೆಯಲ್ಪಟ್ಟು ಅನಾಥನಾದ ಕಣ್ಣಿಲ್ಲದ ಹುಡುಗನನ್ನು ಯಾರೋ ಹೃದಯವಂತರು ಕತ್ತಲನೆಂದೇ ಹೆಸರಿಟ್ಟು ಸಾಕಿ ದಿಕ್ಕುದೆಸೆಯಿಲ್ಲದ ಹುಡುಗಿ ಮಾನಿಂಗಿಯನ್ನು ಸೇರಿಸಿ ನೆತ್ತಿಮೇಲೆ ಅಕ್ಷತೆ ಹಾಕಿ ಮದುವೆ ಮಾಡಿಸುತ್ತಾರೆ.

ಕತ್ತಲ ಕುರುಡನಾಗಿದ್ದರೂ ಅವನಿಗೆ ಸೊಗಸಾದ ಕಂಠವಿತ್ತು. ಊರ ಮುಂದಿನ ಹಣಮಂದೇವರ ಗುಡಿಯ ಕಟ್ಟೆಯ ಮೇಲೆ ಮುಂಜಾನೆಯಿಂದ ಮುಸ್ಸಂಜೆಯವರೆಗೆ ಏಕತಾರಿ ಬಾರಿಸುತ್ತ ಹಳ್ಳಿಹಾಡು, ಭಜನೆಗಳನ್ನು ಕೇಳುಗರು ಮೈಮರೆಯುವಂತೆ ಹಾಡುತ್ತ ಅವರಿವರು ಕೊಟ್ಟ ಪ್ರಸಾದವನ್ನು ಮನೆಗೆ ತಂದು ಮಾನಿಂಗಿಯ ಜತೆ ಉಣ್ಣುತ್ತಿದ್ದ; ಪ್ರೀತಿ, ಪ್ರೇಮಗಳನ್ನು ಮೊಗೆದು ಮೊಗೆದು ಹೆಂಡತಿಗೆ ಉಣಿಸುತ್ತಿದ್ದ. ಕತ್ತಲನ ಬಗ್ಗೆ ಮಾನಿಂಗಿಗೂ ಎಲ್ಲಿಲ್ಲದ ಅಭಿಮಾನ, ಪ್ರೀತಿ. 'ನಾವಿಬ್ಬರೂ ರೊಕ್ಕದಲಿಂದ ಬಡೋರ ಇದ್ದೀವಿ ಮಾನಿಂಗೀ..... ಆದರ ಪಿರೀತಿ, ಪಿರೇಮದಾಗ ನಾವಿಬ್ರೂ ಭಾಳಂದ್ರ ಭಾಳ ಸಿರಿವಂತರಿದ್ದೀವಿ. ಈ ಸಿರಿ

ಸಂಪತ್ತು ನಮ್ಮಲ್ಲಿ ಅನುಗಾಲ ಇರ್ಬೇಕು ನೋಡು....'(171) ಮೊದಲ ರಾತ್ರಿ ಕತ್ತಲನಾಡುವ ಮಾತುಗಳೇ ಕತೆಯ ಜೀವನಾಡಿ.

ಕೂಲಿನಾಲಿ ಮಾಡಿ ಗಂಡನನ್ನು ಸಾಕುತ್ತಿದ್ದ ಚಾಲೂಕಿನ ಹೆಣ್ಣು ಮಾನಿಂಗಿ ಬರಗಾಲ ಬಂದು ಜನವೆಲ್ಲ ಗುಳೆ ಹೋದ ಸಮಯದಲ್ಲಿ ಗಂಡನೊಂದಿಗೆ ಕಲ್ಬುರ್ಗಿಗೆ ಬಂದಳು. ಕಲ್ಬುರ್ಗಿಯ ಸರಕಾರಿ ಆಸ್ಪತ್ರೆಯ ಹಿಂದಿನ ಬಡಾವಣೆಯಲ್ಲಿ ಐದು ರೂಪಾಯಿ ಬಾಡಿಗೆ ಕೋಣೆ ಹಿಡಿದು ಆಸ್ಪತ್ರೆಯ ರೋಗಿಗಳಿಗೆ ಪಥ್ಯದ ರೊಟ್ಟಿ, ಪಲ್ಯವನ್ನು ಮಾಡುವ, ಪಾರ್ಟಿಗಳಿಗೆ ಮಾಂಸಾಹಾರ ತಯಾರಿಸಿ ಕೊಡುವ ಕೆಲಸ ಮಾಡತೊಡಗಿದಳು. ಅವಳ ಪಾಕರುಚಿ ವ್ಯಾಪಾರವನ್ನು ಕುದುರಿಸಿತು. ಆದರೆ ರಕ್ತಪರೀಕ್ಷೆ ಮಾಡುವ ಬಾಬಣ್ಣನ ಪ್ರವೇಶ ಮಾನಿಂಗಿಯ ಬದುಕಿನ ಹಳಿಯನ್ನು ಹಾದಿ ತಪ್ಪಿಸಿತು. ದೈಹಿಕವಾಗಿ ತನ್ನನ್ನು ತೃಪ್ತಿಪಡಿಸಿದರೂ ಕಣ್ಣಿಲ್ಲದ ಕತ್ತಲ ತನ್ನ ಸೌಂದರ್ಯವನ್ನು ಕಾಣುವ, ಹೊಗಳುವ ತಾಕತ್ತಿಲ್ಲದವನೆಂಬ ಕೊರತೆಯನ್ನು ಬಾಬಣ್ಣನ ಬಣ್ಣದ ಮಾತುಗಳು ದೂರ ಮಾಡಿದಾಗ ಎದೆಯೊಳಗೆ ಖುಷಿ 'ನವಿಲೊಂದು ರೆಕ್ಕೆಪುಕ್ಕಾ ಹರವಿಕೊಂಡು ಒನಪು ವಯ್ಯಾರ ಮಾಡ್ಕೋತಾ' ಕುಣಿದ ಹಾಗಾಗುತ್ತದೆ. ಕತ್ತಲನನ್ನು ಕತ್ತಲೆಗೆ ತಳ್ಳಿ ಬಾಬಣ್ಣನಿಗೆ ಸೆರಗು ಹಾಸುತ್ತಾಳೆ. ಒಳಗಿಂದೊಳಗೆ ಕಾಡುವ ಅಪರಾಧೀ ಭಾವ ಕಣ್ಣಲ್ಲಿ ನೀರು ತರಿಸುತ್ತಿದ್ದರೂ ಮನಸ್ಸಾಕ್ಷಿಗೆ ವಿರುದ್ಧವಾಗಿ ಅವಳು ಬಾಬಣ್ಣನನ್ನು ಪ್ರೀತಿಸುತ್ತಾಳೆ. ಅವನಿಗೆ ಬೆಂಗಳೂರಿಗೆ ವರ್ಗವಾದಾಗ ತಾನೂ ಹೊರಡುವ ಯೋಚನೆ ಮಾಡುತ್ತಾಳೆ. ಹೆಂಡತಿಯ ಸುಖಕ್ಕೆ ಅಡ್ಡಿಯಾಗದ ಕತ್ತಲ ಅವಳನ್ನು ಕಳುಹಿಸಲು ಸಂತೋಷವಾಗಿಯೇ ಒಪ್ಪುತ್ತಾನೆ. ಬಾಬಣ್ಣನೊಂದಿಗೆ ರೈಲು ಹತ್ತಿದ ಮಾನಿಂಗಿ ರೈಲು ಪ್ಲಾಟ್‌ಫಾರಂ ಬಿಟ್ಟು ಹೊರಡಬೇಕೆನ್ನುವಾಗ ಗೆಳೆಯನ ಜತೆ ಬಂದು ಪಿಳಿಪಿಳಿ ರೆಪ್ಪೆ ಬಡಿಯುತ್ತ ಕೈಬೀಸುತ್ತ ನಿಂತ ಕತ್ತಲನನ್ನು ನೋಡುತ್ತಾಳೆ. ಮನಸ್ಸು ಬದಲಾಯಿಸಿದವಳೇ ಜನರ ಮಧ್ಯೆ ನುಗ್ಗಿ ದಾರಿಮಾಡುತ್ತ ಜೀವದ ಹಂಗಿಲ್ಲದವಳಂತೆ ಒಮ್ಮೆಗೇ ರೈಲಿನಿಂದ ಕೆಳಗೆ ಜಿಗಿದು ಓಡಿ ಬಂದು ಕತ್ತಲನ ತೆಕ್ಕೆಗೆ ಆತುಕೊಂಡು ಭೋರೆಂದು ಅಳುತ್ತಾಳೆ. ಬಾಬಣ್ಣನನ್ನು ಹೊತ್ತುಕೊಂಡ ರೈಲು ಯಾವುದರ ಪರಿವೆಯೂ ಇಲ್ಲದೆ ಮುಂದಕ್ಕೆ ಓಡುತ್ತದೆ.

**ಪಟ್ಟ ಪಾಡೆಲ್ಲ ಹುಟ್ಟು ಹಾಡಾಗಿ......**

ಹಳ್ಳಿಯ ದುರ್ದೈವೀ ಹೆಣ್ಣೊಬ್ಬಳು ಹಾಡುತ್ತ ಹಾಡು ಕಟ್ಟುತ್ತ ತನ್ನೊಳಗಿನ ನೋವನ್ನು ನಲಿವಾಗಿ ಗಟ್ಟಿಗೊಳಿಸಿದ ಆದರ್ಶ ಕತೆ.

ತಾಯಿಯ ಹೊಟ್ಟೆಯಲ್ಲಿರುವಾಗಲೇ ಮಾತು ನಡೆದು ತೊಟ್ಟಿಲಶಾಸ್ತ್ರದಂದೇ ಸೋದರತ್ತೆಯ ಮಗ ಕರಿಯನಿಗೆಂದು ನಿಶ್ಚಿತಳಾದ ಹುಡುಗಿ ಹಣಮವ್ವ. ಓರಗೆಯ ಹುಡುಗಿಯರೆಲ್ಲ 12–14 ವರ್ಷದೊಳಗೆ ಮೈನೆರೆದರೆ 16 ತುಂಬಿದರೂ ದೊಡ್ಡವಳಾಗದ ಹಣಮವ್ವನ ಬಗ್ಗೆ ಮನೆಮಂದಿಗೆಲ್ಲ ಯೋಚನೆ. ಸೋಬಾನ ಮಾಡಿಸಿ ಮನೆ ತುಂಬಿಸಿಕೊಂಡರೂ ಅತ್ತೆ ಮತ್ತು ಮನೆಯವರ ನಿರೀಕ್ಷೆಯಂತೆ ಹಣಮವ್ವ ಗಂಡನ ಹಾಸುಗೆಯಲ್ಲಿ ಮಿದುವಾಗಲಿಲ್ಲ. ಅದೇ ಚಿಂತೆಯಲ್ಲಿ ಹೆತ್ತವರು ಸತ್ತರೆ ಅತ್ತೆ ಮಗನಿಗೆ ಬೇರೊಂದು ಮದುವೆ ಮಾಡಿಸುತ್ತಾಳೆ. ಚಿಕ್ಕಂದಿನಲ್ಲಿಯೇ ರೂಢಿಯಾಗಿದ್ದ ಸೋಬಾನದ ಹಾಡುಗಳನ್ನು ಹಾಡುತ್ತಲೇ ಹಣಮವ್ವ ತನ್ನ ಬದುಕಿನ ಗಾಡಿಯನ್ನು ತಳ್ಳುತ್ತಾಳೆ. ಸೋಬಾನದ ಹಾಡುಗಳನ್ನು ತಾನೇ ಕಟ್ಟಿ ಹೊಸ ಹೊಸ ರಾಗದೊಂದಿಗೆ ಹಾಡುವ ಅವಳ ರೂಪ, ಹಾಡುಗಳು ಊರು, ಪರವೂರುಗಳಲ್ಲಿ ಪ್ರಸಿದ್ಧವಾಗಿ ಅವಳು ಸೋಬಾನದ ಹಣಮವ್ವನೇ ಆಗುತ್ತಾಳೆ. 'ಹಣಮವ್ವನದು ಮದಲೇ ಮರಗವ್ವನ ಗುಡಿಯಾಗಿನ ಗಂಟಿ ಭಾರಸದಂಗ ದನಿ. ಎಲ್ಲಾ ಕಡೀನು ಹರಿದಾಡ್ಕೋತಾ ಹೋಗಿ ಊರಮಂದಿ ನಿದ್ದೀಗಿ ನಿಶಾ ಏರಿಸ್ತಿತ್ತು..... ಮುಪ್ಪಿನ ಮುದುಕರಾಗಿದ್ದ ಗಂಡಾ ಹೆಂಡರನೂ ಮಗ್ಗಲು ಬೆಸೆದು ತೇಕ್ಯಾಡಲಕ್ಕ ಸುರು ಮಾಡುತ್ತಿದ್ದರು..' (182) ಊರು ಗುಡಿಸಲಿನ ಮಂದಿಯ ಮೈಮೇಲೆಲ್ಲ ಹಾವು ಹರಿದಾಡಿದಂತೆ, ಕೆಂಜಗ ಓಡಾಡಿದಂತೆ, ಟೊಂಕದ ಕೆಳಗೆ ನಿಗಿ ನಿಗಿ ಕೆಂಡದ ಬೆಂಕಿ ಹಾಕಿದಂತೆ ಅವಳು ಹಾಡುತ್ತಿದ್ದಳು. ಬಿಡುವಿಲ್ಲದ ಹಾಡಿನ ದುಡಿಮೆಯಲ್ಲಿ ಜೀವನ ಸಾಗುತ್ತಿದ್ದರೂ ಹಣಮವ್ವನಿಗೆ ನೆಮ್ಮದಿಯಿಲ್ಲ. ಸುಖವಿಲ್ಲ. ತನ್ನ ಬದುಕು ಒಣಗಿದ ಕೊರಡಾದ ನೋವು, ಸಂಕಟಗಳು ಒಳಗಿನಿಂದ ಒತ್ತಿಕೊಂಡು ಬರುತ್ತವೆ. ತನಗೆ ಇಂಥ ಬದುಕನ್ನು ನೀಡಿದ ಭಗವಂತನಿಗೆ ಹಿಡಿ ಶಾಪ ಹಾಕುತ್ತ ತನ್ನೊಳಗಿನ ಬೇಗೆಯನ್ನು ಹಾಡಿನ ಮೂಲಕ ತಣಿಸುತ್ತಾಳೆ.

ಹಣಮವ್ವನ ಮೂಲಕ ಸಾಮಾನ್ಯರಲ್ಲೂ ಇರುವ ಅಸಾಮಾನ್ಯ ಪ್ರತಿಭೆಯನ್ನು ಪರಿಚಯಿಸಿದ ಕತೆಗಾರ್ತಿ ವ್ಯರ್ಥವಾಗಬಹುದಾದ ಬದುಕನ್ನು ಹೇಗೆ ಸಾರ್ಥಕಪಡಿಸಿಕೊಳ್ಳಬಹುದು ಎಂಬ ಸೂತ್ರವನ್ನೂ ಕಟ್ಟಿಕೊಡುತ್ತಾರೆ.

**ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ.......**

ಸಿದ್ದಪ್ಪ ವಾಲೀಕಾರನ ಮಗಳ ಶಿವಗಂಗಾಳ ಗತಜೀವನದ ನೋವಿನ ಹಾಳೆಗಳನ್ನು ಈ ಕಥಾಸೂತ್ರದಲ್ಲಿ ಕಟ್ಟಿಕೊಡಲಾಗಿದೆ. ಗಂಡನ ಮನೆಯಲ್ಲಿ

ರಾಣಿಯಂತೆ ಸುಖವಾಗಿರುತ್ತಾಳೆಂದು ಸಾವಳಗಿ ಹಳ್ಳಿಯ ನಾಟಿಕಾರ ಮಲ್ಲೇಶಿಗೆ ಮಗಳನ್ನು ಮದುವೆ ಮಾಡಿಕೊಡುತ್ತಾನೆ ಸಿದ್ದಪ್ಪ ವಾಲೀಕಾರ. ಭವಿಷ್ಯದ ಸುಂದರ ಕನಸುಗಳನ್ನು ಕಟ್ಟಿಕೊಂಡು ಹದಿನಾರರ ಹರೆಯದಲ್ಲಿ ಗಂಡನ ಮನೆಗೆ ಬಂದ ಶಿವಗಂಗಾಗೆ ಸುಖ, ಸಂತೋಷಗಳು ಮರೀಚಿಕೆಯಾಗುತ್ತವೆ. 'ತನ್ನ ಬೆನ್ನ ಹುರ‍್ಯಾಗ ಚುರು ಚುರು ಅಂತ ಬೆಂಕಿ ಹೊತ್ತಸಿ, ಅನಾಮತಾಗಿ ನನಗ ಎತಗೊಂಡು ಆಕಾಸಕ್ಕ ಹಾರ‍್ತಾನಾ.. ಚಂದರಾಮನೂರಿಗೆ ಒಯ್ದು ಬೆಳದಿಂಗಳಾಗ ಈಸಲಾಡಸ್ತಾನ, ಚಿಕ್ಕ್ಯಾಗ ಓಡ್ಯಾಡಸ್ತಾನ, ಆಕಾಸದ ನೀಲದ ಹಣ್ಣಿನ ಬಣ್ಣದ ಗಾದಿಮ್ಯಾಲ ಮಲಗಿಸಿ ನನ್ ಮೈ ತುಂಬಾ ಮುತ್ತಿನ ಜಾಳಗಿ ನೇಯ್ತಾನ..'(194) ಎಂಬ ಕನಸು ಹೊತ್ತು ಬಂದವಳು ಕನಸು ನನಸಾಗದ ನೋವಿನಲ್ಲಿ ಹೊಟ್ಟೆಯಲ್ಲಿ ಮೊಳಕೆಯೊಡೆದ ಮಗುವಿನೊಂದಿಗೆ ಗಂಡನನ್ನು ಬಿಟ್ಟು ಬಂದು ಕೂಲಿನಾಲಿ ಮಾಡಿ ಮಗುವನ್ನು ಸಾಕುತ್ತಾಳೆ. ದೊಡ್ಡವನಾದ ಮಗನಿಗೆ ಮದುವೆಮಾಡಿಸಿದ ಆಕೆಗೆ ಆರೇ ತಿಂಗಳಲ್ಲಿ ಅವನಿಂದಲೂ ದೂರವಾಗುವ ಪರಿಸ್ಥಿತಿ ಬಂತು. ಹರೆಯ ಕಳೆದು ಮುಪ್ಪಿಗೆ ತಿರುಗಿದ ಅವಳಿಗೆ 'ಈ ಗಂಡಸರಂದ್ರ ಎಲ್ಲೋರೂ ಒಂದೇ ರೀತಿಯಿರ‍್ತಾರಾ, ತಾಳಿ ಕಟ್ಟಿದ ಗಂಡಾದ್ರೇನು, ಹೊಟ್ಟೀಲಿ ಹುಟ್ಟಿದ ಮಗಾ ಆದ್ರೇನು? ಎಲ್ಲ ಗಂಡುಬೀಜಾನೇ ಅಲ್ಲ! ಅದು ತನ್ನ ಸುಕಾನೇ ನೋಡ್ಕೋತಾದ '(187) ಎಂಬ ಕಹಿ ಸತ್ಯದ ಅರಿವಾಗಿ ನಿಟ್ಟುಸಿರು ಹೊಮ್ಮುತ್ತದೆ. ಹರೆಯದಲ್ಲಿ ಗಂಡನಿಲ್ಲದ ಮುಪ್ಪಿನಲ್ಲಿ ಮಗನಿಲ್ಲದ ನಿರಾಶೆಯ ಹೊಳೆಯಲ್ಲಿ ಮುಳುಗಿ ಬಿಕ್ಕಿ ಬಿಕ್ಕಿ ಅಳುತ್ತಾಳೆ. ದಾರುಣವಾದ ನೋವು, ಹತಾಶೆಗಳು ಅವಳ ನಿದ್ರೆಯನ್ನು ಕೆಡಿಸುತ್ತವೆ. ಎದೆಯಾಳದಿಂದ ಒತ್ತಿಬರುವ ಸಂಕಟದ ಬೇಗೆಯಲ್ಲಿ ಶಿವಗಂಗಾ ಬೇಯುತ್ತಾಳೆ.

ಹೆಣ್ಣು ಎಷ್ಟೇ ಸ್ವತಂತ್ರೆ, ಸ್ವಾಭಿಮಾನಿ, ಸ್ವಾವಲಂಬಿಯಾದರೂ ಬದುಕಿನ ಯಾವುದೋ ಹಂತದಲ್ಲಿ ಆಕೆಯನ್ನು ಒಂಟಿತನ, ಅಸಹಾಯಕತೆಗಳು ಕಾಡುತ್ತವೆ, ತನ್ನವರೆಂಬವರು ಯಾರಾದರೂ ಬಳಿಯಲ್ಲಿರಬೇಕು ಎನಿಸುತ್ತದೆ, ಆದರೂ ಒಳಗಿನ ಶಕ್ತಿಯೊಂದು ಅದನ್ನು ಮೀರಿ ಬದುಕನ್ನು ಮುನ್ನಡೆಸುತ್ತದೆ ಎಂಬ ಅಂಶವನ್ನು ಈ ಕತೆ ಸಾರುತ್ತದೆ.

**ಬಂಜೆಂಬ ಶಬುದವ ಹೊರಲಾರೆ**

ಮಲ್ಲಿಗೆ ಹಳ್ಳಿಯ ಚಂದದ ಹುಡುಗಿ ಪಾರ್ವತಿ ಪ್ರಭುಲಿಂಗನನ್ನು ಮದುವೆಯಾಗಿ ಆರೇಳು ವರ್ಷಗಳಾದರೂ ಮಕ್ಕಳಾಗುವುದಿಲ್ಲ. ಇದ್ದೊಬ್ಬ

ಮಗನಲ್ಲಿ ಜೀವವಿರಿಸಿದ ಅತ್ತೆ ಮಲ್ಲವ್ವ ವಂಶಾಭಿವೃದ್ಧಿಯಾಗುವ ಕನಸು ನನಸಾಗದ ನಿರಾಶೆಯಲ್ಲಿ ಮಗನಿಗೆ ಬೇರೊಬ್ಬ ಹೆಣ್ಣನ್ನು ನಿಶ್ಚಯಿಸುತ್ತಾಳೆ. ಪಾರ್ವತಿ ಈಗ ಇನ್ನಷ್ಟು ಹಣ್ಣಾಗುತ್ತಾಳೆ. ಗಂಡನ ಮರುಮದುವೆಯನ್ನು ತಪ್ಪಿಸಲು, ಬಂಜೆತನದ ಅಪವಾದ ನೀಗಿಸಲು ಆಳುಮಗ ಚೆನ್ನಣ್ಣನನ್ನು ಕೂಡಿ ಬಸುರಾಗುತ್ತಾಳೆ. ಸೊಸೆ ಬಸುರಾದ ವಿಚಾರ ತಿಳಿದ ಮಲ್ಲವ್ವ ಮದುವೆಯ ಯೋಚನೆಯನ್ನು ಕೈಬಿಡುತ್ತಾಳೆ. ಪಾರ್ವತಿ ದಿನತುಂಬಿ ಗಂಡು ಮಗುವಿನ ತಾಯಾಗುತ್ತಾಳೆ. ಪ್ರಭುಲಿಂಗ ಮಗುವನ್ನು ಕೈಯಲ್ಲಿ ಹಿಡಿದು ಬಹಳ ಹೊತ್ತು ದಿಟ್ಟಿಸಿ ನೋಡುತ್ತಾನೆ. ಮಗು ಅದರ ತಾಯಿಯ ತದ್ರೂಪು ಎಂದು ಗೊತ್ತಾದಾಗ ನಿಟ್ಟುಸಿರೆಳೆದು ನಸುನಗುತ್ತಾನೆ. ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆದ ಪಾರ್ವತಿ ಪಾಪಪ್ರಜ್ಞೆಯಿಂದ ಬಾಣಂತಿ ಜ್ವರದಲ್ಲಿ ನರಳುತ್ತಾಳೆ. ಯಾವ ಔಷಧಿಯಿಂದಲೂ ಜ್ವರ ವಾಸಿಯಾಗುವುದಿಲ್ಲ. ನಾನಿನ್ನ ಬದುಕುವುದಿಲ್ಲವೆನ್ನುವುದು ಖಾತ್ರಿಯಾದಾಗ ಪಾರ್ವತಿ ಗಂಡನಿಗೆ ಸತ್ಯವನ್ನು ತಿಳಿಸುತ್ತಾಳೆ. ಅವಳು ಮಾತನ್ನು ಮುಗಿಸುವ ಮುನ್ನವೇ ಪ್ರಭು 'ನನಗೆಲ್ಲ ಗೊತ್ತದಾ ಪಾರೂ.. ನನ್ ಬಳಿ ಮಕ್ಕಳು ಹುಟ್ಟಿಸೋ ತಾಕತ್ತೇ ಇಲ್ಲಾಂತ ನಾಕೊರ್ಸಿನ ಹಿಂದೇ ನನ್ನ ತಪಾಸನೆ ಮಾಡಿದ್ದ ದೊಡ್ಡ ಡಾಕ್ಟರಸಾಬ ಹೇಳ್ಯಾರ'(207) ಅಂದರೂ ಅಪರಾಧೀ ಪ್ರಜ್ಞೆಯಲ್ಲೇ ಪಾರ್ವತಿ ಅಸುನೀಗುತ್ತಾಳೆ.

ತಾಯ್ತನದ ಬಯಕೆ ಮತ್ತು ರಕ್ಷಣೆಯ ಚಿಂತೆ ಹೆಣ್ಣಿನಲ್ಲಿ ಎಷ್ಟು ತೀವ್ರವಾಗಿರುತ್ತದೆಂಬ ಅಂಶ, ಗಂಡಸಿನ ದೋಷವನ್ನು ಹೆಣ್ಣಿಗೆ ಆರೋಪಿಸುವ ಸಮಾಜದ ಮೌಢ್ಯ, ನೀತಿ ಧರ್ಮಗಳ ಚೌಕಟ್ಟಿನಲ್ಲಿ ಬಳೆದ ಹೆಣ್ಣಿನ ಆತ್ಮಸಾಕ್ಷಿ ಎಲ್ಲವೂ ಮನಸ್ಸನ್ನು ಗಾಢವಾಗಿ ತಟ್ಟುತ್ತವೆ. ಪ್ರಭುವಿನ ಔದಾರ್ಯ ಮನನೀಯ.

## ಮಟದಯ್ಯ ಮತ್ತು ಧರ್ಮ

ಧರ್ಮಪಾಲಕರೆಂಬ ಹೆಸರಿನಲ್ಲಿ ಅಧರ್ಮಕ್ಕೆ ಮಣೆಹಾಕುವ ಚಾರಿತ್ರ್ಯಹೀನ ಮಠಾಧಿಪತಿಗಳ ವಿಡಂಬನೆ ಇದು. ನವಿಲೂರು ಮಠದ ಮುರುಗಯ್ಯಸ್ವಾಮಿ ಆ ಮಠದಲ್ಲಿ ಕೆಲಸಮಾಡುತ್ತಿದ್ದ ಕುರುಬರ ಹೆಂಗಸು ವಿಧವೆ ಶಿವಿಯೊಂದಿಗೆ ಗುಪ್ತಸಂಬಂಧ ನಡೆಸಿದ ಪರಿಣಾಮವಾಗಿ ಆಕೆ ಬಸುರಾಗುತ್ತಾಳೆ. ಮಠಾಧೀಶನ ಮರ್ಯಾದೆಯನ್ನು ಉಳಿಸಲು ನಂಬಿಗಸ್ಥನಾದ ಮುಸಲ್ಮಾನ ಖಾಸಿಮ ಶಿವಿಯನ್ನು ಕರೆದುಕೊಂಡು ಮುಂಬೈಗೆ ಹೋಗಿ ಅವಳ

ಬಸುರು, ಬಾಣಂತನದ ವ್ಯವಸ್ಥೆ ಮಾಡುತ್ತಾನೆ. ಹುಟ್ಟಿದ ಗಂಡುಮಗುವನ್ನು ಅನಾಥ ಶಿಶುವೆಂದು ನಂಬಿಸಿ ಮಡದಿ ಫಾತೀಮಳ ಮಡಿಲಿಗೆ ಹಾಕುತ್ತಾನೆ. ಹಮೀದನೆಂಬ ಹೆಸರಿನಿಂದ ಬಳೆಯುವ ಆತ ಪಾಕಿಸ್ಥಾನ ಭಾರತದ ವಿಭಜನೆಯ ಕಾಲದಲ್ಲಿ ನಡೆದ ಹಿಂದೂ ಮುಸ್ಲಿಂ ದಂಗೆಯಲ್ಲಿ ಎಷ್ಟೋ ಹಿಂದೂ ಹೆಂಗಸರನ್ನು ಮಾನಭಂಗ ಮಾಡಿ ಕೊಲೆಮಾಡಿ ರಜಾಕಾರರ ನಾಯಕನಾಗಿ ಮೆರೆಯುತ್ತಾನೆ. ಸೇಡು ತೀರಿಸಲು ಹೊರಟ ಹಿಂದೂಗಳಿಂದ ತಪ್ಪಿಸಿ ದೇಶಾಂತರ ಹೋಗುತ್ತಾನೆ. ಜೀವನೋಪಾಯಕ್ಕಾಗಿ ಕಾವಿ ಬಟ್ಟೆ ಧರಿಸಿ ಸನ್ಯಾಸಿಯ ಸೋಗಿನಲ್ಲಿ ಶಿವಳ್ಳಿಗೆ ಬರುವಾಗ ಊರ ಗೌಡನ ಮನೆಯ ಗೂಟ ಕಾಲಿಗೆ ಸಿಕ್ಕಿ ಬಿದ್ದು ಬಿಡುತ್ತಾನೆ. ಗೌಡ ಶುಶ್ರೂಷೆ ಮಾಡಿ ಗೂಟವನ್ನು ಕೀಳಿಸುತ್ತಾನೆ. ಗೂಟದ ಕೆಳಗೆ ಚಿನ್ನದ ನಾಣ್ಯಗಳು ದೊರಕಿದಾಗ ಅದು ಸನ್ಯಾಸಿಯ ಪವಾಡವೆಂದು ಊರಲ್ಲೇ ಮಟವೊಂದನ್ನು ಕಟ್ಟಿಸಿ ಆತನನ್ನು ಮಠಾಧಿಪತಿಯನ್ನಾಗಿ ಪೀಠಾರೋಹಣ ಮಾಡಿಸುತ್ತಾನೆ. ಮಟದ ಕೀರ್ತಿ ನವಿಲೂರಿಗೆ ತಲಪುತ್ತದೆ. ಹಮೀದನ ಅಗಲಿಕೆಯ ದುಃಖದಲ್ಲಿ ಹಾಸಿಗೆ ಹಿಡಿದಿದ್ದ ಶಿವಿ ಹಾಗೂ ಫಾತಿಮರನ್ನು ಕರೆದುಕೊಂಡು ಖಾಸಿಮ ಮರಿಸ್ವಾಮಿಯ ದರ್ಶನಕ್ಕಾಗಿ ಬರುತ್ತಾನೆ. ಇಲ್ಲಿ ಮರಿಸ್ವಾಮಿ ಕೂಡ ತಂದೆಯಂತೆಯೇ ಒಳಗೆ ವ್ಯಭಿಚಾರಿ ಹೊರಗೆ ಧರ್ಮರಕ್ಷಕನಾಗಿ ಜನಗಳನ್ನು ವಂಚಿಸುತ್ತಿರುತ್ತಾನೆ. ಶಿವಿ, ಫಾತಿಮ ಮತ್ತು ಖಾಸಿಮರು ಮರಿಸ್ವಾಮಿಯನ್ನು ನೋಡಿ ಬೆಚ್ಚಿಬೀಳುತ್ತಾರೆ. ಅವರ ಎದೆಗಳಲ್ಲಿ ಝಗ್ಗನೆ ಮಿಂಚು ಮಿಂಚುತ್ತದೆ. ಮಟದಯ್ಯನ ಮೆದುಳಿಗೂ ಸಿಡಿಲು ಬಡಿಯುತ್ತದೆ. 'ಹಮೀದಾ.. ನನ್ನ ಬೇಟಾ' ಎಂದು ಫಾತಿಮ ಖುಷಿಯಿಂದ ನರಳಿದರೆ, 'ನನ್ ಕಂದಾ..ಅಯ್ಯೋ ಶಿವನೇ.' ಎಂದು ತೊದಲುತ್ತ ಶಿವಿ ಗಳಗಳನೆ ಅಳುತ್ತಾಳೆ.

ಮಾಸ್ತಿಯವರ 'ಸಮಾಧಿಯ ಸತ್ವ'ವನ್ನು ನೆನಪಿಸುವ ಈ ಕತೆ ಅದಕ್ಕಿಂತ ಭಿನ್ನವಾಗಿದ್ದು ಇಲ್ಲಿನ ವ್ಯಂಗ್ಯ ಕತ್ತಿಯ ಮೊನಚಿನಂತೆ ಮನಸ್ಸನ್ನು ಕೊರೆಯುತ್ತದೆ. ತಾನು ಯಾವ ಧರ್ಮೀಯರನ್ನು ಕೊಲ್ಲುತ್ತಿದ್ದೆನೋ ಅದೇ ಧರ್ಮದ ಆಸರೆಯಲ್ಲಿ ಮೋಸದಿಂದ ಬದುಕುವ ಹಮೀದನ ವ್ಯಕ್ತಿತ್ವವನ್ನೂ ಕಾವಿ ಬಟ್ಟೆಯ ಒಳಗೆ ನಡೆಯುವ ಅತ್ಯಾಚಾರ, ಅಧರ್ಮಗಳನ್ನೂ ಸಶಕ್ತವಾಗಿ ಬಿಂಬಿಸಿದೆ. 'ಜಾತೀಯತೆಯ ಕೆಂಜಗ ಕಟ್ಟಿರುವೆಗಳು ಗುಬುಗುಬನೆ ಮುತ್ತಿ, ಹಸಿ ಹರೆಯದ ಹುಡುಗರ ಮೆದುಳನ್ನು, ಬುದ್ಧಿಯನ್ನು ಮೊದಲುಗೊಂಡು

ತಲೆಯೊಳಗಿದ್ದದ್ದನ್ನೆಲ್ಲ ಕಟಕಟನೆ ಕಚ್ಚಿ ತಿನ್ನತೊಡಗಿದ್ದುವು.'(216) ಎಂಬಿತ್ಯಾದಿ ವರ್ಣನೆಗಳೂ ಅಷ್ಟೇ ಸೊಗಸಾಗಿವೆ.

**ಗಿರವಿ**

ಇದೊಂದು ವಿಶಿಷ್ಟ ಕತೆ, ಹೆಣ್ಣನ್ನು ಒಂದು ಉಪಭೋಗದ ವಸ್ತುವಾಗಿ ಬಳಸುವ ಗಂಡಿನ ಸ್ವಾರ್ಥ ಮತ್ತು ಕಾಮಲಾಲಸೆಯಿಂದ ಅಸ್ಮಿತೆಯಿಲ್ಲದೆ ಬಾಳುವ ಮಹಿಳೆಯ ಬಗ್ಗೆ ಕತೆಗಾರ್ತಿ ತಮ್ಮ ವೈಚಾರಿಕ ಕ್ಷಕಿರಣವನ್ನು ಬೀರಿದ್ದಾರೆ. ಸ್ತ್ರೀವಾದಿಗಳನ್ನು ಕೆರಳಿಸುವ ಈ ಕತೆ ಅನುಪಮಾರ ಮಾಧವಿ ಕಾದಂಬರಿಯನ್ನು ನೆನಪಿಸುತ್ತದೆ. ಗಂಡಸಿನ ದೇಹದ ಹಸಿವನ್ನು ಇಂಗಿಸಿ ಅವನ ಸುಖಸಂತೊಷಗಳಿಗೆ ಸಾಧನವಾಗುವ ಹೆಣ್ಣಿನ ಅಂತರಂಗದ ತುಮುಲ, ತೊಳಲಾಟಗಳು ಇಲ್ಲಿ ಅನಾವರಣಗೊಂಡಿದೆ.

ಊರಲ್ಲಿ ಬರಗಾಲ ಬಂದು ಸಾವುನೋವುಗಳಲ್ಲಿ ಸಿಲುಕಿದ ಬಡಕುಟುಂಬಗಳು ಊರುಬಿಟ್ಟು ಹೊರಟಾಗ ಗಿನ್ಯಾನಿಯ ಗಂಡ ಹುಲಿಗ್ಯಾ ಕುಟುಂಬ ಸಮೇತ ಮುಂಬೈಗೆ ಹೋಗಲು ನಿರ್ಧರಿಸುತ್ತಾನೆ. ಸಾಲ ಸಂದಾಯವಾಗದ ಕಾರಣ ಊರ ಗೌಡ ಸೀನಿಂಗಪ್ಪ 'ನನ್ ಸಾಲಾ ಡುಬ್ಬಂತ ಮುಣಗಸ್ಬೇಕಂತ ಹಿಕ್ಮತಿ ಮಾಡಿರೇನ್ಲೋ ಹುಲಿಗ್ಯಾ ಸೂಳೆಮಗನೇ...... ನಿನ್ನ ಸಾಲಕ್ಕ ನಿನ್ನ ಹೆಣ್ತೇಗಿ ನಂಬಲ್ಲಿ ಗಿರವಿ ಇಡು. ನೀ ಬೇಕಾದ್ರೆ ಹೋಗು, ನನ್ ಸಾಲಾ ಮುಟ್ಸಿಸಿ ನಿನ್ ಹೆಣ್ತೇಗಿ ಕರ್ಕೊಂಡು ಹೋಗು ತಿಳಿತೇನೂ?' ಅಂತ ದಬಾಯಿಸಿದಾಗ ಹುಲಿಗ್ಯಾ ಹೆಂಡತಿಯನ್ನು ಒತ್ತೆಯಿಡುತ್ತಾನೆ. ಗಿನ್ಯಾನಿಯ ಅಳು, ಬೇಡಿಕೆ, ಮಗನನ್ನು ಅಗಲಿರಲಾರದ ಸಂಕಟ ಯಾವುದೂ ಅವನನ್ನು ತಟ್ಟುವುದಿಲ್ಲ. ಎರಡು ವರ್ಷ ಕಳೆಯುತ್ತದೆ. ಒಂದುದಿನ ಕಾಡಸಿದ್ಧನ ಜಾತ್ರೆಗೆ ಮನೆಯವರೆಲ್ಲ ಹೋದಾಗ ಮನೆಯ ಉಸ್ತುವಾರಿಯನ್ನು ನೋಡಲು ಬಂದ ಮಗಳ ಪ್ರಾಯದ ಗಿನ್ಯಾನಿಯನ್ನು ನೋಡಿದ ಗೌಡ ಅವಳನ್ನು ತನ್ನ ಕೊಠಡಿಗೆ ಕರೆಸಿ ಭೋಗಿಸುತ್ತಾನೆ. ಹರೆಯ ತುಂಬಿ ಮೈಯಲ್ಲಿ ಆಸೆ, ಬಯಕೆಗಳು ಒತ್ತಿಕೊಂಡು ಬರುವಾಗ ಗಿನ್ಯಾನಿಯೂ ಗೌಡನ ಕ್ರಿಯೆಗೆ ಸ್ಪಂದಿಸುತ್ತಾಳೆ. ಪ್ರಶ್ನಿಸಿದ ಗೌಡಿತಿಗೆ ಗಿರವಿಯಿಟ್ಟ ಹೊಲದಲ್ಲಿ ನೇಗಿಲು ಹೂಡಿ ಬೀಜ ನೆಡುವಂತೆ ತನಗೆ ಗಿರವಿಯಾದವಳನ್ನು ಬೇಕಾದಂತೆ ಬಳಸಿಕೊಳ್ಳುವ ಹಕ್ಕಿದೆಯೆಂದು ಗೌಡ ವಾದಿಸಿದನೆಂದು ಗಿನ್ಯಾನಿ ಉತ್ತರಿಸುತ್ತಾಳೆ. ಹಣ ಸಂಪಾದಿಸಿ ಊರಿಗೆ ಬಂದ ಹುಲಿಗ್ಯಾನಿಗೆ ಹೆಂಡತಿ ಹಾಳಾಗಿರುವ ವಿಚಾರ ತಿಳಿಯುತ್ತದೆ. ಗೌಡನ

ನಂಬಿಕೆದ್ರೋಹಕ್ಕೆ ಕೋಪಬಂದರೂ ಮಡದಿಯನ್ನು ಬಿಡಿಸಿಕೊಳ್ಳುವ ವಿಚಾರವನ್ನು ಕೈಬಿಟ್ಟ ಹುಲಿಗ್ಯಾ ಸಾಲ ಸಂದಾಯವಾಯ್ತೆಂದು ತರ್ಕಿಸುತ್ತಾನೆ. 'ನೀ ಬಳಸ್ಕೊಂಡು ಅನುಭೋಗಿಸಲಕ್ಕಿರಾ ನನ್ ಮಾಲ್ ನನಗೀಗ ಬೇಕಾಗಿಲ್ಲಪ್ಪ, ನೀ ನೇಗಿಲು, ಗಳ್ಯಾವು ಹೊಡೆದ ಹೊಲಾ ನನಗೀಗ ಬ್ಯಾಡಪ್ಪ ಗೋಡ ಅದೆಲ್ಲ ನಿನ್ ಸಾಲಕ್ಕೇ 'ಮುರಗಂಟು'ಮಾಡ್ಲಕ್ಕ ಬಂದೀನಿ ನಾ. ನನ್ನ ಎಡ್ಲೆಕೆರೆ ಹೊಲಾ, ನನ್ ಹೆಣ್ತಿ ಗಿನ್ಯಾನಿ ಎಡ್ಲಕ್ಕನೂ ನಿನ್ ಸಾಲದಾಗ ಮುರಗಂಟು ಮಾಡಿಬಿಟ್ಟೀನಿ ನೋಡು, ಇನ್ನು ನನಗ ಅವು ವಾಪಸ್ಸು ಬಿಲ್ಕುಲ್ ಬ್ಯಾಡ, ನಿನ್ನ ಸಾಲದ ಋಣ ಹರೀತು..'(237) ಎನ್ನುತ್ತ ಹಿಂತಿರುಗುತ್ತಾನೆ. ಇಬ್ಬರು ಕಟುಕರ ಆಟದ ಗೊಂಬೆಯಾದ ಗಿನ್ಯಾನಿ ನಿಂತ ನಿಲುವಿನಲ್ಲಿ ಕುಸಿದು ಬಿಕ್ಕಿ ಬಿಕ್ಕಿ ಅಳುತ್ತಾಳೆ. 'ಸಾವ್ಕಾರಗೋಳ ಸಾಲಾ ಕುಡ್ಲಕ್ಕಾಗಲಿಲ್ಲಂದ್ರ ಬಡೂ ಮಂದಿ ತಮ್ಮ ಹೊಲಾಮನಿ ಗಿರವಿ ಇಡ್ತಾರ, ಒಡವಿ ವಸ್ತ್ರ ಒತ್ತಿ ಇಡ್ತಾರೆಂಬಾ ಮಾತು ಮರ್ತ್ಯಕ್ಕೇ ಗೊತ್ತಾದಾ. ಆದರೆ ಯಾರರೆ ತಮ್ಮೆಂಡ್ರಿಗಿ ಒತ್ತಿ ಇಡ್ತಾರೇನೇ ಆಯಿ? ನನ್ ಗಂಡ ನನಗ ನಿಂಬಲ್ಲಿ ಗಿರವಿ ಆಳಂತ ಇಟ್ಟು ದೂರದೇಸಕ್ಕ ದುಡೀಲಿಕ್ಕಂತ ಹ್ವಾದನು, ನನಗನೂ ಅಂವಾ ತನ್ನ ಹೊಲ, ಮನಿ ಹಂಗ ಒಂದು ಜೀಂವಾಯಿಲ್ಲ ಜಾಜತ(ಆಸ್ತಿ) ಅಂತೇ ತಿಳ್ಕೊಂಡನು.'(235)ಎನ್ನುವ ಗಿನ್ಯಾನಿಯ ಪ್ರಶ್ನೆಗೆ ಉತ್ತರವೆಲ್ಲಿದೆ? ಅವಳ ಸಂಕಟಕ್ಕೆ ಪರಿಹಾರವೆಲ್ಲಿದೆ?

### ಕುಂಟು–ಕಳವುಗಳ ನಡುವೆ ರುಕ್ಕ್ಯಾ

ಕಲ್ಬುರ್ಗಿಯ ಬಟ್ಟೆ ಗಿರಣಿಯಲ್ಲಿ ಕಾರ್ಮಿಕನಾಗಿ ಕೆಲಸಮಾಡುತ್ತಿದ್ದ ರುಕ್ಕ್ಯಾನ ಕುಟುಂಬ ಅಲ್ಪ ಆದಾಯದಲ್ಲೂ ನೆಮ್ಮದಿಯ ಜೀವನವನ್ನು ಸಾಗಿಸುತ್ತಿತ್ತು. ಆದರೆ ಕಾರಣಾಂತರಗಳಿಂದ ಗಿರಣಿ ಮುಚ್ಚಿ ಸಾವಿರಾರು ಕಾರ್ಮಿಕರ ಕುಟುಂಬ ಬೀದಿಪಾಲಾಗುತ್ತದೆ. ಮೂರು ದಿನಗಳಿಂದ ಅನ್ನವಿಲ್ಲದೆ ಮನೆಯ ಪುಟ್ಟ ಮಕ್ಕಳು ಹಸಿವಿನಿಂದ ತತ್ತರಿಸಿದಾಗ ಹೆಂಡತಿ ಮಂಜಿಯೂ ಕಟ್ಟಡ ನಿರ್ಮಾಣದ ಕೆಲಸಕ್ಕೆ ಹೋಗುತ್ತಾಳೆ. ಉಪವಾಸದ ಬಳಲಿಕೆ ಮತ್ತು ಅಂಥ ಕೆಲಸದಲ್ಲಿ ಅಭ್ಯಾಸವಿಲ್ಲದೆ ಸಿಮೆಂಟ್ ಮೂಟೆ ಹೊತ್ತು ಮೇಲೇರುವಾಗ ಜಾರಿ ಬಿದ್ದು ಅವಳ ಕಾಲು ಮುರಿಯುತ್ತದೆ. ಆಪರೇಷನ್ ಮಾಡದಿದ್ದರೆ ಕಾಲು ಕತ್ತರಿಸಬೇಕಾಗುತ್ತದೆಂದೂ ಆಪರೇಷನ್‌ಗೆ ಹಣ ತರಬೇಕೆಂದೂ ಡಾಕ್ಟರ್ ಹೇಳುತ್ತಾರೆ. ಎಲ್ಲಿಯೂ ಹಣ ಒದಗದೆ ರುಕ್ಕ್ಯಾ ಕಳ್ಳತನಕ್ಕೆ ಹೊರಡುತ್ತಾನೆ. ಆದರೆ ಕಳ್ಳತನದ ಚಬಕು ಚಾಲಾಕಿತನಗಳಿಲ್ಲದೆ ಸಿಕ್ಕಿಬೀಳುತ್ತಾನೆ. ಮನೆಯವರು ಆತನನ್ನು ಒದ್ದು ಗಿಡಕ್ಕೆ ಕಟ್ಟಿಹಾಕಿ ಹಗ್ಗ, ಬಾರುಕೋಲು, ಲಾಟಿಗಳಿಂದ

ಥಳಿಸುತ್ತಾರೆ. ರುಕ್ಕ್ಯಾನ ತಲೆ ಒಡೆದು, ತುಟಿ ಹರಿದು. ಚರ್ಮಕಿತ್ತು ರಕ್ತ ಝಿಲ್ಲನೆ ಚಿಮ್ಮುತ್ತದೆ. ಹಸಿದು ಕಂಗಾಲಾಗಿದ್ದ ಆತ ಮರುದಿನ ಪೋಲಿಸರ ಬೂಟುಗಾಲಿನ ಒದೆತಕ್ಕೆ ಕೊನೆಯುಸಿರೆಳೆಯುತ್ತಾನೆ. ಹೆಂಡತಿಗೆ ಆಪರೇಷನ್ ಮಾಡಿಸಲಾಗದ ಸಂಕಟ ಸಾವಿನ ಕ್ಷಣದಲ್ಲೂ ಅವನನ್ನು ಕಾಡುತ್ತದೆ.

ಸಾವು, ನೋವು, ಸಂಕಟಗಳು ಹೇಗೆ ಬಡವರನ್ನು ಅಪರಾಧಿಗಳನ್ನಾಗಿಸಿ ದುರಂತದತ್ತ ಒಯ್ಯುತ್ತವೆ ಎಂಬ ಅಂಶ ಅತ್ಯಂತ ಹೃದಯವೇಧಕವಾಗಿ ಮೂಡಿದೆ. ಮಂಜಿ ಕೆಲಸಕ್ಕಾಗಿ ಅಲೆಯುವ ದೃಶ್ಯವಾಗಲೀ ಹೆಂಡತಿಯ ಆಪರೇಷನ್‌ಗಾಗಿ ಹಣಸಂಪಾದಿಸಿಲು ರುಕ್ಕ್ಯಾ ಪಡುವ ಪಾಡಾಗಲೀ ಕರುಳಿರಿಯುವಂತಿವೆ.

**ಬಂಡು**

ಇದೊಂದು ಸ್ತ್ರೀಶಕ್ತಿಯ ಮಹತ್ವವನ್ನು ನಿರೂಪಿಸುವ ಸೊಗಸಾದ ಕತೆ. ಈ ಕಥೆಯ ನಾಯಕಿ ಲವಂಗಿ. ಆವರಿ ಹೂವಿನಂಥ ಸುಂದರ, ಆಕರ್ಷಕ ಮೈಕಟ್ಟಿನ ಹುಡುಗಿ ಈಡುಜೋಡಿಲ್ಲದ ಕಾಡಳ್ಳಿಯ ಕುರುಬ ಕರಿಗಪ್ಪು ಬಣ್ಣದ ಮಾಳ್ಯಾನನ್ನು ಮದುವೆಯಾದುದೇ ವಿಶೇಷ. ಮೊದಲ ರಾತ್ರಿಯೇ ಭಯಭೀತಳಾಗಿ ಗಂಡನ ಹಾಸುಗೆಯಿಂದ ಓಡಿ ಬಂದ ಲವಂಗಿ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಊರ ಸಾವ್ಕಾರ ಮಲಕಾಜಪ್ಪನ ಕಣ್ಣಿಗೆ ಮಿಂಚು ಹೊಡೆಸಿ ಅವನ ಹಾಸಿಗೆಯಲ್ಲಿ ಪಾಲುದಾರಳಾದಳು. ಅವಳಿಗಾಗಿ ಭೋಳೇಸ್ವಭಾವದ ಮಾಳ್ಯಾನಿಗೆ ತೋಟದ ಮನೆಯಲ್ಲಿ ವಾಸಮಾಡುವ ಅವಕಾಶ ಕೊಟ್ಟ ಸಾವ್ಕಾರ ಲವಂಗಿಗೆ ಒಂದು ಗಂಡು ಮಗುವನ್ನು ಕರುಣಿಸುತ್ತಾನೆ. ಮಾಳ್ಯಾ ಊರುಬಿಟ್ಟು ಹೋಗುತ್ತಾನೆ. ಮಗ ಬಸವರಾಜನನ್ನು ಸಾಕಿ ದೊಡ್ಡವನನ್ನಾಗಿ ಮಾಡಿದ ಲವಂಗಿ ಅವನನ್ನು ಕಲ್ಬುರ್ಗಿ ಶಾಲೆಯಲ್ಲಿ ಓದಿಸಬೇಕೆಂದು ಹಟ ಹಿಡಿದಾಗ ಕೆರಳಿದ ಸಾವ್ಕಾರ ತೋಟದ ಮನೆಯಲ್ಲಿ ಜೀತಮಾಡುತ್ತ ಬಿದ್ದಿರಬೇಕೆಂದು ಆದೇಶಿಸುತ್ತಾನೆ. ತನ್ನ ಸಂಸಾರವನ್ನು ಹಾಳುಮಾಡಿದ್ದಲ್ಲದೆ ಮಗನಿಗೂ ಅನ್ಯಾಯಮಾಡುತ್ತಿರುವ ಸಾವ್ಕಾರನಿಗೆ ಬುದ್ಧಿ ಕಲಿಸಲು ಬಂಡೆದ್ದ ಆಕೆ ಸಾವ್ಕಾರ ಗಾಂಜಾ ಬೆಳೆಯುತ್ತಿರುವ ವಿಚಾರವನ್ನು ಪೋಲಿಸರಿಗೆ ತಿಳಿಸುತ್ತಾಳೆ. ಕೈಗೆ ಕೋಳ ಹಾಕಿಸಿಕೊಂಡು ಹೋಗುವವನನ್ನು ನೋಡಿ ಸಂತೋಷಪಡುತ್ತಾಳೆ. ಸರಕಾರ ನೀಡುವ ಸೌಲಭ್ಯಗಳನ್ನು ಪಡೆದು

ಮಗನಿಗೆ ಉನ್ನತ ವಿದ್ಯಾಭ್ಯಾಸವನ್ನು ಕೊಡಿಸುವ ಕನಸು ಹೊತ್ತು ಕಲ್ಬುರ್ಗಿಯ ದಾರಿ ಹಿಡಿಯುತ್ತಾಳೆ.

**ಭೂಮಿ ಮತ್ತು ಬೀಜ**

ಗೀತಾ ನಾಗಭೂಷಣರ ಅನೇಕ ಕತೆಗಳಲ್ಲಿ ಭೂಮಿ ಮತ್ತು ಬೀಜಗಳು ದಾಂಪತ್ಯಕ್ಕೆ ಸಾಂಕೇತಿಕವಾಗಿದ್ದರೂ ಈ ಕತೆ ಉಳಿದ ಕತೆಗಳಲ್ಲಿ ಕಾಣಿಸದ ಒಂದು ವಿಶಿಷ್ಟ ಆಯಾಮವನ್ನು ದರ್ಶಿಸುತ್ತದೆ. ಅತ್ಯಂತ ಕೆಳಸ್ತರದಲ್ಲಿ ಬದುಕುವ ಅನೇಕರು ಹಾದರ ಕೂಡ ಅಪರಾಧವಲ್ಲವೆಂದು ಭಾವಿಸುತ್ತಾರೆ. ಬಾಳಸಂಗಾತಿ ವ್ಯಭಿಚಾರಿಯೆಂದು ಗೊತ್ತಿದ್ದರೂ ಸಹಬಾಳ್ವೆ ಮಾಡುತ್ತಾರೆ. ತಾನು ಬಿತ್ತಿ ಬೆಳೆಯುವ ಹೊಲವನ್ನು ಇನ್ನೊಬ್ಬನಿಗೆ ಬಿಟ್ಟು ಕೊಡುವಷ್ಟು ಸಲೀಸಾಗಿ ಗಂಡ ಹೆಂಡತಿಯನ್ನು ಮತ್ತೊಬ್ಬನ ಹಾಸುಗೆಗೆ ಕಳುಹಿಸುತ್ತಾನೆ. ಅಂಥ ಒಂದು ಕತೆ ಇದು.

ಮಾದಿಗರ ನೀಲವ್ವ ಮತ್ತು ಶಾಣ್ಯಾರದು ಅನ್ಯೋನ್ಯವಾದ ಸಂಸಾರ. ಹಳ್ಳಿಯಿಂದ ಬಂದು ಗುರುಪಾದಪ್ಪನೆಂಬ ಗೌಡನ ಹೊಲದಲ್ಲಿ ದುಡಿಯುವ ಅವಕಾಶವನ್ನು ಪಡೆದ ಇವರು ಮೂರುವರ್ಷಗಳ ವರೆಗೆ ಯಾವ ಅರೆಕೊರೆಯೂ ಇಲ್ಲದೆ ಬದುಕುತ್ತಾರೆ. ಒಂದು ಗಂಡು ಮಗುವೂ ಆಗುತ್ತದೆ. ಒಂದು ದಿನ ಅಪೂರ್ವ ರೂಪಸಿಯಾದ ನೀಲವ್ವ ಊರಗೌಡನ ಕಾಮದ ಕಣ್ಣಿಗೆ ಬೀಳುತ್ತಾಳೆ. ಕಣ್ಣಿಗೆ ಇಷ್ಟವಾದ ಹೊಲವನ್ನು ಖರೀದಿಸುವಂತೆ ಗೌಡ ಅವಳನ್ನು ವಶಪಡಿಸುತ್ತಾನೆ. ನೀಲವ್ವ ನಡೆದ ಘಟನೆಯನ್ನು ತಿಳಿಸಿದಾಗ ಆಘಾತವಾದರೂ ಶಾಣ್ಯಾ ಅಸಹಾಯಕನಾಗಿ ಸುಮ್ಮನಿರುತ್ತಾನೆ. ಗೌಡ ಬಿತ್ತಿದ ಬೀಜ ನೀಲುವಿನ ಹೊಲದಲ್ಲಿ ಫಲಿಸಿ ಚಂದ್ರಾ ಎಂಬ ಹೆಣ್ಣುಮಗುವಾಗಿ ಮಾದಿಗನಾದ ಶಾಣ್ಯಾನ ಮಗಳಾಗಿ ಶಾಲೆಯಲ್ಲಿ ದಾಖಲಾಗುತ್ತಾಳೆ. ಶಾಣ್ಯಾ ಹೆಂಡತಿಯೆಂಬ ಹೊಲದ ಅಧಿಕಾರವನ್ನು ಗೌಡನಿಗೆ ಬಿಟ್ಟುಕೊಟ್ಟು ಅವನು ದಯಪಾಲಿಸಿದ ಎರಡೆಕೆರೆ ಭೂಮಿಗೆ ಒಡೆಯನಾಗುತ್ತಾನೆ. ಆದರೆ ತನ್ನಿಂದ ಕೈಹಿಡಿದ ಗಂಡನಿಗೆ ಮೋಸವಾದರೂ ಆತ ತನ್ನನ್ನು ಕ್ಷಮಿಸಿ ಮೊದಲಿನಂತೆಯೇ ಪ್ರೀತಿಸುವುದನ್ನು ಅರಗಿಸಿಕೊಳ್ಳಲು ನೀಲವ್ವಳಿಗೆ ಕಷ್ಟವಾಗ್ತದೆ. ಕೆಲವು ವರ್ಷಗಳ ಬಳಿಕ ನೀಲವ್ವ ಆಕಸ್ಮಿಕವಾಗಿ ಸತ್ತು ಹೋಗುತ್ತಾಳೆ. ಊರಿಗೆ ಬರಗಾಲ ಬಂದು ಬಡವರೆಲ್ಲ ಗುಳೆ ಹೋಗುತ್ತಾರೆ. ಶಾಣ್ಯಾ ಕೂಡ ಗೌಡನ ಸಲಹೆಯಂತೆ ಇಬ್ಬರು ಮಕ್ಕಳನ್ನೂ ಕರೆದುಕೊಂಡು ತಾನು ಉತ್ತುಬಿತ್ತ ಹೊಲವನ್ನು ತ್ಯಜಿಸಿ

ಹೊರಡುತ್ತಾನೆ. ಹೋಗುವ ಮುನ್ನ ಗೌಡ ಶಾಣ್ಯಾನನ್ನು ಕರೆದು 'ನನ್ ಮಗಳು ಚಂದ್ರಾಗೆ ನಿನ್ನುಡ್ಯಾಕ ಹಾಕಿ ಹೊಂಟೀನಿ.. ನೀನೇ ನೋಡಪಾ ಅಂದಾಗ ಶಾಣ್ಯಾ ನೀಡುವ ಉತ್ತರ ಕೆಳಜನರ ಬದುಕಿನಲ್ಲಿ ನೈತಿಕತೆಯ ಸಲ್ಲುವ ಮೌಲ್ಯ ಎಷ್ಟು ವಿಚಿತ್ರವಾಗಿದೆ ಎನಿಸುತ್ತದೆ: '.....ನೀವು ಬಿತ್ತಿದ ಬೀಜಕ್ಕ ನಾ ನೀರಾ ಗೊಬ್ಬರಾ ಹಾಕಿ ಬೆಳಸಿನ್ರಿ ಗೋಡಾ  ಚಂದ್ರಾ ನಮಗಿಬ್ಬರಿಗಿನೂ ಮಗಳು. .. ಒಂದೇ ಭೂಮ್ಯಾಗ ನಾವಿಬ್ರೂ ಬೀಜ ಬಿತ್ತೀವಿ ಖರೇ. ಬೀಜಾ ಬ್ಯಾರೆ ಬ್ಯಾರೆ ಆದರೂನೂ ಭೂಮಿ ಮಾತರ ಒಂದೇ ಅದಾ ಅಲ್ರೀ ಯಪ್ಪಾ..... ಅದುನೂ ನಮ್ಮಿಬ್ರಿಗೀ ಭಾಳ ಪಿರೀತಿ ಭೂಮಿ ಅದು, ಈ ಎಡ್ಡೂ ಮಕ್ಕಳು ನಾವು ಮೂರೂ ಮಂದಿಂಗಿ ಮಕ್ಕಳ್ರೀ..'(278)

**ಸಂಗಾತಿ**

ಮಾನವೀಯತೆ ಹಾಗೂ ಜೀವನಪ್ರೀತಿಗೆ ದ್ಯೋತಕವಾದ ಒಂದು ಸುಂದರ ಕತೆ ಇದು. ಬದುಕು, ಭಾಗ್ಯ, ಸುಖ, ಸಂಪತ್ತು, ಮಕ್ಕಳು ಮೊಮ್ಮಕ್ಕಳೆಲ್ಲ ಇದ್ದರೂ ಮುಪ್ಪಿನ ಕಾಲಕ್ಕೆ ಒಂಟಿಯಾಗುವ ಮನುಷ್ಯನಿಗೆ ತನ್ನ ಬದುಕಿನ ಅನುಭವಗಳ ಬುತ್ತಿಯನ್ನು ಹಂಚಿಕೊಳ್ಳುವುದಕ್ಕೆ ಸಮಾನ ಮನಸ್ಕರಾದ ಸಂಗಾತಿಯ ಸಾನ್ನಿಧ್ಯ ಎಷ್ಟು ಅಗತ್ಯ ಎಂಬುದನ್ನು ವಿಚಾರಜಾಗೃತಿಯ ಮೂಲಕ ನಿರೂಪಿಸುವ ಕತೆ.

ಈ ಕಥೆಯಲ್ಲಿ ಬರುವ ಮುಖ್ಯ ಕಥಾಪಾತ್ರ ಚೆನ್ನಬಸವ್ವನೆಂಬ ಗೌಡಿತಿ ಮತ್ತು ಅವಳ ಆಳು ಚಂದ್ರಾಮ. ಮೂವರು ಪುಟ್ಟ ಮಕ್ಕಳನ್ನು ಮಡಿಲಿಗೆ ಹಾಕಿ ಗಂಡ ತೀರಿಹೋದಾಗ ಗೌಡಿತಿ ಹರೆಯ ಮಾಸದ ಹೆಂಗಸು. ಬಿಗಿ ಕಚ್ಚೆಯ ನಿಷ್ಠಾವಂತ ಸೇವಕ ಚಂದ್ರಾಮ ಹಗಲು ರಾತ್ರಿ ಅವಳ ಸೇವೆಗೆ ಟೊಂಕ ಕಟ್ಟಿ ಸಮಸ್ತ ಜವಾಬ್ದಾರಿಗಳನ್ನೂ ನಿರ್ವಹಿಸಿದವನು. ಗಂಡ ಬದುಕಿರುವವರೆಗೂ ಮನೆಯ ಗೋಡೆಗಳ ಆಚೆ ಹೆಜ್ಜೆ ಇಡದ ಗೌಡಿತಿ ಗೌಡನ ಮರಣಾನಂತರ ಸಮರ್ಥ ಗೌಡಿಕೆಯಿಂದಾಗಿ ಊರವರ ಮೆಚ್ಚಿಗೆ, ಅಭಿಮಾನಗಳನ್ನು ಗಳಿಸುತ್ತಾಳೆ. 'ಹೆಂಗ್ಸು ಅಂದ್ರ ಹಿಂಗಿರ್ಬೇಕು ನೋಡ್ರೆ ಪಾ  ಚೆಂಬಸ್ಸವ್ವನ್ಹಂಥಾ ಹೆಂಗಸಿದ್ರ ಮನಿ ಬೆಳಗತದ  ಆಕಿ ಮುಂದ ಗಂಡಸರೇನು ಮಾಡ್ಬೇಕು? ಗಂಡಸಿನಕ್ಕಿಂತ ಗಂಭೀರ ಅದಾಳ ಈ ಹೆಂಗಸು, ಗೌಡಿಕಿಯ ಹಿಂತಾ ದೊಡ್ಡ ವಹಿವಾಟೆಲ್ಲಾ ಒಬ್ಬಕ್ಕಿನೇ ನೋಡ್ಕೊಳ್ಳಾದೇನೂ ಸಾಧಾರಣ ಮಾತಲ್ಲ...(282)

ಗಂಡ ಬದುಕಿರೋ ತನಕಾ ಒಂದಿನಾ ಅರೆ ಮನಿ ಹೊಸ್ತಿಲ ದಾಟಿ ಹೊರಗ ಬಂದಕ್ಕಿ ಅಲ್ಲ ಈ ಗೋಡ್ತಿ. ಈಗ ನೋಡದರ ಗಂಡಸಿನ ಎದಿಮ್ಯಾಲ ಒದ್ದ್ಯಾಂಗ ಗೌಡಿಕಿ ಮಾಡ್ತಾಳ..(282) ಎಂಬ ಹೆಗ್ಗಳಿಕೆಯ ಕಿರೀಟವನ್ನು ಗೌಡಿತಿಯ ತಲೆಗೆ ತೊಡಿಸುತ್ತಾನೆ ಆಳು ಚಂದ್ರಾಮ. ಮಕ್ಕಳು ದೊಡ್ಡವರಾಗಿ ಅವರವರ ನೆಲೆ ಸೇರಿದಾಗ ಅವಳು ಸೇವಕ ಚಂದ್ರಮಾನನ್ನು ಮದುವೆಯಾಗುವ ಯೋಚನೆ ಮಾಡುತ್ತಾಳೆ.

ಗೌಡಿತಿಯ ಕೀರ್ತಿ ಹತ್ತು ಹರದಾರಿ ದೂರದ ಹಳ್ಳಿಗಳ ವರೆಗೂ ಹರಡುತ್ತಿದ್ದಾಗಲೇ ಆಳುಮಗ ಚಂದ್ರಾಮನನ್ನು ಮದುವೆಯಾಗುತ್ತಾಳೆಂಬ ಸುದ್ದಿ 'ಪಟ್ಟಂದು ಹುಟ್ಟಿ ಚಟ್ಟಂತ ಕೈಕಾಲು ಚಾಚಿ ಪುಟುಪುಟು ಅಂತ ಮನೆಯೆಲ್ಲ ನಡೆದಾಡಿ ಮತ್ತೆರಡೇ ದಿನಗಳಲ್ಲಿ ಬೆಳೆದು ದೊಡ್ಡದಾಗಿ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಹಳ್ಳಿಯ ತುಂಬೆಲ್ಲ' ಓಡಾಡುತ್ತ ಜನರನ್ನು ದಿಗ್ಭ್ರಾಂತರನ್ನಾಗಿಸುತ್ತದೆ.

ಹಿರಿಮಗ ಬಸ್ಲಿಂಗ ಸೊಸೆ ನಾಗವ್ವ ಗೌಡಿತಿಯ ತೀರ್ಮಾನವನ್ನು ಹುಚ್ಚೆಂದು ಪರಿಗಣಿಸುತ್ತಾರೆ. ತಮ್ಮನ್ನು ಹಳ್ಳಿಯಲ್ಲಿ ತಲೆಯೆತ್ತಿ ತಿರುಗದಂತೆ ಮಾಡಿದ ಆಕೆಯನ್ನು ಮನೆಯಿಂದಲೇ ಹೊರಹಾಕುವಷ್ಟು ಕೋಪಗೊಳ್ಳುತ್ತಾರೆ. ಆದರೆ ಪಟ್ಟಣದಲ್ಲಿ ಓದುವ ಕಿರಿಮಗ ಶಿವರುದ್ರ ಅಮ್ಮನ ತೀರ್ಮಾನವನ್ನು ಸಮಾಧಾನವಾಗಿ ಯೋಚಿಸುತ್ತಾನೆ. ಅವನ ವೈಚಾರಿಕ ಬುದ್ಧಿ, ವಿವೇಕಗಳು ಅಮ್ಮನ ನಿರ್ಧಾರದ ಸಾಧುತ್ವವನ್ನು ಅರ್ಥಮಾಡುತ್ತವೆ. ತಮಗಾಗಿ ತಮ್ಮ ಕುಟುಂಬಕ್ಕಾಗಿ ಜೀವ ಒತ್ತೆಯಿಟ್ಟು ಗಂಧದ ಕೊರಡಿನಂತೆ ದುಡಿದು ಸವೆದ ಚಂದ್ರಾಮನ ನಿಯತ್ತು, ಪ್ರಾಮಾಣಿಕತೆಗಳು ಅವನಿಗೆ ನಿಚ್ಚಳವಾಗುತ್ತವೆ. ತಾಯಿಯ ತೀರ್ಮಾನ ದೈಹಿಕ ಸಂಬಂಧವನ್ನು ಮೀರಿದ ಭಾವನಾತ್ಮಕ ಅನುಬಂಧವೆಂಬುದು ಅವನಿಗೆ ಮನದಟ್ಟಾಗುತ್ತದೆ. ಊರ, ಮನೆಯವರ ಪ್ರತಿರೋಧವನ್ನು ಮೀರಿ ಅಮ್ಮನನ್ನು ಚಂದ್ರಾಮ ಕಾಕನೊಂದಿಗೆ ಮದುವೆ ಮಾಡಿಸಲು ಮುಂದಾಗುತ್ತಾನೆ. ಒಂದು ಉತ್ತಮ ಸಂದೇಶವನ್ನು ಸಾರುವ ಕತೆ ಇದು.

**ಹಿಂಸೆ**

ಜಾತೀಯತೆಯ ದೌರ್ಜನ್ಯವನ್ನು ಕುರಿತ ಹೃದಯವಿದ್ರಾವಕ ಕತೆ 'ಹಿಂಸೆ'. ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿದ್ದ ಮುದುಕ ಗೌಡನ ಬಾಯಿಗೆ ಮಾದಿಗರ ಲಕ್ಕಿ ನೀರು ಹನಿಸಿ ಜಾತಿಕೆಡಿಸಿದಳೆಂದು ಗೌಡನ ಹಿರಿಮಗ ನಾಗೇಂದ್ರಪ್ಪ

ತಮ್ಮಂದಿರಾದ ಸಂಗಪ್ಪ, ಶಾಣಪ್ಪರೊಂದಿಗೆ ಲಕ್ಕಿಯ ಗಂಡ ಭರಮ್ಯಾನನ್ನು ಹೆಡೆಮುರಿ ಕಟ್ಟಿಸಿ ಕೆಡೆಸಿ ವಾಚಾಮಗೋಚರವಾಗಿ ನಿಂದಿಸುತ್ತಾನೆ. ತನಗೆ ಚಿತ್ರಹಿಂಸೆ ಮಾಡಿದರೂ ಸಹಿಸಿದ ಭರಮ್ಯಾ ಮಡದಿಯನ್ನು ಕುರಿತು ಅಶ್ಲೀಲವಾಗಿ ಮಾತನಾಡಿದಾಗ ಕೋಪ ಭುಗಿಲ್ಲೆಂದು ಪ್ರತಿಭಟಿಸುತ್ತಾನೆ. ಕೆರಳಿದ ನಾಗೇಂದ್ರಪ್ಪ ಭರಮ್ಯಾನನ್ನು ಬೆತ್ತಲೆ ಮಾಡಿ ಕಂಬಕ್ಕೆ ಕಟ್ಟಿ ಮೈಯಲ್ಲಿ ನೆತ್ತರು ಹರಿಯುವಂತೆ ಹೊಡೆಸಿದ್ದಲ್ಲದೆ ಆತನ ಅಳು, ಬೇಡಿಕೆ, ದೈನ್ಯಗಳನ್ನೂ ಲೆಕ್ಕಿಸದೆ ಆತನ ಕಣ್ಣೆದುರೇ ಲಕ್ಕಿಯನ್ನು ಎಳೆದುಕೊಂಡು ಕೋಣೆಯಲ್ಲಿ ಕೂಡಿಹಾಕಿ ಮಾನಭಂಗ ಮಾಡುತ್ತಾನೆ. ನಡೆಯುತ್ತಿರುವ ಅನ್ಯಾಯಗಳಿಗೆ ಮೂಕಸಾಕ್ಷಿಗಳಾದ ಭರಮ್ಯಾನ ಕೇರಿಯವರಿಗೂ ಗೌಡನ ವಿರುದ್ಧ ಉಸಿರೆತ್ತುವ ಧೈರ್ಯವಿಲ್ಲ. ಯಾರೂ ಹತ್ತಿರವಿಲ್ಲದೆ ಸಾಯುತ್ತಿದ್ದ ಮನುಷ್ಯನಿಗೆ ಕೊನೆಗಾಲದಲ್ಲಿ ಬಾಯಿಗೆ ನೀರು ಹನಿಸಿದ ಒಳ್ಳೆಯತನಕ್ಕೆ ಲಭಿಸಿದ ಇಂಥ ಘೋರವಾದ ಶಿಕ್ಷೆ, ನೋವು, ಅಪಮಾನ, ಸಂಕಟಗಳಿಂದ ಕಂಗೆಟ್ಟ ದಂಪತಿಗಳನ್ನು ಪಂಚಾಯಿತಿ ಕಟ್ಟೆಗೆ ಕರೆಸಿದ ಮಾದಿಗರ ಕೇರಿಯ ಹಿರಿಯ ಗೌಡನ ಮಕ್ಕಳು ಅವರನ್ನು ಗಡೀಪಾರು ಮಾಡಿದ ವಿಚಾರವನ್ನು ತಿಳಿಸಿ ಕೈಚೆಲ್ಲುತ್ತಾನೆ. ನೊಂದ ಗಂಡಹೆಂಡತಿ ಮೊದಲೇ ತಿರ್ಮಾನಿಸಿದಂತೆ ಮರುದಿನ ಬೆಳಗಾಗುವುದರೊಳಗೆ ಊರುಬಿಟ್ಟು ಹೊರಟುಹೋಗುತ್ತಾರೆ.

**ಕೆಂಪಾದವೋ ಎಲ್ಲ ಕೆಂಪಾದವೋ.....**

ಸ್ವಾರ್ಥಸಾಧಕರ ಕೈಯಲ್ಲಿ ಮಾನವ ಸಂಬಂಧಗಳು ಕೂಡ ಮಾರುಕಟ್ಟೆಯಲ್ಲಿ ಬಿಕರಿಯಾಗುವ ವಸ್ತುಗಳಾಗುತ್ತವೆ ಎಂಬುದನ್ನು ಈ ಕತೆ ದರ್ಶಿಸುತ್ತದೆ.

ಹಾಲಪ್ಪಗೌಡ ಮತ್ತು ಚಂದಮ್ಮ ಮದುವೆಯಾಗಿ ಆರೇಳು ವರ್ಷಗಳಾಗಿದ್ದರೂ ಅವರಿಗೆ ಮಕ್ಕಳಾಗಿರುವುದಿಲ್ಲ. ಆಸ್ಪತ್ರೆಗೆ ಹೋಗಿ ತಪಾಸಣೆ ನಡೆಸಿದಾಗ ಹಾಲಪ್ಪನಿಗೆ ದೋಷವಿರುವ ವಿಚಾರ ತಿಳಿಯುತ್ತದೆ. ವಂಶವನ್ನು ಬೆಳೆಸುವ ಉದ್ದೇಶಕ್ಕೂ ಮಡದಿಯ ಆಸೆಯನ್ನು ನೆರವೇರಿಸುವುದಕ್ಕೂ ಆಳುಮಗ ಸರದಾರನೊಂದಿಗೆ ರಹಸ್ಯಸಂಬಂಧವನ್ನು ಬೆಳೆಸಿ ಬಸಿರಾದ ತಕ್ಷಣ ಸಂಬಂಧವನ್ನು ತೊರೆಯಬೇಕೆಂದು ಹಾಲಪ್ಪ ಸಲಹೆ ನೀಡುತ್ತಾನೆ. ವಂಶಪಾರಂಪರ್ಯವಾಗಿ ಜೀತದಾಳಾಗಿದ್ದ ತಾಯವ್ವನೆಂಬ ಮಾದಿಗರ ಹೆಣ್ಣಿಗೆ ಹಾಲಪ್ಪನ ತಂದೆ ಹುಚ್ಚಪ್ಪ ಗೌಡನ ಬೀಜಕ್ಕೆ ಹುಟ್ಟಿದ ಸರದಾರ ಏರುಯೌವನದ

ಯುವಕನಾಗಿದ್ದರೂ ಕಚ್ಚೆಹರುಕನಲ್ಲ. ಹಾಲಪ್ಪ ತೋಟದ ಮನೆಗಳಲ್ಲಿ ಬೇರೆ ಹೆಣ್ಣುಗಳೊಂದಿಗೆ ರಾಸಲೀಲೆಯಾಡುತ್ತಿದ್ದರೆ ಈತ ಕಾವಲು ನಾಯಿಯಂತೆ ಮನೆಯ ಸೇವೆಯನ್ನು ಮಾಡುತ್ತಿದ್ದ. ಚಂದಮ್ಮ ತನ್ನ ಆಸೆಯನ್ನು ವ್ಯಕ್ತಪಡಿಸಿದಾಗ ಅದು ಕೂಡ ತಾನು ಮಾಡಬೇಕಾದ ಸೇವೆಯ ಭಾಗವೆಂಬಷ್ಟು ನಿಷ್ಠೆಯಿಂದ ಅವಳನ್ನು ಸ್ವರ್ಗಸುಖದಲ್ಲಿ ತೇಲಾಡಿಸುತ್ತಾನೆ. ಬೀಜದ ಹೋರಿಯಂತಿದ್ದ ಆತನಿಂದ ಬಸಿರು ನಿಂತಾಗ ದೇಹದೊಂದಿಗೆ ಮನಸ್ಸೂ ಬೆರೆಯುತ್ತದೆ. ಗಂಡು ಮಗು ಹುಟ್ಟಿ ಅದು ದೊಡ್ಡದಾಗುತ್ತಿದ್ದಂತೆ ಅವಳಿಗೆ ಇನ್ನೊಂದು ಮಗುವಿನ ಆಸೆ ಕೊನರುತ್ತದೆ. ಹೆಂಡತಿಯ ಮೇಲಿನ ಪ್ರೀತಿಯಿಂದ ಎರಡನೆಯ ಗರ್ಭಕ್ಕೆ ಹಾಲಪ್ಪ ಅನುಮತಿಸಿದರೂ ಬಸಿರಾದ ತಕ್ಷಣ ಸರದಾರನನ್ನು ದೇಶಾಂತರಕ್ಕೆ ಕಳುಹಿಸಬೇಕೆಂದು ಶರತ್ತು ಹಾಕುತ್ತಾನೆ. ಆದರೆ ಸರದಾರನೊಂದಿಗೆ ಕಾಮವನ್ನು ಮೀರಿದ ಪ್ರೇಮದ ಬಾಂಧವ್ಯ ಏರ್ಪಟ್ಟು ಬಸುರಾದ ವಿಷಯವನ್ನು ಚಂದಮ್ಮ ಮುಚ್ಚಿಡುತ್ತಾಳೆ. ಕೆಲಸದ ಮುದುಕಿಯಿಂದ ವಿಚಾರ ತಿಳಿದ ಹಾಲಪ್ಪ ಹೆಂಡತಿಯ ಮೇಲೆ ರೇಗಿ ಮರುದಿನ ಬೆಳಗಾಗುವುದರೊಳಗೆ ದೇಶಾಂತರ ಹೋಗಬೇಕೆಂದು ಸರದಾರನಿಗೆ ಶಾಸಿಸುತ್ತಾನೆ. ಯಜಮಾನನ ಭಯಕ್ಕಿಂತ ಚಂದಮ್ಮನ ಮೇಲಿನ ಪ್ರೀತಿಯೇ ಮುಖ್ಯವಾಗಿ ಸರದಾರ ಹಾಲಪ್ಪನ ಮಾತನ್ನು ಮನ್ನಿಸುವುದಿಲ್ಲ. ಪರಿಣಾಮವಾಗಿ ಮರುದಿನ ಹೊತ್ತು ಮೂಡುವಾಗ ಬೀಜದ ಹೋರಿ ಬೆಳ್ಳ್ಯಾನೊಂದಿಗೆ ಸರದಾರ ಕೂಡ ಹೆಣವಾಗುತ್ತಾನೆ. ಕೊಲೆ, ಸುಲಿಗೆ, ಹಿಂಸೆ, ಹಾದರಗಳೊಂದಿಗೆ ಕ್ರೌರ್ಯದ ಹೊಸ ಆಯಾಮವೊಂದು ಇಲ್ಲಿ ರೆಕ್ಕೆ ಬಿಚ್ಚುತ್ತದೆ.

## ನಿತ್ಯ ನರಳುವ ಮಂದಿ

ಕರ್ನಾಟಕ ಮತ್ತು ಮರಾಠಾವಾಡದ ಗಡಿನಾಡಿನ ಕಿಲಾರಿಯೆಂಬ ಊರಿನಲ್ಲಿ ಆರಾಮವಾಗಿ ಜೀವಿಸುತ್ತಿದ್ದ ರತನಿ ಮತ್ತು ತಿಪ್ಪ್ಯಾ ಭೂಕಂಪದಿಂದಾಗಿ ಮನೆ ಹೊಲಗಳನ್ನು ಕಳೆದುಕೊಂಡು ಕಲ್ಬುರ್ಗಿಗೆ ಬಂದಾಗ ಮಾರುತಿ ಝೋಪಡಿ ಪಟ್ಟಿಯಲ್ಲಿ ವಾಸಿಸಲು ಅವಕಾಶವಿತ್ತು ಜೀವನೋಪಾಯಕ್ಕೆ ಕೆಲಸವನ್ನೂ ಕೊಡಿಸಿದ ಮಂಗಲದಾದಾ ಅವರಿಗೆ ದೇವರ ಸಮಾನನಾಗಿದ್ದ.

ಆಗೊಮ್ಮೆ ಈಗೊಮ್ಮೆ ಸೆರೆ, ಸೇಂದಿ, ಕೋಳಿ, ಕುರಿಗಳ ಪಾರ್ಟಿ ಮಾಡಿಸುತ್ತಿದ್ದ ದಾದಾ ರತನಿಯ ದೇಹಸುಖವನ್ನೂ ಅನುಭವಿಸುತ್ತಿದ್ದ. ವ್ರತೋಪವಾಸಗಳನ್ನು ಮಾಡಿದರೂ ಕೈಹಿಡಿದ ಗಂಡನ ಹೊಲಸು

ಬುದ್ಧಿಯಿಂದಾಗಿ ಮಕ್ಕಳಾಗದ ರತನಿಯ ಆಸೆ ದಾದಾನಿಂದಲೂ ನೆರವೇರುವುದಿಲ್ಲ. ಕುಡಿದ ಅಮಲಿನಲ್ಲಿ ಹೆಂಡತಿ ಮತ್ತು ದಾದಾರ ಕಳ್ಳ ವ್ಯವಹಾರವನ್ನು ಹಾದಿಬೀದಿಗೆ ಎಳೆಯುತ್ತಿದ್ದ ತಿಪ್ಪ್ಯಾ ನಿಶೆ ಇಳಿದಾಗ ಎಂದಿನಂತೆ ಕೆಲಸಕ್ಕೆ ಹೋಗುತ್ತಿದ್ದ. ಆದರೆ ಗಂಡನಿಗೆ ಇಷ್ಟವಿಲ್ಲದೆ ತನ್ನಾಸೆಯೂ ಈಡೇರದಿದ್ದಾಗ ರತನಿಗೆ ದಾದಾನ ಸಂಬಂಧ ಬೇಡವಾಗುತ್ತದೆ. ಅವಳು ಆತನ ಬರುವಿಕೆಯನ್ನು ನಿರಾಕರಿಸಿ ರಾತ್ರಿಯ ಪಾರ್ಟಿಗೆ ಆಳುಮಗ ತಂದ ಮೋಜಿನ ಸಾಮಾಗ್ರಿಗಳನ್ನು ಹಿಂದಕ್ಕಟ್ಟುತ್ತಾಳೆ. ಆದರೆ ತಿಪ್ಪ್ಯಾ ಅದನ್ನು ಒಳಗಿಟ್ಟು ದಾದಾ ಬರುವುದಕ್ಕೆ ಹೆದ್ದಾರಿಯನ್ನು ಕಲ್ಪಿಸುತ್ತಾನೆ. ಗಂಡನ ಮರ್ಜಿ ಅರ್ಥವಾಗದೆ ರತನೀ ದಂಗಾಗುತ್ತಾಳೆ. ರತನಿಯ ನೆನಪಿನ ಹಂದರದಲ್ಲಿ ಬಿಚ್ಚಿಕೊಳ್ಳುವ ಕಥಾಸೂತ್ರಗಳು ಕುಡುಕರ ಬದುಕಿನಲ್ಲಿ ನೈತಿಕತೆ ಕೂಡ ಎಷ್ಟು ಅರ್ಥಹೀನವಾಗುತ್ತದೆಂಬುದನ್ನು ನಿರೂಪಿಸುತ್ತದೆ.

**ಮಠದವ್ವ**

ನಂಬಿಕೆ ಮತ್ತು ವಾಸ್ತವಗಳು ಮುಖಾಮುಖಿಯಾಗುವ ಕತೆ ಇದು. ಊರ ಗೌಡನ ಕುತಂತ್ರದಿಂದ ಸಾಬನೊಬ್ಬನನ್ನು ಹತ್ಯೆಮಾಡಿ ಗಂಡ ಜೈಲುಸೇರಿದಾಗ ಕಾಯಿಲೆ ಬಿದ್ದ ಮಗುವಿಗೆ ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಶುಶ್ರೂಷೆ ಸಿಗಬಹುದೆಂಬ ಆಸೆಗೆ ಕಲ್ಬುರ್ಗಿಗೆ ಬಂದವಳು ಶಾಣಮ್ಮ. ಆದರೆ ಸರಕಾರಿ ಆಸ್ಪತ್ರೆಯ ವ್ಯವಹಾರದಿಂದ ನಿರಾಶಳಾಗಿ ದೇಹವನ್ನು ಮಾರಿ ಹಣಸಂಪಾದಿಸಿ ತಂದರೂ ಮಗ ಸತ್ತು ಸಂಪೂರ್ಣ ಅನಾಥೆಯಾದ ಹತಾಶೆಯಲ್ಲಿರುವಾಗಲೇ ಬಲಾತ್ಕಾರ ಮಾಡಬಂದವನಿಗೆ ಕೊಟ್ಟ ಒದೆ ಆತನ ಮರ್ಮಾಂಗಕ್ಕೆ ಬಿದ್ದು ಆತ ಸತ್ತು ಹೋಗುತ್ತಾನೆ. ಎಷ್ಟೋ ವರ್ಷಗಳ ಸೆರೆಮನೆವಾಸವನ್ನು ಅನುಭವಿಸಿ ಹೊರಬಂದ ಶಾಣಮ್ಮ ದಿಕ್ಕುದೆಸೆಯಿಲ್ಲದೆ ಒಂಟಿಯಾಗಿ ಅಲೆಯುತ್ತಿದ್ದಾಗ ಅವಳನ್ನೇ ಜನ ದೇವರೆಂದು ಭಾವಿಸಿ ಅವಳಿಗಾಗಿ ಮಠವನ್ನು ಸ್ಥಾಪಿಸಿ ಭಜನೆ, ಸಂಕೀರ್ತನೆಗಳನ್ನು ನಡೆಸುತ್ತಾರೆ. ಶಾಣಮ್ಮನ ಮನಸ್ಸಾಕ್ಷಿ ಅಪರಾಧೀ ಭಾವದಿಂದ ನರಳುತ್ತ ಸತ್ಯವನ್ನು ಸಾಬೀತು ಪಡಿಸಲು ಪ್ರಯತ್ನಿಸಿದರೂ ಜನ ನಂಬದಿರುವಾಗ ಮಳೆ ತರಿಸುವ ಮಾತುಕೊಟ್ಟು ದೇವರ ಸಾನ್ನಿಧ್ಯದಲ್ಲಿ ಧ್ಯಾನಮಾಡುತ್ತ ಅನ್ನಾಹಾರವಿಲ್ಲದೆ ಆತ್ಮತ್ಯಾಗ ಮಾಡುತ್ತಾಳೆ. ಹದಿನೈದು ದಿನಗಳ ಬಳಿಕ ಮಳೆಬಂತೆಂದು ಹಳ್ಳಿಯವರು ಹರ್ಷದಿಂದ ಮಠದವ್ವನನ್ನು ಪೂಜಿಸಲು ಬಂದರೆ ಅವ್ವನ

ಸೆಟೆದುಕೊಂಡಿದ್ದ ಮೈ 'ಗಡಕ್ಕಂತ' ಮುಂದಕ್ಕೆ ಬಾಗಿ ಲಿಂಗದ ಮೇಲುರುಳುತ್ತದೆ. ಮಠಗಳ, ಮಠಾಧಿಪತಿಗಳ ಹಿನ್ನೆಲೆಗೂ ಕ್ಷಕಿರಣ ಈ ಕತೆ.

ಬರಗಾಲದ ಬವಣೆ, ಶಾಣಮ್ಮನ ಬದುಕು ದಿಕ್ಕಾಪಾಲಾದ ಸನ್ನಿವೇಶಗಳು ಅತ್ಯಂತ ಹೃದಯಸ್ಪರ್ಶಿಯಾಗಿ ನಿರೂಪಿತವಾಗಿವೆ.

**ಆಸರೆಗಳು**

ಹೆಣ್ಣು ಬಾಲ್ಯ, ಯೌವನ ವೃದ್ಧಾಪ್ಯಗಳಲ್ಲಿ ತಂದೆ, ಗಂಡ ಮತ್ತು ಮಗನ ಆಸರೆಯಲ್ಲಿರಬೇಕೆಂಬ ಮನುಧರ್ಮ ಶಾಸ್ತ್ರದ ಹೇಳಿಕೆಯನ್ನು ಈ ಕತೆ ವಿಡಂಬಿಸುತ್ತದೆ. ಹುಟ್ಟುವಾಗಲೇ ತಾಯಿಯನ್ನು ಕಳೆದುಕೊಂಡ ದ್ಯಾವಮ್ಮ ಅಪಶಕುನದಾಕೆ ಎಂಬ ನಿಂದೆಯನ್ನುಂಡೇ ಬಳೆದಳು. ಹೆತ್ತತಂದೆ ರಾಣಪ್ಪ 'ನೀ ಹುಟ್ಟಿ ನಿಮ್ಮವ್ವಗ ಕೊಲ್ಲಿಬಿಟ್ಟಿ..... ಥೂ, ದೂರಸರಿ.. ನನ್ ಮುಂದ ನಿಂದಿರಬ್ಯಾಡ..' ಅಂತ ಬಯ್ಯುತ್ತಿದ್ದನಲ್ಲದೆ ಮಗಳನ್ನು ಯಾವತ್ತೂ ಪ್ರೀತಿಸಲಿಲ್ಲ. ನೆರೆಕರೆಯವರ ಮತ್ತು ಅಜ್ಜಿಯ ಆಸರೆಯಲ್ಲಿ ಬಳೆದ ಹುಡುಗಿ ಚೆಲುವಿನ ಪುತ್ಥಳಿಯಾಗಿ ಹರೆಯಕ್ಕೆ ಕಾಲಿಟ್ಟಾಗಲೂ ಅವಳಿಗೆ ಮದುವೆಮಾಡಿಸಿ ಒಳ್ಳೆಯ ಗಂಡನ ಕೈಯಲ್ಲಿಡುವ ಮನಸ್ಸು ಅಪ್ಪನಿಗೆ ಬರಲಿಲ್ಲ. ಹರೆಯ ತುಂಬಿ ಗುಡಿಸಲ ಮುಂದೆ ಗಂಡುಗಳ ಓಡಾಟ, ಸಿಳ್ಳು, ಸೀಟಿಗಳು ಕೇಳಿಸಿದಾಗ ದ್ಯಾವಿಯ ಅಜ್ಜಿ ಅಂಜತೊಡಗಿದಳು. ಅಜ್ಜಿಯ ಹಾರೈಕೆಯ ಫಲವಾಗಿ ಕೇರಿಯ ಕಲ್ಲವ್ವನೆಂಬಾಕೆಯ ತಮ್ಮ ಶಂಕರ್ಯಾ ಅವಳನ್ನು ಮದುವೆಯಾಗಲು ಮುಂಬೈಯಿಂದ ಬರುತ್ತಾನೆ. ಆಸೆ, ಕನಸುಗಳನ್ನು ಹೊತ್ತು ಗಂಡನೊಂದಿಗೆ ಮುಂಬೈಗೆ ಹೋದ ಆರು ತಿಂಗಳಲ್ಲೇ ಶಂಕರ್ಯಾ ಅವಳನ್ನು ಶ್ರೀಮಂತರಿಗೆ ಮಾರುವ ಹುನ್ನಾರ ನಡೆಸುತ್ತಾನೆ. ಗಂಡನ ಮೋಸದ ಅರಿವಾದ ದ್ಯಾವಮ್ಮ ತಾನು ಬಸುರಿ ಎಂಬುದನ್ನೂ ಲೆಕ್ಕಿಸದೆ ತಾಳಿಕಿತ್ತು ಅಲ್ಲಿಂದ ಓಡಿ ಬಂದು ಕಲ್ಬುರ್ಗಿಯ ಮಾರುತಿ ಕೊಳಗೇರಿಯಲ್ಲಿ ಬಾಡಿಗೆ ಕೋಣೆಯಲ್ಲಿ ವಾಸಿಸುತ್ತಾಳೆ. ಕೂಲಿಮಾಡುತ್ತ ಅವರಿವರ ನೆರಳಿನಲ್ಲೇ ಬದುಕಿ ಹುಟ್ಟಿದ ಮಗನಲ್ಲಿ ಜೀವವಿಟ್ಟರೆ ಮದುವೆಯಾದ ಮೇಲೆ ಆತ ಅಮ್ಮನನ್ನು ಮರೆತು ಬರಗಾಲದ ಒಂದು ರಾತ್ರಿ ಹೆಂಡತಿಯೊಂದಿಗೆ ಮುಂಬೈ ದಾರಿ ಹಿಡಿಯುತ್ತಾನೆ. ಮುದುಕಿ ಯಾರದೋ ಮನೆಯಲ್ಲಿ ಮಗುವನ್ನಾಡಿಸುವ ಜೀತಕ್ಕೆ ಸೇರಿ ತನ್ನ ಉದರಂಭರಣೆ ಮಾಡುತ್ತಾಳೆ. ಮುಪ್ಪಿನಲ್ಲಿ ನೆನಪುಗಳ ಊರುಗೋಲು ಹಿಡಿದು ನಡೆದು ಬಂದ ಬದುಕನ್ನು ಮೆಲುಕುತ್ತ ಧರ್ಮಶಾಸ್ತ್ರದ ಅರ್ಥವಂತಿಕೆಯನ್ನು ಹುಡುಕುತ್ತಾಳೆ.

## ಬೇಲೂ

ಬೇಲೂ ಎಂಬ ಯುವತಿ ತಾನು ಮಾಡಿದ ಒಳ್ಳೆಯ ಕೆಲಸಕ್ಕೆ ಕಳ್ಳಿಯೆಂಬ ಹಣೆಪಟ್ಟಿಯನ್ನು ಕಟ್ಟಿಸಿ ದಂಡ ತೆತ್ತ ಕಥೆ ಇದು. ಸಮಾಜದ ಅತ್ಯಂತ ಕೆಳಸ್ತರದಲ್ಲಿ ಜನಿಸಿ ಅಮಾನವೀಯತೆ, ಅಸಮಾನತೆಗಳ ಬೆಂಕಿಯಲ್ಲಿ ಬೇಯುತ್ತಿರುವ ತಮ್ಮ ಸಮಾಜದ ರೀತಿ ನೀತಿ, ವ್ಯವಹಾರಗಳನ್ನು ಕುರಿತು ಬೇಲೂಳ ಮನಸ್ಸಿನಲ್ಲಿ ಕಾಡುವ ಅನೇಕ ಪ್ರಶ್ನೆಗಳು ಇಲ್ಲಿ ಅನಾವರಣಗೊಳ್ಳುತ್ತವೆ.

ಇಪ್ಪತ್ತು ವರ್ಷ ವಯಸ್ಸಿನ ಅತ್ಯಂತ ಚಾಲೂಕಿನ ಹುಡುಗಿ ಬೇಲೂ ತನ್ನ ಕಳ್ಳತನದ ವೃತ್ತಿಯಲ್ಲಿ ಎಂದೂ ಸಿಕ್ಕಿ ಬಿದ್ದಿರಲಿಲ್ಲ. ತಂದೆ ಖೇಮ್ಯಾ ತಾಯಿ ಕಜರಿ. ಕಳ್ಳತನವೇ ಕುಲಕಸುಬು. ಕಳ್ಳತನದಲ್ಲಿ ರಕ್ತ ಹರಿಯುವಷ್ಟು ಏಟು ತಿಂದ ಖೇಮ್ಯಾ ಊರಿನಲ್ಲಿ ಇರಲು ಇಷ್ಟಪಡದೆ ಹೆಂಡತಿ ಮಗಳನ್ನು ಕರೆದುಕೊಂಡು ರೈಲ್ವೇ ಹಳಿಯ ಇನ್ನೊಂದು ಭಾಗದಲ್ಲಿ ನಿರ್ಗತಿಕರ ಜೋಪಡಿಯೊಳಗೆ ವಾಸಿಸುತ್ತಾನೆ. ಹೆಂಡತಿ ಕಳ್ಳತನ ಮಾಡಿ ತಂದ ಬಂಗಾರದ ಸರವನ್ನು ಮುಂಬೈಯಿಂದ ಬಂದ ನಾಟ್ಯದವಳಿಗೆ ಕೊಟ್ಟು ಅವಳ ಜತೆ ಓಡಿಹೋದಾಗ ಗಂಡನಿಗೆ ಶಾಪಹಾಕಿ ಮಗಳೊಂದಿಗೆ ಒಂಟಿಯಾಗಿ ಬದುಕಿದ ಕಜರಿ ಮೀನಿಗೆ ಈಜು ಕಲಿಸುವಂತೆ, ಹಕ್ಕಿಗೆ ಹಾರಲು ಕಲಿಸುವಂತೆ ಬೇಲೂಗೆ ಕಳ್ಳತನದ ಮರ್ಮಗಳನ್ನು ಕಲಿಸುತ್ತಾಳೆ. ಅಮ್ಮನನ್ನು ಮೀರಿಸುವಷ್ಟು ನಿಪುಣೆಯಾಗಿ ವೃತ್ತಿಯಲ್ಲಿ ಪಳಗಿದ್ದರೂ ತನ್ನ ವೃತಿ ಮತ್ತು ಬದುಕಿನ ಬಗ್ಗೆ ಅಸಹ್ಯಪಡುವ ಬೇಲೂಗೆ ತಾವೇಕೆ ಸಮಾಜದ ಇತರರಂತೆ ಬದುಕಬಾರದು ಎಂಬ ಪ್ರಶ್ನೆ ಕಾಡುತ್ತದೆ. ದೇಶದ ತುಂಬ ರಾಜಕೀಯ ಪುಡಾರಿಗಳು ಐಕ್ಯತೆಯ ಬಗ್ಗೆ, ಏಕೀಕರಣದ ಬಗ್ಗೆ, ಸಮಾನತೆಯ ಬಗ್ಗೆ ಘೋಷಣೆಗಳನ್ನು ಕೂಗುವಾಗ ಅವಳಿಗೆ ನಗು ಬರುತ್ತದೆ. ಅವರ ನಾಲಗೆಯನ್ನು ಕತ್ತರಿಸುವಷ್ಟು ಕೋಪಬರುತ್ತದೆ.

ಒಳ್ಳೆಯ ಸ್ವಭಾವದ, ದಿಟ್ಟ ಹೆಣ್ಣು ಬೇಲೂಗೆ ಅಪಾಯಕಾರಿ ಕೆಲಸಗಳೊಂದಿಗೆ ಯಾವಾಗಲೂ ದೋಸ್ತಿ. ಸಾಹಸ ಅವಳ ಹುಟ್ಟುಗುಣವಾದಂತೆ ಕರುಣೆ, ಪ್ರೀತಿಗಳೂ ಅವಳ ಎದೆಯಲ್ಲಿ ಜಾಗ ಮಾಡಿಕೊಂಡಿದ್ದುವು. ಗಳಿಸಿದ್ದನ್ನು ಬಸ್ತಿಯ ನಾಲ್ಕು ಮಂದಿಗೆ ಹಂಚಿಯೇ ಅವಳು ತಿನ್ನುತ್ತಿದ್ದಳು. ಅವಳ ಮಾತುಗಳು 'ಮಸೆದಿಟ್ಟ ಕತ್ತಿಯ ಮೊನೆಯಂತೆ ಹರಿತವಾಗಿದ್ದರೆ ಮನಸ್ಸು ಅದೇ ತಾನೆ ಕಡಿದು ತೆಗೆದ ತಾಜಾ ಬೆಣ್ಣೆಯಂತೆ

ಮೃದು.'(367) ಬಿಗಿಕಚ್ಚೆಯ ತುಂಟುಗಾತಿಯಾದ ಅವಳನ್ನು ಕೆಣಕಿದವರು ಅವಳ ಮಾತಿನ ಏಟಿಗೆ ತತ್ತರಿಸುತ್ತಿದ್ದರು.

ಒಂದುದಿನ ಕಂದಕದ ಕೆಳಗಿನ ಕಂಟಿ ಕಮರಿಗಳ ನಡುವೆ ಎರಡು ಮೂರು ದಿನಗಳ ಅನಾಥ ಹಸುಗೂಸನ್ನು ನೋಡಿ ಬೇಲೂ ಮನಕರಗುತ್ತಾಳೆ. ಸಾಯುವ ಸ್ಥಿತಿಯಲ್ಲಿದ್ದ ಆ ಮಗುವನ್ನು ಎತ್ತಿ ತನ್ನ ಮೈಯ ಬಿಸುಪಿನಿಂದ ಆರೈಕೆ ಮಾಡುತ್ತಾಳೆ. ಕಳ್ಳತನ ಮಾಡಿ ಸಿಕ್ಕಿ ಹಾಕದ ಬೇಲೂ ಸಾಯುವ ಮಗುವೊಂದನ್ನು ರಕ್ಷಿಸಿದ ಕಾರಣಕ್ಕೆ ಪೋಲಿಸರಿಗೆ ಸೆರೆಯಾಗುತ್ತಾಳೆ. ಅವಳನ್ನು ಬಿಡಿಸಲು ತಾಯಿ ಕಜರಿ ಶೇಕಡಾ ಇಪ್ಪತ್ತರ ಬಡ್ಡಿಗೆ ಇನ್ನೂರು ರೂಪಾಯಿ ಲಂಚಕೊಡಬೇಕಾಗುತ್ತದೆ. ಸಮಾಜದ ಇಂಥ ವ್ಯವಸ್ಥೆಯ ಬಗ್ಗೆ ಬೇಲೂ ಅಸಹ್ಯಪಡುತ್ತಾಳೆ. 'ಈ ಪರಪಂಚದಾಗ ಛಲೋ ಕೆಲಸಕ್ಕೆ ಕಿಮ್ಮತ್ತೇ ಇಲ್ಲೇನು?.... ಹೆಂತಾ ಹಲ್ಕಟ್ ಸಮಾಜ ಇದು? ಇದರ ರೀತಿ ರಿವಾಜಗೋಳಿಗಿ ಮೆಟ್ಟಲಿಂದ ಹೊಡಿಬೇಕು"(374) ಅಂತ ಅನ್ನಿಸುತ್ತದೆ. ಕೊಳಗೇರಿಯಲ್ಲಿ ಜಾಗೃತವಾಗುತ್ತಿರುವ ವೈಚಾರಿಕ ಪ್ರಜ್ಞೆಯನ್ನು ಈ ಕಥೆ ವಿವರಿಸುತ್ತದೆ.

**ಕಪ್ಪು**

ಮರ್ಯಾದೆಗಾಗಿ ಜೀವವನ್ನೇ ಸಮರ್ಪಿಸಿದ ನಿರ್ಗತಿಕ ಕುಟುಂಬವೊಂದರ ಕರುಣಕತೆ ಕಪ್ಪು.

ಮಾಳವ್ವನೆಂಬ ಮುದುಕಿಗೆ ಮಗ ತಿಪ್ಪ್ಯಾ, ಸೊಸೆ ಸಾಬವ್ವ, ಮೊಮ್ಮಕ್ಕಳು ದ್ಯಾವಿ, ನಾಗ್ಯಾ ಮತ್ತು ಗಂಗಿ. ತಿಪ್ಪ್ಯಾನಿಗೆ ಗಿರಣಿಯಲ್ಲಿ ಅರವತ್ತು ರೂಪಾಯಿಯ ಸಂಬಳದ ಕೆಲಸವಾಗಿದ್ದರೂ ಹೇಗೋ ಸಂಸಾರ ರಥ ಸಾಗುತ್ತಿತ್ತು. ಆದರೆ ಗಿರಣಿ ಮುಚ್ಚಿದಾಗ ಬೇರೆ ಕೆಲಸದಲ್ಲಿ ಅಭ್ಯಾಸವಿಲ್ಲದೆ ರಿಕ್ಷಾ ಎಳೆದು ಅಫಘಾತವಾಗಿ ಆಸ್ಪತ್ರೆ ಸೇರಿದಾಗ ದ್ಯಾವಿ ಮೈನೆರೆದು ಮದುವೆಗೆ ಸಿದ್ಧಳಾದಳು. ಹರೆಯ ತುಂಬಿದ ದ್ಯಾವಿಯನ್ನು ನೋಡಿದ ಕೇರಿಯ ಗಂಡುಗಳ ಟೊಂಕದಲ್ಲಿ ಇರುವೆಗಳು ಹರಿದಾಡಿದಾಗ ಮಾಳವ್ವನಿಗೆ ಮೊಮ್ಮಗಳ ಮದುವೆ ಚಿಂತೆ. ಆದರೆ ಆಪರೇಷನ್ ಆಗಿ ಮೊಣಕಾಲು ಕತ್ತರಿಸಿ ಮನೆಗೆ ಬಂದ ತಿಪ್ಪ್ಯಾನಿಂದ ಮಗಳ ಮದುವೆ ಮಾಡುವುದಿರಲಿ ಸಂಸಾರರಥವನ್ನು ಸಾಗಿಸುವುದಕ್ಕೂ ಶಕ್ತಿಯಿಲ್ಲ. ದ್ಯಾವಿ ಮನೆಯವರ ಇಷ್ಟಕ್ಕೆ ವಿರೋಧವಾಗಿ ಗೆಳತಿ ಈರಿಯೊಂದಿಗೆ ಲಾರಿ ಚಾಲಕರಿಗೆ ಅಡುಗೆ ಮಾಡುವ ಕೆಲಸಕ್ಕೆ ಸೇರಿ ಮನೆಯವರ ತುತ್ತಿನ ಚೀಲವನ್ನು ತುಂಬಿಸುತ್ತಾಳೆ. ಚಾಲಾಕಿನ ಹೆಣ್ಣು ಈರಿಯ

ಒಡನಾಟದಲ್ಲಿ ದ್ಯಾವಿ ಬದಲಾಗುತ್ತಾಳೆ. ಲಾರಿ ಡ್ರೈವರುಗಳ ಕೀಟಲೆಗಳು ಅವಳ ಹರೆಯಕ್ಕೆ ಸುಖದ ಸೇಂದಿಯನ್ನು ಕುಡಿಸುತ್ತವೆ. 'ಮಸಾಲೆ ತುಂಬಿ ಎಣ್ಣ್ಯಾಗ ಕರಿದು ತೆಗೆದಿಟ್ಟ ಇಡೀ ಕೋಳಿಯಂತಿರುವ' (379) ಅವಳು ಬಹು ಸುಲಭವಾಗಿ ಲಾರಿ ಡ್ರೈವರುಗಳ ಕಾಮದ ಹಸಿವಿಗೆ ಆಹಾರವಾಗುತ್ತಾಳೆ. ಝೋಪಡಿಪಟ್ಟಿಗಳಲ್ಲಿ ಹಾದರ, ಕಳ್ಳತನ, ಕೊಲೆ, ಸುಲಿಗೆ ಎಲ್ಲವೂ ಖುಲ್ಲಮ್ ಖುಲ್ಲ. ದ್ಯಾವಿ ಬಸುರಿಯಾದ ಸುದ್ದಿ ಇಡೀ ಕೇರಿಯಲ್ಲಿ ಹಬ್ಬುತ್ತದೆ. ತಾಯಿ ಸಾಬವ್ವ ಆತ್ಮಹತ್ಯೆ ಮಾಡುತ್ತಾಳೆ. ಗೂಂಡಾಗಳು ದ್ಯಾವಿಯನ್ನು ಲಾರಿಯಲ್ಲಿ ಎತ್ತಿಹಾಕಿ ಮುಂಬೈದಾರಿ ಹಿಡಿಯುತ್ತಾರೆ. ಮುದುಕಿ ಮಾಳವ್ವ, ಕುಂಟ ತಿಪ್ಪ್ಯಾ ಮತ್ತು ಮಕ್ಕಳು ಕೆನೆಗಟ್ಟುತ್ತ ಬಂದ ಕತ್ತಲ ಕಪ್ಪಿನಲ್ಲಿ ಕರಗಿಹೋಗುತ್ತಾರೆ.

**ಕಮರಿಹೋಗುವ ಕೆಳಜನರು**

ಕಾಡಳ್ಳಿಯ ಚೆಂಬಸಪ್ಪ ಗೌಡನ ಒಬ್ಬಳೇ ಮಗಳು ಗಂಗಾ. ಅವಳ ಕುಲುಕುಲು ನಗುವಿಗೆ, ಕಾಲಲ್ಲಿಯ ಬೆಳ್ಳಿ ಗೆಜ್ಜೆಯ ಘಿಲ್ ಘಿಲ್ ನಾದಕ್ಕೆ, ಚಿನ್ನದ ಬಳೆಗಳ ಝುಣತ್ಕಾರಕ್ಕೆ ಗೌಡನ ಇಡೀ ಮನೆ ಖುಷಿ ಮತ್ತು ಹೆಮ್ಮೆಗಳಿಂದ ಬೀಗುತ್ತಿತ್ತು. ನಾಗರ ಪಂಚಮಿಯಂದು ಆಳುಮಗ ಶಿವೂನೊಂದಿಗೆ ನಾಗನಿಗೆ ಹಾಲೆರೆಯಲು ಹೋದ ಹಸಿಬಿಸಿ ಹರೆಯದ ಗಂಗಾಳನ್ನು ನಾಗರಹಾವು ಕಚ್ಚಿದಾಗ ತಕ್ಷಣವೇ ಶಿವೂ ವಿಷವನ್ನು ಹೀರಿ ಅವಳನ್ನು ಬದುಕಿಸುತ್ತಾನೆ. ಜೀವವನ್ನು ಫಣವಿಟ್ಟು ತನ್ನನ್ನು ಬದುಕಿಸಿದ ಶಿವೂನ ಮೇಲೆ ಪ್ರಾಣವಿಟ್ಟ ಗಂಗಾ ಅವನನ್ನು ತನ್ನ ಮೋಹಜಾಲದಲ್ಲಿ ಬಂಧಿಸುತ್ತಾಳೆ. ವಿಷಯ ತಿಳಿದ ಮನೆಯವರು ಶಿವೂನನ್ನು ಸಾಯಿಸುವ ಬೆದರಿಕೆಯೊಡ್ಡಿ ತಿಂಗಳೊಳಗೇ ನೆರೆಹಳ್ಳಿಯ ಈರಣ್ಣನೊಂದಿಗೆ ಗಂಗಾಳ ಮದುವೆಮಾಡಿಸಿದ್ದಲ್ಲದೆ ವಾರದೊಳಗೇ ವಿಷಬೆರೆಸಿದ ಸೆರೆ ಕುಡಿಸಿ ಶಿವೂನನ್ನು ಸಾಯಿಸುತ್ತಾರೆ. ತಾನು ಮಾಡಿದ ತಪ್ಪಿಗೆ ತನ್ನನ್ನು ಸಾಯಿಸದೆ ನಿರಪರಾಧಿಯಾದ ಶಿವೂನನ್ನು ಮೋಸದಿಂದ ಕೊಲ್ಲಿಸಿದ್ದು ಗಂಗಾಗೆ ಆಘಾತವಾಗುತ್ತದೆ. ಅವನ ಸಮಾಧಿಗೆ ಹೋಗಿ ಹಣತೆ ಹಚ್ಚಿ ಬರುವಾಗ ಆತನನ್ನು ಕೊಂದಿದ್ದು ತನ್ನಣ್ಣ ಅಲ್ಲ ತಾನೇ ಎನ್ನಿಸುತ್ತದೆ.

ಮೇಲುಜಾತಿಯವರ ಸೂತ್ರದ ಬೊಂಬೆಯಾಗಿ ಪ್ರಾಣತೆರುವ ಅಮಾಯಕ ಬಡಜನರ ಬದುಕಿನ ಕಹಿವಾಸ್ತವವನ್ನು ಅತ್ಯಂತ ಹೃದಯವೇಧಕವಾಗಿ ಚಿತ್ರಿಸುವ ಈ ಕತೆ 'ಭಾಳ ತಲೆಗೋಳಲಿಂದ ಇದು ಹೀಗೇ ಬೆಳ್ದು ಬಂದಾದ ಮಗಾ ದೊಡ್ಡವರ ತಪ್ಪಿಗಿ ಸಣ್ಣವರ ತೆಲಿ ದಂಡಾ

ಸಾವ್ಕಾರ ಮಂದಿ ತಪ್ಪೀಗಿ ಬಡೋ ಮಂದಿ ಬಲಿ.' (394)ಎನ್ನುವ ಅಜ್ಜಿಯ ಮಾತಿಗೆ ಸಮರ್ಥನೆಯಾಗಿದೆ.

**ಸಾವು**

ಸಾವು ಶತ್ರುವನ್ನೂ ಮೆತ್ತಗೆ ಮಾಡುತ್ತದೆ ಎಂಬ ಮಾತಿಗೆ ಭಾಷ್ಯ ಈ ಕತೆ. ಊರೂರು ತಿರುಗುವ ಕಂಚಿಕೊರವರ ತಬ್ಬಲಿ ಹುಡುಗಿ ಬೆಳ್ಳಿಯನ್ನು ಅಕ್ಕ ಪಕ್ಕದವರು ಸಾಕುತ್ತಾರೆ. ಅವರಿವರ ಎಂಜಲು ತಿಂದೇ ದೊಡ್ಡವಳಾದ ಬೆಳ್ಳಿ ಹದಿನಾರಕ್ಕೆ ಹರೆಯ ತುಂಬಿ ಅಂದದ ಹೆಣ್ಣಾಗಿ ಗಂಡುಗಳ ಎದೆಗೆ ಬೆಂಕಿಯಿಟ್ಟರೆ ಅವಳ ಎದೆಬಾಗಿಲಿನ ಕೀಲಿ ತೆರೆಯುವ ಗಂಡು ಆಸುಪಾಸಿನ ಯಾವ ಹಳ್ಳಿಯಲ್ಲೂ ಇರಲಿಲ್ಲ. ತನ್ನನ್ನು ಮದುವೆಯಾಗಲು ಮುಂದೆ ಬಂದ ಎಲ್ಲ ಗಂಡುಗಳನ್ನೂ ತಿರಸ್ಕರಿಸಿ ಕಾಡಿನ ಹಕ್ಕಿಯಂತೆ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಬೆಳ್ಳಿ ಅದು ಹೇಗೋ ಮೂವರು ಮಕ್ಕಳ ತಂದೆ ಇಸಕಂಟಪ್ಪನಿಗೆ ಒಲಿದಳು. ಉಂಡು ಎಸೆಯಬೇಕೆಂದು ಯೋಚಿಸಿದ್ದ ಇಸಕಂಟಪ್ಪನೂ ಅವಳ ಮೋಹಪಾಶದಲ್ಲಿ ಬಂಧಿತನಾಗಿ ಅವಳ ಕೊರಳಿಗೆ ತಾಳಿ ಕಟ್ಟುತ್ತಾನೆ.

ಗಂಡ ಕಲ್ಬುರ್ಗಿಯ ಕನಕಗಿರಿಯ ಕಾಲೋನಿಯಲ್ಲಿ ಬಾಡಿಗೆ ಮನೆಮಾಡಿ ಬೆಳ್ಳಿ ಜತೆ ಸಂಸಾರ ನಡೆಸುವ ಸುದ್ದಿ ತಿಳಿದ ಇಸಕಂಟಪ್ಪನ ಮೊದಲ ಹೆಂಡತಿ ಕಾಳಿ ರೌದ್ರಾವತಾರ ತಾಳಿ ಬೆಳ್ಳಿಯ ಮನೆಗೆ ಬರುತ್ತಾಳೆ. ಇಬ್ಬರೊಳಗೂ ಮಾರಾಮಾರಿಯಾಗಿ ಕಾಳಿಯ ಅಣ್ಣಂದಿರು ಇಸಕಂಟಪ್ಪನನ್ನು ಕರೆದೊಯ್ದಮೇಲೆ ಆತ ಬೆಳ್ಳಿಯ ಬಳಿಗೆ ಬರುವುದನ್ನು ಕಡಿಮೆ ಮಾಡುತ್ತಾನೆ. ಬೆಳ್ಳಿ ಬಸಿರಾದ ವಿಚಾರ ತಿಳಿದು ಗರ್ಭಪಾತ ಮಾಡಿಸಲು ಸಲಹೆ ನೀಡುತ್ತಾನೆ. ಅವಳು ಒಪ್ಪದಿರಲು ರಪರಪನೆ ಕಪಾಳಕ್ಕೆ ಹೊಡೆದು ಬೈಯ್ದು ಮನೆಯಿಂದಾಚೆ ತಳ್ಳಿ ಮನೆಗೆ ಬೀಗ ಹಾಕಿ ಹೊರಟುಹೋಗುತ್ತಾನೆ. ಕಾಯಿಪಲ್ಲೆ ಮಾರುವ ಗುತ್ತೆವ್ವನೆಂಬ ಮುದುಕಿಯ ಆಶ್ರಯದಲ್ಲಿ ಬೆಳ್ಳಿ ಬದುಕುವ ಛಲ, ಬಲವನ್ನು ಮೈಗೂಡಿಸಿಕೊಂಡು ತರಕಾರಿ ಮಾರಾಟ ಮಾಡುವುದನ್ನು ಕಲಿಯುತ್ತಾಳೆ. ಮಗಳೆಂಬಷ್ಟು ಪ್ರೀತಿಯಿಂದ ಬೆಳ್ಳಿಯ ಬಸಿರು, ಬಾಣಂತನ ಮಾಡಿದ ಗುತ್ತೆವ್ವನ ಸಹಕಾರದ ಎಣ್ಣೆಯಿಂದ ಬೆಳ್ಳಿಯ ಬದುಕಿನ ಗಾಲಿ ಚಲಿಸುತ್ತವೆ.

ಕಲ್ಬುರ್ಗಿಯ ಬಟ್ಟೆಗಿರಣಿಯಲ್ಲಿ ಕೆಲಸಮಾಡುವ ಗುತ್ತೆಪ್ಪನಿಗೆ ಅಮ್ಮ ಬೆಳ್ಳಿಯೆಂದರೆ ಎಲ್ಲಿಲ್ಲದ ಪ್ರೀತಿ, ಅಭಿಮಾನ. ಮಗನ ಮದುವೆ ಮಾಡಿಸಿ

ಸೊಸೆಯನ್ನು ಮನೆ ತುಂಬಿಸಿಕೊಂಡ ಬೆಳ್ಳಿ ಈಗ ಬದುಕಿನ ಸಂಜೆಯಲ್ಲಿ ಬಾಳಿನ ಬುತ್ತಿಯನ್ನು ಬಿಚ್ಚುತ್ತಾಳೆ.

ಮೂವತ್ತು ವರ್ಷಗಳ ಕಳೆದರೂ ಗಂಡನ ನೆನಪಿನಲ್ಲಿ ಮೈಮರೆಯುತ್ತಾಳೆ. ಬಾಳ ಹಾದಿಯಲ್ಲಿ ದಾಟಿ ಬಂದ ಅಸಂಖ್ಯಾತ ಹಳ್ಳ ಕೊಳ್ಳಗಳ, ಕಲ್ಲು ಮುಳ್ಳುಗಳ ನೆನಪಿನಿಂದ ಮನಸ್ಸು ವಿಚಲಿತವಾಗುತ್ತಿದ್ದರೂ ಇಸಕಂಟಪ್ಪ ಸತ್ತುಹೋದ ವಾರ್ತೆಯನ್ನು ತಿಳಿದಾಗ ತಡೆಯಲಾರದೆ ಮಗನೊಂದಿಗೆ ಆತನ ಅಂತಿಮ ದರ್ಶನಕ್ಕೆ ಹೋಗುತ್ತಾಳೆ. ಹೆಣದ ಮುಂದೆ ಕುಳಿತ ಮರುಕ್ಷಣದಲ್ಲಿ ಅವಳ ದುಃಖ ಸಂಯಮದ ಕಟ್ಟೆಯೊಡೆದು ಧುಮ್ಮಿಕ್ಕುತ್ತದೆ. ತಾಳಿ ಕಿತ್ತು ಗಂಡನ ಹೆಣದತ್ತ ಎಸೆಯುತ್ತಾಳೆ. ಹಿಂತಿರುಗಿ ಬರುತ್ತ 'ನಿನ್ನಪ್ಪ ಹಿನಾ ನಾಕೊರ್ಸ ಬದಕ್ಬೇಕಾಗಿತ್ತು ಮಗಾ '(406) ಎನ್ನುತ್ತಾಳೆ. ಎಷ್ಟು ಹಿಂಸೆ, ನೋವುಗಳನ್ನು ಅನುಭವಿಸಿದರೂ ತಾಳಿಭಾಗ್ಯವೆಂಬುದು ಹೆಣ್ಣಿನ ಬದುಕಿನಲ್ಲಿ ಎಷ್ಟು ಮಹತ್ವದ ಪಾತ್ರ ವಹಿಸುತ್ತದೆ ಎಂಬುದಕ್ಕೆ ಈ ಕತೆ ಜ್ವಲಂತ ನಿದರ್ಶನ.

**ಗೂಡಿನೊಳಗಿನ ಗುಟ್ಟು**

'ಮನಸಿಜನ ಮಾಯೆ ವಿಧಿವಿಲಸನದ ನೆರೆಂಬಡೆಯೆ ಕೊಂದು ಕೂಗದೆ ನರರಂ' ಎಂದಿದ್ದಾನೆ ಪ್ರಾಚೀನ ಕವಿ ಜನ್ನ. ದೌರ್ಬಲ್ಯ, ದುಷ್ಟತನಗಳು ಜಾತಿ, ನೀತಿಯನ್ನು ಅತಿಕ್ರಮಿಸಿ ಮನುಷ್ಯನನ್ನು ಅನೈತಿಕತೆಯ ಪ್ರಪಾತಕ್ಕೆ ತಳ್ಳುತ್ತವೆ. ಹೊರಗೆ ಸಾಚಾತನದಿಂದ ಮೆರೆಯುವ ವ್ಯಕ್ತಿಗಳು ಒಳಗೆ ಎಷ್ಟು ಟೊಳ್ಳಾಗಿರುತ್ತಾರೆಂಬುದಕ್ಕೆ ಈ ಕತೆ.

ದಿಕ್ಕುದೆಸೆಯಿಲ್ಲದೆ ತಮ್ಮೂರಿಗೆ ಬಂದ ಮಾದೇವಯ್ಯ ಮತ್ತು ಸಾಂತಮ್ಮ ದಂಪತಿಗಳಿಗೆ ಇರಲು ಆಶ್ರಯಕೊಟ್ಟು ಮಟದ ಅಧಿಪತಿಯನ್ನಾಗಿ ಮಾಡಿಸಿ ಸಮಾಜದಲ್ಲಿ ಒಂದು ನೆಲೆಬೆಲೆಯನ್ನು ದೊರಕಿಸಲು ಹಗಲು ರಾತ್ರಿ ಶ್ರಮಿಸಿದ ಮಾದಿಗರ ಭರಮಪ್ಪನ ಮಗಳು ಗಿನ್ನಾನಿಯ ಮೇಲೆ ತಂದೆಯ ಪ್ರಾಯದ ಮಾದೇವಯ್ಯ ಅತ್ಯಾಚಾರವೆಸಗಲು ಪ್ರಯತ್ನಿಸುತ್ತಾನೆ. ಕ್ಷಣಾರ್ಧದಲ್ಲಿ ನಡೆದು ಹೋದ ಘಟನೆಗೆ ಪಶ್ಚಾತ್ತಾಪ ಪಡುತ್ತ ಹೆಂಡತಿಯನ್ನು ಕುರಿತು 'ನಾ ನಿನಗೆ ಧೋಕಾ ಮಾಡದರ ಏನು ಮಾಡ್ತೀ? ಎಂದು ಪ್ರಶ್ನಿಸುತ್ತಾನೆ. ಜನರ ದೃಷ್ಟಿಯಲ್ಲಿ ಸಾಕ್ಷಾತ್ ಶಂಭುಲಿಂಗನೆಂದೇ ಕರೆಸಿಕೊಂಡವನಿಗೆ 'ನೀ ಹಂತಾಂವ ಅಲ್ಲಾಂತ

ನನಗ ಖಾತರಿ ಅದಾ..' ಎನ್ನುವ ಪತ್ನಿಯ ಉತ್ತರದಿಂದ ಎದೆಯ ಮೂಲೆಯಲ್ಲಿ ಮುಳ್ಳು ಮುರಿದಂತಾಗುತ್ತದೆ.

ಎರಡು ವರ್ಷಗಳು ಕಳೆದು ಒಂದು ದಿನ ನಡುರಾತ್ರಿಯಲ್ಲಿ ನೆರೆಯೂರಿನಿಂದ ಮನೆಗೆ ಬಂದ ಮಾದೇವಯ್ಯನಿಗೆ 'ಒಳಗಿನಿಂದ ಕೈಬಳೆಯ ಲಯಬದ್ಧವಾದ ಸಪ್ಪಳ, ಸಾಂತವ್ವನ ಸುಖದ ನರಳುವಿಕೆ, ಅಣ್ಣಪ್ಪನ ಪಿಸುನಗೆಗಳು' ಕೇಳಿಬರುತ್ತವೆ. ಒಡಲಿಗೆ ಬೆಂಕಿ ಹಚ್ಚಿದಂತಾಗಿ ಕುಳಿತಲ್ಲೇ ಕಲ್ಲಾಗುತ್ತಾನೆ.

ತನ್ನ ಮೇಲೆ ಅತ್ಯಾಚಾರ ಮಾಡಲು ಬಂದ ಮಟದ ಒಡೆಯನನ್ನು ಗಸಕ್ಕನೆ ನೆಲಕ್ಕೆ ನೂಕಿ ಭುಸ್ಸೆಂದು ಎದ್ದು ನಿಂತು 'ಏ ಮುತ್ತ್ಯಾ, ಏನಿದು ಕೋಡಿ, ನಮ್ಮಪ್ಪನಂಗಿದ್ದಂವ ನೀನು, ಇದು ಒಳ್ಳೆದಲ್ಲಪ್ಪ, ಗುರುತಾಯಿಗಿ ಗೊತ್ತಾದ್ರ ಮಟದ ಭಾಯೀಗಿ ಧುಮುಕಿ ಜೀಂವಾ ಕೊಟ್ಟಾಳು, ಛೀ.. ದೇವ್ರಿಗರೆ ಅಂಜಬೇಕು ಮುತ್ತ್ಯಾ' (418) ಎಂದು ಬುದ್ಧಿ ಹೇಳಿ ಮೂರುದಿನ ಚಳಿಜ್ವರದಲ್ಲಿ ಮಲಗಿದ ಮಾದಿಗರ ಹೆಣ್ಣು ಗಿನ್ಯಾನಿ ಮತ್ತು ಗಿನ್ಯಾನಿಯ ಗಂಡ ಅಣ್ಣಪ್ಪನಿಗೆ ಸೆರಗು ಹಾಸಿದ ಸಾಕ್ಷಾತ್ ಗುರುತಾಯಿಯೆಂದು ಜನರು ಗೌರವಿಸುವ ಸಂಸ್ಕಾರವಂತ(419) ಬ್ರಾಹ್ಮಣ ಹೆಂಗಸು ಸಾಂತಮ್ಮ–ಇವರಿಬ್ಬರ ಪಾತ್ರಸೃಷ್ಟಿಯ ಮೂಲಕ ಗೀತಾರವರು ಸಂಸ್ಕೃತಿಯ ವ್ಯಾಖ್ಯಾನಕ್ಕೆ ಅತ್ಯಂತ ಮಾರ್ಮಿಕವಾದ ಸವಾಲನ್ನು ಎಸೆದಿದ್ದಾರೆ.

**ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ**

ಗಂಗಮ್ಮ ಗೌಡಿತಿ ವಿಶಾಲ ಮನಸ್ಸಿನ ಹೆಂಗಸು. ಮಡಿವಂತಿಕೆಯ ವಿಚಾರದಲ್ಲಿ ಉದಾರವಾಗಿ ಯೋಚಿಸುವ ಈಕೆಗೆ ಬಸವಣ್ಣನ ಜಾತ್ಯತೀತ ಮನೋಭಾವದಲ್ಲಿ ನಂಬಿಕೆ. ತಲೆತಲಾಂತರದಿಂದ ಮನೆಯ ಆಳುಮಗನಾಗಿ ದುಡಿಯುತ್ತಿದ್ದ ಆದಪ್ಪ ಮತ್ತು ಅವನ ವಿಧವೆ ಮಗಳು ಶಿವಗಂಗಾರ ಬಗ್ಗೆ ಪ್ರೀತಿ, ಅಭಿಮಾನ ಬೆಳೆಸಿಕೊಂಡವಳು ಆಕೆ. ಒಂದುಸಲ ಕಾಡಿಗೆ ಹೊರೆತರಲು ಹೋದ ಶಿವಗಂಗಾಗೆ ಸಹಾಯ ಮಾಡಿದ ಗೌಡಿತಿಯ ವಿಧುರ ಮಗ ಚೆಂಬಸಪ್ಪ ಶಿವಗಂಗಾಳನ್ನು ತನ್ನ ಪ್ರೀತಿಯ ಬಲೆಯಲ್ಲಿ ಸಿಲುಕಿಸುತ್ತಾನೆ.

ಮಗ ಯುಗಾದಿಗೆಂದು ಶಿವಗಂಗಾಗೆ ಇಳಕಲ್ ಸೀರೆ ತಂದಾಗ ಗಂಗವ್ವ ಅನುಮಾನಿಸುತ್ತಾಳೆ. ಅನುಮಾನ ನಿಜವಾದಾಗ ಹೌಹಾರಿದ ಆಕೆ ಮಟದಯ್ಯ ಶಿವಾನಂದಸ್ವಾಮಿಯ ಬಳಿ ತನ್ನ ಬಿಕ್ಕಟ್ಟನ್ನು ಬಿಚ್ಚಿಡುತ್ತಾಳೆ. 'ನೂರಾರು ವರ್ಸಿನ

ಹಿಂದ ಆ ಶಿವಶರಣರು ಹೇಳಿಹ್ವಾದ ತತ್ವಗೋಳು ಬದುಕಬೇಕಂತ ಹೊರಟಕ್ಕಿ ನೀನು. ಮಾತೆತ್ತಿದರ ಬಸವಣ್ಣ ಹಾಂಗಂದ.. ಅಕ್ಕಮಾದೇವಿ ಹೀಂಗಂದಳು.. ಅಂತ ನಮ್ಮ ಬಾಯಿಲಿಂದ ಕೇಳಿ ಕೇಳಿ ಮೆಚ್ಚಿಕೊಂಡು ಅವರು ಹೇಳಿದಂಗೇ ಒಂದೀಟು ಬಾಳ್ಯಾ ಮಾಡ್ಬೇಕಂತ ಹೊಂಟಕ್ಕಿ ನೀನು ಈಗ ನಿನಗೊಂದು ಅವಕಾಶ ಸಿಕ್ಕಾದಂತ ತಿಳಿ.' ಎಂದು ಬಸವಣ್ಣನ ಕಾಲದಲ್ಲಿ ನಡೆದ ಅಂತರ್ಜಾತೀಯ ವಿವಾಹದ ಪ್ರಸ್ತಾಪವನ್ನೆತ್ತಿ ಅನೇಕ ಕಡೆಗಳಲ್ಲಿ ಇಂಥ ವಿವಾಹಗಳು ನಡೆಯುತ್ತವೆಂದೂ ಅದು ತಪ್ಪಲ್ಲವೆಂದೂ ಮನವರಿಕೆ ಮಾಡಿ ಮಟದಯ್ಯ ಅವಳ ಭಯ, ಅನುಮಾನಗಳನ್ನು ಬಗೆಹರಿಸಿ ಮನಸ್ಸನ್ನು ಹದಗೊಳಿಸುತ್ತಾರೆ. ಮಾತ್ರವಲ್ಲ ಈ ಕ್ರಾಂತಿಕಾರಕ ನಿಲುವಿಗೆ ತಮ್ಮ ಬೆಂಬಲವನ್ನೂ ಸೂಚಿಸುತ್ತಾರೆ.

ಶಂಭುಲಿಂಗನ ಗುಡಿಯಲ್ಲಿ ಚೆಂಬಸಪ್ಪ ಮತ್ತು ಶಿವಗಂಗಾರ ಮದುವೆ ನಡೆಯುತ್ತದೆ. ಮದುವೆಮಾಡಿಕೊಂಡು ಬಂದ ಮಗಸೊಸೆಯನ್ನು ಕಂಡು ಗಂಗಮ್ಮಳ ಕಣ್ಣಂಚುಗಳು ಹಸಿಯಾಗುತ್ತವೆ. ಅವಳು ಶಿವಗಂಗಾಳ ಕೈಹಿಡಿದುಕೊಂಡು ದೇವರ ಮನೆಗೆ ಕರೆದುಕೊಂಡು ಹೋಗುತ್ತಾಳೆ.

ಹನ್ನೆರಡನೆಯ ಶತಮಾನದ ವಚನಯುಗದ ಆದರ್ಶವನ್ನು ಧ್ವನಿಸುವ ಪ್ರಗತಿಪರ ನಿಲುವಿನ ಹೊಸಬಗೆಯ ಕಥೆ ಮನಮುಟ್ಟುವಂತಿದೆ.

**ಅಗ್ನಿ**

ಶಿವಳ್ಳಿಯ ಸೀನಿಂಗನ ಮಗಳು ತಾಯಿಯಿಲ್ಲದ ಹುಡುಗಿ ಸಾತಿ ಕೀಳುಜಾತಿಯಲ್ಲಿ ಹುಟ್ಟಿದವಳಾದರೂ ಬಲು ಧೈರ್ಯಗಾತಿ. ಹರೆಯ ತುಂಬಿ ಮೈಯಲ್ಲಿ ಸೌಂದರ್ಯ ಕುಣಿಯುತ್ತಿದ್ದಾಗ ಹುಡುಗರ ಬೆನ್ನಹುರಿಯಲ್ಲಿ ಬೆಂಕಿ; ತೊಡೆಸಂದಿಗಳಲ್ಲಿ ಕಡಿತ. ಸದಾ ಹುಡುಗರ ತಂಡವನ್ನು ಕಟ್ಟಿಕೊಂಡು ಆಟವಾಡುತ್ತ ಕಾಲಕಳೆಯುತ್ತಿದ್ದ ಆಕೆ ಚಿಕ್ಕಂದಿನಿಂದಲೇ ಗಂಡುಬೀರಿಯೆಂಬ ಹೆಸರನ್ನು ಪಡೆದವಳು.

'ತೀಕ್ಷ್ಣ ಸ್ವಭಾವದ ಯಾರಿಗೂ ಬಗ್ಗದ ಸಗ್ಗದ ಸ್ವಾಭಿಮಾನಿ.... ಏಚುಪೇಚು ಅರಿಯದ ನಿರಾಳ ಮನಸ್ಸಿನ ಏರು ಹರೆಯದ ಹೆಣ್ಣು ಸಾತಿಯ ಮಾತುಗಳು ಆಗತಾನೆ ಸಾಣೆ ಹಿಡಿದಿಟ್ಟ ಚಾಕುವಿನಂತೆ ಹರಿತ. ಪಡ್ಡೆ ಪೋರರಿಗೆ ಅವಳು ಚಂಡಿ. ಊರ ಗೌಡನ ಮಗ ಕೆಣಕಿದಾಗ ಅವನ ಮಾನ ಮರ್ಯಾದೆ ಹರಾಜು ಹಾಕಿದ ಧೀರೆ. ಇಂಥ ಸಾತಿ ಬಸ್ ಡ್ರೈವರ್ ಮಲ್ಲೇಶಿಯ

ಅನುನಯದ ಮಾತಿಗೆ ಮರುಳಾಗಿ ಅವನನ್ನು ಮದುವೆಯಾಗಲು ನಿರ್ಧರಿಸಿ ಅವನ ಜತೆ ಪೇಟೆಗೆ ಹೋಗಿ ಹಾಯಾಗಿ ತಿರುಗಾಡಿ ಸೀರೆ ಒಡವೆ ಖರೀದಿಸುತ್ತಾಳೆ. ಮದುವೆಗೆ ಎರಡು ದಿನಗಳಿವೆ ಎನ್ನುವಾಗ ಜೋರಾಗಿ ಬಂದ ಮಳೆಗಾಳಿ ಮಲ್ಲೇಶಿಯ ಬಸ್ಸನ್ನು ಪ್ರಪಾತಕ್ಕೆ ತಳ್ಳಿ ಅವನನ್ನು ಸಾವಿನ ದವಡೆಗೆ ನೂಕುತ್ತದೆ.

ಎರಡು ತಿಂಗಳು ಕಳೆದಾಗ ಸಾತಿ ಬಸಿರಿಯೆಂಬ ವಿಚಾರ ಬಹಿರಂಗವಾಗುತ್ತದೆ. ಗರ್ಭಪಾತ ಮಾಡಿಸಿ ನೂರೊಂದು ರೂಪಾಯಿ ದಂಡ ಕಟ್ಟಬೇಕೆಂದು ಊರಗೌಡ ಜುಲ್ಮಾನೆ ವಿಧಿಸುತ್ತಾನೆ. ಗರ್ಭ ತೆಗೆಸಲು ಸಾತಿ ಒಪ್ಪದಾಗ ಹತಾಶನಾದ ತಂದೆ ಸೀನಿಂಗ ಆತ್ಮಹತ್ಯೆಗೆ ಶರಣಾಗುತ್ತಾನೆ. ಗೌಡನ ಶಿಕ್ಷೆಯೇ ಇದಕ್ಕೆ ಕಾರಣವೆಂದು ಆರ್ಭಟಿಸಿದ ಸಾತಿ ತಂದೆಯ ಹೆಣವನ್ನು ಸಂಸ್ಕರಿಸಲು ಗೌಡನಿಗೆ ಅನುಮತಿಸುವುದಿಲ್ಲ. ಪೋಲೀಸರು ಬಂದು ನ್ಯಾಯತೀರ್ಮಾನ ಮಾಡಿ ಹೆಣವನ್ನು ಸಾತಿಯ ವಶಕ್ಕೊಪ್ಪಿಸಿ ಗೌಡ ಮತ್ತು ಅವರ ಮಗ ಈಸೂರನ ಕೈಗಳಿಗೆ ಕೋಳಹಾಕುತ್ತಾರೆ. ಅಜ್ಜಿ ಮತ್ತಿತರ ನೆರವಿನಿಂದ ಅಪ್ಪನ ಹೆಣವನ್ನು ಮಣ್ಣುಮಾಡಿದ ಸಾತಿ ತಾನಿನ್ನು ಕೇರಿಗೆ ಬರುವುದಿಲ್ಲವೆಂದೂ ಬದುಕು ಬೆಂಕಿಯ ಹಾದಿಯಲ್ಲಿ ಸಾಗುತ್ತಿದ್ದರೂ ಈ ವಿಶಾಲವಾದ ಭೂಮಿಯಲ್ಲಿ ಎಲ್ಲಾದರೂ ಕೂಲಿನಾಲಿ ಮಾಡಿ ಮಲ್ಲೇಶಿಯ ಕುರುಹಾಗಿರುವ ಶಿಶುವನ್ನು ಹೆತ್ತು ಸಾಕಿ ಸಲಹುತ್ತೇನೆಂದೂ ಹೇಳುತ್ತಾಳೆ. ಓರ್ವ ಸ್ವಾಭಿಮಾನಿ ಹೆಣ್ಣಿನ ಛಲ, ಬಲ, ಚೈತನ್ಯ, ಆತ್ಮವಿಶ್ವಾಸಗಳಿಗೆ ಸಂಕೇತವಾದ ಸಾತಿ ಬದುಕಿನಲ್ಲಿ ಬಂದ ಕಷ್ಟಗಳನ್ನು ಸವಾಲಾಗಿ ಸ್ವೀಕರಿಸಿ ಆತ್ಮವಿಶ್ವಾಸದಿಂದ ಬದುಕಬೇಕೆಂಬ ಸಂದೇಶವನ್ನು ಸಾರುತ್ತಾಳೆ.

**ಬೇಲಿ**

ಬೇಲಿಯೇ ಎದ್ದು ಹೊಲಮೇದ ಕತೆ ಇದು. ಗುಟ್ಟಳ್ಳಿಯ ಹಿರಿಗೌಡ ಗುಲ್ಲಿಂಗಪ್ಪ ನೀತಿ, ನಿಯತ್ತಿನ ಸಾಕಾರ ಪುರುಷ. ಒಬ್ಬನೇ ಮಗ ಮಾದೇವ ಮದುವೆಯಾದ ವರ್ಷದೊಳಗೆ ಹೆಂಡತಿ ತೀರಿ ಹೋಗಿ ಎರಡೇ ವರ್ಷದಲ್ಲಿ ಮಗನೂ ನಾಗರಹಾವು ಕಚ್ಚಿ ಸತ್ತಾಗ ನಾಲ್ಕು ತಿಂಗಳ ಬಸಿರಿ ಸೊಸೆ ಸೀನಿಂಗಿಗೆ ಎಂಟೇದಿನಕ್ಕೆ ಮೈಯಿಳಿಯುತ್ತದೆ. ಎಳೆವಯಸ್ಸಿನ ಸೊಸೆಯ ಪರಿಸ್ಥಿತಿ, ಮಗನ ಅಗಲಿಕೆ, ಹೆಂಡತಿಯಿಲ್ಲದ ಸಂಕಟ ಎಲ್ಲವೂ ಮುಪ್ಪುರಿಗೊಂಡು ಗುಲ್ಲಿಂಗಪ್ಪ ಕುಡಿತಕ್ಕೆ ಬಲಿಯಾಗುತ್ತಾನೆ. ಕುಡಿದು ಮೈಮರೆತರೂ ಗೌಡನ ಕಚ್ಚೆ ಮಾತ್ರ

ತುಂಬ ಬಿಗಿ. 'ಅವನ ಬಳಿ ಯಾರಾದರೂ ಅಪ್ಪಿ ತಪ್ಪಿ ಕಳ್ಳತನ ಮಾಡಿ ಒಂದೊಮ್ಮೆ ದಕ್ಕಿಸಿಕೊಂಡುದಿತ್ತು. ಆದರೆ ಹಾದರ ಮಾಡಿದವರು ಮಾತ್ರ ಅವನ ಕಣ್ಣುಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ.' (453) ಅಂಥ ಗುಲ್ಲಿಂಗಪ್ಪ ಗೌಡನ ಬಗ್ಗೆ ಜನಾಭಿ ಪ್ರಾಯವೇನೆಂದರೆ 'ಹಳ್ಳಿಯ ನ್ಯಾಯದೇವತೆ. ಗೌಡನ ನ್ಯಾಯಾ ಅಂದರೆ .. ದುಸರಾ ಮಾತಿಲ್ಲ. ಕಡ್ಡಿ ಒಂದು ತುಂಡು ಎರಡು.' (455)

ಸೀನಿಂಗಿಯ ಹೆತ್ತವರು ಮಗಳಿಗೆ ಮರುಮದುವೆ ಮಾಡಿಸಲು ತವರಿಗೆ ಕರೆದಾಗ ಗೌಡ ಒಪ್ಪಿಗೆ ನೀಡಿದರೂ ಸೀನಿಂಗಿ ಖಡಾಖಂಡಿತವಾಗಿ ನಿರಾಕರಿಸುತ್ತಾಳೆ. ಮಾವ ಮತ್ತು ಸೊಸೆಯರ ಬದುಕು ನೋವು, ಸಂಕಟಗಳ ಮಧ್ಯೆ ಕಳೆಯುತ್ತದೆ. ವರ್ಷಗಳು ಉರುಳಿ ಸೀನಿಂಗಿ 23ರ ತುಂಬು ತಾರುಣ್ಯವತಿಯಾಗಿ ಗೌಡಿಕೆಯನ್ನು ಕಲಿತು ಮಾವನಿಗೆ ನೆರವಾಗುತ್ತಾಳೆ. ಗೌಡನಿಗೆ ತೋಟಕ್ಕೆ ಬೇಲಿ ಕಟ್ಟುವುದೆಂದರೆ ಬಹಳ ಮುತುವರ್ಜಿ. 'ಹೊಲದ ಸುತ್ತಿನ ಬೇಲಿ ಗಟ್ಟ್ಯಾಗಿದ್ದರ ಮನುಶ್ಯಾರು, ದನಗೋಳು ಯಾರೂ ಹೊಲದ ಬೆಳಿ ಕಡಿ ಕಣ್ಣ ಹಾಕಂಗಿಲ್ಲ. ಬೆಳಿ ಹ್ಯಾಂಗರೆ ಇರ್ಲಿ. ಮದಲ ಬೇಲಿ ಮಜಬೂತ ಇರ್ಬೇಕು. ಎನ್ನುವ ಗೌಡ ಸೀನಿಂಗಿಗೆ ಭದ್ರಕಾವಲು, ಭದ್ರಬೇಲಿ...

ಒಂದು ದಿನ ಭೀಕರವಾದ ಮಳೆಗಾಳಿಗಳಲ್ಲಿ ಕೊಟ್ಟಿಗೆಯಲ್ಲಿ ಕಟ್ಟಿದ್ದ ಆಕಳು ಬೆದೆ ಬಂದು ಅರಚಿದಾಗ ಸೀನಿಂಗಿ ದೀಪ ಹಚ್ಚಿ, ಮಾವನನ್ನು ಎಬ್ಬಿಸಿ 'ಮನೆಯಲ್ಲಿರುವ ಬೀಜದ ಹೋರಿಯನ್ನು ಹತ್ತಿಸಬಹುದಲ್ಲ' ಎನ್ನುತ್ತಾಳೆ. ಅವಳ ದೇಹದ ಮಾದಕ ಸೌಂದರ್ಯವನ್ನು ಅರೆ ಎಚ್ಚರ ನಿದ್ರೆಯಲ್ಲಿ ನೋಡುತ್ತ ಗುಲ್ಲಿಂಗಪ್ಪ ಮನೆಯಲ್ಲಿ ಈಗ ಹೋರಿ ಇಲ್ಲವೆಂದೂ ಮುಂಜಾನೆ ಹೋರಿ ತಂದು ಹಾಯ್ಸುವುದೆಂದೂ ಹೇಳಿ ಮಲಗಲು ಹೇಳುತ್ತಾನೆ. ಸೀನಿಂಗಿ ಕೋಣೆಗೆ ಮರಳಿ ಬಾಗಿಲು ಮುಂದುಮಾಡಿ ಮಂಚದ ಮೇಲೆ ಉರುಳುತ್ತಾಳೆ. ಹೆಬ್ಬುಲಿಯಂಥ ಮಾವ ಬಾಗಿಲ ಬಳಿಯೇ ಮಲಗಿರಬೇಕಾದರೆ ಅವಳಿಗೆ ಚಿಲಕ ಹಾಕುವ ಅಗತ್ಯ ಕಾಣಲಿಲ್ಲ. ಆದರೆ ಯಾವುದೋ ಒಂದು ಹೊತ್ತಿನಲ್ಲಿ ಎಚ್ಚರವಾದ ಅವಳಿಗೆ ತಾನು ಮಾವಯ್ಯನ ಬಾಹುಪಾಶದಲ್ಲಿರುವುದು ಗೊತ್ತಾಗುತ್ತದೆ.

ಮರುದಿನ ಬೆಳಿಗ್ಗೆ ಗುಲ್ಲಿಂಗಪ್ಪ ಆಳು ಹೊನ್ನನಿಗೆ ಆಕಳಿಗೆ ಹೋರಿ ಹಾರಿಸಲು ಹೇಳುತ್ತಿದ್ದಂತೆ ತೋಟದ ಭಾವಿಕಡೆಯಿಂದ ಆಳುಮಗ ಕಾಶ್ಯಾನ

ವಿಕಾರವಾದ ಬೊಬ್ಬೆ ಕೇಳಿಸುತ್ತದೆ. ನೋಡಿದರೆ ಅಗಲವಾಗಿ ಬಾವಿಯ ತಳದಲ್ಲಿ ಸೀನಿಂಗಿಯ ಶವ ತೇಲುತ್ತಿತ್ತು.

ಕತೆಯಲ್ಲಿ ಸಾಂದರ್ಭಿಕವಾಗಿ ಉಲ್ಲೇಖಿತವಾಗುವ ಘಟನೆಗಳು, ಬೆದೆ ಬಂದ ಆಕಳು, ಬೀಜದ ಹೋರಿ, ಬೇಲಿಕಟ್ಟುವಿಕೆ, ನ್ಯಾಯ ತೀರ್ಮಾನ ಎಲ್ಲವೂ ಅರ್ಥಗರ್ಭಿತವಾಗಿವೆ. ಬೇಲಿ ಭದ್ರವಾಗಿರಬೇಕೆಂದು ಆಳುಗಳಿಗೆ ಬೋಧಿಸುತ್ತಿದ್ದ ಗುಲ್ಲಿಂಗಪ್ಪ, ಮಾವನ ರಕ್ಷಣೆಯಲ್ಲಿ ತಾನು ನಿಶ್ಚಿಂತೆಯಾಗಿರಬಲ್ಲೆ ಎಂದು ನಂಬಿದ ಸೀನಿಂಗಿ– ಕ್ಷಣಮಾತ್ರದಲ್ಲಿ ಬದುಕನ್ನು ನಾಶಮಾಡಲು ಹೊಂಚಿಹಾಕಿದ ಆ ಶಕ್ತಿ ಯಾವುದು ಎಂಬ ಪ್ರಶ್ನೆ ನಿಗೂಢವಾಗಿಯೇ ಉಳಿಯುತ್ತದೆ.

### ಸತ್ತ ಹೆಣ್ಣಿನ ಸುತ್ತ

ಲಕ್ಷ್ಮಿ ಎಂಬ ಓರ್ವ ಯುವತಿ ಬಸ್ ಸ್ಟೇಂಡಿನಲ್ಲಿ ಕತೆಗಾರ್ತಿಯನ್ನು ಭೇಟಿಯಾಗುತ್ತಾಳೆ. ಕತೆಗಾರ್ತಿಯ ಬಗ್ಗೆ ಅಭಿಮಾನವಿರಿಸಿದ್ದ ಆಕೆಯ ಪರಿಚಯ ಕ್ರಮೇಣ ಆಕೆಯ ಚಿನಕುರುಳಿ, ಆನೆ ಪಟಾಕಿಗಳಂಥ ಮಾತುಗಾರಿಕೆಯಿಂದ ಕತಗಾರ್ತಿಯೊಳಗೆ ಅವಳ ಬಗ್ಗೆ ಸ್ನೇಹ, ಸಲಿಗೆಗಳು ಬೆಳೆಯುತ್ತವೆ. ಶಾಲೆಯಲ್ಲಿ ಶಿಕ್ಷಕಿಯಾಗಿರುವ ಲಕ್ಷ್ಮಿ ಅಸಹಾಯಕ ಹೆಣ್ಣುಮಕ್ಕಳ ಬಗ್ಗೆ ಮರುಗುವ, ಹೆಣ್ಣುಮಕ್ಕಳ ಸ್ವಾವಲಂಬನೆಯ ಬಗ್ಗೆ ನಂಬಿಕೆಯಿರುವ ಮಹಿಳೆ. ಇಬ್ಬರು ಮಕ್ಕಳು. ಗಂಡ ಯಾವುದೋ ಕಚೇರಿಯಲ್ಲಿ ಮೊದಲ ದರ್ಜೆಯ ಗುಮಾಸ್ತ. ಚಿಕ್ಕ ಚೊಕ್ಕ ಸಂಸಾರ. ಉದ್ಯೋಗಸ್ಥಳಾದ ಲಕ್ಷ್ಮಿಯ ಬಗ್ಗೆ ಆಸುಪಾಸಿನವರಿಗೆ ಒಳ್ಳೆಯ ಅಭಿಪ್ರಾಯವಿಲ್ಲದಿದ್ದರೂ ಸ್ವತಂತ್ರ ಮನೋಭಾವದ ಆಕೆ ಯಾರ ತಕರಾರಿಗೂ ಕಿವಿಗೊಡುವವಳಲ್ಲ. ಸಾಲಮಾಡಿ ಮನೆ ಕಟ್ಟಿಸುತ್ತಾಳೆ. ತನ್ನ ಮೇಲೊಂದು ಕತೆ ಬರೆಯಬೇಕೆನ್ನುತ್ತಾಳೆ. ಜೀವನೋತ್ಸಾಹ ತುಂಬಿ ತುಳುಕುವ, ಬದುಕಿನಲ್ಲಿ ಏನೆಲ್ಲ ಆಸೆ ಭರವಸೆಗಳನ್ನು ಇಟ್ಟುಕೊಂಡ ಹೆಣ್ಣಿನ ಸ್ವಾಭಿಮಾನ, ಸ್ವಾವಲಂಬನೆಗಳಿಗೆ ಪ್ರತೀಕವಾದವಳು ಲಕ್ಷ್ಮಿ. ಆದರೆ ಒಂದುದಿನ ಇದ್ದಕ್ಕಿದ್ದಂತೆ ಮೈಸುಟ್ಟುಕೊಂಡು ಸತ್ತು ಹೋಗುತ್ತಾಳೆ. ಅದು ಆತ್ಮಹತ್ಯೆಯೇ? ಕೊಲೆಯೇ? ಎಂಬುದು ನಿಗೂಢ. ಆಕೆಯ ಸಾವಿನ ಸುತ್ತಮುತ್ತ ಅನೇಕ ಊಹಾಪೋಹಗಳು, ಆರೋಪ, ಟೀಕೆಗಳು ಬೆಳೆಯುತ್ತವೆ. ಅದನ್ನೆಲ್ಲ ಕೇಳಿಸಿಕೊಂಡ ಲೇಖಕಿಗೆ ಸ್ತ್ರೀ ಸಮಾನತೆಯ ಬಗ್ಗೆ ಎಷ್ಟೇ ವಾದಿಸಿದರೂ ಅಂತಿಮವಾಗಿ ಪುರುಷಪ್ರಾಧಾನ್ಯವೇ ವಿಜೃಂಭಿಸುತ್ತದೆ, ವಿದ್ಯೆ, ಹುದ್ದೆಗಳೆಲ್ಲ ಮೆರುಗಿನ ಬಣ್ಣಗಳು, ಆ ಬಣ್ಣದ ಬಟ್ಟೆ ಕಳಚಿದರೆ ವಿದ್ಯಾವಂತರು, ಅವಿದ್ಯಾವಂತರು ಎಲ್ಲ ಬರಿ ಬೆತ್ತಲೆಯೇ ಎನಿಸುತ್ತದೆ.

ಸಮಾಜದಲ್ಲಿ ಹೆಣ್ಣು ವಿಚಾರವಂತಳಾಗಿ, ಪ್ರಜ್ಞಾವಂತೆಯಾಗಿ ಸ್ವಂತ ವ್ಯಕ್ತಿತ್ವವನ್ನು ಬೆಳೆಸಿ ಬದುಕುವುದು ಎಷ್ಟು ಕಷ್ಟ ಅಥವಾ ಅಂಥವರನ್ನು ಸಮಾಜ ಬದುಕುವುದಕ್ಕೇ ಬಿಡುವುದಿಲ್ಲ ಎನ್ನುವ ಕಟುಸತ್ಯ ಮನದಟ್ಟಾಗುತ್ತಿದೆ. 'ಕಾನೂನು ಹೇಳಿದ ಹಾಗೆ ಎಲ್ಲ ಹೆಂಗಸ್ರೂ ಕೆಲಸ ಮಾಡಲು ಹೊರಟರೆ ಮುಗಿದೇ ಹೋಯ್ತು' ಎನ್ನುವ ತಮ್ಮನ ಮಾತುಗಳಲ್ಲಿ ಈ ಸತ್ಯ ಬಣ್ಣಕಳಚಿ ಕತೆಯ ತಿರುಳಾಗಿ ಮನಸ್ಸನ್ನು ಕಲಕುತ್ತದೆ.

**ಅವ್ವ**

ತಾಯ್ತನದ ನೋವು, ಸಂಕಟಗಳು ಕೆನೆಗಟ್ಟಿದ ಕರುಳಿರಿಯುವ ಕತೆ 'ಅವ್ವ'. ಕುರುಬರ ಮಾಳವ್ವನ ಮಗಳಾದ ಗಂಗಾ ತಂದೆಯನ್ನು ಕಂಡವಳಲ್ಲ. ತಾಯಿ ಮೈಮುರಿದು ದುಡಿದು ಸಾಕಿ ಕುರುಬಗೇರಿಯ ಮೈಲಾರಿ ಎಂಬ ಯುವಕನೊಂದಿಗೆ ಮದುವೆ ಮಾಡಿಸಿ ಸತ್ತುಹೋಗುತ್ತಾಳೆ. ಕಾಮಾಲೆಪೀಡಿತ ಮಗುವನ್ನು ಉಚಿತ ಚಿಕಿತ್ಸೆ ಸಿಗಬಹುದೆಂಬ ನಂಬಿಕೆಯಿಂದ ಗುಲ್ಬರ್ಗಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದ ಗಂಗಾ ಅಲ್ಲೂ ದುಡ್ಡು ಕೊಡಬೇಕೆಂದು ಗೊತ್ತಾದಾಗ ಹೌಹಾರುತ್ತಾಳೆ. ಔಷಧಿಗೆ ದುಡ್ಡಿಲ್ಲದೆ ಕಂಡ ಕಂಡವರಲ್ಲಿ ಕಣ್ಣೀರಿಟ್ಟು ಬೇಡುತ್ತಾಳೆ. ಯಾರೂ ಅವಳ ಮೊರೆಗೆ ಕಿವಿಗೊಡದಾಗ ಕೊನೆಗೆ ಮಾನವನ್ನು ಹರಾಜು ಹಾಕಿ ಹಣ ಪಡೆದು ಔಷಧಿ ತಂದರೆ ಸಕಾಲದಲ್ಲಿ ಚಿಕಿತ್ಸೆ ಸಿಗದೆ ಮಗು ಅಸು ನೀಗುತ್ತದೆ. ಗಂಡ ಮೈಲಾರಿ ಯಜಮಾನ ಕುಕ್ಕಣ್ಣಿಯ ಕುತಂತ್ರದಿಂದ ಜೈಲು ಪಾಲಾಗಿ ಇದ್ದ ಒಂದೇ ಒಂದು ಮಗು ಸಾವಿಗೆ ಬಲಿಯಾದಾಗ ಗಂಗಾ ಮತಿಗೆಟ್ಟವಳಂತೆ ವಿಲಪಿಸುತ್ತಾಳೆ. ಮುನ್ನಾದಿನ ತನ್ನ ದೇಹಸುಖವನ್ನು ಅನುಭವಿಸಿ ಹಣಕೊಟ್ಟವನು ಮತ್ತೆ ಬಳಿಗೆ ಬಂದು ಕರೆದಾಗ ಹುದುಗಿದ್ದ ಕೋಪ, ಸಂಕಟ ಭುಗಿಲ್ಲೆಂದು ಚಿಮ್ಮುತ್ತವೆ. ನೆಲದಲ್ಲಿ ಬಿದ್ದಿದ್ದ ಕಲ್ಲೊಂದನ್ನು ಎತ್ತಿ ಅವನೆಡೆಗೆ ಬಲವಾಗಿ ಎಸೆದು ನಿಂತಲ್ಲೇ ಕುಸಿದುಬಿದ್ದು ಭೋರೆಂದು ಅಳುತ್ತಾಳೆ. ಈ ಕತೆ 'ಅಗ್ಗಿ', ಮಟದವ್ವ ಕತೆಗಳನ್ನು ಹೋಲುತ್ತದೆ.

**ಬೆಳಕಿನೆಡೆಗೆ**

ಭವಾನಿ ಎಂಬ ಮಾದಿಗರ ಹೆಣ್ಣು ಬದುಕಿನಲ್ಲಿ ಏಟು ತಿಂದು ಪಾಠ ಕಲಿತು ಬೆಳಕಿನೆಡೆಗೆ ಸಾಗಿದ ಕತೆ ಇದು. ಭವಾನಿಯ ತಂದೆ ಕತಾಲಪ್ಪ ಸಾಹುಕಾರ ಚೆಂಬಸಪ್ಪನ ಮನೆಯಾಳು. ಹುಟ್ಟಿದ ಎರಡು ವರ್ಷಕ್ಕೆ

ತಾಯಿಯನ್ನು ಕಳೆದುಕೊಂಡು ಸಾಹುಕಾರನ ಮನೆಯ ಮೊಸರು, ನೆರೆಹೊರೆಯವರು ನೀಡಿದ ರೊಟ್ಟಿ, ಪಲ್ಯಾ ತಿಂದು ಸಾಹುಕಾರನ ಮಗ ಈರಣ್ಣನ ಜತೆ ಆಟವಾಡಿಕೊಂಡೇ ಬಳೆದ ಭವಾನಿ ಪ್ರಾಯಪ್ರಬುದ್ಧಳಾದಾಗ ನೋಡಿದವರ ಕಣ್ಣು ಒಡೆಯುವಷ್ಟು, ನಾಲಿಗೆಯಲ್ಲಿ ನೀರು ಬರಿಸುವಷ್ಟು ಸೌಂದರ್ಯವತಿಯಾಗುತ್ತಾಳೆ. ದುಂಡು ಮೈಯ, ದುಂಡು ಮುಖದ, ರಸಬಾಳೆಯಂಥ ಭವಾನಿಯೆಂದರೆ ಕೇರಿಯ ಜನಕ್ಕೆಲ್ಲ ಅಚ್ಚುಮೆಚ್ಚು. ಕೇರಿಯ ಹಿರಿಯ ಮೈಲಾರಪ್ಪನ ಸಹಾಯದಿಂದ ಮದುವೆ ಗೊತ್ತಾಗುತ್ತದೆ. ಗಂಡಿನವರು ಬರುವುದಕ್ಕೆ ಮೂರುದಿನ ಮುಂಚೆ ಮನೆಕೆಲಸಕ್ಕೆಂದು ಗೌಡಿತಿ ಭವಾನಿಯನ್ನು ಕರೆಸಿಕೊಳ್ಳುತ್ತಾಳೆ.

ಚೆಂಬಸಪ್ಪ ಸಾಹುಕಾರನ ಒಬ್ಬನೇ ಮಗ ಈರಣ್ಣನಿಗೆ ಭವಾನಿಯ ಬಗ್ಗೆ ಇದುವರೆಗೂ ಯಾವ ಆಸಕ್ತಿಯೂ ಇರಲಿಲ್ಲ. ಆದರೆ ಇದೀಗ ಆಕೆ ಸೌಂದರ್ಯದ ಖನಿಯಾಗಿ ತನ್ನ ಮುಂದೆ ಕಾಣಿಸಿದಾಗ ಇಪ್ಪತ್ತಾರರ ಹರೆಯದ ಗಂಡಿಗೆ ಬಯಕೆ ಪುಟಿಯುತ್ತದೆ. ಮುಸ್ಸಂಜೆಯಲ್ಲಿ ಕೆಲಸದ ನೆಪದಿಂದ ಭವಾನಿಯನ್ನು ತೋಟದ ಮನೆಗೆ ಕರೆಸುತ್ತಾನೆ.

ಶೀಲ ಕಳೆದುಕೊಂಡು ಕಣ್ಣೀರಿಡುವ ಮಗಳನ್ನು ನೋಡಿ ಕತಾಲನ ಎದೆ ಒಡೆಯುತ್ತದೆ. ನ್ಯಾಯ ಕೇಳಲು ಸಾವ್ಕಾರನ ಮನೆಗೆ ಹೋದರೆ ಈರಣ್ಣ ಅವಳನ್ನು ಇಟ್ಟುಕೊಳ್ಳುವ ಮಾತನಾಡಿ ಎಲ್ಲರ ಬಾಯಿ ಕಟ್ಟುತ್ತಾನೆ. ಮೂರು ದಿನದಲ್ಲೇ 'ಒಬ್ಬನ ಹಕ್ಕಿನ ಹೆಂಡತಿಯಾಗಿ .. ಅವನ ವಂಶ ಬೆಳೆಸುವ ಬೆಳಕಾಗಿ ಅವನ ಗೃಹಲಕ್ಷ್ಮಿಯಾಗಿ ಜೀವಮಾನವೆಲ್ಲ ಸ್ವಾಭಿಮಾನದಿಂದ ಬಾಳಬೇಕಾಗಿದ್ದ ಭವಾನಿ ಸಾಹುಕಾರನೊಬ್ಬನ ಬಯಕೆಗೆ ಬಲಿಯಾಗಿ ಅವನ 'ಇಟ್ಟುಕೊಂಡವ'ಳಾಗುತ್ತಾಳೆ (485) ನೋವು ಸಂಕಟಗಳನ್ನು ಮನಸ್ಸಿನ ಮೂಲೆಯಲ್ಲಿ ಮೂಟೆಯಾಗಿಟ್ಟುಕೊಂಡು ವಿಧಿಯಾಟಕ್ಕೆ ಶರಣಾದ ಭವಾನಿ ಯಾವ ಗರತಿಗೂ ಕಡಿಮೆಯಿಲ್ಲದಂತೆ ಬಾಳಿ ಗೌರಿಯೆಂಬ ಒಬ್ಬ ಮಗಳ ತಾಯಿಯಾಗುತ್ತಾಳೆ. ಆದರೆ ಮಗಳು ಹರೆಯಕ್ಕೆ ಬಂದಾಗ ಮಗಳಿಗೆ ಮದುವೆ ಮಾಡಿಸುವ ಬದಲು ತನ್ನ ಸಂಬಂಧಿಕನ ಇಟ್ಟ ಹೆಣ್ಣಾಗಿ ಬಾಳಲು ಈರಣ್ಣ ಸಲಹೆ ನೀಡಿದಾಗ ಮಾತ್ರ ಅವಳು ರೌದ್ರಾವತಾರ ತಾಳುತ್ತಾಳೆ. ಮಗಳನ್ನು ವಿದ್ಯಾವಂತಳನ್ನಾಗಿ ಮಾಡಿ ಯೋಗ್ಯ ಗಂಡಿಗೆ ಮದುವೆ ಮಾಡಿಕೊಡುತ್ತೇನೆ ಅಥವಾ ಅವಳು ಸ್ವಾಭಿಮಾನ ಸ್ವಾವಲಂಬನೆಯಿಂದ ಬದುಕುವಂತೆ ಮಾಡುತ್ತೇನೆ ಎಂಬ ಛಲವನ್ನು ಹೊತ್ತು ಈರಣ್ಣನ ಹಂಗನ್ನು ತೊರೆದು ಹೊರಡುತ್ತಾಳೆ.

ಎಲ್ಲಿಗೆ ಹೋಗುತ್ತಿದ್ದೇವೆಂದು ಮಗಳು ಕೇಳಿದ ಪ್ರಶ್ನೆಗೆ 'ಬೆಳಕಿನ ಕಡೆಗೆ ಹೊಂಟೀವಿ ಮಗಾ.. ಈಸ ದಿನ ಎಲ್ಲಾ ಕತ್ತಲದಾಗ ಕಳದೇವಿ ಕೂಸು ತಿಳೀಲಿಲ್ಲ ಈಗ ನನಗ ಅರುವು ಬಂತು ಮಗಾ.. ನಿನಗ ಕರ್ಕೊಂಡು ಬೆಳಕಿನ ಕಡೀಗಿ ಹೊಂಟೀನಿ..' (490)ಎಂದು ಉತ್ತರಿಸುತ್ತಾಳೆ.

ಅಂತಸ್ತು, ಅಧಿಕಾರ, ಜಾತೀಯತೆಯ ಬೆಂಕಿಯಲ್ಲಿ ತಮ್ಮ ಆಶೋತ್ತರಗಳನ್ನು ಸುಟ್ಟು ಹಾಕುವ ಬಡ ಅಮಾಯಕ ಜನವರ್ಗದ ಬದುಕು ಎಷ್ಟೆಲ್ಲ ನರಕಯಾತನೆಯನ್ನು ಅನುಭವಿಸಬೇಕು ಎಂಬುದನ್ನು ಈ ಕತೆ ಸಾರುತ್ತದೆ.

### ನೀರು ಮತ್ತು ನೆತ್ತರು

ತುಸು ಭಿನ್ನವಾಗಿದ್ದರೂ ಜಾತೀಯತೆಯ ದೌರ್ಜನ್ಯವನ್ನು ಬಿಂಬಿಸುವ ಹೃದಯವಿದ್ರಾವಕ ಕತೆ ಇದು. ಕಾಡಳ್ಳಿ ಎಂಬ ಹಳ್ಳಿಯಲ್ಲಿ ಭೀಕರ ಬರಗಾಲ. ಜನದನಗಳು ನೀರಿಲ್ಲದೆ ಒದ್ದಾಡುವ ಪರಿಸ್ಥಿತಿ. ಹಳ್ಳಿಯ ಇತರ ಬಾವಿಗಳು ಬತ್ತಿದರೂ ಮಠದ ಬಾವಿಯಲ್ಲಿ ನೀರು ಧಾರಾಳವಾಗಿತ್ತು. ಆದರೆ ಅದನ್ನು ಬಳಸುವ ಹಕ್ಕಿರುವುದು ಮೇಲುವರ್ಗದವರಿಗೆ ಮಾತ್ರ. ಮರಗಮ್ಮನ ಗುಡಿಯಲ್ಲಿ ಮುಖಂಡ ಮಾಳ್ಯಾನ ಸಮಕ್ಷಮದಲ್ಲಿ ಸಮಾಲೋಚನೆ ನಡೆಸಿ ಕೇರಿಯ ನಾಲ್ವರು ಹಿರಿಯರು ಮಟದ ಸ್ವಾಮಿ ಸೀನಿಂಗಯ್ಯನನ್ನು ಭೇಟಿಯಾಗಿ ನೀರಿಗಾಗಿ ಮನವಿ ಸಲ್ಲಿಸುತ್ತಾರೆ. 'ಇನ್ನೊಮ್ಮೆ ಈಕಡಿ ಕಾಲ ಹಾಕದ್ರಿ ಅಂದ್ರ ಮಟದ ಈಸೂರಲಿಂಗ ಕಾಲ ಕತ್ತರಿಸಿ ಕೈಯಾಗ ಕುಡ್ತಾನ. ನೆತ್ತರ ಕಾರಿ ಸತ್ತೀರಿ.. ಜ್ವಾಕಿ.. ಹೋಗಿಲ್ಲಿಂದ.. ನೀರು ಬೇಕಂತ ನೀರು. ಸೂಳ್ಯಾ ಮಕ್ಕಳಿಗಿ ಸಾವು ಸಮೀಪ ಬಂದಾದಂತ ಕಾಣಿಸ್ತದ..' ಎಂದು ಗರ್ಜಿಸಿ ಸ್ವಾಮಿ ಸೀನಿಂಗಯ್ಯ ಅವರನ್ನು ಹಿಂದಕ್ಕಟ್ಟುತ್ತಾನೆ. ಕೇರಿಯ ಯುವಕರು ಕಾಶ್ಯಾ ಎಂಬವನ ನೇತೃತ್ವದಲ್ಲಿ ನೀರು ತರಲು ನಿರ್ಧರಿಸುತ್ತಾರೆ. ಹಳೆಯ ಕಾಲದ ರೀತಿ ರಿವಾಜುಗಳಲ್ಲಿ ನಂಬಿಕೆಯಿಟ್ಟ ಕಾಶ್ಯಾನ ತಾಯಿಗೆ ಕೀಳುಜಾತಿಯವರು ಮಠಕ್ಕೆ ಹೋದರೆ ದೇವರು ಸಿಟ್ಟಾಗಿ ರಕ್ತಕಾರಿ ಸಾಯುವಂತೆ ಮಾಡ್ತಾರೆಂಬ ಭಯ. ಹಿರಿಯರ ಮಾತಿಗೆ ಸೊಪ್ಪು ಹಾಕದ ಸುಮಾರು ಇಪ್ಪತ್ತು ಜನ ಹುಡುಗರು ಆ ರಾತ್ರಿಯೇ ಹಳ್ಳಿಯೆಲ್ಲ ಮಲಗಿರುವ ಹೊತ್ತಿನಲ್ಲಿ ಮಠದ ಬಾವಿಯಿಂದ ನೀರು ತರುತ್ತಾರೆ. ಬೆಳಗಿನ ಜಾವ ಇದನ್ನು ನೋಡಿದ ಮಠದ ಆಳು ಸಂಗ್ಯಾ ಲಬೊ ಲಬೊ ಎಂದು ಬೊಬ್ಬಿಟ್ಟಾಗ ವಿಷಯ ಬಹಿರಂಗವಾಗಿ ಕೇರಿಯ ಜನ

ಭಯದಿಂದ ತತ್ತರಿಸುತ್ತಾರೆ. ಹಗಲು ಯಾವ ಅಪಾಯವೂ ಇಲ್ಲದೆ ಕಳೆಯುತ್ತದೆ. ಆದರೆ ರಾತ್ರಿ ಮನೆಗೆ ಬರುತ್ತಿದ್ದ ಕಾಶ್ಯಾನ ಮೇಲೆ ನಾಲ್ಕು ಜನ ಟೊಣಪರು ಮುಗಿಬಿದ್ದು ನಿಮಿಷಾರ್ಧದಲ್ಲಿ ಅವನ ಬಾಯಿ ಮುಚ್ಚಿ ನೆಲಕ್ಕೆ ಒತ್ತಿ ಉಸಿರಡಗಿಸಿ ಹೆಣವನ್ನು ಮಠದ ಆವರಣಕ್ಕೆ ತಂದು ಬಿಸಾಡುತ್ತಾರೆ. ಕೀಳುಜಾತಿಯವರು ಮಠದ ಬಾವಿಯನ್ನು ಮುಟ್ಟಿ ಮೈಲಿಗೆ ಮಾಡಿದುದರಿಂದ ಮಠದ ಆವರಣದಲ್ಲೇ ರಕ್ತಕಾರಿ ಸತ್ತು ಹೆಣವಾದನೆಂಬ ಸುದ್ದಿ ಹರಡುತ್ತದೆ. ಇದರಿಂದ ಹಳ್ಳಿಜನರ ಮೂಢನಂಬಿಕೆ ಇನ್ನಷ್ಟು ಗಟ್ಟಿಯಾಗುತ್ತದೆ. ಕಾಶ್ಯಾನ ತಾಯಿ ಜೋರಾಗಿ ಅಳುವುದಕ್ಕೂ ಹೆದರಿ ನರಳುದನಿಯಲ್ಲಿ ಮಗನ ಹೆಣದ ಮೇಲೆ ಬಿದ್ದು ಹೊರಳಾಡುತ್ತಾಳೆ.

**ಜ್ವಲಂತ**

ಕುರುಬರ ಹುಡುಗಿ ಸೀನಿಂಗಿಯ ತೊಟ್ಟಿಲ ಹೆಸರು ಶಿವನಿಂಗವ್ವ. ಹರೆಯ ತುಂಬಿ ಹೆಣ್ಣಾದಾಗ ಅವಳ ಕನಸುಗಳಿಗೆ ಬೆಂಕಿಹಚ್ಚಿ ಹೆತ್ತವರು ಅವಳನ್ನು ಜೋಗತಿ ಮಾಡಿದ್ದರು.

ಸೀನಿಂಗಿ ಸ್ವಾಭಿಮಾನಿ, ಧೈರ್ಯಗಾತಿ. ಜೋಗತಿಯಾಗಿ ಬದುಕುವುದು ಇಷ್ಟವಾಗದೆ ತಲೆಯ ಮೇಲಿನ ಪರಡಿಗಳನ್ನೂ ಕೊರಳಲ್ಲಿದ್ದ ಕವಡೆ ಸರವನ್ನೂ ಬಾವಿಗೆಸೆದು ದುಡಿದು ಬದುಕುವ ಛಲಹೊತ್ತು ಕಾಡಳ್ಳಿಯ ಕುಕ್ಕಣ್ಣಿ ಮತ್ತು ಗೋಡರ ಬಳಿಗೆ ಬರುತ್ತಾಳೆ. ಅವರ ಅನುಮತಿ ಪಡೆದು ಹೊಲಗೇರಿಯಲ್ಲಿ ಜೋಪಡಿಕಟ್ಟಿಕೊಂಡು ವಾಸಿಸುತ್ತಾಳೆ. ಸೌಂದರ್ಯಸ್ಪರ್ಧೆಯಲ್ಲಿ ಗೆದ್ದವರನ್ನೂ ನಾಚಿಸುವಂಥ ಸುಂದರಿ ಸೀನಿಂಗಿಯನ್ನು ನೋಡಿದಾಕ್ಷಣ ಅವಳ ರೂಪರಾಶಿಯಲ್ಲಿ ಕೊಚ್ಚಿಹೋದ ಹಿರಿಗೌಡನ ತಮ್ಮ ರಾಘವೇಂದ್ರ ಕುಲಕರ್ಣಿ ತನ್ನಾಸೆಯನ್ನು ವ್ಯಕ್ತಪಡಿಸುತ್ತಾನೆ. ಬೇರೆ ಯಾರನ್ನೂ ಮದುವೆಯಾಗದಿರುವ ಶರತ್ತಿನ ಮೂಲಕ ಸೀನಿಂಗಿ ಅವನನ್ನು ಒಪ್ಪಿಕೊಳ್ಳುತ್ತಾಳೆ. ಊರವರಿಂದ ಬಹಿಷ್ಕಾರಕ್ಕೊಳಗಾದ ರಾಘವೇಂದ್ರ ಕುಲಕರ್ಣಿ ರಾಗೀಂದ್ರಪ್ಪ ಕುಕ್ಕಣ್ಣಿಯಾಗಿ ಸೀನಿಂಗಿಯ ಜತೆಯಲ್ಲಿರುತ್ತಾನೆ. ಇಪ್ಪತ್ತು ವರ್ಷ ಅವಳೊಂದಿಗೆ ಸಂಸಾರ ಮಾಡಿ ಸ್ವರ್ಗಸುಖವನ್ನು ಸೂರೆಗೊಂಡ ರಾಘವೇಂದ್ರ ಹೃದಯಾಘಾತದಿಂದ ಸತ್ತುಹೋಗುತ್ತಾನೆ. ಸೀನಿಂಗಿ ಗೌಡನಿಗೆ ಸುದ್ದಿ ತಿಳಿಸಿದರೆ ಕುಲಗೆಟ್ಟವನನ್ನು ಸಂಸ್ಕರಿಸಲು ಬರುವುದಿಲ್ಲವೆಂಬ ಉತ್ತರ ಬರುತ್ತದೆ. ಬ್ರಾಹ್ಮಣನ ಹೆಣವನ್ನು ಶೂದ್ರರ ರೀತಿ ಸಂಸ್ಕರಿಸಲಾಗುವುದಿಲ್ಲವೆಂದು ಕೇರಿಯವರೂ ಕೈಬಿಡುತ್ತಾರೆ.

ಹೆಣ ಕೊಳೆಯತೊಡಗಿದಾಗ ಸೀನಿಂಗಿ ಮುಸಲ್ಮಾನರ ಸಹಾಯವನ್ನು ಪಡೆದು ಮೇಲುಜಾತಿಯವರ ಸುಡುಗಾಡಿಗೆ ತೆಗೆದುಕೊಂಡು ಹೋಗಿ ದಹನ ಮಾಡುತ್ತಾಳೆ. ಮರುದಿನ ಮಠದ ಸ್ವಾಮಿಯ ಸಮಕ್ಷಮದಲ್ಲಿ ನಡೆದ ಪಂಚಾಯಿತಿಯಲ್ಲಿ ಸೀನಿಂಗಿ ತನ್ನ ಮಹಾಪರಾಧಕ್ಕಾಗಿ ಸಾವಿರದೊಂದು ರೂಪಾಯಿ ತಪ್ಪುದಂಡ ಕಟ್ಟುವಂತೆಯೂ ಬ್ರಾಹ್ಮಣರಿಗೆ ಲಾಡೂಟದ ಸಮಾರಾಧನೆ ಮಾಡಿ ಕ್ಷಮೆ ಕೇಳುವಂತೆಯೂ ಅಪ್ಪಣೆಯಾಗುತ್ತದೆ. ತನ್ನ ನಿರಪರಾಧಿತ್ವವನ್ನು ಮನವರಿಕೆ ಮಾಡಿದರೂ ಪಂಚಾಯಿತಿಯವರು ಒಪ್ಪದಿದ್ದಾಗ ರೋಷತಪ್ತಳಾದ ಸೀನಿಂಗಿ ಸುಡುಗಾಡಿಗೆ ಹೋಗಿ ಸುಟ್ಟ ಬೂದಿಯ ರಾಶಿಯಿಂದ ಮೂಳೆ, ಬೂದಿಗಳನ್ನು ಸೆರಗಿನಲ್ಲಿ ಕಟ್ಟಿ ತಂದು ಮಠದ ಮೆಟ್ಟಲುಗಳನ್ನು ಹತ್ತಿ ಸ್ವಾಮಿಯ ಮುಂದೆ ಎಸೆಯುತ್ತಾಳೆ. ಸಭೆ ಬೆರಗಿನಿಂದ ನೋಡುತ್ತಿದ್ದಂತೆ ದಢದಢನೆ ಮೆಟ್ಟಲಿಳಿದು ಕಾಡಳ್ಳಿಗೆ ಬೆನ್ನುಹಾಕಿ ಭರಭರನೆ ನಡೆಯುತ್ತಾಳೆ. ಯಾವ ಹಾರುವನಿಗೂ ಅವಳನ್ನು ತಡೆಯುವ ಧೈರ್ಯವಾಗುವುದಿಲ್ಲ.

ಈ ಕತೆ ಮೌಢ್ಯ ಮತ್ತು ಕ್ರೌರ್ಯವನ್ನು ಹೆಣ್ಣುಮಗಳೊಬ್ಬಳು ಎದುರಿಸಿದ ಬಗೆಯನ್ನು ನಿರೂಪಿಸುವುದರೊಂದಿಗೆ ಅತ್ಯುತ್ತಮ ಸಂದೇಶವನ್ನು ರವಾನೆ ಮಾಡುತ್ತದೆ.

**ಗರ್ಭ**

ಶಿವಪುರದ ಈಸೂರಪ್ಪ ಸಾವುಕಾರ ಹಣ, ಪ್ರತಿಷ್ಠೆ, ಅಧಿಕಾರ, ಗುಣ, ರೂಪ, ಯೌವನಗಳಿಂದ ಮಾದರಿ ವ್ಯಕ್ತಿ. ಆತನ ಮಡದಿ ಗೌರಮ್ಮನೂ ಗುಣರೂಪಗಳಲ್ಲಿ ಅದ್ವಿತೀಯಳು. ಅವರಿಬ್ಬರದು ಸ್ವರ್ಗಕ್ಕೆ ಕಿಚ್ಚು ಹಚ್ಚುವಂಥ ಜೋಡಿ. ಹೊಲಗದ್ದೆ, ಮನೆ, ಆಳುಕಾಳು, ಚಿನ್ನ ಬೆಳ್ಳಿ ಎಲ್ಲವೂ ಸಮೃದ್ಧವಾಗಿತ್ತು. ಹೊಲಗದ್ದೆಗಳೆಲ್ಲ ಪ್ರತಿವರ್ಷ ಹದ ಮಾಡಿಸಿಕೊಂಡು ನೀರುಣ್ಣಿಸಿಕೊಂಡು ಬೀಜ ಬಿತ್ತಿಸಿಕೊಂಡು ಒಂದಕ್ಕೆ ಸಾವಿರ ಬೆಳೆ ತರುತ್ತಿತ್ತು. ಆದರೆ ಈಸೂರಪ್ಪ ಗೌರಮ್ಮನ ಹೊಟ್ಟೆಯ ಹೊಲದಲ್ಲಿ ಬಿತ್ತಿದ್ದ ಬೀಜ ಮಾತ್ರ ಹತ್ತು ವರ್ಷ ಕಳೆದರೂ ಮೊಳಕೆಯೊಡೆಯಲಿಲ್ಲ. ತಪಾಸಣೆ ಮಾಡಿಸಿದಾಗ ಗೌರಮ್ಮನಿಗೆ ತೊಂದರೆ ಇರುವುದು ಗೊತ್ತಾಗುತ್ತದೆ. ಈಸೂರಪ್ಪ ಮಡದಿಯನ್ನು ಸಂತೈಸಿ ಯಾವುದಾದರೂ ಮಗುವನ್ನು ದತ್ತು ತೆಗೆದುಕೊಳ್ಳೋಣವೆಂದು ಹೇಳಿದರೆ ಗಂಡನ ಸಲಹೆಯನ್ನು ತರ್ಕಬದ್ಧವಾಗಿ ನಿರಾಕರಿಸಿದ ಗೌರಮ್ಮ ತವರು

ಮನೆಯ ಸಂಬಂಧಿಯಾದ ಆತ್ಮೀಯ ಗೆಳತಿಯಂತಿದ್ದ ನಾಲ್ಕೈದು ವರ್ಷ ಕಿರಿಯಳಾದ ಅನಾಥೆ ಹುಡುಗಿ ಚಿಕ್ಕಿಯ ಮೂಲಕ ತನ್ನಾಸೆಯನ್ನು ನೆರವೇರಿಸುವ ಯೋಜನೆಯನ್ನು ಹಾಕುತ್ತಾಳೆ. ಗಂಡನನ್ನೂ ಕಾಡಿ ಬೇಡಿ ಒಪ್ಪಿಸುತ್ತಾಳೆ. ಚಿಕ್ಕಿಯ ಸ್ವಾಮಿನಿಷ್ಠೆ, ಸ್ನೇಹಗಳು ಗೌರಮ್ಮನ ಹಂಚಿಕೆಗೆ ಅಸ್ತು ಎನ್ನುತ್ತವೆ. ಮೂರು ತಿಂಗಳು ಯಾರಿಗೂ ಅನುಮಾನ ಬರದಂತೆ ಚಿಕ್ಕಿಯನ್ನು ಗಂಡನ ಕೋಣೆಗೆ ಕಳುಹಿಸಿದ ಗೌರಮ್ಮ ಆಕೆ ಬಸುರಿ ಎಂದು ಗೊತ್ತಾದ ತಕ್ಷಣ ಗಂಡನೊಂದಿಗಿನ ಸಂಬಂಧವನ್ನು ಬೇರ್ಪಡಿಸುತ್ತಾಳೆ. ಚಿಕ್ಕಿಯ ಮನಸ್ಸು, ಭಾವನೆಗಳು ಕೆಲವು ತಿಂಗಳ ಸುಖಾನುಭವದ ಪರಿಣಾಮವಾಗಿ ಗಂಡಿನ ಸಾನ್ನಿಧ್ಯಕ್ಕಾಗಿ ಚಡಪಡಿಸಿದರೂ ಅವರಿಬ್ಬರ ಮಧ್ಯೆ ಉಕ್ಕಿನ ಗೋಡೆಯಾದ ಗೌರಮ್ಮ ತಾನು ಬಸುರಾಗಿದ್ದೇನೆಂದು ಮನೆಯವರನ್ನು ನಂಬಿಸಿ ಹೆರಿಗೆಗಾಗಿ ಗಂಡ, ಚಿಕ್ಕಿಯೊಂದಿಗೆ ಮುಂಬೈಗೆ ಹೋಗುತ್ತಾಳೆ. ಬಸಿರಲ್ಲಿ ಮೊಳಕೆಯೊಡೆದ ಶಿಶು ಮಗುವಾಗಿ ಬೆಳೆಯುತ್ತಿದ್ದಂತೆ ಚಿಕ್ಕಿಯ ಒಳಗಿನ ತಾಯ್ತನ ಅರಳುತ್ತದೆ. ದಿನ ತುಂಬಿ ಗಂಡು ಮಗುವಿನ ತಾಯಿಯಾಗಿ ಮಗುವಿಗೆ ಹಾಲೂಡುವಾಗ ಅವಳ ತಾಯ್ತನದ ಬೆಸುಗೆ ಬಿಗಿಯಾಗುತ್ತದೆ. ಆದರೆ ಕೊಟ್ಟ ಮಾತಿನಂತೆ ಮನಸ್ಸಿನ ಭಾವನೆಗಳೆಲ್ಲವನ್ನೂ ಅದುಮಿ ಮಗುವನ್ನು ಗೌರಮ್ಮನ ಉಡಿಗೆ ಹಾಕುತ್ತಾಳೆ. ಊರಿಗೆ ಬರುವ ದಾರಿಯಲ್ಲಿ ಗೌರಮ್ಮನಿಗೆ ಹೊಟ್ಟೆ ಕೆಟ್ಟು ಚಿಕ್ಕಿಯ ಕೈಯಲ್ಲಿ ಮಗುವನ್ನಿತ್ತು ಗಂಡನೊಂದಿಗೆ ಶೌಚಾಲಯಕ್ಕೆ ಹೋಗುತ್ತಾಳೆ. ತೊಡೆಯಲ್ಲಿ ಮಲಗಿದ್ದ ಕರುಳ ಕುಡಿಯನ್ನು ನೋಡುತ್ತ ಚಿಕ್ಕಿ ಮೈಮರೆಯುತ್ತಾಳೆ. ಸ್ಟೇಷನ್‌ಗೆ ಬಂದು ನಿಂತಿದ್ದ ಯಾವುದೋ ರೈಲು ಕಾಣಿಸಿದಾಕ್ಷಣ ಮಗುವನ್ನೆತ್ತಿಕೊಂಡು ರೈಲು ಹತ್ತುತ್ತಾಳೆ. ಚಿಕ್ಕಿಯನ್ನೂ ಮಗುವನ್ನೂ ಒಡಲಲ್ಲಿ ಬಚ್ಚಿಟ್ಟುಕೊಂಡು ರೈಲು ಚಲಿಸುತ್ತದೆ. ಮಗುವಿನ ಬಾಯಿಗೆ ಮೊಲೆಯಿಟ್ಟು ಚಿಕ್ಕಿ ಅವ್ಯಕ್ತ ಖುಷಿಯಿಂದ ನಗುತ್ತಾಳೆ.

ಕರುಳಿನ ಸಂಬಂಧವನ್ನು ಉದಾತ್ತೀಕರಿಸುವ ಈ ಕಥೆಯನ್ನು ಗೀತಾರವರ 'ಕದ್ದುಮುಚ್ಚಿ' ಕಾದಂಬರಿಯ ಉತ್ತರಾರ್ಧದ ಕಥಾಪ್ರಸಂಗದೊಂದಿಗೆ ಹೋಲಿಸಬಹುದು.

### ಗೌಡನ ಗೋರಿ

ಇದೊಂದು ವಿಶಿಷ್ಟ ಕತೆ. ಜೋಕುಮಾರನೆಂದು ಪ್ರಸಿದ್ಧನಾದ ಸಂಗಪ್ಪ ಗೌಡ ಊರ ಜೋಗತಿಯರಿಗೆಲ್ಲ ಮೊದಲರಾತ್ರಿಯನ್ನು ಕರುಣಿಸುವವನು.

ಮದುವೆಯ ಮುನ್ನವೇ ಹೆಂಗಸರ ದೇಹದ ಸಂದುಗೊಂದುಗಳ ಪರಿಚಯವಿರುವ ಈ ಕಚ್ಚೆಹರುಕನ ದುರಭ್ಯಾಸಗಳ ಬಗ್ಗೆ ಹಿರಿಗೌಡಿತಿ ರಾಮವ್ವಳಿಗೆ ಯಾವ ತಕರಾರೂ ಇಲ್ಲ. ತನ್ನ ಮಗ ಸಾವಿರ ಹೆಣ್ಣುಗಳನ್ನು ಸಾಕುವ ತಾಕತ್ತಿರುವವನು ಎಂಬ ಜಂಭ.

ಸಂಗಪ್ಪನಿಗೆ ಮದುವೆಯಾಗಿ ಸುಂದರಿಯಾದ ಹುಡುಗಿ ನೀಲಗಂಗವ್ವ ಮನೆ ತುಂಬಿದಳು. ಮೂರು ವರ್ಷವಾದರೂ ಮೊಮ್ಮಗುವಾಗದ ಕೊರಗಿನಲ್ಲಿ ರಾಮವ್ವ ತೀರಿಹೋಗುತ್ತಾಳೆ. ಊರ ಸೂಳೆಯರಿಗೆಲ್ಲ ಸಂತಾನ ಭಾಗ್ಯ ಕೊಡುವ ಗಂಡ ತನ್ನ ಹೊಲದಲ್ಲೇ ಒಂದು ಬೀಜ ಬಿತ್ತಿ ಬೆಳೆ ತೆಗೆಯಲಿಲ್ಲವೆಂದು ಮಡದಿ ನೊಂದಾಗ ಸಂಗಪ್ಪನದು ಹಾರಿಕೆಯ ಉತ್ತರ.

ನೀಲಗಂಗವ್ವ ದಿನವೂ ಗುಡಿಗೆ ಹೋಗಿ ಮಕ್ಕಳಿಗಾಗಿ ಆರ್ತಳಾಗಿ ಪ್ರಾರ್ಥಿಸುತ್ತಿದ್ದಳು. ಎಣ್ಣೆಗೆಂಪಿನ ರೇಷ್ಮೆಯ ಇಲಕಲ್ ಸೀರೆ ಉಟ್ಟು ಥೇರಿನ ಕುಪ್ಪಸ ತೊಟ್ಟು ಹಣೆಯಲ್ಲಿ ವಿಭೂತಿ, ಕುಂಕುಮ, ಬಂಗಾರದ ಆಭರಣ, ನತ್ತು ತೊಟ್ಟ ಗೌಡ್ತಿ ಚಿನ್ನದ ವಂಕಿಯ ಬಲಗೈಯಲ್ಲಿ ಹೂಬುಟ್ಟಿ ಹಿಡಿದು ಶಿವಲಿಂಗೇಶ್ವರ ಗುಡಿಗೆ ಬಂದರೆ ಪೂಜಾರಯ್ಯನ ಮಂತ್ರ ಏರುಪೇರಾಗುತ್ತಿತ್ತು. (534) ಶ್ರಾವಣ ಮಾಸದಲ್ಲಿ ಜಿಲ್ಲೆಯ ಸುಪ್ರಸಿದ್ಧ ಪುರಾಣಿಕರು ಸಿದ್ದರಾಮ ಪುರಾಣವನ್ನು ಹೇಳುವಾಗ ಸುಗ್ಗವ್ವೆಯ ಪುತ್ರದೋಹಳವನ್ನು ಕೇಳಿ ನೀಲಗಂಗವ್ವಳ ಕಣ್ಣಲ್ಲಿ ನೀರಾಡುತ್ತಿದ್ದುವು.

ಶ್ರಾವಣ ಕಳೆದ ಎರಡು ತಿಂಗಳಿಗೆ ನೀಲಗಂಗವ್ವ ಬಸುರಾಗುತ್ತಾಳೆ. ಮನೆಯಲ್ಲಿ ಗಂಡುಮಗುವಿನ ಅಳು, ಕೇಕೆಗಳು ತುಂಬುತ್ತವೆ. ವರ್ಷ ಉರುಳಿ ಶ್ರಾವಣ ಮತ್ತೆ ಬಂದಾಗ ಹಿಂದಿನ ವರ್ಷ ಬಂದ ಪುರಾಣಿಕರು ಮಾತ್ರ ಕಾಣಿಸುವುದಿಲ್ಲ.

ಕಾಲ ಉರುಳುತ್ತದೆ. ಗೌಡನ ಆರೋಗ್ಯ ಕೆಡುತ್ತದೆ. ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿ ಆತನಾಡುವ ಮಾತುಗಳನ್ನು ಕೇಳಿ ಮುಚ್ಚಿಟ್ಟ ರಹಸ್ಯ ಬಾಯ್ದೆರೆದು ನೀಲಗಂಗವ್ವಳಿಗೆ ಗರಬಡಿದಂತಾಗುತ್ತದೆ: 'ನೀಲೀ.. ನೀ ನನಗ ಧೋಕಾ ಮಾಡ್ದಿ. ನನಗೆ ಮಕ್ಕಳು ಹುಟ್ಟಿಸೋ ಶಕ್ತಿಯಿಲ್ಲಂತ ಎಂದೋ ಡಾಕ್ಟರ ಹೇಳಿದ್ರು. ನಿನ್ನ ಮಗಾ ನನ್ ಬೀಜ ಅಲ್ಲ. ಆದರೂನೂ ನನ್ನ ವಂಶ ಬೆಳೀಲಕ ಒಬ್ಬ ಮಗಾ ಬೇಕಾಗಿತ್ತ$' ಆ .. ಆ ಪುರಾಣಿಕ ಸೂಳ್ಯಾ ಮಗನಿಗಿ ನಾನೇ.. ಕೊ..ಲ್ಲಿ ' ಮಾತು ಅರ್ಧಕ್ಕೇ ನಿಂತು ಗೌಡನ ತಲೆ ವಾಲುತ್ತದೆ.

**ದುರಂತ**

ಮತಾಂತರ ಹಾಗೂ ಮತಾಂತರಗೊಂಡವರ ಮನಸ್ಸಿನ ಬೇಗುದಿಗಳನ್ನು ಬಹು ಸೂಕ್ಷ್ಮವಾಗಿಯೂ ಹೃದಯಸ್ಪರ್ಶಿಯಾಗಿಯೂ ಅನಾವರಣಗೊಳಿಸುವ ಕತೆ 'ದುರಂತ'. ಗಂಗಾನಗರದ ಜೋಪಡಿಪಟ್ಟಿಯ ಮಾದೇವಿ ಆಕಸ್ಮಿಕವಾಗಿ ತೀರಿಹೋದಾಗ ಇಡೀ ಕೇರಿಗೆ ಕೇರಿಯೇ ಸಂಕಟಪಡುತ್ತದೆ. ಹೆಣದ ಅಂತಿಮದರ್ಶನವನ್ನು ಮಾಡಲು ಬಂದ ಸಲೀಂಮಿಯಾನ ಬೇಡಿಕೆಗೆ ಕೇರಿಜನಗಳು ಕಿವುಡಾಗುತ್ತಾರೆ. ಸಲೀಂಮಿಯಾ ಯಾರು, ಅವನ ಬಗ್ಗೆ ಅವರಿಗೇಕೆ ಅಷ್ಟು ಕೋಪವೆಂಬುದು ಕುತೂಹಲಕಾರಿಯಾಗಿದ್ದು ಅದನ್ನು ಹಿನ್ನೋಟವಾಗಿ ತಿಳಿಸುವುದೇ ಈ ಕತೆಯ ವೈಶಿಷ್ಟ್ಯ.

ಮಾದೇವಿಯನ್ನು ನೋಡಲಾಗದ ನೋವಿನಲ್ಲಿ ರೆಕ್ಕೆ ಕತ್ತರಿಸಿದ ಹಕ್ಕಿಯಂತೆ ಒದ್ದಾಡುವ ಸಲೀಂಮಿಯಾನ ನೆನಪಿನಲ್ಲಿ ಕಥಾಹಂದರ ಬಿಚ್ಚಿಕೊಳ್ಳುತ್ತದೆ.

ಮಾದೇವಿ ಮಲ್ಲೇಶಿಯರದ್ದು ಅನುರೂಪ ದಾಂಪತ್ಯ. ಭಾಸಗಿ ಹಳ್ಳಿಯ ಕಬ್ಬಲಿಗರ ಮಾದೇವಿ ನೋಡಿದವರೆಲ್ಲ ಹುಬ್ಬೇರಿಸುವಷ್ಟು ರೂಪಸಿ. ತಂದೆ, ಒಡಹುಟ್ಟುಗಳಿಲ್ಲದೆ ತಾಯಿಯ ಆರೈಕೆಯಲ್ಲಿ ಬಳೆದವಳು. ಬಾಡಿಗೆ ರಿಕ್ಷಾ ಓಡಿಸಿ ಜೀವನೋಪಾಯ ಮಾಡುತ್ತಿದ್ದ ಮಲ್ಲೇಶಿ ಬಡವನಾದರೂ ಅವನ ಮನಸ್ಸು ಶ್ರೀಮಂತವಾಗಿತ್ತು. ಐದು ವರ್ಷಗಳ ಕಾಲ ಎಣೆಹಕ್ಕಿಗಳಂತೆ ಬಾಳುವೆ ಮಾಡುತ್ತಿದ್ದವರಿಗೆ ಮಾದೇವಿಯ ಗರ್ಭಪಾತ ಕಾರಣವಾಗಿ ಆಪತ್ತು ಕವಿಯುತ್ತದೆ. ಮಡದಿಯ ಆರೈಕೆಗೆ ನಿಂತ ಮಲ್ಲೇಶಿ ರಿಕ್ಷಾಬಾಡಿಗೆ ಕೊಡಲಾಗದೆ, ಔಷಧಿಗೆ ತೆಗೆದುಕೊಂಡ ಸಾಲತೀರಿಸಲಾಗದೆ ಏಟು ತಿಂದು ಪೋಲೀಸ್ ಸ್ಟೇಷನ್ ಹತ್ತುತ್ತಾನೆ. ಬಿಡುಗಡೆಗೊಂಡು ಬರುವಾಗ ಸಿಟ್ಟು, ಸಿಡುಕುಗಳನ್ನು ರೂಢಿಸಿ ಕೆಟ್ಟಚಟಗಳಿಗೆ ಬಲಿಯಾಗಿರುತ್ತಾನೆ. ಅನುಕೂಲ ಬದುಕಿನ ಆಮಿಷ ಅವನನ್ನು ಮತಾಂತರಗೊಳ್ಳಲು ಪ್ರೇರೇಪಿಸುತ್ತದೆ. ಮಾದೇವಿ ಒಪ್ಪದಾಗ ತಾನೊಬ್ಬನೇ ಮತಾಂತರಗೊಂಡು ಸಲೀಂಮಿಯಾ ಆಗಿ ಮುಸಲ್ಮಾನ ಹುಡುಗಿಯನ್ನು ಮದುವೆಯಾಗಿ ಇಬ್ಬರು ಮಕ್ಕಳ ತಂದೆಯೂ ಆಗುತ್ತಾನೆ. ಮಾದೇವಿ ಅದೇ ಜೋಪಡಿಯಲ್ಲಿದ್ದು ಬ್ರಾಹ್ಮಣರ ಮನೆಗಳಲ್ಲಿ ಕೆಲಸ ಮಾಡುತ್ತ ತನ್ನ ಹೊಟ್ಟೆ ಹೊರೆದುಕೊಳ್ಳುತ್ತಾಳೆ. ಮುಸಲ್ಮಾನನಾಗಿದ್ದರೂ ಮಾದೇವಿಯ ಬಗೆಗಿನ ಪ್ರೀತಿ ಸಲೀಂನಲ್ಲಿ ಹಸಿರಾಗಿಯೇ ಇರುತ್ತದೆ. ಮತ್ತೆ ಹತ್ತುವರ್ಷಗಳು

ಕಳೆಯುತ್ತವೆ. ಈ ನಡುವೆ ಅವನು ಮಾದೇವಿಯನ್ನು ಭೇಟಿಯಾಗಿ ತನ್ನನ್ನು ಕ್ಷಮಿಸಬೇಕೆಂದು ಬೇಡಿಕೊಂಡರೂ ಮಾದೇವಿ ಅವನನ್ನು ತಿರಸ್ಕರಿಸುತ್ತಾಳೆ.

ಮಾದೇವಿಯ ಸಾವಿನ ಸುದ್ದಿ ತಿಳಿದಾಗ ಸಲೀಂಮಿಯಾನಿಗೆ ತಡೆಯಲಾಗುವುದಿಲ್ಲ. ಕೇರಿಯವರು ತಡೆದಾಗ ದೂರದಲ್ಲಿ ನಿಂತು ಶವಸಂಸ್ಕಾರವನ್ನು ನೋಡುತ್ತ ಕಣ್ಣೀರು ಮಿಡಿಯುತ್ತಾನೆ. ರಾತ್ರಿಯ ಕತ್ತಲೆಯಲ್ಲಿ ಒಬ್ಬನೇ ಸ್ವಶಾನಕ್ಕೆ ಹೋಗಿ ಮಾದೇವಿಯ ಹೆಣಕ್ಕೆ ಹಿಡಿಮಣ್ಣು ಹಾಕಿ 'ಮಾದೀ, ನಾ ಹಿಂದೂ ಹೋಗಿ ತುರುಕಾದೆ. ಜಾತಿ ಬಿಟ್ಟು ಬ್ಯಾರೆ ಜಾತಿ ಸೇರ್ದೆ. ಆದರೆ ನನ್ನೆದ್ಯಾಗಿನ ನಿನ್ನ ಪಿರೀತಿಗಿ ಯಾ ಜಾತಿನೂ ಇಲ್ಲೆ.' ಎಂದು ಹೃದಯದಾಳದಿಂದ ವಿಲಪಿಸುತ್ತಾನೆ.

**ವೇದನೆಯ ವರ್ತುಳ**

ಸಂಬಂಧಗಳು ಎಷ್ಟೇ ತೀವ್ರವಾಗಿದ್ದರೂ ಬೆಲೂನಿಗೆ ಚುಚ್ಚಿದ ಸೂಜಿ ಒಳಗಿನ ಗಾಳಿಯನ್ನು ಒಮ್ಮೆಗೇ ಹೊರಹಾಕುವಂತೆ ಒಂದು ಸಣ್ಣ ಕಾರಣ ಆ ಸಂಬಂಧವನ್ನು ನುಚ್ಚುನೂರು ಮಾಡುತ್ತದೆ. ಗಂಡಿನ ಸ್ವಾರ್ಥ ಮತ್ತು ಸಣ್ಣತನವನ್ನು ಎತ್ತಿಹೇಳುವ ಕತೆ ಇದು.

ರಶ್ಮಿ ರವೀಂದ್ರರು ಬದುಕಿನ ಸುಖಸಂತೋಷಗಳನ್ನು ಸೂರೆಗೊಳ್ಳುತ್ತಿರುವ ಅನ್ಯೋನ್ಯ ದಂಪತಿಗಳು. ಮದುವೆಯಾದ ಮೂರು ವರ್ಷ ಅವರ ದಾಂಪತ್ಯಜೀವನ ಆಕಾಶದ ಸ್ವರ್ಗಸೋಪಾನದಲ್ಲಿ ಮೈಮರೆಯುತ್ತದೆ. ರಶ್ಮಿ ಗರ್ಭಿಣಿಯಾಗುತ್ತಾಳೆ. ಒಂದು ದಿನ ರಾತ್ರಿ ಗಂಡನೊಂದಿಗೆ ಸಿನಿಮಾ ನೋಡಿ ಹಿಂತಿರುಗುವ ಸಮಯದಲ್ಲಿ ಗೂಂಡಾಗಳಿಂದ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಹೆಂಡತಿಯ ಪರಿಸ್ಥಿತಿಯ ಬಗ್ಗೆ ಮರುಗಿ ಅವಳನ್ನು ಉಪಚರಿಸಿದರೂ ಸಹೋದ್ಯೋಗಿಗಳ ಕುಹಕ, ವ್ಯಂಗ್ಯ, ಟೀಕೆಗಳನ್ನು ಸಹಿಸಲಾಗದೆ ದೂರದ ಊರಿಗೆ ಕೆಲಸವನ್ನು ವರ್ಗಾಯಿಸಿದ ಆತ ನಿಧಾನವಾಗಿ ರಶ್ಮಿಯಿಂದ ದೂರವಾಗುತ್ತಾನೆ. ಮಗ ಹುಟ್ಟಿದ ಸುದ್ದಿ ಬಂದಾಗಲೂ ಸ್ಪಂದಿಸುವುದಿಲ್ಲ. ಆಮೇಲೊಂದು ದಿನ ತಾನು ಬೇರೆ ಮದುವೆಯಾಗುತ್ತೇನೆಂದೂ ವಿಚ್ಛೇದನ ಪತ್ರಕ್ಕೆ ಸಹಿ ಹಾಕಬೇಕೆಂದೂ ರಶ್ಮಿಗೆ ಅರ್ಜಿ ಕಳುಹಿಸುತ್ತಾನೆ. ತಕ್ಷಣಕ್ಕೆ ಆಘಾತವಾದರೂ ಎದೆಗುಂದದ ರಶ್ಮಿ ಪತ್ರಕ್ಕೆ ರುಜು ಹಾಕಿ ಕಳುಹಿಸಿ ಮಗನ ಜತೆಯಲ್ಲಿ ಒಂಟಿಯಾಗಿ ಬದುಕನ್ನು ಎದುರಿಸುವ ಛಲ ಹೊತ್ತು ನಿಲ್ಲುತ್ತಾಳೆ. ತನ್ನ ಬದುಕಿನಲ್ಲಿ ನಡೆದ ಅನಿರೀಕ್ಷಿತ

ತಿರುವು, ನೋವು, ಅಪಮಾನಗಳು ಒಂದು ವೇದನೆಯ ವರ್ತುಲವಾಗಿ ಅವಳನ್ನು ಆವರಿಸುತ್ತವೆ. ಹೆಂಡತಿಯನ್ನು ಅಷ್ಟೊಂದು ಅಗಾಧವಾಗಿ ಪ್ರೀತಿಸುತ್ತಿದ್ದ ರವೀಂದ್ರ ಅವಳದಲ್ಲದ ತಪ್ಪಿಗೆ ಅಷ್ಟೊಂದು ನಿರ್ದಯನಾಗಲು ಹೇಗೆ ಸಾಧ್ಯ? ಪ್ರೀತಿ, ಪ್ರೇಮಗಳು ಅಷ್ಟೊಂದು ದುರ್ಬಲವೇ? ಕ್ಷಣಿಕವೇ? ಅಥವಾ ಗಂಡಸರು ಅಷ್ಟೊಂದು ಸಂಕುಚಿತ ಸ್ವಭಾವದವರೇ? ಎಂಬ ಪ್ರಶ್ನೆಗಳು ಓದುಗರನ್ನು ಕಾಡುತ್ತವೆ.

**ಪುಂಡಿ ಪುಜಾರಿಯಾದಾಗ**

ಕಾಲ್ಪನಿಕವಾದರೂ ತುಂಬ ಮೌಲಿಕವಾದ ಕತೆ ಇದು. ಸಮಾಜದ ಸರ್ವಾಂಗೀಣ ಅಭ್ಯುದಯದ ದೃಷ್ಟಿಯಿಂದ ಅತ್ಯಗತ್ಯವಾಗಿ ನಡೆಯಬೇಕಾದ ಒಂದು ಸುಧಾರಣೆಯ ಪ್ರಕ್ರಿಯೆಯನ್ನು ಈ ಕತೆ ಧ್ವನಿಸುತ್ತದೆ. ಮೇಲುವರ್ಗದವರ ಸ್ವಾರ್ಥ, ಸ್ವಾಧೀನತೆ ಕೆಳವರ್ಗದವರ ಆತಂಕ, ಭಯಗಳ ಮಧ್ಯೆಯೇ ಸ್ವಚ್ಛ ಸುಂದರ ಸಮಾಜರಚನೆಯ ಹೊಸದಾರಿಗೆ ಕತೆ ದಿಕ್ಸೂಚಿಯಾಗುತ್ತದೆ.

ಶಿವಳ್ಳಿಯೆಂಬ ಊರಿನಲ್ಲಿ ಎರಡು ದೇವಿಯ ದೇವಾಲಯಗಳಿವೆ. ಮೇಲಿನ ಕೇರಿಯ ಮಹಾಲಕ್ಷ್ಮಿಯದ್ದೊಂದು ಕೆಳಗಿನ ಕೇರಿಯ ಮರುಗವ್ವನದೊಂದು. ಮರುಗವ್ವನ ಗುಡಿಯೆಂದರೆ ನಾಲ್ಕು ಕರಿಗಲ್ಲು ನಾಟಿ ಮೇಲೊಂದು ಫರಸಿಯ ಸೂರು, ಸುಣ್ಣ ಸವರಿದ ಗುಡಿ. ಆದರೆ ಮಹಾಲಕ್ಷ್ಮಿಯ ದೇವಾಲಯ ಮಜಬೂತಾದ ಹದಿನೆಂಟು ಕರಿಕಂಬಗಳ ಗರ್ಭಗುಡಿ, ಮುಂದೊಂದು ವಿಶಾಲ ಪಡಸಾಲೆ. ಬಲುದೊಡ್ಡ ಬಯಲಿನ ಸುತ್ತ ಕಲ್ಲುಗೋಡೆಯ ಕಾಂಪೌಂಡು. ದೇವಿಗಂತೂ ಬಗೆಬಗೆಯ ಬಣ್ಣದೊಡವೆಗಳ, ರೇಷ್ಮೆ ಸೀರೆಗಳ ಅಲಂಕಾರ. ಅತ್ಯಂತ ಶ್ರೀಮಂತ ದೇವತೆಯಾಗಿದ್ದುದರಿಂದ ಭಕ್ತಾದಿಗಳ ಸೇವೆಯೂ ಹೆಚ್ಚು. ದುರಂತವೆಂದರೆ ಇಲ್ಲಿಗೆ ಕಾಣಿಕೆಯಾಗಿ ಬಂದ ಹಣ, ಒಡವೆಗಳು ಬ್ರಾಹ್ಮಣ ಮುಖಂಡ ಶ್ರೀಪತಿರಾಯರ ತಿಜೋರಿಗೆ ಹೋದರೆ ದಿನನಿತ್ಯದ ಒಡವೆ, ಸೀರೆಗಳು ಪೂಜಾರಿ ಸೀನಪ್ಪಾಚಾರಿಯ ಮನೆಯನ್ನು ಸೇರುತ್ತಿದ್ದುವು.

ಸಾವ್ಕಾರ ಗುರುಪಾದಪ್ಪ ಊರಿಗೇ ದೊಡ್ಡ ಅಸಾಮಿ. ಅವನ ಆಳುಮಗ ಹೊಲೆಯರ ಮಲ್ಲಣ್ಣ ಬಲು ನಂಬಿಗಸ್ಥ. ಅವನ ಹೆಂಡತಿ ನಿಂಗಿ. ಮಕ್ಕಳಿಲ್ಲದ ಅವರು ಸಾವ್ಕಾರನ ಮಗ ಈಸೂರನನ್ನು ಎತ್ತಾಡಿಸಿದವರು. ಈಸೂರನಿಗೂ

ಮಲ್ಲಣ್ಣ ದಂಪತಿಗಳ ಮೇಲೆ ಅಪಾರವಾದ ಪ್ರೀತಿ, ಅಭಿಮಾನ. ವಿದ್ಯಾವಂತನಾಗಿ ಕಲೆಕ್ಟರ್ ಹುದ್ದೆ ಗಳಿಸಿ ತನ್ನೂರಿಗೇ ಬಂದು ಸರಕಾರದ ಸುಧಾರಣಾ ಪ್ರಣಾಳಿಕೆಗಳನ್ನು ಅನುಷ್ಠಾನಕ್ಕೆ ತರತೊಡಗಿದ ಈಸೂರ ಮನುಷ್ಯರೆಲ್ಲರೂ ಸಮಾನರೆಂಬ ತಿಳುವಳಿಕೆಯುಳ್ಳವನು.

ಈಗ ಸರಕಾರವೇ ದೇವಾಲಯದ ಆಡಳಿತಾಧಿಕಾರವನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಕಾನೂನಿನಂತೆ ಮಹಾಲಕ್ಷ್ಮಿ ದೇವಾಲಯದ ನಾಲ್ಕೈದು ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಿ ಡಂಗುರ ಸಾರಿತು. ಈ ಹುದ್ದೆಗಳಿಗೆ ಜಾತಿಭೇದವಿಲ್ಲದೆ ಯಾರು ಬೇಕಾದರೂ ಅರ್ಜಿ ಹಾಕಬಹುದಿತ್ತು. ಸುದ್ದಿ ಗಾಳಿಬೀಸಿದ ಬೆಂಕಿಯ ಜ್ವಾಲೆಗಳಂತೆ ಸರಸರನೆ ಚಟಚಟನೆ ಉರಿಯುತ್ತ ಎಲ್ಲ ಕಡೆಗೂ ಹರಡಿದಾಗ ಮೇಲುಜಾತಿಯವರೆಲ್ಲ ತೀವ್ರವಾಗಿ ಪ್ರತಿಭಟಿಸುತ್ತಾರೆ.

ಈಸೂರ ಒಂದಷ್ಟು ಓದು ಬರಹ ಬಲ್ಲ ಮಲ್ಲಣ್ಣನ ತಮ್ಮ ಪುಂಡಿಯನ್ನು ಗುಟ್ಟಾಗಿ ಕರೆದು ಪುಜಾರಿ ಹುದ್ದೆಗೆ ಅರ್ಜಿ ಹಾಕಲು ಒತ್ತಾಯಿಸುತ್ತಾನೆ. ಪುಂಡಿ ನಿರಾಕರಿಸಿದರೂ ಅವನಲ್ಲಿ ಆತ್ಮವಿಶ್ವಾಸ, ಧೈರ್ಯಗಳನ್ನು ತುಂಬುತ್ತಾನೆ. ಪುಂಡಿ ಈಸೂರನ ಬೆಂಬಲದಿಂದ ಸಂತೋಷವಾಗಿಯೇ ಅರ್ಜಿ ಹಾಕುತ್ತಾನೆ. ಸಂದರ್ಶನಕ್ಕೆ ಕರೆಬರುತ್ತದೆ. ಸಂದರ್ಶನ ಮುಗಿದ ಹತ್ತು ದಿನಕ್ಕೆ ಪುಂಡಿ ಮಹಾಲಕ್ಷ್ಮಿ ದೇವಾಲಯದ ಪೂಜೆಯ ಕೆಲಸಕ್ಕೂ ಅದುವರೆಗೂ ಪೂಜೆ ಮಾಡುತ್ತಿದ್ದ ಸೀನಪ್ಪಾಚಾರಿ ದೇವಾಲಯದ ಕಸಗುಡಿಸುವ ಹುದ್ದೆಗೂ ನೇಮಕಗೊಂಡ ಆದೇಶ ತಲುಪುತ್ತದೆ. ಇದನ್ನು ಕೇಳಿ ಮೇಲುಜಾತಿಯವರ ಎದೆ ಒಡೆದುಹೋಗುತ್ತದೆ. ಈ ಅಧರ್ಮದ ಪರವಾವಧಿಯನ್ನು ಒಪ್ಪುವ ಮನಸ್ಸು, ತಾಕತ್ತು ಅವರಿಗಿರುವುದಿಲ್ಲ. ಸೀನಪ್ಪಾಚಾರಿಗಂತೂ ಕಣ್ಣುಗಳಲ್ಲಿ ನೆತ್ತರು ಇಳಿಯುತ್ತದೆ. ಹಲ್ಲಿಗೆ ಹಲ್ಲು ಮಸೆಯುತ್ತದೆ. ಅವನು ಆದೇಶಪತ್ರವನ್ನು ಹರಿದು ಚೂರುಚೂರು ಮಾಡಿ ನೆಲಕ್ಕೆಸೆದು 'ಥೂ' ಎಂದು ಉಗುಳಿ ಮೆಟ್ಟುಗಾಲಿನಿಂದ ಗಸಗಸನೆ ತಿಕ್ಕುತ್ತಾನೆ. ಉರಿ ಶಮನವಾಗದೆ ಜೇಬಿನಿಂದ ಕಡ್ಡಿಪೊಟ್ಟಣ ತೆಗೆದು ಚರ್ರನೆ ಬೆಂಕಿಗೀರಿ ಕಾಗದದ ಚೂರುಗಳಿಗೆ ಹಚ್ಚುತ್ತಾನೆ.

ಮರುದಿನ ದೇವಸ್ಥಾನದಲ್ಲಿ ಪುಂಡಿಯ ಪೂಜೆ ಆರಂಭವಾಗಬೇಕು. ಹೊಲಗೇರಿಯ ಮಂದಿಯೆಲ್ಲ ನಡೆಯಲಿರುವ ಚಾರಿತ್ರಿಕ ಘಟನೆಗೆ ಸಾಕ್ಷಿಯಾಗಲು ಕಾತರರಾಗಿದ್ದರು. ಪುಂಡಿ ಎರಡೆರಡು ಸಲ ಸ್ನಾನಮಾಡಿ ಮಡಿಯುಟ್ಟು ಹಾಲುಸಕ್ಕರೆಯ ಬಟ್ಟಲಿನೊಂದಿಗೆ ಮಹಾಲಕ್ಷ್ಮಿಯ ಗುಡಿಗೆ

ಬರುತ್ತಾನೆ. ಆದರೆ ಕಸಗುಡಿಸಬೇಕಾಗಿದ್ದ ಆಚಾರಿಯ ಪತ್ತೆಯಿಲ್ಲ. ಲಿಂಗಾಯಿತ ಬಸಲಿಂಗಮ್ಮ ಕಸ ಉಡುಗಿ ನೆಲ ಸ್ವಚ್ಛಮಾಡುತ್ತಾಳೆ. ಪುಂಡಿ ತನಗೆ ತಿಳಿದಂತೆ ಪೂಜೆಮಾಡಿ ದೇವಿಯಲ್ಲಿ ಕ್ಷಮೆಯಾಚಿಸಿ ಮಂಗಳಾರತಿಯ ತಟ್ಟೆ ಹಿಡಿದುಕೊಂಡು ತಿರುಗಿದರೆ ಒಬ್ಬನೇ ಒಬ್ಬ ಮೇಲುಜಾತಿಯ ಮನುಷ್ಯನಿಲ್ಲ. ಭಯ, ನಿರಾಶೆ, ಆಘಾತ, ಅವಮಾನಗಳಿಂದ ಕಂಗಾಲಾಗಿ ಆತ ದೇವಿಯ ಪಾದಗಳನ್ನು ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾನೆ. ಕೆಲವೇ ನಿಮಿಷಗಳಲ್ಲಿ ಅವನ ಉದ್ವೇಗ ಕಡಿಮೆಯಾಗಿ ಮನಸ್ಸಿನಲ್ಲಿ ಧೈರ್ಯ ತುಂಬಿ ದೃಢನಿರ್ಧಾರದಿಂದ ಮೇಲೇಳುತ್ತಾನೆ. ಪೋಲೀಸ್ ಇನ್ಸ್ಪೆಕ್ಟರ್ ಶಿವರಾಮ್‌ನನ್ನು ಕರೆದು: 'ನಡೆಯಿರಿ ಇನ್ಸ್ಪೆಕ್ಟರೇ, ದೇವಿಯ ವಸ್ತ್ರ, ಬಂಗಾರದ ಒಡವೆಗಳೆಲ್ಲ ಹಿಂದಿನ ಪೂಜಾರಿಯಾಗಿದ್ದ ಆಚಾರಪ್ಪನ ಸುಪರ್ದಿನಲ್ಲೇ ಇದೆ. ಅವನಿಂದ ಮೊದಲು ಛಾರ್ಜು ತಗೋತೀನಿ. ನೀವು ನನ್ನ ಜೋಡಿ ಬರ್ಬೇಕು..'(566) ಎನ್ನುತ್ತ ಆತ್ಮವಿಶ್ವಾಸದಿಂದ ಪೂಜಾರಿಯ ಮನೆಗೆ ಹೋದರೆ ಮನೆಯ ಮುಚ್ಚಿದ ಬಾಗಿಲು ಅವನನ್ನು ಸ್ವಾಗತಿಸುತ್ತದೆ. ಪೂಜಾರಿ ಮುನ್ನಾದಿನವೇ ದೇವಿಯ ಆಭರಣಗಳೊಂದಿಗೆ ಪರಾರಿಯಾಗಿದ್ದ.

ಶತಶತಮಾನಗಳಿಂದ ಭಾರತೀಯ ಸಮಾಜದಲ್ಲಿ ಬೇರೂರಿದ್ದ ಅಸಮಾನತೆಯ ವ್ಯವಸ್ಥೆಯನ್ನು ಪರಿವರ್ತಿಸಬೇಕಾದ ಅಗತ್ಯವನ್ನೂ ಹಾಗೆ ಪರಿವರ್ತಿಸುವಾಗ ಎದುರಿಸಬೇಕಾಗುವ ಸಮಸ್ಯೆಗಳನ್ನೂ ಈ ಕತೆ ಅತ್ಯಂತ ಮಾರ್ಮಿಕವಾಗಿ ನಿರೂಪಿಸಿದೆ. ಸೀನಪ್ಪಾಚಾರಿಯ ರೋಷವನ್ನು ವರ್ಣಿಸಿದ ರೀತಿ ಅದ್ಭುತವಾಗಿದ್ದು ಕತೆಗಾರ್ತಿಯ ವರ್ಣನೀಯ ಕೌಶಲಕ್ಕೆ ಸಾಕ್ಷಿಯಾಗುತ್ತದೆ.

### ಮತ್ತೆ ಅದೇ ಕಥೆ

ಮುಷ್ಕರಗಳು ಬಡ ಜನರ ಮೇಲೆ ಬೀರುವ ಘೋರಪರಿಣಾಮವನ್ನು ಈ ಕತೆ ದಿಗ್ದರ್ಶಿಸುತ್ತದೆ.

ಬಟ್ಟೆಗಿರಣಿಯಲ್ಲಿ ಕಾರ್ಮಿಕನಾಗಿದ್ದ ಧೋಂಡೂಪಂತ ಲೋಕರೆ ಒಂದು ಕೋಣೆಯ ಬಾಡಿಗೆ ಮನೆಯಲ್ಲಿ ವಾಸಮಾಡುವ ಬಡ ಅನಕ್ಷರಸ್ಥ ಗೃಹಸ್ಥ. ಹೆಂಡತಿ ತುಳಜಾ ಮತ್ತು ಇಬ್ಬರು ಗಂಡುಮಕ್ಕಳೊಂದಿಗೆ ಬಡತನದಲ್ಲೂ ನೆಮ್ಮದಿಯಿಂದ ಜೀವಿಸುತ್ತಿದ್ದ ಆತನಿಗೆ ವಂಶದಿಂದ ಬಂದ ಡಪ್ಪಿನ ಹಾಡುಗಾರಿಕೆಯೂ ಇದೆ. ಕೈಯಲ್ಲಿ ಡಪ್ಪು ಹಿಡಿದು ತಾನೇ ಪದಕಟ್ಟಿ ದನಿಯೇರಿಸಿ ಪ್ರಾಸಬದ್ಧವಾಗಿ ಹಾಡುವ ಅವನೊಂದಿಗೆ ಶಾಲೆಗೆ ಹೋಗುವ

ಇಬ್ಬರು ಮಕ್ಕಳೂ ಸೇರುತ್ತಾರೆ. ಅವನು ಹಾಡುತ್ತಿದ್ದರೆ ಹಳ್ಳಿಗೆ ಹಳ್ಳಿಯೇ ತನ್ಮಯಗೊಂಡು ಆಲಿಸುತ್ತದೆ. ಗುಡಿಯೊಳಗಿನ ಭವಾನಿದೇವಿಯೂ ಖುಷಿ ಪಡುವಷ್ಟು ಸೊಗಸಾದ ಹಾಡುಗಾರಿಕೆ. ಭಜನೆ ಪದಗಳು, ಶೃಂಗಾರ ಕವಿತೆಗಳು, ಅವನದು ಅನುಭವದ ಹಾಡುಗಳು ಅವನ ಕಂಠದಿಂದ ಸೊಕ್ಕಿದ ಹೊಳೆಯ ನೀರಿನಂತೆ ನಿರರ್ಗಳವಾಗಿ ಹರಿದು ಬರುತ್ತವೆ. ಝೋಪಡಿಪಟ್ಟಿಯಲ್ಲಿ ಹುಟ್ಟಿಬೆಳೆದ ಧೋಂಡೂಗೆ ಬಡವರು, ಕಾರ್ಮಿಕರು, ಕೂಲಿಕಾರರು, ಹಮಾಲರು, ರಿಕ್ಷಾ, ಟಾಂಗಾವಾಲರಲ್ಲಿ ನಂಟು. ಪಟ್ಟಣದಲ್ಲಿ ಎಲ್ಲೇ ಸಂಪು, ಹರತಾಳ, ಮುಷ್ಕರಗಳಾಗಲೀ ಕಾರ್ಮಿಕರ ಕೂಲಿಕಾರರ ಸಭೆಯಾಗಲೀ ನಡೆದರೆ ಅಲ್ಲಿಗೆ ಹೋಗಿ ರಾತ್ರಿಯೆಲ್ಲ ಹಾಡುತ್ತಿದ್ದ. ಹಾಡುಗಾರಿಕೆಯಿಂದ ಧೋಂಡೂ ಗವಯಿಯಾಗಿ ಪ್ರಸಿದ್ಧನಾದ ಅವನ ಮನೆಯನ್ನು ಬೀದಿಯಲ್ಲಿ ಆಡುವ ಮಕ್ಕಳು ಮರಿಗಳೂ ತೋರಿಸಿಕೊಡಬಲ್ಲರು. ಧೋಂಡೂನ ಹೃದಯ ಹೂವಿನಂತೆ. ಹೊಡಿ, ಬಡಿ, ಕಡಿ, ಮಾದರಚೋದ, ಬದ್ಮಾಸ್, ಹಲ್ಕಟ್ ಮೊದಲಾದ ಝೋಪಡಿಪಟ್ಟಿಯ ಭಾಷೆ, ಬೈಗುಳಗಳಿಂದ ಅವನು ಬಹಳ ದೂರ.

ಬಟ್ಟೆಗಿರಣಿಯ ವರಮಾನದಿಂದಲೇ ಹೊಟ್ಟೆ ತುಂಬಿಸುವ ಕುಟುಂಬಕ್ಕೆ ಹಾಡುಗಾರಿಕೆ ಸಿಕ್ಕಿದಂದು ಹಬ್ಬದೂಟ. ಆದರೆ ಬಟ್ಟೆಗಿರಣಿಯಲ್ಲಿ ಲಾಕ್ ಔಟ್ ಆಗಿ ಕೆಲಸಗಳು ನಿಂತುಹೋದಾಗ ಬದುಕು ಬಾಯಿಬಿಟ್ಟು ಅಳತೊಡಗಿತು. ಹಾದರ, ಕಳವು, ಚಾಕು, ಚೂರಿ ಇತ್ಯಾದಿ ಹತ್ತು ಹಲವು ಹಲ್ಕಟ್ ದಂಧೆಗಳು ಪ್ರಾರಂಭವಾದುವು. ಕಾರ್ಮಿಕರು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಧೋಂಡೂ ತನ್ನ ಹಾಡಿನಿಂದ ಸತ್ಯಾಗ್ರಹಿಗಳ ಕ್ರಾಂತಿಯ ಭಾವನೆಗಳನ್ನು ಕೆರಳಿಸುತ್ತಿದ್ದ. ಮುಖಂಡರ ಭಾಷಣಗಳಿಗಿಂತ ಅವನ ಹಾಡುಗಾರಿಕೆ ಪ್ರಭಾವಪೂರ್ಣವಾಗಿರುತ್ತಿದ್ದುವು. ಆ ದಿನ ಬೆಳಗ್ಗಿನ ನಾಲ್ಕುಗಂಟೆಯ ವರೆಗೂ ಹಾಡಿ ದಣಿದ ಧೋಂಡೋ ಮನೆಯತ್ತ ಹೊರಟಿದ್ದ. ಅಧಿಕಾರಿಗಳ ವಿರುದ್ಧ ಈ ಕೆಚ್ಚಿನ ಹಾಡುಗಾರಿಕೆಯ ಪರಿಣಾಮದ ಬಗ್ಗೆ ಜನ ಭಯಭೀತರಾಗಿದ್ದರೂ ಧೋಂಡೂ ಹೆದರಿರಲಿಲ್ಲ. ಮಕ್ಕಳ ಜತೆಗೂಡಿ ನಿಧಾನವಾಗಿ ಮನೆಯ ದಾರಿ ತುಳಿಯುತ್ತಿದ್ದ. ಇದ್ದಕ್ಕಿದ್ದಂತೆ ಎದುರುಗಡೆಯಿಂದ ವೇಗವಾಗಿ ಬಂದ ಸೈಕಲ್ ಸವಾರನೊಬ್ಬ ಕೈಯಲ್ಲಿ ಥಳಥಳ ಹೊಳೆಯುವ ಚಾಕುವಿನಿಂದ ಧೋಂಡೂನ ಎದೆಗೆ ರಭಸದಿಂದ ಚುಚ್ಚಿ ಪರಾರಿಯಾದ. ಅರ್ಧಗಂಟೆಯ ಹಿಂದೆ ಸಹಸ್ರ ಸಹಸ್ರ ಜನರ ನಿದ್ದೆ ಹರಿಯುವಂತೆ ವೇದಿಕೆಯ ಮೇಲೆ ನಿಂತು ಡಪ್ಪು

ಬಾರಿಸುತ್ತ ಎತ್ತರದ ದನಿಯಲ್ಲಿ ಹಾಡುತ್ತಿದ್ದ ಧೋಂಡೂ ಧ್ವನಿ, ಉಸಿರುಗಳನ್ನು ಕಳೆದುಕೊಂಡು ಹೆಣವಾದ.(573) ಯಾವ ತಪ್ಪನ್ನೂ ಮಾಡದ ಯಾವುದೇ ಮೋಸ ವಂಚನೆಗಳನ್ನು ಅರಿಯದ, ಎಲ್ಲರನ್ನೂ ಪ್ರೀತಿಸುವ ಅಮಾಯಕ ವ್ಯಕ್ತಿಯೊಬ್ಬ ಶ್ರೀಮಂತರ, ಅಧಿಕಾರಿಗಳ ಪಟ್ಟಭದ್ರ ಹಿತಾಸಕ್ತಿಗಳ ಸ್ವಾರ್ಥಕ್ಕೆ ಜೀವ ಕಳೆದುಕೊಂಡ. '...ಕೆಟ್ಟಮಂದಿ ಚಾಕುಗೋಳಿಗಿ ಪೋಲಿಸರ ಬಂದೂಕಿನ ಗೋಲಿಗೋಳಿಗೆಲ್ಲ ಮ್ಯಾಲಿಂದ ಮ್ಯಾಲ, ಹಿಂತ ಪರಸಂಗದೊಳಗ ಬಲಿಯಾಗವ್ರು ಅಂದ್ರ ನಮ್ಮಂಥಾ ಬಡೂಮಂದಿನೇ ನಮ್ಮಂಥವರ ಗೋಳು ಯಾರು ಕೇಳ್ತಾರ ಬಿಡು, ನಮ್ಮಂದಿ ಕತಿನೇ ಇಟೂ..'(574) ಝೋಪಡಿಪಟ್ಟಿಯ ದ್ಯಾವವ್ವಳ ನೋವಿನ ಮಾತು ಬಡವರ ಬದುಕಿನ ವ್ಯಂಗ್ಯವನ್ನು ರಾಚುತ್ತವೆ.

**ಬಂದ್**

ಈ ಕತೆಯ ಮುಖ್ಯಪಾತ್ರ ಬಾಲಕ ಬೋಲೂರಾಮ್. ಶ್ರೀಮಂತ ತುಕಾರಾಮ ಜೋತಿಬಾ ಸೇಠುವಿನ ಮೋಟಾರು ಗ್ಯಾರೇಜಿನಲ್ಲಿ ಕೆಲಸ ಮಾಡುವ ಹುಡುಗ ಬೋಲೂ ಹನ್ನೊಂದು ವರ್ಷದ ಉತ್ತಮ ಸ್ವಭಾವದ ಬಾಲಕ. ಕಲ್ಬುರ್ಗಿ ಜಿಲ್ಲೆಯ ಅಳಂದ ತಾಲೂಕಿನ ಹೂವಳ್ಳಿಯ ಲಕ್ಕಪ್ಪ ಮತ್ತು ಮಲಕವ್ವರ ಮಗ. ಯಜಮಾನನ ಮಾನರಕ್ಷಣೆಗಾಗಿ ಅವನು ಮಾಡಿದ ಅಪರಾಧವನ್ನು ಹೊತ್ತುಕೊಂಡು ತಂದೆ ಜೈಲು ಸೇರಿದಾಗ ತಾಯಿ ಮಲಕವ್ವ ಮಾನರಕ್ಷಣೆಗಾಗಿ ಮಗನೊಂದಿಗೆ ಹಳ್ಳಿಬಿಟ್ಟಳು. ಕಲ್ಬುರ್ಗಿಯ ಝೋಪಡಿಪಟ್ಟಿಯಲ್ಲಿ ಬಾಡಿಗೆಮನೆ ಮಾಡಿ ಮನೆಕಟ್ಟುವ ಕೆಲಸಕ್ಕೆ ಹೋದವಳು ಅಭ್ಯಾಸವಿಲ್ಲದೆ ಮೆಟ್ಟಲಿನಿಂದ ಜಾರಿ ಸೊಂಟ ಮುರಿದುಕೊಂಡು ಮಲಗಿದಳು. ಅವಳಿಗೆ ಔಷಧಿಮಾಡಿಸಲು, ಹೊಟ್ಟೆ ತುಂಬಿಸಲು ಬಾಲಕ ಬೋಲೂ ಮೋಟಾರು ಗ್ಯಾರೇಜು ಸೇರಿದ.

ಭೋಲೂನ ಸೇಠೂ ತುಂಬ ಒಳ್ಳೆಯವ. ನೂರೈವತ್ತು ರೂಪಾಯಿ ಸಂಬಳ ಕೊಡುತ್ತಿದ್ದ. ಅದರಿಂದ ಮನೆ ಖರ್ಚು, ಬಾಡಿಗೆ ಎಲ್ಲವನ್ನೂ ನಿಭಾಯಿಸುತ್ತಿದ್ದ ಭೋಲೂ 'ನೀ ಏನೂ ಚಿಂತಿ ಮಾಡಬೇಡೇ ಯವ್ವಾ.. ನಾ ಗ್ಯಾರೆಜಿನಾಗ ಕೆಲ್ಸಾ ಮಾಡ್ಕೊತೇ ಡ್ರೈವಿಂಗ್ ಕಲೀತೀನಿ. ಜೀಪ. ಮೋಟರ ಓಡಿಸ್ತೀನಿ, ಭಾಳ ಪಗಾರ ಗಳಿಸ್ತೀನಿ, ನಿನಗ ದೊಡ್ಡ ಖಾಸಗಿ ಡಾಕ್ಟರ್ ಬಲ್ಲಿ ಒಯ್ದು ಆಪ್ರೇಸಿನ್ ಮಾಡಸ್ತೀನೆಂತ '(581) ಎಂದು ಅಮ್ಮನಿಗೆ ಧೈರ್ಯ ತುಂಬುವಾಗ ತಾಯಿ ಮಲಕವ್ವ ಮಗನನ್ನು ಎದೆಗವಚಿ ಗೋಳೋ ಎಂದು ಅಳುತ್ತಾಳೆ.

ಬೋಲೋ ಸಂಪಾದಿಸಿದ ಹಣವನ್ನೆಲ್ಲ ಅಮ್ಮನಿಗೆ ತಂದುಕೊಟ್ಟರೂ ಯಾರಾದರೂ ಸಾಹುಕಾರರು ಅವನ ನಿಷ್ಠೆ, ನಿಯತ್ತು, ಪ್ರಾಮಾಣಿಕತೆಗಳಿಗೆ ಮೆಚ್ಚಿ ಭಕ್ಷಿಸು, ಇನಾಮು ಎಂದು ಕೊಟ್ಟರೆ ಅದನ್ನು ಅಮ್ಮನ ಆಪರೇಷನಿಗಾಗಿ ಜೋಪಾನವಾಗಿ ಇಟ್ಟುಕೊಳ್ಳುತ್ತಿದ್ದ. ಮಗನ ಸ್ನೇಹ, ಪ್ರೀತಿಗಳು ಮಲಕವ್ವನ ಕರುಳಿಗೆ ಕತ್ತರಿಯಾಡಿಸುತ್ತಿದ್ದುವು.

ಒಂದು ಸಲ ಹಿಂದೂ ಮುಸ್ಲಿಂ ಗಲಭೆಯೆದ್ದು ಭೀಕರ ಮಾರಾಮಾರಿ, ಹೊಡೆತ, ಕಲ್ಲುತೂರಾಟಗಳು ನಡೆಯುತ್ತವೆ. ದರೋಡೆ, ಲೂಟಿ. ಬಸ್ಸು, ಬೈಕು, ಜೋಪಡಿಗಳಿಗೆ ಬೆಂಕಿ, ಚಾಕುಚೂರಿಗಳು ಬೀಳುತ್ತವೆ. ಅಶ್ರುವಾಯು, ಲಾಟೀಚಾರ್ಜುಗಳಿಂದ ವಾತಾವರಣ ಶಾಂತವಾಗದೆ ದಂಗೆ ಮುಂದುವರಿದಾಗ ಪೋಲಿಸರು ಗುಂಡಿನ ಮಳೆ ಕರೆದರು. ಜನರ ಹಾಹಾಕಾರ, ಗೋಳಾಟ ಮುಗಿಲು ಮುಟ್ಟಿತು.

ಕೆಲಸಕ್ಕೆಂದು ಹೋಗುವ ದಾರಿಯಲ್ಲಿ ಉರಿಯುತ್ತಿರುವ ಜೋಪಡಿಯೊಳಗೆ ಸಿಲುಕಿದ್ದ ತನ್ನ ಮಗುವಿಗಾಗಿ ಆಕ್ರಂದಿಸುವ ಮಹಿಳೆಯೊಬ್ಬಳನ್ನು ನೋಡಿದ ಭೋಲೂ ಅವಳ ನೆರವಿಗಾಗಿ ಜೀವದ ಹಂಗು ತೊರೆದು ಒಳಗೆ ಧಾವಿಸುತ್ತಾನೆ. ಮೈಕೈ ಸುಡಿಸಿಕೊಂಡು ಎಂಟುತಿಂಗಳ ಹಸುಗೂಸನ್ನು ಎತ್ತಿಕೊಂಡು ತಾಯಿಗೆ ಮಗುವನ್ನು ಒಪ್ಪಿಸುವ ಆತುರದಲ್ಲಿ ರಭಸದಿಂದ ಓಡಿಬರುತ್ತಿದ್ದಾಗ ಬಂದೂಕಿನಿಂದ ಸಿಡಿದ ಗುಂಡು ಅವನ ಬೆನ್ನನ್ನು ಸೀಳುತ್ತದೆ. ತಾಯಿಗೆ ಮಗುವನ್ನೊಪ್ಪಿಸಿದ ಮರುಕ್ಷಣವೇ ಭೋಲೂ ನೆಲಕ್ಕೆ ಕುಸಿಯುತ್ತಾನೆ. ತಾಯಿಯ ಶುಶ್ರೂಷೆಗಾಗಿ ಕಾಸಿಗೆ ಕಾಸು ಜೋಪಾನವಾಗಿಡುತ್ತಿದ್ದ ಭೋಲೂ ಅಸಹಾಯಕರ ರಕ್ಷಣೆಗೆ ಧಾವಿಸಿ ರಸ್ತೆಯಲ್ಲಿ ಗುಂಡಿಗೆ ಬಲಿಯಾಗಿ ಹೆಣವಾಗುತ್ತಾನೆ. ಯಾರದೋ ದ್ವೇಷಕ್ಕೆ, ಯಾರದೋ ಸೇಡಿಗೆ ಯಾರದೋ ಸಿಟ್ಟಿಗೆ ಮುಗ್ಧ, ಅಮಾಯಕ ಜನರ ಸಾವು, ನೋವು. ಗಂಡನೂ ಇಲ್ಲದೆ ಇದ್ದೊಬ್ಬ ಮಗನಲ್ಲೇ ಜೀವವಿಟ್ಟುಕೊಂಡಿದ್ದ ಮಲಕವ್ವನ ನೋವು, ನಷ್ಟಗಳಿಗೆ ಪರಿಹಾರವೆಲ್ಲಿದೆ? ಅವಳ ಒದ್ದಾಟ, ಕಣ್ಣೀರುಗಳಿಗೆ ತಾವೂ ಒಂದಷ್ಟು ಸೇರಿಸುತ್ತ ಝೋಪಡಿಗಳ ಜನರು ಸರಿದುಹೋಗುತ್ತಾರೆ.

**ಢಾಲು**

ಜನಗಳ ಮೂಢನಂಬಿಕೆಯನ್ನೇ ನಗದಾಗಿಸಿ ತನ್ನ ಮರ್ಯಾದೆಯನ್ನು ಕಾಪಾಡಿಕೊಂಡ ಒರ್ವ ಬುದ್ಧಿವಂತ, ಚಾಲಾಕಿ ಹೆಂಗಸಿನ ರೋಚಕ ಕತೆ ಇದು.

ಬಿಳಿ ಮೈಯ ಪರಮೇಸಪ್ಪನ ಮನಸ್ಸು ತುಂಬ ಕಪ್ಪೆಂಬ ವಿಚಾರ ಊರವರಿಗೆಲ್ಲ ಗೊತ್ತಾಗಿದ್ದರೂ ತನ್ನ ಗಂಡ ಕರ್ಯಾನಿಗೆ ಮಾತ್ರ ಅದು ಗೊತ್ತೇ ಇಲ್ವಲ್ಲ ಎಂಬುದು ಮಾದಿಗರ ಹೆಣ್ಣು ಮಾಗಿಯ ಸಂಕಟ. ಕರ್ಯಾನ ಮುತ್ತಾತನ ಕಾಲದಿಂದಲೂ ಗೌಡ ಪರಮೇಸಪ್ಪನ ಖಾಸಾ ಆಳಾಗಿ ದುಡಿದವರು ಅವರು. ಹುಣ್ಣಿಮೆಗೋ ಅಮಾವಾಸ್ಯೆಗೋ ಹಾಸುಗೆಗೆ ಬರುವ ಕಚ್ಚೆಹರುಕ ಗಂಡ ಪರಮೇಸಪ್ಪನ ಬದಲು ಹರೆಯ ತುಂಬಿದ ಗೌಡಿತಿಯ ಆಸೆ, ಬಯಕೆಗಳಿಗೆ ಕಾವು ಕೊಟ್ಟ ಆಳು ಮರೆಗ್ಯಾನನ್ನು ಹಿಂದುಮುಂದು ನೋಡದೆ ಒಂದೇ ಏಟಿಗೆ ಕತ್ತರಿಸಿದ ಗೌಡನ ಅಪರಾಧ ಕರ್ಯಾನ ಹೆಗಲಿಗೆ ಬೀಳುತ್ತದೆ. ಭವಿಷ್ಯದ ಬಗ್ಗೆ ಹೊಂಗನಸುಗಳನ್ನು ಕಾಣುತ್ತಿದ್ದ ಬಡಕುಟುಂಬದ ಬಣ್ಣದ ಕಸೂತಿಯನ್ನು ಕತ್ತರಿಸಿ ಚಿಂದಿ ಚಿಂದಿ ಮಾಡುತ್ತದೆ ವಿಧಿ. ಒಂದು ಕೋಳಿಯನ್ನು ಕತ್ತರಿಸಲೂ ಹೆದರುವ ಗಂಡ ಮನುಷ್ಯನನ್ನು ಕೊಲೆ ಮಾಡುವುದು ಸಾಧ್ಯವೇ ಇಲ್ಲವೆಂಬ ಸತ್ಯದ ಅರಿವಿದ್ದರೂ ಮಾಗಿ ಅಸಹಾಯಕಳು. ಆದರೆ ಗಂಡನನ್ನು ಕೊಲೆಗಾರನನ್ನಾಗಿ ಮಾಡಿದ್ದಲ್ಲದೆ ಆಮಿಷವೊಡ್ಡಿ ತನ್ನ ಮೇಲೂ ಅಧಿಕಾರವನ್ನು ಚಲಾಯಿಸಲು ಗೌಡ ಪ್ರಯತ್ನಿಸಿದಾಗ ತನ್ನನ್ನು ರಕ್ಷಿಸಲು ಮಾದಿ ಹೊಚ್ಚ ಹೊಸ ಉಪಾಯವನ್ನು ಮಾಡುತ್ತಾಳೆ. ತನ್ನ ಮೇಲೆ ದೇವಿ ಬರುವಂತೆ ನಟನೆಮಾಡಿ ಜನಗಳನ್ನು ನಂಬಿಸುತ್ತಾಳೆ. ಘಟನೆಗಳೂ ಮಾಗಿಯ ಪರವಾಗಿಯೇ ನಡೆಯುತ್ತವೆ. ಶಿಕ್ಷೆ ಮುಗಿಸಿ ಮನೆಗೆ ಬಂದ ಕರ್ಯಾ ರಾತ್ರಿಯ ಕತ್ತಲೆಯಲ್ಲಿ ಪತ್ನಿಯನ್ನು ತೋಳಿನಲ್ಲಿ ತುಂಬಿಕೊಳ್ಳುತ್ತ ಪ್ರಶ್ನಿಸುತ್ತಾನೆ: 'ಮರಗವ್ವ ದೇವತೆ ಸವಾರಿ ಬರ್ತದಂತಲ್ಲೇ ನಿನ್ನ ಮೈಯಾಗ? ಮುಡುಚಟ್ಟಾ ಮೈಲಿಗಿ ಆಗಬಾರ್ದಂತಲ್ಲ ನಿನಗ? ಈಗ ನಾ ಏನು ಮಾಡ್ಲೇ ಮಾಗಿ?' ಅದಕ್ಕೆ ಮಾಗಿ ಕೊಡುವ ಉತ್ತರ ಇದು: 'ಅದೆಲ್ಲ ಸುಳ್ಳಿನ ಗರ್ದಿಗಮ್ಮತ್ತದಾನೋ ಮಾರಾಯ.. ನೀ ಇರಲಾರದಾಗ ಈ ಹಳ್ಳ್ಯಾಗಿನ ಒಂದೀಸು ಗಂಡಸರು ನನಗ ಹಾಳ ಮಾಡ್ಲಿಕ್ಕಂತ ಕೋಶಿಸ ಮಾಡಿದ್ರು.......... ಈ ಗಂಡಸರ ಹಲ್ಕಟಗಿರಿ ಹುನ್ನಾರುಗೋಳು ಬರ್ಚಿ ಬೀಸಧ್ಹಾಂಗ ಬೀಸಿ ಬೀಸಿ ಬಂದು ಚುಚ್ಚಿ ಚುಚ್ಚಿ ಗಾಯ ಮಾಡ್ಲಿಕ್ಹತ್ತಿದ್ದು. ಆ ಬರ್ಚಿಗೋಳಲಿಂದ ಬಚಾವ ಆಗಲಕ್ಕಂತ ನಾ ಆ ದೇವತೆ ಮರಗವ್ವನ ಸವಾರಿದು ಢಾಲು ಹಿಡ್ಕೊಂಡು ನನ್ ಮರ್ವಾದಿ ಕಾಯ್ಕೊಂಡ ಬಂದೀನಿ ಇಲ್ಲೀ ತನಕಾ. ನೀ ಇರಲಾರದಾಗಿನ ನನ್ನ ದುಕ್ಕಾ ಎಲ್ಲಾ ನನಗೇ ಗೊತ್ತು '(599) ಕರ್ಯಾ ಕಾಳಜಿ, ಕಕ್ಕುಲತೆಯಿಂದ ಮಡದಿಯ ತಲೆ ಸವರಿ ಕಂಬನಿಯನ್ನು ಒರಸುತ್ತಾನೆ.

**ಚಿತ್ತಿ ಮತ್ತು ರಿಕ್ಷಾ**

ತನ್ನ ಧೈರ್ಯ, ಸಾಮರ್ಥ್ಯಗಳಿಂದ ಬದುಕಿನ ನೋವು, ಹತಾಶೆಗಳನ್ನು ಮೆಟ್ಟಿನಿಂತು ಯಶಸ್ಸಿನ ದಾರಿಯಲ್ಲಿ ಸಾಗಿದ ಓರ್ವ ಹೆಣ್ಣುಮಗಳ ಬೀಳು ಏಳುಗಳ ಮನಕಲಕುವ ಕಥೆ.

ಚೋಮನಗರದ ಝೋಪಡಪಟ್ಟಿಯ ಹರಕು ಮುರುಕು ಗುಡಿಸಲಿನಲ್ಲಿ ಹುಟ್ಟಿದ ಚಿತ್ತಿ ಎಳವೆಯಲ್ಲಿಯೇ ತಾಯಿಯನ್ನು ಕಳೆದುಕೊಂಡು ತಂದೆಯ ಪ್ರೀತಿಯೂ ಸಿಕ್ಕದೆ ಮಲತಾಯಿಯ ಚಿತ್ರಹಿಂಸೆಯಿಂದ ನೊಂದು ಊರುಬಿಟ್ಟು ಬಂದವಳು. ಕಳ್ಳತನ ಮಾಡಿ ಏಟು ತಿಂದು ಜೀವನ್ಮರಣಗಳಲ್ಲಿ ಒದ್ದಾಡುತ್ತಿದ್ದವಳಿಗೆ ಸೈಕಲ್ ರಿಕ್ಷಾ ಓಡಿಸುವ ಫಕೀರಪ್ಪನೆಂಬವನು ಆಪದ್ಬಂಧುವಾಗುತ್ತಾನೆ. ಚಿತ್ತಿಯನ್ನು ಮಗಳಂತೆ ಪ್ರೀತಿಸಿದ ಫಕೀರಪ್ಪ ಅಫಘಾತವೊಂದರಲ್ಲಿ ತೀರಿಹೋದಾಗ ಊರವರು ವಿರೋಧಿಸಿದರೂ ದುಗ್ಗವ್ವಾಯಿ ಎಂಬ ಅಜ್ಜಿಯೊಬ್ಬಳ ನೈತಿಕಬೆಂಬಲದಿಂದ ಚಿತ್ತಿ ಸೈಕಲ್ ರಿಕ್ಷಾ ಓಡಿಸುವ ವೃತ್ತಿಯಲ್ಲಿ ಪಳಗುತ್ತಾಳೆ. ಯೌವನಕ್ಕೆ ಕಾಲಿಟ್ಟಾಗ ಸಾಣೆ ಹಿಡಿದಿಟ್ಟ ಚಾಕುವಿನಂತೆ ಹರಿತವಾದ ಅವಳ ಧೈರ್ಯ ಮತ್ತು ಸ್ವಾಭಿಮಾನಗಳು ಯಾವ ಕಾಮಣ್ಣರನ್ನೂ ಹತ್ತಿರ ಬರಗೊಡಿಸುತ್ತಿರಲಿಲ್ಲ.

ಅಂಗಾಂಗಗಳಲ್ಲಿ ಯೌವನ ತುಂಬಿ ಹರಿಯುವಾಗ ಸೈಕಲ್ ರಿಕ್ಷಾ ಓಡಿಸುವ ಸೋಮು ಎಂಬ ಒಬ್ಬ ಹುಡುಗನ ಪರಿಚಯವಾಗುತ್ತದೆ. ರಸ್ತೆಯಲ್ಲಿ ಇಬ್ಬರ ರಿಕ್ಷಾಗಳು ಡಿಕ್ಕಿ ಹೊಡೆದು ಒಬ್ಬರಿಗೊಬ್ಬರು ಗುರುತಾಗಿ ಪರಿಚಯ ಸ್ನೇಹವಾಗಿ ಮದುವೆಯಾಗಲು ನಿರ್ಧರಿಸುತ್ತಾರೆ. ವಿವಾಹೋತ್ತರ ಬದುಕಿನ ಬಗ್ಗೆ ಸಮಾಲೋಚನೆ ಮಾಡಿ 'ಸುಖಶಾಂತಿ' ಹೊಟೆಲ ಬಳಿಯ ಸೈಕಲ್ ಸ್ಟೇಂಡಿನಲ್ಲಿ ಮರುದಿನ ಭೇಟಿಯಾಗುವುದಾಗಿ ಮಾತುಕೊಟ್ಟು ಬೀಳ್ಕೊಡುತ್ತಾರೆ. ಪೂರ್ವದಿಕ್ಕಿನ ಹೊಟ್ಟೆ ಸೀಳುತ್ತ ಸೂರ್ಯ ನೆತ್ತರಿನ ಮಡುವಿನಿಂದ ಮೇಲೇರಿ ಬರುತ್ತಿರುವಾಗಲೇ ಚಿತ್ತಿಯ ಗುಡಿಸಲ ಬಾಗಿಲಲ್ಲಿ ಧಬಧಬನೆ ಸದ್ದು. ಬಾಗಿಲು ತೆರೆದರೆ ರಿಕ್ಷಾವಾಲಾ ಬಾಬುಮಿಂಯಾ 'ನಿನ್ನೆ ರಾತರಿ ಸೋಮೂನ ರಿಕ್ಷಾ ಲಾರಿಗೆ ಟಕ್ಕರ್ ಆಗಿ ಅಂವಾ ಅಲ್ಲೇ ಸತ್ತು ಬಿದ್ದ' ಎನ್ನುತ್ತಾನೆ.

ಮೂರುದಿನಗಳ ನಂತರ ಝೋಪಡಿಯಿಂದ ಹೊರಗೆ ಬಂದ ಚಿಕ್ಕಿ ಒಡಲಾಳದ ದುಃಖವನ್ನು ಬಚ್ಚಿಟ್ಟುಕೊಂಡು ತನ್ನ ಕಾಯಕವನ್ನು

ಮುಂದುವರಿಸುತ್ತಾಳೆ. ಈ ಕತೆ ಗೀತಾರವರ 'ಕಪ್ಪುನೆಲ–ಕೆಂಪು ಹೂವು' ಕಾದಂಬರಿಯಲ್ಲಿ ವಿಸ್ತಾರವಾಗಿ ಬಂದಿದೆ.

**ಅಂತ**

ಗಂಡಿನ ದೋಷ, ದೌರ್ಬಲ್ಯ, ಮೋಸ, ವಂಚನೆಗಳಿಗೆ ಪ್ರತೀಕಾರ ತೀರಿಸಿದ ಹೆಣ್ಣೊಬ್ಬಳ ಸಾಹಸ ಕತೆ. ಕತೆಗಾರರೇ ಹೇಳಿದಂತೆ ಇದು ಗಂಡಿನ ಶೋಷಣೆಗೆ ಹೆಣ್ಣು ಹೂಡಿದ ಬಂಡಾಯ.

ಬೆಸ್ತರ ಚಂದಪ್ಪ ಮತ್ತು ಸಂಗವ್ವರ ಮಗಳು ಸಾತಿ ಚಿಕ್ಕಂದಿನಿಂದಲೇ ಧೀರೆ. ಧಾಬಾದಲ್ಲಿ ರೊಟ್ಟಿ ಮಾಡುವ ಕೆಲಸಕ್ಕೆ ಹೋಗುತ್ತಿದ್ದವಳನ್ನು ಸಿದ್ರಾಮನೆಂಬ ಬಣಜಿಗರ ಯುವಕ ಇಷ್ಟಪಡುತ್ತಾನೆ. ಸಾತಿಯೂ ಮನೆಯವರ ವಿರುದ್ಧವಾಗಿ ಅವನನ್ನು ಮದುವೆಯಾಗುತ್ತಾಳೆ. ಅನ್ಯಜಾತಿಯ ಹುಡುಗನನ್ನು ಮದುವೆಯಾದಳೆಂದು ಹೆತ್ತವರು ಅವಳನ್ನು ದೂರಮಾಡುತ್ತಾರೆ. ಗಂಡನಲ್ಲೇ ಪ್ರಾಣವಿಟ್ಟ ಸಾತಿ ನಿರ್ಯೋಚನೆಯಿಂದ ಅವನ ಜತೆ ಸಂಸಾರ ಮಾಡುತ್ತಾಳೆ. ಆರು ತಿಂಗಳು ಕಳೆಯುತ್ತದೆ. ಸಿದ್ರಾಮನ ಮನೆಯವರು ಅವನನ್ನು ಸಾತಿಯಿಂದ ಬಿಡಿಸುವ ಹುನ್ನಾರ ಮಾಡುತ್ತಾರೆ. ಮುಗ್ಧ ಹೆಣ್ಣು ಸಾತಿಗೆ ಗಂಡ ಮತ್ತು ಅವನ ಮನೆಯವರ ಮಧ್ಯೆ ತಾನು ಅಡ್ಡ ಬರಬಾರದು ಎಂಬ ಸದ್ಬುದ್ಧಿ. ಆದರೆ ಅವರ ಬಲೆಗೆ ಬಿದ್ದ ಸಿದ್ರಾಜನೂ ಹೆಂಡತಿಯನ್ನು ವಂಚಿಸುತ್ತಾನೆ. ಇತ್ತೀಚೆಗೆ ಗಂಡನ ಪ್ರೀತಿ ಕಡಿಮೆಯಾಗುತ್ತಿರುವ ಅನುಭವವಾಗುತ್ತಿದ್ದರೂ 'ಮದಿ ಆದ ಮೇಲೆ ಬಿಡಾಕಂತೂ ಬರಾಣಿಲ್ಲ. ಆಗಿಷ್ಟು ಈಗಿಷ್ಟು ಕೆಟ್ಟಲ್ಲಿ ರಿಪೇರಿ ಮಾಡ್ಕೋತಾ ಅಲ್ಲಿಷ್ಟು ಇಲ್ಲಿಷ್ಟು ಹರಿದಲ್ಲಿ ತೇಪೆ ಹಾಕ್ಕೋತಾ ದಿನ ಕಳೀಬೇಕು ಅಂತ ಸಾತಿ ಗಟ್ಟಿ ಧೈರ್ಯಮಾಡಿ ಬದುಕು ಚಲಾಯಿಸುತ್ತಿದ್ದಳು.' (625) ಆದರೆ ಒಂದುದಿನ ಅಕ್ಕನ ಮಗಳು ಬಸಮ್ಮಳ ಜತೆ ಎರಡನೆಯ ಮದುವೆಗೆ ಅಭ್ಯಂತರವಿಲ್ಲವೆಂದು ಸಹಿ ಹಾಕಲು ತಿಳಿಸಿ ಸಿದ್ರಾಮನಿಂದ ಪತ್ರ ಬರುತ್ತದೆ. ಅನಕ್ಷರಸ್ಥಳಾದರೂ ಬುದ್ಧಿವಂತೆಯಾದ ಸಾತಿ ಅವನಿಲ್ಲದ ವೇಳೆ ಬೇರೆಯವರಿಂದ ಪತ್ರವನ್ನು ಓದಿಸಿ ವಿಷಯವನ್ನು ಗ್ರಹಿಸುತ್ತಾಳೆ. 'ಹೊಟ್ಟೀಗಿ ಬಟ್ಟೀಗಿ ಕಮ್ಮಿ ಮಾಡ್ದರ ನಾ ತಾಳ್ಕೋತೀನೋ ಸಿದ್ರಾಮಾ.. ಆದರ ನನ ಮ್ಯಾಲಿನ ಪಿರೀತಿ ಕಮ್ಮಿ ಆದ್ರ ನಾ ಎಂದೂ ತಾಳ್ಕೋ ಮಂಗಿಲ್ಲ..' (627) ಎನ್ನುವ ಸಾತಿಯ ಮಾತು ತುಂಬ ಅರ್ಥಗರ್ಭಿತವಾಗಿದೆ.

ಊರ ಜಾತ್ರೆಗೆಂದು ಅಮ್ಮ ಮತ್ತು ಬಸಮ್ಮಳನ್ನು ಕರೆಸಿಕೊಂಡ ಸಿದ್ರಾಜ ಸಾತಿಯನ್ನು ಹೊರಕೆಲಸಕ್ಕೆ ನೇಮಿಸುತ್ತಾನೆ. ಮನೆಯ ಜವಾಬ್ದಾರಿಯೆಲ್ಲ ಬಸಮ್ಮಳ ಪಾಲಾಗುತ್ತದೆ. ಗಂಡ ತನ್ನ ಕೈಬಿಟ್ಟು ಹೋಗಿದ್ದಾನೆಂಬುದು ನಿಚ್ಚಳವಾಗಿ ಬಹಳ ಹೊತ್ತು ಚಿಂತೆಯ ಮಡುವಿನಲ್ಲಿ ಮುಳುಗಿದ್ದ ಸಾತಿ ಕೊನೆಗೆ ಬದುಕಿದರೂ ಒಟ್ಟಿಗೆ ಸತ್ತರೂ ಒಟ್ಟಿಗೆ ಎಂದು ಗಂಡನಾಡಿದ ಮಾತನ್ನೇ ನಿಜ ಮಾಡಲು ತೀರ್ಮಾನಿಸುತ್ತಾಳೆ. ಇಬ್ಬರೇ ಇದ್ದಾಗ ಗಂಡನೊಂದಿಗೆ ಪ್ರೀತಿಯ ನಟನೆ ಮಾಡುತ್ತ ರಾತ್ರಿಯ ಎರಡು ಗಂಟೆಯಲ್ಲಿ ಮನೆಗೆ ಬೀಗಹಾಕಿ ಮೈಮೇಲೆ ಸೀಮೆಎಣ್ಣೆ ಸುರಿದು ಬೆಂಕಿಹಚ್ಚುತ್ತಾಳೆ. ಧಗಧಗನೆ ಉರಿಯುವ ಬೆಂಕಿಯಲ್ಲಿ ಇಬ್ಬರ ದೇಹವೂ ಸುಟ್ಟು ಕರಿಕಲಾಗುತ್ತದೆ. ಮರುದಿನ ಪರಸ್ಪರ ತಬ್ಬಿಕೊಂಡು ಉರಿದು ಬೂದಿಯಾದ ದೇಹವನ್ನು ನೋಡಿದ ಪೋಲಿಸರು ಆತ್ಮಹತ್ಯೆಯೆಂದು ಬರೆದರೂ ಊರವರು ಊಹೆಯ ಬೆನ್ನುಹತ್ತಿ ಸತ್ಯವನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ.

**ಅತಿಕ್ರಮಣ**

ಸೋಮಾರಿ ಗಂಡನ ಅಸಲೀ ಬುದ್ಧಿಯನ್ನು ಬಯಲಿಗೆಳೆದು ಬದುಕು ಕಟ್ಟಿಕೊಂಡ ಹೆಂಗಸರ ಕಥೆ 'ಅತಿಕ್ರಮಣ'. ಇದು ಸಂಕಲನದ ಕೊನೆಯ ಕಥೆ.

ಕಲ್ಲಳ್ಳಿಯ ಯಮನಪ್ಪ ಶುದ್ಧ ಸೊಂಬೇರಿ. ಹೆತ್ತವರು ಕಾಲೆರಾದಿಂದ ಸತ್ತಾಗ ಒಂಟಿಯಾಗಿದ್ದವನಿಗೆ ಭಜಿಮಾಡುವ ಮುದುಕಿ ಸಾಬವ್ವ ಮೊಮ್ಮಗಳಾದ ಶಾಣಮ್ಮನನ್ನು ಕೊಟ್ಟು ಮದುವೆಮಾಡಿಸುತ್ತಾಳೆ. ಶಾಣಮ್ಮ ಜಾಣೆ, ಶ್ರಮಜೀವಿ. ಒಂದು ದಮಡಿಯ ಕೆಲಸವನ್ನೂ ಮಾಡದ ಮೈಗಳ್ಳ ಯಮನಪ್ಪನಿಗೆ ಹೆಂಗಸರ ಖಯಾಲಿ ಬೇರೆ. ಮದುವೆಯಾಗಿ ಮೂರು ವರ್ಷವಾಗಿಯೂ ಮಕ್ಕಳಿಲ್ಲವೆಂಬ ಕೊರಗಿನಲ್ಲಿದ್ದ ಶಾಣಮ್ಮನಿಗೆ ಗಂಡ ಕಮಲಿ ಎಂಬ ವಿವಾಹಿತ ಹೆಂಗಸಿನ ಸಹವಾಸ ಮಾಡುತ್ತಿರುವ ವಿಚಾರ ಗೊತ್ತಾಗುತ್ತದೆ. ಪಂಚಾಯಿತಿ ನಡೆದು ಕಮಲಿಯ ಗಂಡ ರಾಮಪ್ಪ ಇಬ್ಬರನ್ನೂ ದನಕ್ಕೆ ಬಡಿಯುವಂತೆ ಬಡಿದರೂ ಕಮಲಿ ಯಮನಪ್ಪನನ್ನು ಬಿಡುವುದಿಲ್ಲವೆಂದು ಹಟಹಿಡಿದಾಗ ಶಾಣಮ್ಮ ಉದಾರ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾಳೆ. ಒಂದೇ ವರ್ಷದಲ್ಲಿ ಇಬ್ಬರಿಗೂ ಗಂಡುಮಕ್ಕಳಾಗುತ್ತವೆ. ಸಂಸಾರ ಬೆಳೆದರೂ ಯಮನಪ್ಪನಿಗೆ ಜವಾಬ್ದಾರಿ ಬರುವುದಿಲ್ಲ. ಇಬ್ಬರು ಹೆಂಗಸರಿಗೂ ಅವರವರ ರಟ್ಟೆಗಳೇ 'ಗಂಡ'ನಾಗಿದ್ದುವು.

ಎದೆಯೊಳಗೆ ನೂರೆಂಟು ನೋವು, ದುಃಖಗಳು ಕಟ್ಟಿಗೆ ಹುಳುವಿನಂತೆ ಕೊರೆಯುತ್ತಿದ್ದರೂ ಶಾಣಮ್ಮ ಗಂಡನಿಗೂ ದುಡಿದು ಹಾಕುತ್ತಿದ್ದಳು.

ಒಮ್ಮೆ ಊರು ಬಿಟ್ಟು ಹೋದ ಯಮನಪ್ಪ ತಿಂಗಳಾದರೂ ಮನೆಗೆ ಬರುವುದಿಲ್ಲ. ಆ ವರ್ಷ ಊರಿನ ಅಂಬಾಬಾಯಿ ಗುಡಿಯಲ್ಲಿ ಒಂಬತ್ತು ದಿನಗಳ ಜಾತ್ರೆ ನಡೆಯುವ ಸಮಯದಲ್ಲಿ ದೇವಿಯ ಗುಡಿಮುಂದೆ ಕೊರಳಲ್ಲಿ ಕವಡೆಸರ, ನೆತ್ತಿಮೇಲೆ ಪರಡಿ ಹೊತ್ತುಕೊಂಡು ಕುಣಿಯುವ ಜೋಗವ್ವಗಳ ಮಧ್ಯೆ ಒಬ್ಬ ಗಂಡು ಜೋಗತಿಯೂ ಇದ್ದ. ಕುಣಿದು ಸುಸ್ತಾಗಿ ಕೆಳಗೆ ಬಿದ್ದ ಜೋಗತಿಯರನ್ನು ಆರೈಕೆ ಮಾಡಲು ಬಂದವರಿಗೆ ಆ ಗಂಡು ಯಮನಪ್ಪನೆಂದು ಪತ್ತೆಯಾಗುತ್ತದೆ. ಎಲ್ಲರೂ ಚಕಿತರಾಗುತ್ತಾರೆ. ವಿಚಾರಿಸಿದಾಗ ದೇವಿ ಕನಸಿನಲ್ಲಿ ಬಂದು ಜೋಗತಿಯಾಗಲು ಅಪ್ಪಣೆ ಕೊಡಿಸಿದಳೆಂದೂ ಈಗ ತಾನು ಖೊಜ್ಜಾ ಆಗಿದ್ದೇನೆಂದೂ ಹೇಳಿ ಜನಗಳನ್ನು ನಂಬಿಸುತ್ತಾನೆ ಆದರೆ ಶಾಣ್ಯಾ ಮತ್ತು ಕಮಲಿಯರಿಗೆ ಇದು ಜೋಗತಿಯರ ಸಹವಾಸ ಮತ್ತು ಬಿಟ್ಟಿ ಕೂಳಿಗಾಗಿ ಆತ ಕಟ್ಟಿಕೊಂಡ ವೇಷವೆಂಬುದು ಗೊತ್ತಾಗುತ್ತದೆ. ಇಬ್ಬರೂ ಅವನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಆದರೆ ಊರ ಗೌಡ ಮತ್ತು ಪೂಜಾರಿ ಯಮನಪ್ಪನ ಪರ ವಕಾಲತ್ತು ಮಾಡಿ ಶಾಣ್ಯಾಳನ್ನು ಹೀನಾಯವಾಗಿ ಭಂಗಿಸುತ್ತಾರೆ. ಯಮನಪ್ಪ ಮತ್ತೊಮ್ಮೆ ತನ್ನ ಮೇಲೆ ದೇವಿ ಬಂದಂತೆ ಕಣ್ಣಗುಡ್ಡಗಳನ್ನು ಮೇಲೂ ಕೆಳಗೂ ಮಾಡುತ್ತ ಮೈ ತೂಗಲಾರಂಭಿಸುತ್ತಾನೆ. ಶಾಣ್ಯಾ ಗೌಡರನ್ನು ಕುರಿತು 'ಇಂವಾ ಬೇಕಂತೇ ಹಿಜಡ್ಯಾ ಆಗಿ ನಾಟಕ ಮಾಡ್ಲಕತ್ತಾನ. ಇವನ ಬಾಯಿಲಿಂದೇ ಈ ಮಾತ ಒಪಗೋ ಅಂತ ಹೇಳ್ರೀ ಇಲ್ಲಂದ್ರ ಇಂವಾ ತನ್ನ ಗಂಡಸ್ತನ ಕಳ್ಕೊಂಡಿದ್ದು ಖರೇನೇ ಅದಾ ಅಂಬೋದು ಕಲಬುರ್ಗಿ ದವಾಖಾನ್ಯಾಗಿನ ಡಾಕಟರಗೋಳು ತಪಾಸ ಮಾಡಿ ನೋಡಿ ತೀರ್ಮಾನ ಕುಡ್ಲಿ.. ಈ ಮಾತ ಖರೇನೇ ಇದ್ರ ಆ ದೇವಿ ಆಂಬಾಬಾಯಿಂದ ಸತ್ಯಾದ ಮೈಮಾ ಅಂತ ನಾನು ಒಪ್ಕೊಂಡು ಮಾಫಿ ಕೇಳ್ತೀವಿ. ಇಲ್ಲಂದ್ರ ಈ ನಮ್ ಗಂಡಂಬಾ..... ಯಮನ್ಯಾಗ ಮೆಟ್ಟಲಿಂದ ಹೊಡ್ದು ಮನೀಗಿ ಎಳ್ಕೊಂಡು ಒಯ್ತೀವಿ..'(647) ಎನ್ನುತ್ತಾಳೆ. ಯಮನಪ್ಪನ ಮೈಯ ತೂಗಾಟ ತಟಕ್ಕನೆ ನಿಂತು ಅವನು ಪೂಜಾರಿಯ ಕಾಲುಗಳನ್ನು ತಬ್ಬಿಕೊಳ್ಳುತ್ತಾನೆ. ಗೌಡ ಮತ್ತು ಪೂಜಾರಿ ತಬ್ಬಿಬ್ಬಾಗುತ್ತಾರೆ. ಕಮಲಿ ಗಂಡನ ಮುಖ ತಿವಿದು 'ಇಂದಿನಿಂದ ನೀ ನಮ್ ಗಂಡನೇ ಅಲ್ಲ. 'ಹಿಜಡ್ಯಾ' ನೀನು. ನಮಗೆ ಇನ್ನ ಈ ಗಂಡಸರೇ ಬ್ಯಾಡ. ನಾವಿಬ್ಬರೂ ಹೆಂಗಸರೇ ಕೂಡಿ ಬದಕ್ತೀವಿ. ಸತ್ಯಾದ ಬದುಕು ಬಾಳ್ತೀವಿ.

ನಿನ್ನಂಗ ಸುಳ್ಳ ಬಾಳ್ಯಾ ಭಾಳಂಗಿಲ್ಲಂತ ತಿಳ್ಕೊ.. ಥೂ.. ನಿನ್ನ.. ನಿನ್ ಬಾಳಿಗೀಟು ಬೆಂಕಿ ಹಾಕಲೀ.. (648) ಅಂತಂದು ಅವನ ಕೊರಳ ಕವಡೇಸರ ಕಿತ್ತೆಸೆದು ಮಕ್ಕಳನ್ನೂ ಶಾಣಮ್ಮನನ್ನೂ ಎಳೆದುಕೊಂಡು ಹೋಗುತ್ತಾಳೆ.

'ಕ್ಯಾದಿಗಿ ಬನದಾಗ ಕತೆಯಾಗಿ ನಿಂತ'ವರ ವ್ಯಥೆಯ ಕತೆಗಳನ್ನು ಓದಿ ಮುಗಿಸಿದಾಗ ಲೇಖಕಿ ಗೀತಾರ ಅನುಭವಲೋಕದ ಶ್ರೀಮಂತಿಕೆ, ಅದರ ವಿರಾಟ್ ದರ್ಶನ ಅಚ್ಚರಿ ಹುಟ್ಟಿಸುತ್ತದೆ. ಎಷ್ಟೊಂದು ಬಗೆಯ ಪಾತ್ರಗಳು! ಎಷ್ಟೊಂದು ಬಗೆಯ ಕಥೆಗಳು! ಎಂಥ ಅದ್ಭುತ ವರ್ಣನೆಗಳು! ವಿವಿಧ ವೃತ್ತಿ, ಕಸುಬುಗಳನ್ನು ಮಾಡುವ ಝೋಪಡಿಪಟ್ಟಿಯ ಜನರ ಬದುಕಿನ ನೋವು ನಲಿವುಗಳನ್ನು ಅವರದೇ ಭಾಷೆಯ ಮೂಲಕ ಕಟ್ಟಿಕೊಡುವಲ್ಲಿ ಇಲ್ಲಿನ ಬಹುತೇಕ ಕತೆಗಳು ಸಫಲವಾಗಿವೆ. ಊಳಿಗಮಾನ್ಯ ಪದ್ಧತಿಯು ಜಾರಿಯಲ್ಲಿರುವ ಕಾಲಮಾನದಲ್ಲಿ ರೂಢಿಗತವಾಗಿರುವ ಜಮೀನ್ದಾರರ ಭೋಗದ ಪರಾಕಾಷ್ಠೆಯನ್ನೂ ಕ್ರೌರ್ಯದ ಅತಿರೇಕವನ್ನೂ ಬಯಲಿಗೆಳೆಯುವ ಈ ಕತೆಗಳಲ್ಲಿ ದಲಿತ ಸಂವೇದನೆಯ, ಸ್ತ್ರೀಪರ ಕಾಳಜಿಯ ಭಾವಸೆಲೆಗಳು ಅಂತರ್ವಾಹಿನಿಯಾಗಿ ಹರಿದು ಓದುಗರ ಮನಸ್ಸನ್ನು ಆರ್ದ್ರಗೊಳಿಸುತ್ತವೆ. ಕಾರಿರುಳ ಕತ್ತಲೆಯಲ್ಲಿ ಕಳೆದುಹೋಗುತ್ತಿರುವ ಕೊಳಗೇರಿಯ ದುರಂತ ಗಾಥೆಯನ್ನಲ್ಲದೆ ಪ್ರಕೃತಿ ವಿಕೋಪ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳು, ಬರಗಾಲ, ಬಡತನ, ಬಂಜೆತನ, ಭೂಕಂಪ, ಅತ್ಯಾಚಾರ, ಅನ್ಯಾಯ, ಕೊಲೆ, ದಬ್ಬಾಳಿಕೆ, ದೌರ್ಜನ್ಯ, ಹಿಂಸೆ, ಹಾದರ, ಕಳ್ಳತನ, ಸುಳ್ಳು, ಇತ್ಯಾದಿ ಎಲ್ಲಾ ಅನುಭವಗಳನ್ನು ಯಾವುದೇ ಅತಿಶಯೋಕ್ತಿ ಇಲ್ಲದಂತೆ ಚಿತ್ರಿಸಿದ್ದಾರೆ; ಉತ್ತರವಿಲ್ಲದ ಅನೇಕ ಪ್ರಶ್ನೆಗಳ ಭೂತಗಳನ್ನೂ ಎಬ್ಬಿಸಿದ್ದಾರೆ.

ಜಮೀನ್ದಾರರ ಹೊಲದಲ್ಲಿ, ಮನೆಯಲ್ಲಿ ಜೀತಮಾಡುವ ಝೋಪಡಿಪಟ್ಟಿಗಳಲ್ಲಿ ವಾಸಿಸುವ ವಿದ್ಯೆ, ವಿವೇಕವಿಲ್ಲದೆ ತಮ್ಮ ಮುಗ್ಧತೆ, ಮೂರ್ಖತನಗಳಿಂದ ಜರ್ಜರಿತರಾಗುವ ಅಮಾಯಕರ ಮಧ್ಯೆಯೇ ಬುದ್ಧಿ, ಸಾಮರ್ಥ್ಯಗಳುಳ್ಳ ಜೀವನಮೌಲ್ಯವನ್ನು ಅರಿತ ಗಟ್ಟಿಪಾತ್ರಗಳನ್ನೂ ಲೇಖಕಿ ಗುರುತಿಸಿದ್ದಾರೆ. ಚುನಾವಣೆಯ ಕಣಕ್ಕಿಳಿಯಬಲ್ಲ, ರಿಕ್ಷಾ ಓಡಿಸಬಲ್ಲ, ಗಂಡಂದಿರ ವಿರುದ್ಧ ಬಂಡಾಯಹೂಡಬಲ್ಲ, ಅವನ ಸೋಮಾರಿತನದ ಮುಖವಾಡವನ್ನು ಕಳಚಬಲ್ಲ, ಮಾಲೀಕನಿಗೆ ಚಳ್ಳೆ ಹಣ್ಣು ತಿನ್ನಿಸಬಲ್ಲ, ಅನ್ಯಾಯ ಮಾಡಿದವನನ್ನು ಪೋಲಿಸರಿಗೆ ಒಪ್ಪಿಸಬಲ್ಲ, ಯಜಮಾನ, ಗಂಡನಿಗೆ ಸೆಡ್ಡು ಹೊಡೆದು ಸ್ವತಂತ್ರವಾಗಿ ಬದುಕಬಲ್ಲ, ಗಂಡನನ್ನು ಬಿಟ್ಟು ಪ್ರೀತಿಸಿದವನನ್ನು ಸೇರಬಲ್ಲ,

ಅಗತ್ಯವಾದರೆ ಚಂಡಿ ಚಾಮುಂಡಿಗಳಾಗಬಲ್ಲ ಸಮರ್ಥೆಯರು ಇಲ್ಲಿದ್ದಾರೆ. ಅನ್ಯರ ನೋವಿಗೆ ಸ್ಪಂದಿಸಿಬಲ್ಲ, ಸವತಿಯಲ್ಲೂ ಮಮತೆ ತೋರಬಲ್ಲ ಹೃದಯವಂತರಿದ್ದಾರೆ. ಇನ್ನೊಬ್ಬರ ಪ್ರಾಣರಕ್ಷಣೆಗೆ ತಮ್ಮ ಪ್ರಾಣವನ್ನು ಬಲಿಕೊಟ್ಟ ತ್ಯಾಗಿಗಳಿದ್ದಾರೆ. ಮಗಳು ಯಾವನ ಜತೆಗೋ ಓಡಿಹೋದಳೆಂದು, ಮಾಲೀಕನಿಂದ ಅತ್ಯಾಚಾರವಾಯ್ತೆಂದು ಆತ್ಮಹತ್ಯೆ ಮಾಡುವ ಅಬಲೆಯರೂ ಇದ್ದಾರೆ. ದೇವರ ಮೊರೆಹೊಕ್ಕು ಮಾನರಕ್ಷಣೆ ಮಾಡುವ ಜಾಣೆಯರೂ ಇದ್ದಾರೆ. ಕಲ್ಲು, ಮುಳ್ಳುಗಳ ಹಾದಿಯಲ್ಲಿ ಹೆಜ್ಜೆಯಿಟ್ಟು ನಡೆಯುವ ಇವರಲ್ಲಿ ಮೋಸ, ಧಗೆ, ಸುಳ್ಳು, ದುಷ್ಟತನಗಳಿಲ್ಲ. ತಮ್ಮ ಒಳ್ಳೆಯತನಕ್ಕೂ ಶಿಕ್ಷೆ ಅನುಭವಿಸುವ ಇವರ ಬದುಕಿನ ನಿರೀಕ್ಷೆಗಳು ಅತ್ಯಲ್ಪ. ತಿನ್ನಲು ಹೊಟ್ಟೆತುಂಬ ಅನ್ನ, ಕುಡಿಯಲು ಸೇಂದಿ, ಪ್ರೀತಿಗೆ ಗಂಡ, ವಾತ್ಸಲ್ಯಕ್ಕೆ ಮಗು ಇಷ್ಟು ಸಿಕ್ಕಿದರೆ ಸ್ವರ್ಗಸುಖ. ಅಷ್ಟೂ ಅಲಭ್ಯವಾದ ಸಂಕಟ, ದುಃಖ.

ಈ ಜನರ ಜೀವನವ್ಯಾಖ್ಯೆ, ನೀತಿಸಂಹಿತೆ ವಿಚಿತ್ರವಾಗಿದೆ. ಒಂದೇ ಸಮಾಜದಲ್ಲಿ ಬದುಕುತ್ತಿದ್ದರೂ ಹಾದರ, ಕಳ್ಳತನಗಳಿಗೆ ವಿಶೇಷವಾದ ಸ್ಥಾನವನ್ನು ಕೊಡದವರೂ ಇದ್ದಾರೆ. ಹಾಗೆಯೇ ಮಾನ ಮರ್ಯಾದೆಯೆಂದು ಪ್ರಾಣವನ್ನು ತ್ಯಜಿಸುವವರೂ ಇದ್ದಾರೆ. ಕಳ್ಳಸಂಬಂಧವನ್ನು ಬೆಳೆಸಿ ಬಾಡಿಗೆ ತಂದೆ ಇಲ್ಲ ತಾಯಿಯಾಗುವವರೂ ಇದ್ದಾರೆ. ತನ್ನ ತೀಟೆ ತೀರಿಸಲು ಅಥವಾ ಪೌರುಷವನ್ನು ಪ್ರತಿಷ್ಠಾಪಿಸಲು ಹೆಂಗಸರನ್ನು ಬಳಸುವ ಯಜಮಾನನ ಉಪಭೋಗಕ್ಕೆ ಮನೆಯ ಚಾಕರಿಗೆ ಕಳುಹಿಸುವಷ್ಟು ಸಲೀಸಾಗಿ ತಮ್ಮ ಹೆಂಡತಿಯನ್ನು ಕಳುಹಿಸುವ ಜೀತದಾಳುಗಳೂ ಇದ್ದಾರೆ. ಕತೆಗಳಲ್ಲಿ ಪುನರಾವರ್ತನೆಯಾಗುವ ಹೊಲ ಮತ್ತು ಬೀಜದ ರೂಪಕ ವಿಶಿಷ್ಟವಾಗಿದೆ. ಭೂಮಿಯ ಒಡೆತನದಂತೆ ಆಳುಗಳ ಮೇಲೆ ಒಡೆತನವನ್ನು ಸ್ಥಾಪಿಸಿ ಒತ್ತೆಯಿಟ್ಟ ಹೆಣ್ಣನ್ನು ತನಗಿಷ್ಟಬಂದಂತೆ ಬಳಸುವ ಹಕ್ಕು ತನಗಿದೆಯೆಂದು ತೀರ್ಮಾನಿಸುವ, ಆಕೆಯನ್ನು ತಾನು ಉಳುವ ಹೊಲಗದ್ದೆಗಳಿಗೆ, ಸಾಕುವ ನಾಯಿ, ಜಾನುವಾರುಗಳಿಗೆ ಸಮಾನವೆಂದು ತರ್ಕಿಸುವ ಮಾಲೀಕ ವರ್ಗವೂ ಅದಕ್ಕೆ ಅಸ್ತು ಎಂದು ತಲೆಬಾಗಿ ಪೌರುಷಹೀನರಾಗಿ ಬದುಕುವ ಅಮಾಯಕ ಆಳು ವರ್ಗವೂ ಇಲ್ಲಿನ ಕಥಾ ಹಂದಿರದೊಳಗೆ ಪ್ರವೇಶ ಪಡೆಯುತ್ತಾರೆ.

ಗ್ರಾಮೀಣ ಜಗತ್ತಿನ ಎಲ್ಲ ಅನುಭವಗಳೂ ಇಲ್ಲಿವೆ. ನಡೆನುಡಿ, ಶ್ಲೀಲಾಶ್ಲೀಲ ಎಲ್ಲವೂ ಸಹಜವಾಗಿ, ದಟ್ಟವಾಗಿ ಚಿತ್ರಿತವಾಗಿವೆ. ಕಾಮ, ಕುಡಿತ, ಹಸಿವು ಇವು ಮೂರೂ ದಲಿತ ಬದುಕಿನ ಅವಿಭಾಜ್ಯ ಅಂಗಗಳು ಎನ್ನುವ

ಲೇಖಕಿ ಅವುಗಳನ್ನು ಅತಿ ಎನಿಸುವಷ್ಟು ವರ್ಣಿಸುತ್ತಾರೆ. ತಾಜಾ ಸೇಂದಿ, ಬಗೆಬಗೆಯ ಪಾಕರುಚಿ, ಸಂಭೋಗಶೃಂಗಾರಗಳ ವೈಭವಗಳಿಂದ ವಿಜೃಂಬಿಸುವ ಇಲ್ಲಿನ ಕತೆಗಳಲ್ಲಿ ಲೈಂಗಿಕಕ್ರಿಯೆಗಳಂತೂ ಮುಜುಗರವಾಗುವಷ್ಟು ಹಸಿಹಸಿಯಾಗಿ ನಿರೂಪಿತವಾಗಿವೆ. ಈ ಜನರಿಗೆ ಇಂದ್ರಿಯ–ಲೋಲುಪತೆಯೊಂದೇ ಬದುಕಿನ ಪ್ರಧಾನ ಆಕರ್ಷಣೆ, ಸುಖದ ಕೇಂದ್ರವೆಂಬುದನ್ನು ನಿರೂಪಿಸುವುದೇ ಕತೆಗಳ ಪ್ರಧಾನ ಆಶಯವೆನಿಸುತ್ತದೆ.

ಕೆಲವು ಕಥೆಗಳಲ್ಲಿ ಸರಪಣಿಯಂತೆ ಪೂರಕವೂ ಸಮಾನವೂ ಆದ ಅನೇಕ ಭಿತ್ತಿಚಿತ್ರಗಳಿದ್ದು ಓದಲು ಆರಂಭಿಸುವಾಗಲೇ ಇದು ಹೀಗೇ ಅಂತ್ಯವಾಗುತ್ತದೆ ಎಂದು ಸುಲಭದಲ್ಲಿ ಊಹಿಸಬಹುದು. ಬಹಳಷ್ಟು ಪಾತ್ರಗಳ ಸ್ವರೂಪ, ಸ್ವಭಾವ, ಉಡುಗೆ, ತೊಡುಗೆಗಳಲ್ಲಿ ಏಕರೂಪತೆ, ಪುನರಾವರ್ತನೆಗಳು ಕಾಣಿಸುತ್ತವೆ. ಪುರುಷ ಪಾತ್ರಗಳು ಕರ‍್ರಗೆ ಮಿರಿಮಿರಿ ಮಿಂಚುವ ಕಗ್ಗಲ್ಲಿನಂತಿದ್ದರೆ ಹೆಣ್ಣು ಪಾತ್ರಗಳು ಭಾಂಗಡಿಯಂತೆ ಬೆಳ್ಳಗೆ ಬೆಳಗುವ, ಚೆಲುವು ಸುರಿಯುವ ಅಪ್ರತಿಮ ಸೌಂದರ್ಯವತಿಯರೇ. ಗುಣ, ರೂಪ, ಅಂಗಾಂಗಗಳಲ್ಲಿ ಯಾವುದೇ ಅರೆಕೊರೆಯಿಲ್ಲದ ಏಕರೂಪದ ಈ ಸೌಂದರ್ಯವತಿಯರ ಅತಿಯಾದ ಸೌಂದರ್ಯದ ಒತ್ತಿನಲ್ಲೇ ಅಪಾಯದ ಗುಳಿಯೂ ಇರುತ್ತದೆನ್ನುವುದು ಗಮನಾರ್ಹ.

ಕ್ಯಾದಿಗಿ ಬನದಲ್ಲಿ ಬದುಕುವ ಮಂದಿಯ ಬಡತನದ ವರ್ಣನೆಯೂ ಮನಸ್ಸಿಗೆ ಗಾಢವಾಗಿ ತಟ್ಟುತ್ತದೆ; 'ಕತ್ತಲೆ ಸತ್ತು ಬೆಳಗಾಯಿತು. ಲವಂಗಿ ಎದ್ದವಳೇ ಮಾರಿ ತೊಳ್ಕೊಂಡು ಕಸ ಹೊಡೆದಳು. ರಾತ್ರಿ ಉಂಡು ಖಾಲಿಮಾಡಿದ್ದ ಸಿಲಾವರಿನ ನೆಗ್ಗಿದ ಎರಡು ಬಗೋಣಿ, ಒಂದು ಗಿಂಡಿ, ತುಟಿ ಹರಕು ತಂಬಿಗೆ ಮತ್ತು ಎರಡು ನೆಗ್ಗಿ ಸೊಟ್ಟಗಾಗಿದ್ದ ತಾಟುಗಳನ್ನು ಬೂದಿ ಹಚ್ಚಿ ತಿಕ್ಕಿ ತೊಳೆದಳು.' ಈ ಮಂದಿ ಶೌಚಾಲಯವಿಲ್ಲದ ಗಟ್ಟಿಯಾದ ಗೋಡೆ ಬಾಗಿಲುಗಳಿಲ್ಲದ ಗುಡಿಸಲಲ್ಲಿ ಕುಳಿತು ಅಂಚು ಹರಿದ ಸಿಲ್ವಾರದ ಗಂಗಾಳದಲ್ಲಿ ಮುರುಕು ರೊಟ್ಟಿ ತಿನ್ನುತ್ತ, ನೆಗ್ಗಿದ ಬಗೋಣಿಯಲ್ಲಿ ಸೇಂದಿ ಕುಡಿಯುತ್ತ, ಆಕಾಶಕ್ಕೆ ಮುಖವಿಟ್ಟು ಬೀಡಿ ಎಳೆಯುತ್ತ ವರ್ತಮಾನದಲ್ಲಿ ಬದುಕುತ್ತಾರೆ. ಭವಿಷ್ಯದ ಬದುಕಿನಲ್ಲಿ ಭದ್ರತೆಯಿಲ್ಲದೆ ನರಳುತ್ತಾರೆ.

ಇಲ್ಲಿನ ಕತೆಗಳು ಕತ್ತಲೆಯ ಲೋಕದ ಶೋಷಿತ ಜನರ ಬದುಕಿನ ನೋವಿನ ಎಳೆಗಳನ್ನು ಬಿಡಿಸುತ್ತಲೇ ಅನೇಕ ಕ್ರಾಂತಿಕಾರೀ ನಿಲುವಿನ ಮೂಲಕ

ಅವರನ್ನು ಬೆಳಕಿನ ಲೋಕಕ್ಕೆ ಕೊಂಡೊಯ್ಯುವ ಪ್ರಯತ್ನವನ್ನೂ ಮಾಡುತ್ತವೆ. 'ಬೆಳಕಿನಡೆಗೆ'ಯ ಭವಾನಿ, 'ಗರ್ಭದ ಚಿಕ್ಕಿ', 'ಅಗ್ಗಿಯ ಸಾತಿ', 'ಜ್ವಲಂತ'ದ ಸೀನಿಂಗಿ, 'ಅತಿಕ್ರಮಣ'ದ ಶಾಣಮ್ಮ, ಥಾಲುವಿನ ಮಾಗಿಶೋಷಣೆಯ ಬೆಂಕಿಯ ಕುಲುಮೆಯಿಂದ ಆತ್ಮಶಕ್ತಿಯ ದ್ಯೋತಕವಾಗಿ ಚಿಮ್ಮಿದ ಇಂಥ ಜಾಗೃತ ಮನಸ್ಸುಗಳನ್ನು ಸೃಷ್ಟಿಸಿ ಗೀತಾರವರು ಸುಧಾರಿತ ಜಗತ್ತಿನ ಬಾಗಿಲನ್ನು ತೆರೆಯುತ್ತಾರೆ. ಹಳೆಯ ಮೂಢನಂಬಿಕೆ, ಕಂದಾಚಾರಗಳಿಂದ ಹೊರಬಂದು ನಾಗರಿಕ ಜಗತ್ತಿಗೆ ಸ್ಪಂದಿಸಲು ಕರೆ ನೀಡುತ್ತಾರೆ. 'ವಾಸ್ತವ' ಸೈಕಲ್ ರಿಕ್ಷಾದಿಂದ ಆಟೋ ಕಡೆಗೆ ಸಾಗುವ ನಗರೀಕರಣದ ಚಿತ್ರಣವನ್ನು ನೀಡಿದರೆ 'ಶಿವನೊಂದೆ ಹೊಲಗೇರಿ ಶಿವಾಲಯಕ್ಕೆ' ಎನ್ನುವ ಕತೆ ಅಂತರ್ಜಾತೀಯ ವಿವಾಹದ ಮೂಲಕ ಸುಧಾರಿತ ಜೀವನ ಮೌಲ್ಯವನ್ನು ಬಿಂಬಿಸುತ್ತದೆ. 'ಪುಂಡಿ ಪೂಜಾರಿಯಾದಾಗ' ಎನ್ನುವ ಕಥೆ ಕಾಲ್ಪನಿಕವಾದರೂ ಕ್ರಾಂತಿಕಾರೀ ನಿಲುವಿನ ಸಾಮಾಜಿಕ ಸುಧಾರಣೆಯನ್ನು ಸಾರುವ ಮೈಲಿಗಲ್ಲು. 'ಸಂಗಾತಿ'ಯ ಗೌಡಿತಿ ಚೆಂಬಸವ್ವ ಮುಪ್ಪಿನಲ್ಲಿ ಆಳು ಚಂದ್ರಾಮನನ್ನು ಮದುವೆಯಾಗಬಯಸುವ ವಿಚಾರ ಮಾನವಸ್ವಭಾವದ ಶೋಧನೆಯಾಗಿದ್ದು ಸಾಮಾಜಿಕ ನೆಲೆಯಲ್ಲಿ ಇತ್ಯಾತ್ಮಕವಾಗುವ ಆಶಯವನ್ನು ವ್ಯಕ್ತಪಡಿಸುತ್ತದೆ. 'ಮಾನಾಪಮಾನ ನಿಮ್ಮದಯ್ಯ' ಎನ್ನುವುದೂ ಇನ್ನೊಂದು ಬಗೆಯ ವಿಶಿಷ್ಟ ಕತೆ. ಮಠದ ಬಾವಿಯಿಂದ ನೀರು ತಂದರೆಂದು ಕೊಲೆಮಾಡುವ, ತಾನು ಮಾಡಿದ ಕೊಲೆಯನ್ನು ಆಳಿನ ತಲೆಗೆ ಕಟ್ಟಿ ಜೈಲಿಗೆ ತಳ್ಳುವ, ಸಾಲಕ್ಕಾಗಿ ಆಳಿನ ಪತ್ನಿಯನ್ನು ಒತ್ತೆಯಿಟ್ಟು ಅನುಭವಿಸುವ ಸಂದರ್ಭದಲ್ಲೇ ಮಠದಯ್ಯಗಳ ಅನಾಚಾರ, ಕಳ್ಳವ್ಯವಹಾರಗಳನ್ನು ಬಯಲಿಗೆಳೆಯುವ ಕಥೆಗಳೂ ಇಲ್ಲಿ ತೆರೆದುಕೊಳ್ಳುತ್ತವೆ. ಪ್ರತಿಭಟನೆ, ವಿಚಾರಜಾಗೃತಿಯನ್ನೊಳಗೊಂಡ ಕಥೆಗಳೂ ಇಲ್ಲಿವೆ. ಸಾಕುನಾಯಿಯಂತಿದ್ದ ಆಳು ಪ್ರತೀಕಾರವಾಗಿ ಯಜಮಾನನನ್ನೇ ಸಾವಿನ ದವಡೆಗೆ ದೂಡುವ, ತನ್ನ ಹೆಂಡತಿಯನ್ನು ಅನುಭವಿಸಿದ್ದಕ್ಕೆ ನಿನ್ನ ಹೆಂಡತಿಯನ್ನೂ ಅನುಭವಿಸುತ್ತೇನೆನ್ನುವ ಧೈರ್ಯ ಎಚ್ಚೆತ್ತ ದಲಿತಪ್ರಜ್ಞೆಗೆ ದ್ಯೋತಕ.

ಯಜಮಾನ ವರ್ಗದ, ಬಂಡವಾಳ ಶಾಹಿಗಳ ಪುರುಷರ ವಿರುದ್ಧ ಕತ್ತಿ ಮಸೆಯುತ್ತ ಕಥೆಗಳನ್ನು ಬರೆದ ಗೀತಾರವರು ಸದಾ ಶೋಷಿತರ ಪರವಾಗಿಯೇ ಚಿಂತಿಸುತ್ತಾರೆ. ಆದ್ದರಿಂದ ಅವರು ಸ್ತ್ರೀವಾದೀಯ ನೆಲೆಯಲ್ಲಿ ಮಾತ್ರ ತಮ್ಮ ಬರಹವನ್ನು ಕೇಂದ್ರೀಕೃತಗೊಳಿಸಲಿಲ್ಲ. ಪುರುಷರು ಅನುಭವಿಸುವ ಶೋಷಣೆ

ಮತ್ತು ಅವರ ಒಳ್ಳೆಯತನದ ಬಗ್ಗೆಯೂ ಗೀತಾರವರು ಸಹಾನುಭೂತಿಯಿಂದ ಯೋಚಿಸಬಲ್ಲರು. ಆದ್ದರಿಂದ ಅವರ ಕತೆಗಳಲ್ಲಿ ಪ್ರಭು, ಶಾಣ್ಯಾ, ಸಲೀಂಮಿಯಾ, ಮಲ್ಲೇಶಿ, ಫಕೀರಪ್ಪ, ಬೋಲೂರಾಮ್, ಬೆಳ್ಳ್ಯಾ, ಬಾಳ್ಯಾ, ಮರ್ರ್ಯಾನಂಥ ಉತ್ತಮ ಗುಣನಡತೆಯ ಪುರುಷರೂ ಇದ್ದಾರೆ. ಫತರೂ ಮತ್ತು ಖಾಸಿಮನಂಥ ಕುಟುಂಬಸ್ನೇಹಿಗಳೂ ಇದ್ದಾರೆ. ಹೆಂಡತಿಯ ಹಾದರವನ್ನು ಮಾನವೀಯವಾಗಿ ನೋಡಿ ಕ್ಷಮಿಸುವ ಅಪ್ಪಾರಾಯನಂಥವರೂ ಇದ್ದಾರೆ.

ಗೀತಾರವರು ತಮ್ಮ ಕಥಾಮಾಲಿಕೆಯಲ್ಲಿ ಸಾಂಪ್ರದಾಯಿಕ ನೆಲೆಯಲ್ಲಿ ದಾಂಪತ್ಯದ ಅರ್ಥವಂತಿಕೆಯನ್ನು ಯೋಚಿಸುವ ಕಥೆಗಳನ್ನೂ ಹೆಣೆದಿದ್ದಾರೆ. ಇಲ್ಲಿಯ ಹೆಣ್ಣುಮಕ್ಕಳು ಮೇಲುವರ್ಗದ ಹೆಣ್ಣುಮಕ್ಕಳಿಗಿಲ್ಲದ ಸುಖ, ಸ್ವಾತಂತ್ರ್ಯಗಳನ್ನು ಅನುಭವಿಸುತ್ತಾರೆ. ಊಟ, ಕೂಟಗಳಲ್ಲಿ ಪತಿಪತ್ನಿಯರೊಳಗಿನ ಸಾಮರಸ್ಯ, ಅವರ ಪಿಸು ಪಿಸು ಮಾತುಗಳು, ಗುಸುಗುಸು ನಗು, ಸುಖದ ನರಳುವಿಕೆ ಇಡೀ ಗುಡಿಸಲಲ್ಲಿ ಗಿರಕಿ ಹೊಡೆಯುತ್ತವೆ. ಕೌಟುಂಬಿಕ ಪ್ರೀತಿ, ಮಮತೆ, ನೆರೆಕರೆಯವರ ಸ್ನೇಹ ಸಹಕಾರ, ಮಾನವೀಯ ಸೆಲೆಗಳ ಚಿತ್ರಣದ ಮೂಲಕ ಉತ್ತಮ ಕೌಟುಂಬಿಕ ವಾತಾವರಣವನ್ನೂ ಲೇಖಕಿ ದರ್ಶಿಸುತ್ತಾರೆ.

ಇಲ್ಲಿನ ಕತೆಗಳಲ್ಲಿ ಅನೇಕ ಕತೆಗಳಿಗೆ ಕಾದಂಬರಿಯ ವ್ಯಾಪ್ತಿ ಇದೆ. ಹಾಗಿರುವುದರಿಂದಲೇ 'ಗರ್ಭ', 'ಚಿಕ್ಕಿ ಮತ್ತು ರಿಕ್ಷಾ', 'ಗೂಡಿನೊಳಗಿನ ಗುಟ್ಟು' ಮುಂತಾದ ಕಥೆಗಳು ಕಾದಂಬರಿಗಳಾಗಿಯೂ ಮುಂದುವರಿದಿದೆಯೆನ್ನುವುದನ್ನು ಗಮನಿಸಬಹುದು.

## ತಾವರೆಯ ಹೂ

1968ರಲ್ಲಿ ರಚಿತವಾದ 'ತಾವರೆಯ ಹೂ' ಗೀತಾ ನಾಗಭೂಷಣರ ಚೊಚ್ಚಿಲು ಕಾದಂಬರಿ. ಪತಿತೆಯಾಗಬಹುದಾದ ಹೆಣ್ಣನ್ನು ಪತಿವ್ರತೆಯಾಗಿಸುವುದೇ ಇದರ ವಸ್ತು. ಕೆಸರಿನಲ್ಲಿ ಹುಟ್ಟಿದರೂ ತಾವರೆ ದೇವರ ಪೂಜೆಗೆ ಸಲ್ಲುವಂತೆ ವೇಶ್ಯಾಕುಲದಲ್ಲಿ ಹುಟ್ಟಿದ ಈ ಕಾದಂಬರಿಯ ನಾಯಿಕೆ ಚಾರುಮತಿಗೆ ಗೃಹಸ್ಥೆಯಾಗಿ ಬದುಕುವಾಸೆ. ಆದರೆ ಕುಲವೃತ್ತಿಯನ್ನು ನೆಚ್ಚಿದ ಅವಳ ತಾಯಿಗೆ ಮನೆತನದ ಮರ್ಯಾದೆ ವೇಶ್ಯೆಯಾಗುವುದರಲ್ಲಿದೆ ಎಂಬ ನಂಬಿಕೆ. ಚಿಕ್ಕಂದಿನಿಂದಲೇ ನೆರೆಮನೆಯ ಪಂಡಿತರೊಬ್ಬರ ಮಡಿಲ ಮಗುವಾಗಿ ಬೆಳೆದ ಚಾರುಮತಿ ದೊಡ್ಡವಳಾದಂತೆ ಪುರಾಣ ಪುಣ್ಯಕಥೆಗಳ ಸಾವಿತ್ರಿ, ಸೀತೆಯರಂತೆ ಬದುಕಬೇಕೆನ್ನುವ ಕನಸುಗಾತಿಯಾಗುತ್ತಾಳೆ. ಅವಳ ಮನಸ್ಸಿನ ಆಸೆ, ಹಂಬಲಗಳಿಗೆ ನೀರೆರದು ಪೋಷಿಸಿದ ಪಂಡಿತರು ಚಾರುಮತಿ ಪ್ರಾಯಪ್ರಬುದ್ಧಳಾದ ಸಮಯದಲ್ಲೇ ತೀರಿಹೋಗುತ್ತಾರೆ. ತಾಯಿಯ ಮನವೊಲಿಸಲಾಗದ ಚಾರುಮತಿ ಗೆಜ್ಜೆಪೂಜೆಯ ದಿನವೇ ಮನೆಬಿಟ್ಟು ಹೋಗುತ್ತಾಳೆ. ಆಕಸ್ಮಿಕವಾಗಿ ಭೇಟಿಯಾದ ಮಧುಸೂದನನೆಂಬ ಕಲಾವಿದನೊಬ್ಬನ ಚಿತ್ರಕ್ಕೆ ರೂಪದರ್ಶಿಯಾಗುತ್ತ ಆತನನ್ನೇ ಮನಸಾರೆ ಪ್ರೀತಿಸುತ್ತಾಳೆ. ಅವಳ ಇಮ್ಮಡಿ ಪ್ರಾಯವಿರುವ ಆತ ಅವಳನ್ನು ಯಾವುದೇ ಕಾರಣಕ್ಕೂ ಮದುವೆಯಾಗಲು ಸಿದ್ಧನಿರುವುದಿಲ್ಲ. ಆದರೆ ಚಾರುಮತಿ ಸಾಯಲು ನಿರ್ಧರಿಸಿದಾಗ ಮಧುಸೂದನ ಅವಳಿಗೆ ಬಾಳುಕೊಡಲು ಮುಂದಾಗುತ್ತಾನೆ.

ಇಲ್ಲಿ ಇತರ ಕತೆ, ಕಾದಂಬರಿಗಳಂತೆ ಕಾಮದ ಹುಚ್ಚುಹೊಳೆಯಿಲ್ಲ. ಸ್ನಿಗ್ಧ ಮಧುರವಾಗಿ ಮೈಮನವನ್ನು ತಣಿಸುವ ಅಪ್ಪಟವಾದ ಪ್ರೇಮದ ಸಿಂಚನವಿದೆ. ಚಿತ್ರಕಲೆಗೆ ಸಂಬಂಧಿಸಿದ ಜಿಜ್ಞಾಸೆ ಕೂಡ ಕಾದಂಬರಿಕಾರ್ತಿಯ ಅರಿವು, ಆಸಕ್ತಿಗಳಿಗೆ ನಿದರ್ಶನ. ಮಧುಸೂದನನ ಪಾತ್ರಪರಿಕಲ್ಪನೆ ಸುಂದರವಾಗಿದೆ. ವರ್ಣನೆ ಚೇತೋಹಾರಿಯಾಗಿದೆ. ಚಾರುಮತಿಯನ್ನು ವರ್ಣಿಸುತ್ತ 'ಬೆಳದಿಂಗಳನ್ನೇ ಕಾಯಿಸಿ, ಸೋಸಿ, ಅಟ್ಟಿಸಿ ಅದರಲ್ಲಿ ಗುಲಾಬಿಯ ಹೊಳಪನ್ನೂ ಕೇದಿಗೆ ಹೊಡೆಯ ಹಳದಿಯನ್ನೂ ಬೆರೆಸಿ ನುರಿತ ಶಿಲ್ಪಿಯೊಬ್ಬನು ಅತ್ಯಂತ ಚಾತುರ್ಯದಿಂದ ಕೆತ್ತಿದ ಚಿತ್ರದಂತೆ'(46) ಎನ್ನುವುದು ತುಂಬ ಆಕರ್ಷಕವಾಗಿದೆ.

ಪಂಡಿತರ ಪಾತ್ರಚಿತ್ರಣ ಸ್ವಲ್ಪ ಶಿಥಿಲವಾಗಿದೆಯೆನಿಸುತ್ತದೆ. ಪಂಡಿತರನ್ನು ಏಕಕಾಲದಲ್ಲಿ ಏಕವಚನದಲ್ಲೂ ಬಹುವಚನದಲ್ಲೂ ಸಂಬೋಧಿಸುವುದು, ಗ್ಯಾಸ್, ಇಲೆಕ್ಟ್ರಿಕ್ ಅಡುಗೆ ಉಪಕರಣಗಳಿರುವ ಮನೆಯಲ್ಲಿ ಮುಖಕ್ಕೆ ಮಸಿಯಾಗುವುದು, ಮಧುಸೂದನನ ತಾಯಿಯ ಸೀರೆ ರವಿಕೆಗಳು ಚಾರುಮತಿಗೆ ಸರಿಹೊಂದುವುದು–ಇತ್ಯಾದಿ ಒಂದಿಷ್ಟು ಮರೆವು ಕಾಣಿಸಿದರೂ ಕಾದಂಬರಿ ಒಂದು ಅರ್ಥಪೂರ್ಣವಾದ ಜೀವನಸಂದೇಶವನ್ನು ಬಿಂಬಿಸಿದೆ.

**ಮಹಾಮನೆ**

1970ರಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಬರೆದ ಕಾದಂಬರಿ 'ಮಹಾಮನೆ'. ಇದರ ವಸ್ತು ದ್ವಿತೀಯ ಬಸವೇಶ್ವರರೆನಿಸಿದ ಪುರಾಣಪ್ರಸಿದ್ಧ ಶರಣಬಸವೇಶ್ವರರನ್ನು ಕುರಿತಾಗಿದೆ. ಮಲಕಪ್ಪ ಮತ್ತು ಸಂಗಮ್ಮರ ಗರ್ಭಸಂಜಾತರೂ ಆದಯ್ಯ ಮತ್ತು ಮಡಿಯಮ್ಮರ ಪೋಷಿತ ಸುಪುತ್ರರೂ ಆದ ಶರಣಬಸವೇಶ್ವರರು ಬಾಲ್ಯದಿಂದಲೇ ಸರ್ವಜೀವರಾಶಿಗಳಲ್ಲಿ ಪ್ರೀತಿ, ಅನುಕಂಪೆಯನ್ನು ತುಂಬಿಕೊಂಡಿದ್ದವರು. ಹೊಲದಲ್ಲಿ ಬೆಳೆದ ಕಾಳನ್ನು ತಿಂದುಹೋಗುವ ಮೃಗಪಕ್ಷಿಗಳಿಗೆಂದು ನೀರಿನ ರಂಜಣಿಗೆಗಳನ್ನು ಮಾಡಿ ನೀರು ತುಂಬಿಸಿಡುತ್ತಿದ್ದ ಪರಮ ದಯಾಳು. ಸನಾತನ ಭಾರತೀಯ ಸಂಸ್ಕೃತಿ ಮಾನ್ಯಮಾಡಿದ ಕೌಟುಂಬಿಕ ಜೀವನ, ದಾಂಪತ್ಯ, ಸಂತಾನಫಲ, ಬಡತನ ನಿರ್ಮೂಲನ, ಅಶಕ್ತರಿಗೆ ನೆರವು ಇವುಗಳನ್ನು ಉನ್ನತವಾದ ಮೌಲ್ಯಗಳೆಂದು ಕಲ್ಪಿಸಿ ಹೆತ್ತವರ ಗುರುಗಳ ಅಭೀಪ್ಸೆಯಂತೆ ಪರಮ ಸಾಧ್ವಿಯಾದ ಮಹಾದೇವಿಯೆಂಬ ಮಡದಿಯೊಂದಿಗೆ ಅನುರೂಪ ದಾಂಪತ್ಯವನ್ನು ಅನುಭವಿಸಿದವರು. ಜೀವನದುದ್ದಕ್ಕೂ ಸದಾಚಾರ, ಸನ್ನಡತೆ, ಜ್ಞಾನೋಪದೇಶಗಳನ್ನು ಮಾಡುತ್ತ ಸಾತ್ವಿಕತೆಯ ಸಾಕಾರಸ್ವರೂಪಿಗಳಾಗಿದ್ದವರು.

1746ರಲ್ಲಿ ಅವತರಿಸಿದ ಶರಣ ಬಸವೇಶ್ವರರು ಪವಾಡಪುರುಷರೆಂದು ಪ್ರಸಿದ್ಧರಾದವರು. ಕಳ್ಳರು ಸನ್ಮಾರ್ಗಿಗಳಾಗುವುದು, ಸಾಹುಕಾರ ಭಕ್ತನಾಗುವುದು, ಕುರುಡನಿಗೆ ಕಣ್ಣು ಬರುವುದು, ಬಂಜೆಯರಿಗೆ ಸಂತಾನಭಾಗ್ಯ, ಕಾಯಿಲೆ ಪೀಡಿತರಿಗೆ ಆರೋಗ್ಯಭಾಗ್ಯ ಇತ್ಯಾದಿ ಅವರ ಅನೇಕ ಪವಾಡಸದೃಶ ಚಟುವಟಿಕೆಗಳನ್ನು ನಿರೂಪಿಸಿದರೂ ಈ ಕಾದಂಬರಿಯ ಮುಖ್ಯ ಉದ್ದೇಶ ಶರಣಬಸವೇಶ್ವರರ ಸಾಮಾಜಿಕ ಸೇವಾಕಾರ್ಯಗಳನ್ನು ಅನುಲಕ್ಷಿಸುವುದೇ ಆಗಿದೆ.

ಗುರುಲಿಂಗಜಂಗಮನೆಂಬ ಮಗುವನ್ನು ಪಡೆದು ಚಿಕ್ಕ ವಯಸ್ಸಿನಲ್ಲೇ ಮಹಾದೇವಿ ಶಿವನ ಪಾದ ಸೇರಿದಾಗ ಸಂಪೂರ್ಣ ವೈರಾಗ್ಯವನ್ನು ತಾಳಿ ಸಮಾಜಸೇವೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡ ಶರಣಬಸವೇಶ್ವರರು 1822ರಲ್ಲಿ ಲಿಂಗೈಕ್ಯರಾದರು.

ವೈಚಾರಿಕ ನಿಲುವು, ಸ್ಥಾಪಿತ ಮೌಲ್ಯಗಳ ಪ್ರತಿರೋಧ ಯಾವುದೂ ಇಲ್ಲದ ಕಾದಂಬರಿ ಇದು. ವ್ಯವಸ್ಥೆಯ ಜತೆಯಲ್ಲಿ ರಾಜಿಮಾಡಿಕೊಂಡು ಆರ್ಷೇಯ ನಡವಳಿಕೆಗಳಿಗೆ ತಲೆಬಾಗುವ ಧಾರ್ಮಿಕ ಭಕ್ತಿಶ್ರದ್ಧೆಗಳು ಇದರಲ್ಲಿ ಸುವ್ಯಕ್ತವಾಗುತ್ತವೆ. ಕಾದಂಬರಿಯಲ್ಲಿ ಅಭಿವ್ಯಕ್ತವಾಗುವ ಬರವಣಿಗೆಯ ಕೌಶಲ, ನಿರೂಪಣೆಯ ಸೊಗಸುಗಾರಿಕೆ, ವರ್ಣನೆಯ ವೈಭವ, ಉನ್ನತ ಪಾತ್ರ ಪರಿಕಲ್ಪನೆಗಳು ಸಹೃದಯ ಮನಸ್ಸನ್ನು ಸೂರೆಗೊಳ್ಳುತ್ತವೆ.

## ಸಪ್ತವರ್ಣದ ಸ್ವಪ್ನ

ಜಾತೀಯತೆಯ ವಿಷವರ್ತುಲದಲ್ಲಿ ಸಿಲುಕಿ ಭೇದಭಾವದ ಬೆಂಕಿಯಲ್ಲಿ ಬೆಂದ ಸ್ವಾಭಿಮಾನಿ ಹೆಣ್ಣುಮಗಳೊಬ್ಬಳು ತನ್ನ ನೋವು, ಸಂಕಟ, ಅಸಹನೆ, ಆಕ್ರೋಷಗಳಿಗೆ ಹೇಗೆ ಪ್ರತಿಕ್ರಿಯಿಸಿದಳೆಂಬುದನ್ನು ಮಾರ್ಮಿಕವಾಗಿ ನಿರೂಪಿಸುವ ರೋಮಾಂಚಕ ಕಾದಂಬರಿ ಇದು.

ಕಲ್ಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ ಸುಖಸಮೃದ್ಧವಾಗಿರುವ ಶಿವಳ್ಳಿಗೆ ಪೋಲೀಸ್ ಆಗಿ ಬಂದ ಚಂದ್ರಾಮನೆಂಬ ಯುವಕ ಹಳ್ಳಿಯ ಹುಡುಗಿ ಬೆಂಕಿಯಂಥ ಚೌಡಿಯ ಮೋಹಜಾಲದಲ್ಲಿ ಸಿಲುಕಿ ಅವಳ ತಪ್ಪುಗಳೆಲ್ಲವನ್ನೂ ಕ್ಷಮಿಸಿ ಅವಳನ್ನು ಮದುವೆಯಾದ ಕತೆ ಈ ಕಾದಂಬರಿಯ ವಸ್ತು.

ಸೇಂದಿಬನಗಳಿಂದ ಸುತ್ತುವರಿದಿರುವ ಹೊಳೆಗೆ ಸಮೀಪದ ಜಾಗದಲ್ಲಿ ವಾಸಿಸುವ ಕೆಳಗೇರಿಯ ತಳವಾರ ಬೈಲಪ್ಪ ಮೇಗೇರಿಯ ಗೌಡ ಗುಲ್ಲಿಂಗಪ್ಪನ ಖಾಸಾ ಆಳು. ಇವರು ತಾತ ಮುತ್ತಾತನ ಕಾಲದಿಂದಲೂ ಗೌಡನ ಮನೆತನದ ಸೇವಕರು. ಗುಲ್ಲಿಂಗಪ್ಪನಿಗೂ ಆಳು ಬೈಲಪ್ಪನಿಗೂ ಒಂದೇ ಸಮಯದಲ್ಲಿ ವಿವಾಹವಾಗುತ್ತದೆ. ಮದುವೆಯಾದ ಎರಡು ವರ್ಷಕ್ಕೆ ಇಬ್ಬರ ಮನೆಯಲ್ಲೂ ಹೆಣ್ಣಮಕ್ಕಳಾಗಿ ತೊಟ್ಟಿಲು ತೂಗುತ್ತದೆ. ಗೌಡನ ಮಗಳು ಶಿವಗಂಗಾ ಮತ್ತು ಬೈಲಪ್ಪನ ಮಗಳು ಚೂಡಿ ಓರಗೆಯವರಾಗಿ ಜತೆಯಾಗಿ ಬಳೆಯುತ್ತಾರೆ.

ಚೂಡಿ ಮೂರು ವರ್ಷದ ಮಗುವಿದ್ದಾಗಲೇ ತಾಯಿ ದ್ಯಾವಿ ಸಿಂದಿಮುಳ್ಳು ಚುಚ್ಚಿದ್ದೇ ನೆಪವಾಗಿ ಕಾಲು ಊದಿ ಯಾವ ಔಷಧಿಯಿಂದಲೂ ಗುಣವಾಗದೆ ಸತ್ತುಹೋಗುತ್ತಾಳೆ. ನೆರೆಮನೆಯ ದುಗ್ಗವ್ವಾಯಿ ಹೇಳುವ ಮಾತುಗಳಲ್ಲಿ ಬಡವರ ಕಣ್ಣೀರ ಕತೆ ಮನಸ್ಸಿಗೆ ತಟ್ಟುವಂತೆ ದರ್ಶನಗೊಳ್ಳುತ್ತದೆ: 'ಬಡೂ ಮಂದಿ ಬಾಳ್ಯಾ ಅಂದ್ರ ಹಿಂಗೇ ಕೂಸು.. ಅಂಗಾಲಿಗಿ ಅಡವ್ಯಾಗಿನ ಮುಳ್ಳ ಚುಚ್ಚಿ ಗಾಯಾ ಮಾಡಿ ಇಸಾ ಬಿಟ್ಟಿರ, ಮ್ಯಾಲಿನ ಜಾತಿ ಸಾವ್ಕಾರ ಮಂದಿ ಬೈಗುಳಾ ಹೊಡೆತಾಗೋಳು ನಮ್ಮ ಮೈ ಮನಸಗೋಳಿಗಿ ನಟ್ಟು ನಟ್ಟು ಇಸಾ ತಿನ್ನಿಸ್ತಾವು.. ಎಲ್ಲಾ ತಿಂದೂ ತಿಂದೂ ತಾಳಕಿ ಆಗಲಾರದಾಗ ಬಂದೀಟು ಉಗುಳಿ, ಬಂದೀಟು ಕಾರಿ, ಬಂದೀಟು ನುಂಗಿ..ನಾವು ಬದಕ ಬೇಕಾಗ್ತದೇ ದ್ಯಾವೀ..'(27) ಚೂಡಿ ಗೌಡತಿ ಕೊಟ್ಟ ಅಂಚುಹರಿದ ನೆಗ್ಗಿದ ಸಿಲ್ವಾರದ ಗಂಗಾಳದಲ್ಲಿ ನೀಲಾ ತಿಂದುಬಿಟ್ಟ ಎಂಜಿಲನ್ನ ರೊಟ್ಟಿ ತಿನ್ನುತ್ತ ಅವರ ಮನೆಯಂಗಳದಲ್ಲಿ ಬಳೆಯುತ್ತಾಳೆ.

ಹತ್ತುವರ್ಷವಾದಾಗ ಚೂಡಿಯಲ್ಲಿ ಸ್ವಾಭಿಮಾನ ಜಾಗೃತವಾಗುತ್ತದೆ. ಗೌಡರ ಮನೆಯ ಎಂಜಿಲನ್ನ ತಿನ್ನಲು ಅವರು ಉಟ್ಟುಬಿಟ್ಟುದನ್ನು ಉಡಲು ಅವಳ ಮನಸ್ಸು ಕೇಳುವುದಿಲ್ಲ. ಶ್ರೀಮಂತರ ಅಹಂಕಾರ, ವೈಭವಗಳ ಮುಂದೆ ಜಾತೀಯತೆ ಮತ್ತು ಬಡತನಗಳಿಂದ ಒಂದು ಬಗೆಯ ಕೀಳರಿಮೆ ಕಾಡಿ ಅವಳು ಅಸ್ವಸ್ಥಳಾಗುತ್ತಿದ್ದಳು. ಈ ಅಸ್ವಸ್ಥತೆಯೇ ಆಕ್ರೋಷದತ್ತ ಅವಳನ್ನು ಮುನ್ನಡೆಸುತ್ತಿತ್ತು. ಒಂದು ಸಲ ಚೂಡಿ ಗೌಡತಿ ಕೊಟ್ಟ ನೀಲಾಳ ಹಳೆಯ ಬಟ್ಟೆಗಳನ್ನೆಲ್ಲ ತೆಗೆದುಕೊಂಡು ಹೋಗಿ ಬಾವಿಗೆ ಎಸೆಯುತ್ತಾಳೆ. ತಲೆತಲಾಂತರದಿಂದ ಬಂದ ಸಂಪ್ರದಾಯಕ್ಕೆ ವಿರುದ್ಧವಾಗಿ ಮಗಳ ಕ್ರಾಂತ ಮನಸ್ಸಿನ ಮಾತು ವರ್ತನೆಗಳನ್ನು ಅರಗಿಸಿಕೊಳ್ಳಲು ಕಷ್ಟವಾಗಿ ಬೈಲಪ್ಪ ಭಯದಿಂದ ನಡುಗುತ್ತಿದ್ದ.

ಸ್ವಾಭಿಮಾನದಂತೆ ಚೂಡಿ ಬಲು ದಿಟ್ಟೆ ಕೂಡ. ಹರೆಯ ತುಂಬಿ ಹಳ್ಳಿಗೇ ಸುರಸುಂದರಿಯಾದ ಅವಳನ್ನು ಸಾವ್ಕಾರ ಮುರಿಗೆಪ್ಪ ಕೆಣಕಲು ಬಂದಾಗ ಅವನನ್ನು ಒದ್ದು ಮುಖದ ಮೂರು ಹಲ್ಲುಗಳನ್ನು ಉದುರಿಸಿದ ಧೈರ್ಯಗಾತಿ ಆಕೆ. ನೀಲಾಳ ತಾಯಿ ಗಂಗಮ್ಮ ಮಗಳ ನಿಶ್ಚಿತಾರ್ಥದ ಸೀರೆಯನ್ನು ಚೂಡಿಗೆ ಕೊಡಲು ತೀರ್ಮಾನಿಸಿದಾಗ ಚೂಡಿಯ ಅಭಿಮಾನ ಕೆರಳುತ್ತದೆ. ಇದುವರೆಗೆ ನೀಲಾಳ ಎಂಜಿಲನ್ನು ತನಗೆ ತಿನ್ನಿಸಿದ ಹಾಗೆ ತನ್ನ ಎಂಜಿಲನ್ನೂ ಅವಳಿಗೆ ತಿನ್ನಿಸಬೇಕೆಂಬ ಪ್ರತೀಕಾರದ ಭಾವ ಮನಸ್ಸಿನಾಳದಲ್ಲಿ ಹೆಡೆಯೆತ್ತುತ್ತದೆ.

ಎದೆಯ ಹುತ್ತದಲ್ಲಿ ಅಡಗಿದ್ದ ಅಸಹನೆ, ಅವಮಾನಗಳ ನಾಗರಹಾವು ಹೆಡೆಬಿಚ್ಚಿ ಭುಸುಗುಟ್ಟಿದಾಗ ನೀಲಾಳ ರಾಯಭಾರಿಯಾಗುವ ಹಂಚಿಕೆ ಹಾಕುತ್ತಾಳೆ. ಮದುವೆಗಂಡು ಈಸೂರನನ್ನು ಭೇಟಿಯಾಗಲು ಹೋದ ಚೂಡಿ ತಾನಾಗಿಯೇ ಅವನಿಗೆ ಮೈಯೊಪ್ಪಿಸಿ ಮೀಸಲು ಮುರಿಯುತ್ತಾಳೆ.

ಮದುವೆಯಾಗಿ ನೀಲಮ್ಮ ಗಂಡನ ಮನೆಗೆ ಹೊರಟು ನಿಂತಾಗ ಗೆಳತಿಯನ್ನು ಬೀಳ್ಕೊಡಲೆಂದು ಬಂದ ಚೂಡಿ ಇನ್ನೇನು ನೀಲಾ ಈಸೂರನ ಕುದುರೆಯ ಮೇಲೆ ಹತ್ತಿ ಕೂಡಬೇಕು ಅನ್ನುವಾಗ ಕೈಹಿಡಿದು ನಿಲ್ಲಿಸಿ ಬಚ್ಚಿಟ್ಟ ರಹಸ್ಯವನ್ನು ಸ್ಫೋಟಿಸುತ್ತಾಳೆ: 'ನೀ ಉಂಡು ಬಿಟ್ಟಿದ್ದು ನನಗೆ ಉಣ್ಣಾಕ ಕುಡತಿದ್ಳು ನಿಮ್ಮವ್ವ, ನೀ ಉಟ್ಟು ಹರ್ದು ಬಿಸಾಡಿದ್ದ ಬಟ್ಟೆ ಬರಿ ನನಗ ಉಡಾಕ ಕುಡ್ತಿದ್ದಳು ಗೋಡ್ತಿ.. ನಾ ಎಲ್ಲಾ ನಿನ್ನ ಎಂಜಲ ಉಂಡು, ಉಟ್ಟು ನಿನ್ ಎಂಜಲದ ರಿಣದಾಗೇ ಬೆಳ್ದು ದೊಡ್ಡಕ್ಕಿ ಆಗೀನಲ್ಲೇ ನೀಲಾ..', .. ಇವತ್ತ ನಿನ್ ಎಂಜಿಲ ರಿಣಾ ಇಳ್ಸಗೋತೀನಿ.. ನೀ ನನಗ ಸಾವಿರ ಸರ್ತಿ ಎಂಜಿಲ ಉಣಿಸಿದ್ದೆ. ಇನ್ನ ಮ್ಯಾಲ ನೀ ದಿನಾ ನನ್ನ ಎಂಜಲ ಉಂಡೇ ಬದುಕಬೇಕಾಗ್ತದಂಬೋದು ನಿನ್ನೆದ್ಯಾಗ ಬರ್ದು ಇಟಗೋ..'(140) ಎನ್ನುತ್ತ ಹದಿನೈದು ದಿನಗಳ ಹಿಂದೆ ಹೊಳೆದಂಡೆಯಲ್ಲಿ ತಾನು ಈಸೂರನೊಂದಿಗೆ ಕೂಡಿದ ಘಟನೆಯನ್ನು ಬಹಿರಂಗಪಡಿಸಿ ಎದೆಯಲ್ಲಿ ಉರಿಯುತ್ತಿದ್ದ ಜ್ವಾಲಾಮುಖಿಯನ್ನು ಆರಿಸಿಕೊಳ್ಳುತ್ತಾಳೆ.

ನೀಲಮ್ಮ ಜೀವಮಾನವೆಲ್ಲ ತನ್ನ ಎಂಜಿಲನ್ನು ತಿನ್ನುವಂತೆ ಮಾಡುತ್ತೇನೆಂಬ ಛಲದಲ್ಲಿ ಮಾಡಿದ ಹುಡುಗಾಟದ ಪರಿಣಾಮ ಘೋರವಾಗಿ ಚೂಡಿ ಬಸುರಾಗುತ್ತಾಳೆ. ಗುಟ್ಟು ಬಹಿರಂಗವಾದರೆ ತನಗೂ ತನ್ನ ತಂದೆಗೂ ಉಳಿಗಾಲವಿಲ್ಲವೆಂದು ಖಾತ್ರಿಯಾಗಿ ಅವಳು ಆತ್ಮಹತ್ಯೆಯ ನಿರ್ಧಾರಮಾಡುತ್ತಾಳೆ. ಆದರೆ ಅವಳೊಳಗೆ ತುಂಬಿನಿಂತ ಛಲ, ಬಲಗಳು ಬದುಕಲು ಪ್ರೇರೇಪಿಸಿದಾಗ ನಿರ್ಧಾರ ಸಡಿಲವಾಗುತ್ತದೆ. ಊರುಬಿಟ್ಟು ಹೋಗುವ ಯೋಚನೆ ಮಾಡಿದಾಗ ಅವಳನ್ನು ಮೊದಲಿನಿಂದಲೇ ಇಷ್ಟಪಟ್ಟಿದ್ದ ಚಂದ್ರಾಮ ಆಕೆ ಮಾಡಿದ ಹಾದರವನ್ನೂ ಕ್ಷಮಿಸಿ ತನ್ನ ಬಾಳಸಂಗಾತಿಯನ್ನಾಗಿ ಸ್ವೀಕರಿಸುವ ಭರವಸೆ ನೀಡುತ್ತಾನೆ. ಚೂಡಿ ಚಂದ್ರಾಮನ ತೋಳತೆಕ್ಕೆಯಲ್ಲಿ ಹಾಯಾಗಿ ಒರಗುತ್ತಾಳೆ.

ತನ್ನ ವಿಶಿಷ್ಟವೂ ಅದ್ಭುತವೂ ಆದ ವಸ್ತುವಿನ್ಯಾಸದಿಂದ ಮೈನವಿರೇಳಿಸುವ ಈ ಕಾದಂಬರಿ ಓದಿ ಮುಕ್ತಾಯವಾದರೂ ಮನಸ್ಸಿನಲ್ಲಿ ಬಹುಕಾಲ ಉಳಿಯುತ್ತದೆ. ಮೇಲ್ನೋಟಕ್ಕೆ ಇದೊಂದು ದಲಿತಪಕ್ಷಪಾತಿಯಾದ ವಿಕ್ಷುಬ್ಧ ಕೃತಿಯೆಂದು ಅನಿಸಿದರೂ ಅದರ ಆಂತರ್ಯದಲ್ಲಿ ಮಡುಗಟ್ಟಿನಿಂತ ತೀವ್ರವಾದ ನೋವಿನ ಕುದಿಗಳು ಗಂಭೀರ ಚಿಂತನೆಗೆ ಅವಕಾಶವೀಯುತ್ತವೆ.

**ಮಾಪುರತಾಯಿ ಮಕ್ಕಳು**

ಉತ್ತರ ಕರ್ನಾಟಕದ ಕೆಳ ವರ್ಗದ ಜನಾಂಗದಲ್ಲಿ ಪ್ರಚಲಿತವಾಗಿರುವ 'ಜೋಗತಿ' ಎಂಬ ವಿಚಿತ್ರ ಸಂಪ್ರದಾಯವನ್ನು ಮುಖ್ಯವಾಗಿಟ್ಟು ರಚಿತವಾದ ಈ ಕೃತಿ ಗೀತಾ ನಾಗಭೂಷಣ್‌ರ ಸುಪ್ರಸಿದ್ಧ ಕಾದಂಬರಿಗಳಲ್ಲಿ ಒಂದು. 'ಜೋಗಣಿ' ಅಂದರೆ ಗ್ರಾಮದೇವತೆಯಾದ ಮಾಪುರತಾಯಿ ದೇವಿಯ ಸೇವೆಗೆ ಮೀಸಲಾದ ಹೆಣ್ಣು. 'ಪಟ್ಟಕ್ಕೆ' (ಮೊದಲರಾತ್ರಿಯ ಅಧಿಕಾರ) ಹಾಕಿಕೊಂಡ ಗೌಡನೋ ಕುಲಕರ್ಣಿಯೋ ಸಾಹುಕಾರನೋ ಅವಳಿಗೆ ಪಟ್ಟದ ಖರ್ಚು– ದೊಡ್ಡ ಮೊತ್ತದ ಹಣ, ಜರತಾರಿಯ ರೇಶ್ಮೆ ಸೀರೆ, ಕುಪ್ಪಸ ಬಂಗಾರದ ವಡವೆ, ವಸ್ತ್ರ, ತಾಳಿ ಸಾಮಾನು, ಹಸುರುಬಳೆ, ಕಾಲುಂಗುರ ಮೊದಲಾದ ಎಲ್ಲವನ್ನೂ ಕೊಡಬೇಕು. ಹುಡುಗಿಗೆ ಸುರಿಗೆ ಸುತ್ತಿ ಮೀಯಿಸಿ, ಅವಳ ಎಡಕ್ಕೆ ತಲವಾರ(ಕತ್ತಿ) ಇಟ್ಟು ಅದನ್ನೇ ಗಂಡನೆಂದು ಸಿಂಗರಿಸಿ ಅದರೊಂದಿಗೆ ಅವಳ ಮದುವೆಯ ಶಾಸ್ತ್ರಗಳನ್ನು ಮಾಡಿ ತಾಳಿ ಕಟ್ಟುತ್ತಾರೆ. ತಲೆಯ ಮೇಲೆ ಬಿದಿರ ಬುಟ್ಟಿಯಂಥ 'ಪರಡಿ' ಹೊರಿಸುತ್ತಾರೆ. ಬಗಲಲ್ಲಿ ಚೌಡಕಿ ಕೊಡುತ್ತಾರೆ. ಅಂದಿನಿಂದ ಅವಳು ಚುಂಚೂರು ಮಾಪುರತಾಯಿಯ 'ಜೋಗಣಿ'ಯಾಗುತ್ತಾಳೆ. ಅಂದು ರಾತ್ರಿ ಪಟ್ಟಕ್ಕೆ ಹಾಕಿಕೊಂಡವನು ಅವಳ ಮೈಯ ಮೀಸಲು ಮುರಿದು ಅವಳನ್ನು 'ಹೆಣ್ಣು' ಮಾಡುತ್ತಾನೆ, ಮುಂದೆಲ್ಲ ಅವಳು ದೇವಿಯ ಹೆಸರಿನ ಮೇಲೆ, ಬಂದ ಗಂಡಸರಿಗೆಲ್ಲ ಸೆರಗು ಹಾಸುತ್ತ ಅವರ ಮಗ್ಗುಲು ಬಿಸಿ ಮಾಡುತ್ತ ಅವರ ಕಾಮದ ತಿಂಡಿಗೆ ಬಲಿಯಾಗುತ್ತ ದಿನಗಳೆಯಬೇಕು. ಅವಳಿಗೆ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿಲ್ಲ. ತಾಯಿಯದೇ ಹೆಸರು. ಅವಳು ಅಧಿಕೃತವಾಗಿ ಸೂಳೆಯಾಗುತ್ತಾಳೆ. ದಂಧೆ ಅದೇ. ಹೆಸರು ಮಾತ್ರ ಸೂಳೆಯಲ್ಲ 'ಜೋಗಣಿ'! (ಬದುಕು. ಪು46)

ಉತ್ತರಕರ್ನಾಟಕದಲ್ಲಿ ಅತಿ ಹೆಚ್ಚು ಮೌಢ್ಯಾಚರಣೆಗಳುಳ್ಳ ಪ್ರದೇಶ ಕಲ್ಬುರ್ಗಿ. ಇಲ್ಲಿ ಶ್ರೀಮಂತ ಜಮೀನ್ದಾರರು ದೇವದಾಸಿ, ಜೋಗತಿ ಇತ್ಯಾದಿ

ಹೆಸರುಗಳಿಂದ ನಿಮ್ನ ಜನಾಂಗದ ಮಹಿಳೆಯರನ್ನು ದೇವರಿಗೆ ಮೀಸಲಾಗಿಟ್ಟು ತಮ್ಮ ಭೋಗದ ಹೆಣ್ಣಾಗಿ ಬಳಸಿಕೊಳ್ಳುವ ಅತ್ಯಂತ ಕ್ಷುದ್ರ ಪದ್ಧತಿ ಇದೆ. ಜಗತ್ತು ಎಷ್ಟೊಂದು ಬದಲಾಗಿದ್ದರೂ ಸಂವಿಧಾನದಲ್ಲಿ ಅಸ್ಪೃಶ್ಯತೆ, ಮೌಢ್ಯಾಚರಣೆಗಳು ಕಾನೂನು ಬಾಹಿರವೆಂದು ಘೋಷಿಸಿದ್ದರೂ ಇಂಥ ಪದ್ಧತಿಗಳನ್ನು ಇವತ್ತಿಗೂ ಆಚರಿಸಿಕೊಂಡು ಬರುತ್ತಿರುವುದು ಅತ್ಯಂತ ವಿಷಾದನೀಯ. ಈ ಆಚರಣೆ ಅಮಾನವೀಯವೆಂದು ಅರ್ಥಮಾಡಿಕೊಳ್ಳುವ ತಿಳುವಳಿಕೆಯಾಗಲೀ, ಬುದ್ಧಿಯಾಗಲೀ ಆ ಮಂದಿಗಿಲ್ಲ. ಊರಿನ ಗೌಡ, ಕುಲಕರ್ಣಿ, ಪಂಚರು ಸೇರಿ ಮಾಡಿದ ಈ ಕೆಟ್ಟಪದ್ಧತಿಯ ಕಪಿಮುಷ್ಠಿಯಲ್ಲಿ ಸಿಕ್ಕಿ ನರಳುವವರು ನಿಮ್ನಲೋಕದ ನಕ್ಷತ್ರಗಳು. ಅರಳಿ ನಳನಳಿಸಬೇಕಾದ ಹೂವುಗಳು ಮೊಗ್ಗಿನಲ್ಲೇ ಹುಳಗಳಿಗೆ ಆಹಾರವಾದಂತೆ ಇಂಥ ಅಮಾನವೀಯ ಪದ್ಧತಿಯಿಂದ ಹೆಣ್ಣುಮಕ್ಕಳ ಬಾಳು ಮುರುಟಿಹೋಗುತ್ತದೆ. ಅಂಥ ಹೆಣ್ಣುಮಗಳೊಬ್ಬಳ ಬಾಳಿನ ಕರುಣ ಕಥೆಯ ಮೂಲಕ ಮೇಲುವರ್ಗದ ಜನರ ಸ್ವಾರ್ಥ ಮತ್ತು ಕ್ರೌರ್ಯವನ್ನು ನಿಗ್ರಹಿಸುವುದೇ ಈ ಕಾದಂಬರಿಯ ಉದ್ದೇಶ. ಉತ್ತರಕರ್ನಾಟಕದ ಗ್ರಾಮ್ಯಭಾಷೆಯಲ್ಲಿ ರಚಿತವಾದ ಈ ಕಾದಂಬರಿ ಗಾತ್ರದಲ್ಲಿ ಚಿಕ್ಕದಾದರೂ ಇದರೊಳಗೆ ಹುದುಗಿದ ಅನುಭವ, ಚಿಂತನೆಗಳ ಹೂರಣ ಅಸಾಧಾರಣವಾದುದು.

ಹೊಲೆಯರ ಕೇರಿಯ ಸಾಹುಕಾರ ಚಂದಪ್ಪ. ಸ್ವಲ್ಪ ತಿಳುವಳಿಕಸ್ತನೂ ಶ್ರೀಮಂತನೂ ವಿಚಾರವಾದಿಯೂ ಅದ ಆತನಿಗೆ ಜೋಗತಿ ಲಕ್ಕಿಯ ಸಂಬಂಧವಿದ್ದರೂ ಆ ಪದ್ಧತಿಯ ಬಗ್ಗೆ ಅವ್ಯಕ್ತವಾದ ವಿರೋಧವಿದೆ. 'ಹರ್‍ಯಾದ ಪೋರಿಗೋಳಿಗಿ ಜೋಗಣಿ ಮಾಡಿ ಸೂಳಿಗಾರಿಕಿಗಿ ಇಳಿಸಾದು. ಇದು ಹೆಂತ ಹರಕೀನೋ .. ಆ ಮಾಪುರ ತಾಯಿ ಹಿಂಗ್ಯಾಕ ಬೇಡ್ತಾಳೋ ಅನಸ್ತದ ನನಗ.' ಎಂದು ಚಂದಪ್ಪ ನಿಟ್ಟುಸಿರಿಟ್ಟರೆ 'ತೆಪ್ಪಾಯಿತೆನ್ನು. ತಾಯಿ ಕಾಲಾಗ ಬೀಳ್ಲಿ. ಆಕಿನ ಮರಜಿ ಮುಂದ ನಮ್ಮಂತಾ ನರಮನಸ್ಯಾರ್ದೇನು?'(ಮಾಪುರ ತಾಯಿ ಮಕ್ಕಳು. ಪು.26) ಎಂಬುದು ಸಾಮೂಹಿಕ ಪ್ರತಿಕ್ರಿಯೆ. ತಲೆತಲಾಂತರದಿಂದ ಅನೂಚಾನವಾಗಿ ನಡೆದುಕೊಂಡು ಬಂದ ಸಂಪ್ರದಾಯ, ಆಚಾರ ವಿಚಾರಗಳ ವಿರುದ್ಧ ಯೋಚಿಸುವುದೇ ಅಪರಾಧ ಎಂಬ ನಂಬಿಕೆ ರಕ್ತಗತವಾಗಿ ಬೇರೂರಿದ ಸಮಾಜ ಅದು.

ಈ ಕಾದಂಬರಿಯ ಪ್ರಧಾನ ಪಾತ್ರವಾದ ಚಮೇಲಿಯ ನೆನಪಿನ ಸಂಪುಟದಲ್ಲಿ ಜೋಗತಿ ಸಂಪ್ರದಾಯದ ದೋಷ, ದುರಂತಗಳ ಕರಾಳ ಪುಟಗಳು ತೆರೆಯುತ್ತವೆ.

ಸಾಹುಕಾರ ಚಂದಪ್ಪ ಮತ್ತು ದುರ್ಗವ್ವರ ಏಕಮಾತ್ರ ಕುವರಿ ಸಿಂಗಾರಿ. ಅವಳಿಗೊಬ್ಬ ಅಣ್ಣ ಮಲ್ಲಿನಾಥ. ಸೋದರಮಾವ ಶಿವರುದ್ರನ ಮೀಸಲು ಹುಡುಗಿ ಆಕೆ. ಹನ್ನೆರಡು ಗಂಟೆಯ ಜೋಡಿ ಮುಳ್ಳುಗಳಂತಿದ್ದ ಸಿಂಗಾರಿ, ಶಿವರುದ್ರರು ಭವಿಷ್ಯದ ಸುಂದರ ಸೌಧ ನಿರ್ಮಿಸುವುದರಲ್ಲಿ ಮೈಮರೆಯುತ್ತಿದ್ದರು.(27)

ಸಿಂಗಾರಿಗೆ ಕಾಯಿಲೆಯಾದದ್ದೇ ನೆಪವಾಗಿ ಅವಳನ್ನು ಮಾಪುರತಾಯಿಗೆ ಜೋಗತಿ ಬಿಡುವ ನಿರ್ಧಾರವಾಗುತ್ತದೆ. ಮಗಳು ಜೋಗತಿಯಾಗುವುದು ಹೆತ್ತವರಿಗೆ ಸುತರಾಂ ಇಷ್ಟವಿಲ್ಲ. ಸಂಕಟದ ಮೂಟೆಯನ್ನು ಹೊಟ್ಟೆಯೊಳಗೆ ಹುಗಿದಿಟ್ಟು ಹೆತ್ತವರು ದೇವಿಯ ಆಜ್ಞೆಗೆ ಶಿರಬಾಗಿದರೂ ಶಿವರುದ್ರ ವಿರೋಧಿಸುತ್ತಾನೆ. ಈ ಕಟ್ಟಳೆಗಳು, ರೀತಿ ರಿವಾಜುಗಳು ತಮ್ಮಂಥ ಬಡವರನ್ನು ಬಲಿತೆಗೆದುಕೊಳ್ಳುವುದಕ್ಕೆ ಮೇಲುವರ್ಗದವರು ಮಾಡಿದ ಸ್ವಾರ್ಥ ಸಾಧನಗಳೆಂದು ವಾದಿಸುತ್ತಾನೆ. ದೇವಿಯ ಹೆಸರಲ್ಲಿ ಮೇಲುವರ್ಗದವರು ಯಾಕೆ ಇಂಥ ಹರಕೆ ಹೇಳುವುದಿಲ್ಲವೆಂದು ಪ್ರಶ್ನಿಸುತ್ತಾನೆ. ಸಿಂಗಾರಿ ಶಿವರುದ್ರನ ಮೇಲೆ ಜೀವವಿಟ್ಟುಕೊಂಡವಳಾದರೂ ಜನರ ನಂಬಿಕೆಯನ್ನು ಧಿಕ್ಕರಿಸುವಷ್ಟು ವೈಚಾರಿಕತೆಯಾಗಲೀ ಪ್ರೌಢತೆಯಾಗಲೀ ಅವಳಿಗಿಲ್ಲ. ದುರ್ಗವ್ವನಂತೂ ಆ ರೀತಿ ಪ್ರಶ್ನಿಸುವುದೇ ಮಹಾಪರಾಧವೆಂದು ನಂಬಿದವಳು. 'ಸಮುದರ ಬತ್ತಿ ಹ್ವಾದೆತ್ತು, ಕೈಲಾಸ ಹರಿದು ಬಿದ್ದತ್ತು. ಸೂರ್ಯ ಥಣ್ಣಗಾದಾನು. ಆದರೆ ಮಾಪುರತಾಯಿ ಚಾಜಕ್ಕೆ ಎಳ್ಳಕಾಳೋಟೂ ಕುಂದ ಬರಂಗಿಲ್ಲೋ' ಎಂದು ತಮ್ಮನಿಗೆ ಸಮಜಾಯಿಷಿ ನೀಡುತ್ತಾಳೆ. (44) ದುರ್ಗವ್ವಳಿಗೆ ದೇವಿಯ ಭಯವಾದರೆ ಚಂದಪ್ಪನಿಗೆ ಸಮಾಜದ ಭಯ. ಈ ಕಂದಾಚಾರಗಳು ಅರ್ಥಹೀನವೆಂದು ಅನ್ನಿಸುತ್ತಿದ್ದರೂ ಶ್ರೀಮಂತ ಮೇಲುಜಾತಿಯವರನ್ನು ಎದುರಿಸುವ ಧೈರ್ಯ ಅವನಿಗಿಲ್ಲ.

ಸ್ವಲ್ಪ ಓದು ಬರಹ ಬಲ್ಲ, ವಿಚಾರವಂತಿಕೆಯನ್ನು ಬೆಳೆಸಿಕೊಂಡ ಶಿವರುದ್ರನ ಬಗ್ಗೆ ಹೊಲಸು ಬುದ್ಧಿಯ ಊರ ಹಿರಿಯರು ವಿಷ ಕಾರುತ್ತಾರೆ. ಹೊಲಗೇರಿಗೆ ಬೆಂಕಿಬೀಳುತ್ತದೆ. ಸಿಂಗಾರಿಯನ್ನು ಜೋಗತಿ ಮಾಡಲು

ಹಿಂಜರಿದ ಕಾರಣದಿಂದಲೇ ದೇವಿಗೆ ಕೋಪಬಂದಿದೆ ಎಂದು ಸುದ್ದಿಯಾಗುತ್ತದೆ. ಆದರೆ ಶಿವರುದ್ರ ಚಂದಪ್ಪ ಮತ್ತು ದುರ್ಗವ್ವರಿಗೆ ಹರಕೆಯ ಅರ್ಥಹೀನತೆಯನ್ನು ಮನವರಿಕೆ ಮಾಡಿಸಲು ಪ್ರಯತ್ನಿಸುತ್ತ ಸಿಂಗಾರಿಯನ್ನು ಜೋಗಣಿ ಮಾಡಬಾರದೆಂದು ಪರಿಪರಿಯಾಗಿ ವಿನಂತಿಸುತ್ತಾನೆ. ಅಸಹಾಯಕರಾದ ಅವರು ಶಿವರುದ್ರನನ್ನೇ ಮನೆಯಿಂದಾಚೆ ಕಳುಹಿಸುತ್ತಾರೆ. ತನ್ನ ಜೀವವಿರುವ ತನಕ ಈ ವ್ಯವಸ್ಥೆಗೆ ಸಿಂಗಾರಿಯನ್ನು ಬಲಿಕೊಡಲಾರೆನೆನ್ನುತ್ತ ಶಿವರುದ್ರ ಹಿಂತಿರುಗುತ್ತಾನೆ.

ಗುಡಿಯ ಪೂಜಾರಿ ಚಂದಪ್ಪನ ಮನೆಗೆ ಬಂದು ಸಿಂಗಾರಿಯನ್ನು ಜೋಗತಿ ಮಾಡುವುದಕ್ಕೆ ಬೇಕಾದ ವಿಧಿವಿಧಾನಗಳನ್ನು ತಿಳಿಸುತ್ತಾನೆ. ಜಾತ್ರೆಯ ದಿನ ಪೂಜಾರಿಯ ಮೈಮೇಲೆ ದೇವಿಯ ಆವಾಹನೆಯಾಗಿ ಅವನ ಆಜ್ಞಾನುಸಾರ ವಿಧ್ಯುಕ್ತವಾಗಿ ಕಾರ್ಯಕ್ರಮಗಳು ನಡೆಯುತ್ತಿದ್ದಂತೆ ಶಿವರುದ್ರ ತನ್ನ ಗೆಳೆಯರೊಡನೆ ಬಂದು ಜೋಗಣಿಯ ಹೆಸರಲ್ಲಿ ಹೆಣ್ಣುಮಕ್ಕಳನ್ನು ಸೂಳೆಗಾರಿಕೆಗೆ ಹಚ್ಚುವ ಪದ್ಧತಿಯನ್ನು ನಿಲ್ಲಿಸಬೇಕೆಂದು ಬೆದರಿಸಿ ಸಿಂಗಾರಿಯ ಕೈಹಿಡಿದು ಹೊರಡುತ್ತಾನೆ. ಇದ್ದಕ್ಕಿದ್ದಂತೆ ಯಾರೋ ಬೀಸಿದ ಕೊಡಲಿಯಿಂದ ಅವನ ಕತ್ತು ಕತ್ತರಿಸುತ್ತದೆ. ಅರೆಪ್ರಜ್ಞಾವಸ್ಥೆಯಲ್ಲಿದ್ದ ಸಿಂಗಾರಿ ಜೋಗತಿಯಾಗಿ ಕಂಬನಿಯ ಕಡಲಲ್ಲಿ ಮೀಯುತ್ತ ಕುಲಕರ್ಣಿಯ ಹಾಸಿಗೆಯಲ್ಲಿ ತನ್ನ ಕೌಮಾರ್ಯವನ್ನು ಕಳೆದುಕೊಳ್ಳುತ್ತಾಳೆ. ಕುಲಕರ್ಣಿ, ಶೆಟ್ಟಿ, ಗೌಡ, ಸಾಹುಕಾರ– ಹೀಗೆ ಹಾಸುಗೆಗಳು ಬದಲಾಗುತ್ತ ಹೋಗುತ್ತವೆ. ತಾಳಿ ಕಟ್ಟಿ ಬಾಳು ಕೊಡಲಿದ್ದ ಶಿವರುದ್ರ ಮೇಲುವರ್ಗದ ಕ್ರೌರ್ಯಕ್ಕೆ ಆಹುತಿಯಾಗಿ ಸ್ಮಶಾನದಲ್ಲಿ ಮಣ್ಣಾಗಿ ಮಲಗಿದರೆ ಜೋಗತಿಯಾದ ಸಿಂಗಾರಿ ಜೀವಚ್ಛವದಂತೆ ಬದುಕು ಸಾಗಿಸುತ್ತಾಳೆ.

ಬರಗಾಲ ಬಂದು ಮುಗ್ಧ ಹೆಣ್ಣು ಸಿಂಗಾರಿಯೂ ಸೇರಿದಂತೆ ಅನೇಕ ದಲಿತ ಹೆಣ್ಣುಮಕ್ಕಳು ಹರಕೆಯ ಕುರಿಗಳಾಗಿ ಮುಂಬೈಯ ವೇಶ್ಯಾವಾಟಿಕೆಗೆ ಮಾರಾಟವಾಗುತ್ತಾರೆ. ಪಂಜರದಲ್ಲಿ ಸಿಕ್ಕಿಬಿದ್ದ ಹಕ್ಕಿ ರೆಕ್ಕೆ ಬಡಿದು ಚಡಪಡಿಸುವಂತೆ ಸಿಂಗಾರಿ ಆ ವೇಶ್ಯಾವಾಟಿಕೆಯ ಬಾಗಿಲುಗಳಿಗೆ ಢಿಕ್ಕಿ ಹೊಡೆಯುತ್ತಾಳೆ. ಬಿಡುಗಡೆಯ ಎಲ್ಲ ಬಾಗಿಲುಗಳೂ ಮುಚ್ಚಿದಾಗ ಕೆಸರಿನ ಸಮುದ್ರದಲ್ಲಿ ಈಜಲೇಬೇಕಾದ ಅನಿವಾರ್ಯತೆಗೆ ತನ್ನನ್ನು ಒಪ್ಪಿಸುತ್ತಾಳೆ.

ಸಿಂಗಾರಿ ಚಮೇಲಿಯಾದಳು, ದಿನಗಳು ಕಳೆದಂತೆ ಜೋಗಿಣಿ ವೇಶ್ಯೆಯಾದಳು. ಕನ್ನಡ, ಹಿಂದಿ, ಮರಾಠಿ ಭಾಷೆಗಳಲ್ಲಿ ಪಳಗಿದಳು. ಸಂದರ್ಭ,

ಸನ್ನಿವೇಶಗಳಿಗೆ ತಕ್ಕಂತೆ ವೇಷಭೂಷಣಗಳು, ಮಾತು ವರಸೆಗಳು ಬದಲಾದುವು. ಮುಂಬೈಯ ವಜ್ರದ ವ್ಯಾಪಾರಿ ಮುಪ್ಪಿನ ಹೊಸ್ತಿಲಲ್ಲಿದ್ದ ಮಾರವಾಡಿ ಸೇಠ್ ಚಿಮನ್‌ಲಾಲ್ ಅವಳ ಖಾಯಂ ಗಿರಾಕಿಯಾದ. ಸಿಂಗಾರಿಯ ಗುಣ, ರೂಪಗಳಿಗೆ ಮರುಳಾದ ಆತ ಹಣದ ರಾಶಿಯನ್ನು ಸುರಿದು ಅವಳನ್ನು ತನ್ನ ಮನೆಗೆ ಕರೆದೊಯ್ದ. ಮೂಕಪ್ರಾಣಿಯಾಗಿ ಮಾರಾಟಗೊಂಡ ಸಿಂಗಾರಿ ಚಿಮನ್‌ಲಾಲ್‌ನ ಭವ್ಯ ಬಂಗಲೆಯ ಒಡತಿಯಾದಳು. ಧನ, ಕನಕಗಳು ಅವಳ ಕಾಲಕೆಳಗೆ ಜೀಕಿದುವು.

ಆದರೆ ಈ ಎಲ್ಲ ವೈಭವಗಳ ನಡುವೆಯೂ ಅವಳು ತನ್ನ ಬಾಳಸಂಗಾತಿಯಾಗಲಿದ್ದ ಶಿವರುದ್ರನ ನೆನಪಿನಲ್ಲಿ ಹಣ್ಣಾದಳು. ತನ್ನಂತೆ ಮಾರಾಟವಾಗುತ್ತಿರುವ ಎಷ್ಟೋ ಅಮಾಯಕ ಹೆಣ್ಣುಗಳನ್ನು ಖರೀದಿಸಿ ಭವಾನಿ ಪುರದ ಅನಾಥ ಮಹಿಳೆಯರ ಕಲ್ಯಾಣ ನಿಲಯದಲ್ಲಿ ಸೇರಿಸಿದಳು. ಸೇಠ್ ಕೊಡುವ ಹಣವನ್ನು ಅನಾಥಹೆಣ್ಣುಗಳ ಉದ್ಧಾರಕ್ಕಾಗಿ ವ್ಯಯಿಸಿದಳು.

ಸೇಠ್‌ನ ಕಾಲಾನಂತರ ಅವನದಾದ ಮನೆ, ಕಾರು, ಅಂಗಡಿ ಧನಕನಕಗಳಿಗೆ ಒಡತಿಯಾದ ಸಿಂಗಾರಿ ಅವೆಲ್ಲವನ್ನೂ ಮಾರಾಟಮಾಡಿ ಇಪ್ಪತ್ತು ವರ್ಷಗಳ ಬಳಿಕ ತನ್ನೂರಿಗೆ ವಾಪಸ್ಸಾಗಿ ಶಿವರುದ್ರನ ತೋಟದಲ್ಲಿ ಮನೆಕಟ್ಟಿಸಿ ವಾಸಮಾಡತೊಡಗಿದಳು. ಗಾಢವಾದ ನೋವನ್ನು ಮರೆಯಲು ಕುಡಿತಕ್ಕೆ ಶರಣಾದಳು. ಇತಿಹಾಸ ಮರುಕಳಿಸಿದಂತೆ ಮುಂದಿನ ಜಾತ್ರೆಯಂದು ಜೋಗಣಿಯಾಗಬೇಕಾದ ತನ್ನನ್ನು ಪಾರುಮಾಡೆಂದು ಕೆಲಸದ ನಿಂಗವ್ವನ ಮಗಳು ಮಾದೇವಿ ತನ್ನ ಪ್ರಿಯಕರನಲ್ಲಿ ಹೇಳುವುದು ಅವಳಿಗೆ ಕೇಳಿಸುತ್ತದೆ. ಪೀಳಿಗೆಯಿಂದ ಪೀಳಿಗೆಗೆ ಹೆಂಗಳೆಯರ ಆಸೆ, ಬದುಕುಗಳನ್ನು ನುಂಗುವ ಈ ಕೆಟ್ಟ ಸಂಪ್ರದಾಯಗಳಿಗೆ ಕೊನೆಯೆಲ್ಲಿ? ಸಿಂಗಾರಿಯ ಅಂತರ್ಯ ವಿಲಪಿಸುತ್ತದೆ.

ಸಿಂಗಾರಿಯ ಮನಸ್ಸು ಈಗ ಗಟ್ಟಿಯಾಗಿತ್ತು. ಅವಳು ಮಾದೇವಿಯನ್ನು ಕರೆಸಿ ಅವಳು ಇಷ್ಟಪಡುವ ಶಂಕ್ರೂ ಜತೆ ಮದುವೆಮಾಡಿಕೊಡುವುದಾಗಿ ಮಾತು ಕೊಡುತ್ತಾಳೆ. ಹುಡುಗ ಪೂಜಾರಿಯ ಅಣ್ಣನಮಗನೆಂದು ಗೊತ್ತಾದರೂ ಅವಳು ಹಿಂಜರಿಯಲಿಲ್ಲ. ಜಾತ್ರೆಯ ದಿನ ಪೋಲಿಸ್ ಜೀಪ್ ಬರುತ್ತದೆ. ಆದರೆ ಮದಿರೆಯ ಅಮಲು ತಲೆಗೇರಿದ ಅವರಿಗೆ ಹೆಣ್ಣುಮಕ್ಕಳ ಅಳು ಕೇಳಿಸಲಿಲ್ಲ. ಹತಾಶಳಾಗದ ಸಿಂಗಾರಿ ತಾನೇ ನಗರಕ್ಕೆ ಹೋಗಿ ಪೋಲಿಸರ ಭದ್ರ ಕಾವಲಿನಲ್ಲಿ

ಮಾಪುರತಾಯಿಯ ಗುಡಿಯ ಮುಂದೆ ಶಂಕ್ರೂ ಮತ್ತು ಮಾದೇವಿಯರ ವಿವಾಹವನ್ನು ನೆರವೇರಿಸುತ್ತಾಳೆ.

ಒಂದು ಸಾರ್ಥಕ ಕೆಲಸವನ್ನು ಮಾಡಿದ ತೃಪ್ತಿಯಲ್ಲಿ ಶಿವರುದ್ರನ ಸಮಾಧಿಗೆ ಹೋಗಿ ತನ್ನ ಮನದ ಬೇಗುದಿಯನ್ನು ತೋಡಿಕೊಂಡ ಸಿಂಗಾರಿಯನ್ನು ಆ ರಾತ್ರಿಯೇ ಮುಂಬೈ ದಲ್ಲಾಳಿಗಳು ಕೊಲೆಮಾಡುತ್ತಾರೆ.

ಗೀತಾರವರು ಈ ಕಾದಂಬರಿಯಲ್ಲಿ ಜೋಗತಿ ಸಂಪ್ರದಾಯವನ್ನು ವಿರೋಧಿಸಿರುವುದಲ್ಲದೆ ಸಮಾಜದ ಹತ್ತು ಹಲವು ದುಷ್ಟ ವಿದ್ಯಮಾನಗಳತ್ತ ತಮ್ಮ ವೈಚಾರಿಕತೆಯ ಕ್ಷ–ಕಿರಣವನ್ನು ಹಾಯಿಸಿ ಅದಕ್ಕೆ ಪರಿಹಾರವನ್ನೂ ತೋರಿಸಿದ್ದಾರೆ. ಬಂಡಾಯದ ಸೂಕ್ಷ್ಮ ಎಳೆಗಳಿಂದ ಕೋದ ಒಂದು ಉತ್ತಮ ಕಾದಂಬರಿ 'ಮಾಪುರತಾಯಿಯ ಮಕ್ಕಳು'. ಸೃಜನಶೀಲತೆಯೊಂದಿಗೆ ಸಂಶೋಧನೆಯ ನೆಲೆಯಲ್ಲೂ ಈ ಸಮಸ್ಯೆಯ ಚಾರಿತ್ರಿಕ, ರಾಜಕೀಯ ವಿಶ್ಲೇಷಣೆಗಳನ್ನು ಮಾಡುತ್ತಿದ್ದರೆ ಕೃತಿ ಇನ್ನಷ್ಟು ಅರ್ಥಪೂರ್ಣವಾಗುತ್ತಿತ್ತು ಎನ್ನುವುದು ವಿಮರ್ಶಕರ ಅಭಿಪ್ರಾಯ.

**ಹಸಿಮಾಂಸ ಮತ್ತು ಹದ್ದುಗಳು**

ಗಾತ್ರದಲ್ಲಿ ಚಿಕ್ಕದಾದರೂ ಇದೊಂದು ಅದ್ಭುತ ಕಾದಂಬರಿ. ಹಸಿಮಾಂಸ ಮತ್ತು ಹದ್ದುಗಳ ರೂಪಕ ಶಕ್ತಿ ಅನನ್ಯವಾಗಿದೆ.

ಫಕೀರಪ್ಪನ ಸಾವಿನ ಬಳಿಕ ಅನಾಥೆಯಾದ ಅವನ ಮಗಳು ಲಚ್ಚಿ ಪ್ರಿಯಕರ ಕಾಶೀನಾಥನ ಬೆಂಬಲದಿಂದ ಜೀವಿಸುತ್ತಾಳೆ. ಬರಗಾಲದಲ್ಲಿ ಅನ್ನಾಹಾರವಿಲ್ಲದೆ ನರಳುತ್ತಿದ್ದ ಇನಿಯಳನ್ನು ನೋಡಿ ಸಹಿಸಲಾರದೆ ಕಾಶೀನಾಥ ತಾನು ಕೆಲಸ ಮಾಡುವ ಕುಲಕರ್ಣಿಯ ತೋಟದ ಒಂದು ಕಾಯಿಯನ್ನು ಕುಯ್ದು ಕೊಡುತ್ತಾನೆ. ಹಸಿವಿನ ತೀವ್ರತೆಯಿಂದಾಗಿ ಮನಸ್ಸಿಲ್ಲದಿದ್ದರೂ ಲಚ್ಚಿ ಅದನ್ನು ಸ್ವೀಕರಿಸುತ್ತಾಳೆ. ಬರುವ ದಾರಿಯಲ್ಲಿ ಎದುರಾದ ಕುಲಕರ್ಣಿಯ ಹದ್ದಿನ ಕಣ್ಣಿಗೆ ಹರೆಯದ ಹೆಣ್ಣಿನ ಸೌಂದರ್ಯ ಬೇಟೆಯಾಗುತ್ತದೆ. ಆದರೆ ಆಹ್ವಾನವನ್ನು ಧಿಕ್ಕರಿಸಿದ ಲಚ್ಚಿಯನ್ನು ಕುಲಕರ್ಣಿಯ ಸೇಡು ಕಳ್ಳತನದ ಆರೋಪದ ಮೇಲೆ ಪೋಲೀಸ್ ಸ್ಟೇಷನ್‌ಗೆ ನೂಕುತ್ತದೆ. ಮಧ್ಯರಾತ್ರಿಯಲ್ಲಿ ಕಾಮುಕ ಪೋಲೀಸರಿಂದ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ ವಿಲವಿಲನೆ ಒದ್ದಾಡಿದ ಆಕೆಯನ್ನು ವಿಧಿಸಿದ ಜುಲ್ಮಾನೆಯನ್ನು ತೆರಲಿಲ್ಲವೆಂಬ ಕಾರಣಕ್ಕೆ ಸೆರೆಮನೆಗೆ ತಳ್ಳುತ್ತಾರೆ. ಗಾಯದ ಮೇಲೆ ಬರೆಹಾಕಿದಂತೆ ಅತ್ಯಾಚಾರಕ್ಕೊಳಗಾದ

ಲಚ್ಚಿಯನ್ನು ಕಾಶೀನಾಥ ಉಪೇಕ್ಷಿಸುತ್ತಾನೆ. ಜೈಲಿನಿಂದ ಬಿಡುಗಡೆಯಾದ ಮೇಲೆ ಅನ್ಯದಾರಿಯಿಲ್ಲದ ಲಚ್ಚಿ ಅನಾಥ ಮಹಿಳೆಯರಿಗಾಗಿ ಮೀಸಲಾದ ಸ್ತ್ರೀನಿಕೇತನದಲ್ಲಿ ಸೇರ್ಪಡೆಯಾಗುತ್ತಾಳೆ. ಕಾಮಪಿಪಾಸಿಗಳು ಅಲ್ಲೂ ಅವಳನ್ನು ಹುರಿದು ಮುಕ್ಕುತ್ತವೆ. ಸಮಾಜದ ಕ್ರೌರ್ಯ, ಹಿಂಸೆ, ಅತ್ಯಾಚಾರಗಳನ್ನು ಅನುಭವಿಸುತ್ತಲೇ ಲಚ್ಚಿಯ ಮನಸ್ಸು, ಭಾವನೆಗಳು ಬದಲಾಗುತ್ತ ಹೋಗುತ್ತವೆ. ಸರ್ಕಾರಿ ಆಫೀಸಿನಲ್ಲಿ ಚಪರಾಸಿಯಾಗಿದ್ದ ಬಸಣ್ಣಿ ಎಂಬ ವಿಧುರ ಅವಳ ಸೌಂದರ್ಯಕ್ಕೆ ಮನಸೋತು ಅವಳನ್ನು ಮದುವೆಯಾದರೂ ಪ್ರೀತಿ, ಪ್ರೇಮಗಳಿಂದ ಒಲಿಸದೆ ಹದ್ದು ಬೇಟೆಯನ್ನು ಕುಕ್ಕಿ ಕುಕ್ಕಿ ತಿನ್ನುವಂತೆ ಅವಳನ್ನು ಕೇವಲ ತನ್ನ ಕಾಮದ ವಸ್ತುವಾಗಿ ಉಪಯೋಗಿಸುತ್ತಾನೆ. ಗಂಡನಾದರೂ ಬಸಣ್ಣಿಯ ಕಾಮಕ್ಕೆ ನಿತ್ಯವೂ ಬಲಿಯಾಗುತ್ತಿದ್ದ ಲಚ್ಚಿಗೆ ಬದುಕೇ ಅಸಹ್ಯವಾಗುತ್ತದೆ. ಗಂಡಸು ಜಾತಿಯ ಮೇಲೆಯೇ ತಿರಸ್ಕಾರ, ಹೇಸಿಗೆ, ಜುಗುಪ್ಸೆಗಳು ಹುಟ್ಟುತ್ತವೆ. ಲಚ್ಚಿ ಗರ್ಭಿಣಿಯಾಗಿ ಆರೋಗ್ಯ ಕೆಡುತ್ತದೆ. ಆದಕೂ ಪ್ರತಿರಾತ್ರಿಯೂ ಬಸಣ್ಣಿಯ ಕಾಮದಾಹಕ್ಕೆ ಅವಳು ಬಲಿಪಶುವಾಗಬೇಕಾಗುತ್ತದೆ. ಪೋಲಿಸ್ ಸ್ಟೇಷನ್‌ನಲ್ಲಿ ಇದ್ದು ಬಂದವಳೆಂಬ ಕಾರಣವನ್ನು ಮುಂದಿಟ್ಟ ಬಸಣ್ಣಿ ತನ್ನ ದೇಹದ ಹಸಿವಿಗೆ ಮಲ್ಲಿ ಎಂಬ ಹೆಣ್ಣನ್ನು ಮನೆಗೆ ತಂದು ಐದು ತಿಂಗಳ ಬಸಿರಿ ಲಚ್ಚಿಯನ್ನು ವ್ಯಭಿಚಾರಿಣಿಯ ಪಟ್ಟಕಟ್ಟಿ ಕೊರಳ ತಾಳಿಯನ್ನೂ ಕಿತ್ತು ಮನೆಯಾಚೆ ಹಾಕುತ್ತಾನೆ. ಇಡೀ ರಾತ್ರಿ ಚಳಿಗಾಳಿಯಲ್ಲಿ ನರಳುತ್ತ ಕಳೆದ ಲಚ್ಚಿ ಮರುದಿನದಿಂದ ಗಂಡ ಮಲ್ಲಿಯರ ಸೇವೆಮಾಡುತ್ತ ಕಣ್ಣೀರಲ್ಲಿ ಕೈತೊಳೆಯುತ್ತ ದಿನತುಂಬಿದಾಗ ಯಾರದೋ ನೆರವಿನಿಂದ ಆಸ್ಪತ್ರೆಗೆ ದಾಖಲಾಗಿ ಗಂಡುಮಗುವಿನ ತಾಯಾಗುತ್ತಾಳೆ. ಆದರೆ ಮಗುವಿನ ಬಗ್ಗೆ ತಾಯಿಯ ಪ್ರೀತಿ, ವಾತ್ಸಲ್ಯಗಳ ಬದಲಿಗೆ ತನ್ನನ್ನು ಹಸಿಮಾಂಸದಂತೆ ಕುಕ್ಕಿ ಕುಕ್ಕಿ ತಿಂದ ನಿರ್ದಯ ರಣಹದ್ದುಗಳಂಥ ಗಂಡುಜಾತಿಯ ಕ್ರೌರ್ಯ, ದೌರ್ಜನ್ಯಗಳು ಅವಳಿಗೆ ನೆನಪಾಗುತ್ತವೆ. 'ಹಳ್ಳಿಯ ದಡ್ಡ, ಅಮಾಯಕ ಹೆಂಗಸರು ಸಿಕ್ಕರೆ ಎಲ್ಲಾ ಗಂಡಸರೂ ಧೋಕಾ ಮಾಡವರೇ..... ನಾಳಿಗಿ ನನ್ನ ಮಗಾನೂ ಹಂತಾ ಗಂಡನೆ ಆಗ್ತಾನ. ಆದರೆ ನನ್ ಮಗ ಹಾಂಗಾಗಬಾರದು, ಅಮಾಯಕ ಹಳ್ಳಿ ಹೆಂಗಸರಿಗೆ ಕೆಡ್ಸಿ ಆಕಿನ ಬಾಳ್ಯಾಕ ಬೆಂಕಿಯಿಡಾ ಜೋಕುಮಾರನ್ಹಂಗ ಆಗಬಾರದು ನನ್ ಮಗಾ 'ಹೆಂತಾ ಹೆಂಗ್ಸ ಹಡದಾಳ ಇವನಿಗಿ, ಆಕಿನ ಹೆಣ ಎತ್ಲೆ' ಅಂತ ಹೆಂಗಸರು ನನಗ ಲಟಗಿ ಮುರ್ದು ಸರಾಪಸಗೋ ಹಾಂಗ ಆಗಬಾರದು.' ಎಂದು ಯೋಚಿಸುತ್ತಾಳೆ. 'ಗಂಡಜಾತಿ ಹುಟ್ಟಿರಾದೇ ಹೆಂಗಸರ ಕುತಗಿ ಕೊಯ್ದು, ಪಿರೀತಿ ಮಾಟಕಾ ಆಡಿ, ಆಕಿನ ಎದ್ಯಾಗ ಚಾಕು ಚುಚ್ಚಿ ಹಸಿ

ರಗತಾ ಹೀರಿ ಕುಡೀಲಕ್ಕ.. ಗಂಡಸರಲಿಂದ ಖರೇ ಪಿರೀತಿ ಬೇಡಾದೂ ಹುಲಿ ಮುಂದ ನಿಂತು ಜಿಂವದ ಭಿಕಶ್ಯಾ ಬೇಡಾದೂ ಒಂದೇ ಅದಾ..' ಎಂದುಕೊಳ್ಳುತ್ತಾಳೆ. ಆದರೂ ಮಗು ಎದೆಹಾಲು ಕುಡಿತ್ತಿದ್ದಂತೆ ಅದರ ಬಗ್ಗೆ ಅವಳರಿಯದಂತೆ ಅವರ್ಣನೀಯವಾದ ಭಾವನೆ ಹುಟ್ಟುತ್ತದೆ. ಕೊನೆಯ ಪ್ರಯತ್ನವಾಗಿ ಹಸುಗೂಸನ್ನು ಎತ್ತಿಕೊಂಡು ಕೊರೆಯುವ ಮಳೆಗಾಳಿಯಲ್ಲಿ ನೆನೆದುಕೊಂಡು ಬಂದು ಬಸಣ್ಣಿಯ ಮನೆಬಾಗಿಲು ತಟ್ಟಿ 'ನಿನ್ ಕಾಲಿಗಿ ಬೀಳ್ತೀನಿ ಬಸ್ಸಣ್ಣೀ.. ದೀಪದ ಬೆಳಕಿನ್ಯಾಗ ಜರಾ ಈ ಕೂಸಿಗೆರೆ ನೋಡು. ನಿಂದಂತ ಖಾತ್ರಿ ಆದರ ಇಟಗೋ.. ಇಲ್ದರ ಬ್ಯಾಡ.. ಹಿಂತಾ ಜುಲಮ್ ನನ್ ಮ್ಯಾಲ ಈ ಹಸು ಕಂದನ ಮ್ಯಾಲ ಮಾಡಬ್ಯಾಡ ಬಸ್ಸಣ್ಣೀ.. ಎಂದು ಮೊರೆಯಿಡುತ್ತಾಳೆ. ಆದರೆ ಆತ ಅವಳ ತಲೆ ಕೂದಲನ್ನು ಹಿಡಿದೆಳೆದು ಅದೇ ಸುರಿಯುವ ಮಳೆಯಲ್ಲಿ ಸೊಂಟದೆತ್ತರ ಹರಿಯುವ ನೀರಿಗೆ ನೂಕಿ ಬಾಗಿಲು ಹಾಕುತ್ತಾನೆ. ಲಚ್ಚಿಗೆ ಬದುಕುವ ಯಾವ ಹಾದಿಯೂ ಕಾಣುವುದಿಲ್ಲ. ಹತ್ತು ದಿನಗಳ ಶಿಶುವನ್ನು ಎತ್ತಿಕೊಂಡು ಹೇಗೋ ಎದ್ದು ಸುರಿಯುವ ಮಳೆಯನ್ನೂ ಲೆಕ್ಕಿಸದೆ ಮೈಮೇಲೆ ಎಚ್ಚರವಿಲ್ಲದವಳಂತೆ ಓಡಿಬಂದು ಕೋಟೆಯ ಕಂದಕದ ಆಳವಾದ ನೀರಿಗೆ ಧುಮ್ಮಿಕ್ಕುತ್ತಾಳೆ. ದಾರಿಯಲ್ಲಿ ಸಾಗುವ ಸವಾರನೊಬ್ಬ ಅವಳನ್ನು ಉಳಿಸುತ್ತಾನೆ. ಮಗುವನ್ನು ಕೊಂದ ಅಪರಾಧಕ್ಕೆ ಲಚ್ಚಿಗೆ ಜೀವಾವಧಿ ಶಿಕ್ಷೆಯಾಗುತ್ತದೆ. ಕಬ್ಬಿಣ ಸಲಾಕೆಗಳ ಒಳಗೆ ಹೋದ ಲಚ್ಚಿ ಹೃದಯ ಮನಸ್ಸು, ಭಾವನೆಗಳಿಲ್ಲದ ಕಬ್ಬಿಣದ ಹೆಣ್ಣಾಗುತ್ತಾಳೆ. ಮತಿಭ್ರಾಂತಳಾದ ಆಕೆ ಕೈಕಾಲು ಬಡಿದು ತಲೆಗೂದಲು ಕಿತ್ತುಕೊಳ್ಳುತ್ತ ಭಯಂಕರವಾಗಿ ಹೃದಯ ಕಿತ್ತು ಬರುವಂತೆ ಕಿರುಚಿ ಎಚ್ಚರ ತಪ್ಪಿ ನೆಲದ ಮೇಲುರುಳಿ ಮುದ್ದೆಯಾಗುತ್ತಾಳೆ. ಕಾನೂನಿನ ಕಣ್ಣಿಗೆ ಲಚ್ಚಿ ಮಗುವನ್ನು ಸಾಯಿಸಿದ ಕೊಲೆಪಾತಕಿಯಾದರೂ. ಆದರೆ ಬದುಕುವ ಯಾವ ಹಾದಿಯೂ ಇಲ್ಲದಾಗ ಮಗುವನ್ನು ಸಾಯಿಸಿ ತಾನೂ ಸಾಯುವ ನಿರ್ಧಾರವನ್ನು ಅವಳು ಕೈಗೊಂಡಿದ್ದಾಳೆಂಬುದನ್ನು ಗಮನಿಸಬೇಕು. ಮಾತ್ರವಲ್ಲ ಆ ನಿರ್ಧಾರಕ್ಕೆ ಬರಬೇಕೆಂದರೆ ಅವಳ ಮಾನಸಿಕ ತಳಮಳ ಹಾಗೂ ನೋವಿನ ಪರಮಾವಧಿಯನ್ನು ಊಹಿಸತಕ್ಕ ಭೂಮಿಕೆಯನ್ನೂ ಕಾದಂಬರಿ ನೀಡಿದೆ.

ಮದುವೆಯಾಗಿ ಬಂದ ಹೆಣ್ಣು ಮಗಳು ಮೊದಲದಿನವೇ ಮಾಲೀಕನಿಗೆ ಮೈಯೊಪ್ಪಿಸಬೇಕಾದ ರೀತಿ ರಿವಾಜುಗಳನ್ನು ವಿರೋಧಿಸುವ ಫಕೀರಪ್ಪನ ಕೋಪ, ತಾಪ, ರೋಷ ಆಕ್ರೋಶ, ಪ್ರತಿಕ್ರಿಯೆಗಳು ಮತ್ತು ಕುಲಕರ್ಣಿಯನ್ನು

ಎದುರಿಸುವ ಲಚ್ಚಿಯ ಧೈರ್ಯ, ಛಲ ಅತ್ಯಂತ ಕ್ರಾಂತಿಕಾರಕವಾಗಿವೆ. ಲಚ್ಚಿಯನ್ನು ಮದುವೆಯಾದ ಬಸಣ್ಣಿ ಅವಳನ್ನು ಹೇಗೆ ಅನುಭವಿಸಿದ ಎಂಬುದನ್ನು ವರ್ಣಿಸಿದ ರೀತಿಯಂತೂ ಕಾಮುಕತೆಯ ಭೀಭತ್ಸತೆಯನ್ನು ಅತ್ಯಂತ ಭಯಾನಕವಾಗಿ ಕಣ್ಣಮುಂದೆ ರಾಚುತ್ತದೆ. 'ರಾತ್ರಿ ಬಸ್ಸಣ್ಣಿ ನಾಯಿಯಂತೆ ಇವಳ ಮೈ ನೆಕ್ಕಿದ. ಗಿಡುಗನಂತೆ ಅಪ್ಪಿ ಹಿಡಿದ. ಕಾಗೆಯಂತೆ ಕುಕ್ಕಿದ. ರಣಹದ್ದಿನಂತೆರಗಿ ಹಸಿಮಾಂಸ ಹಿಂಡಿದಾಗ ಲಚ್ಚಿ ಕಂಗಾಲಾಗಿ ನರಳಿದಳು...' (71) ಲೈಂಗಿಕತೆಯನ್ನು ಇಷ್ಟು ಹಸಿಬಿಸಿಯಾಗಿ ಬರೆಯುವ ಮನೋಬಲ ನಿಜಕ್ಕೂ ಬೆರಗು ಹುಟ್ಟಿಸುತ್ತದೆ. ಓರ್ವ ಅಮಾಯಕ ಹೆಣ್ಣಿನ ದೇಹ, ಮನಸ್ಸುಗಳ ಮೇಲೆ ನಡೆಯುವ ಆಕ್ರಮಣವನ್ನು ಗೀತಾರವರು ಎಷ್ಟು ಸಶಕ್ತವಾಗಿ ಹಿಡಿದಿಡುತ್ತಾರೆಂಬುದಕ್ಕೆ ಈ ಸಾಲುಗಳೇ ಸಾಕ್ಷಿ. ಲಚ್ಚಿಯ ಬಾಳಿಗೆ ಧಾಳಿಯಿಡುವ ನೋವು, ನಿರಾಶೆ, ಆಘಾತ, ದುಃಖಗಳನ್ನು ವರ್ಣಿಸುವಾಗ ಲೇಖಕಿ ಆ ನೊಂದಹೆಣ್ಣಿನ ಮನಸ್ಸಿನೊಳಗೆ ಪರಕಾಯ ಪ್ರವೇಶವನ್ನೇ ಮಾಡಿದ್ದಾರೆನ್ನಿಸುತ್ತದೆ.

### ಚಿಕ್ಕಿಯ ಹರೆಯದ ದಿನಗಳು

'ಹಸಿವು' ಗೀತಾ ನಾಗಭೂಷಣರ ಕಾದಂಬರಿಗಳ ಪ್ರಮುಖ ವಸ್ತು. ಅದು ದೇಹದ ಹಸಿವಾದರೂ ಆಗಬಹುದು ಹೊಟ್ಟೆಯ ಹಸಿವಾದರೂ ಆಗಿರಬಹುದು. ಈ ಹಸಿವನ್ನು ನೀಗಿಸಲು ಕೆಳವರ್ಗದ ಜನತೆ ಪಡುವ ಸಂಕಟಗಳು ಹಾಗೂ ಅವುಗಳಿಂದ ಬಿಡುಗಡೆಗೊಳ್ಳುವ ಹಪಾಹಪಿ ಈ ಕಾದಂಬರಿಯ ಮುಖ್ಯ ವಸ್ತು.

ಕಲುಬುರ್ಗಿಯ ಚಿಂಚನಸೂರಿನ ಮಾಪುರತಾಯಿಯ ಗುಡಿಯಲ್ಲಿ ಜಾತ್ರೆಗೆ ಹದಿಹರೆಯದ ಹೆಣ್ಣುಗಳನ್ನು ಜೋಗತಿಬಿಡುವ ವಿಚಾರ ಗೀತಾರವರ ಅನೇಕ ಕಥೆ ಕಾದಂಬರಿಗಳಲ್ಲಿ ಉಲ್ಲೇಖಿತವಾಗಿದೆ. ಆದರೆ ಪುರುಷರನ್ನು ಜೋಗ ಮಾಡುವ ವಿಧಾನ ಅಪರೂಪವಾಗಿದ್ದು ಈ ಕಾದಂಬರಿ ಅಂಥ ಒಂದು ಚಿತ್ರವನ್ನು ನೀಡುತ್ತದೆ.

ಹರೆಯ ತುಂಬಿ ಸೌಂದರ್ಯದ ಆಗರವಾದ ಚಿಕ್ಕಿಯನ್ನು ಮನಸಾರೆ ಇಷ್ಟಪಟ್ಟಿದ್ದ ಲಾರಿ ಡ್ರೈವರ್ ಚೆನ್ನಣ್ಣ ಆಕೆ ಬಟ್ಟೆಗಿರಣಿಯಲ್ಲಿ ಕೆಲಸಮಾಡುವ ಹೊಲಮನೆಗಳಿರುವ ಚಂದ್ರೂ ಎಂಬವನನ್ನು ಮದುವೆಯಾದ ವಾರ್ತೆ ಕೇಳಿ ಹತಾಶನಾಗುತ್ತಾನೆ. ಚಿಕ್ಕಿಗೆ ಚೆನ್ನಣ್ಣನ ಬಗ್ಗೆ ಒಬ್ಬ ಸ್ನೇಹಿತನೆಂದಲ್ಲದೆ ಬೇರಾವ

ಭಾವನೆಯೂ ಇರಲಿಲ್ಲವೆಂದು ಗೊತ್ತಾಗಿ ಶುದ್ಧಮನಸ್ಸಿನಿಂದ ಅವಳನ್ನು ಪ್ರೀತಿಸುತ್ತಿದ್ದ ಚೆನ್ನಣ್ಣ ತನ್ನ ನೋವು, ನಿರಾಶೆಗಳನ್ನು ನುಂಗುತ್ತಾನೆ.

ಹಾಲು ಜೇನಿನಂಥ ದಾಂಪತ್ಯಸುಖದಲ್ಲಿ ಈಜಾಡಿ ಸಂತೃಪ್ತಿಯ ಬದುಕನ್ನು ಅನುಭವಿಸಿದರೂ ತೆನೆಕಟ್ಟದ ಜೋಳದ ಹೊಲದಂತೆ ವರ್ಷ ಕಳೆದರೂ ಚಿಕ್ಕಿಯ ಬಸಿರ ಹೊಲದಲ್ಲಿ ಚಂದ್ರೂ ಬಿತ್ತಿದ ಬೀಜಗಳು ಫಲಿಸುವುದಿಲ್ಲ.

ಮಕ್ಕಳಿಗಾಗಿ ಹಂಬಲಿಸುವಾಗಲೇ ಪುರುಷತ್ವವನ್ನು ಕಳೆದುಕೊಂಡ ಚಂದ್ರೂ ಹೆಂಡತಿಗೆ ದಾಂಪತ್ಯಸುಖವನ್ನು ಕೊಡಲಾರೆನೆಂದು ಮನದಟ್ಟಾದ ಮೇಲೆ ಚಿಕ್ಕಿಗೆ ಮರುಮದುವೆಯಾಗಲು ತಿಳಿಸುತ್ತಾನೆ. ಆದರೆ ಚಿಕ್ಕಿ ಅದನ್ನು ಎಷ್ಟುಮಾತ್ರಕ್ಕೂ ಒಪ್ಪದಿದ್ದಾಗ ಸ್ವಯಿಚ್ಛೆಯಿಂದಲೇ ಜೋಗನಾಗಿ ಮಾಪುರತಾಯಿಯ ಜಾತ್ರೆಯಲ್ಲಿ ದೇವಿಯೇ ಅದನ್ನು ಹೇಳುವಂತೆ ಯೋಜಿಸಿ ಉತ್ತಮ ಮಾನವೀಯತೆ ಹಾಗೂ ಔದಾರ್ಯವನ್ನು ತೋರಿಸುತ್ತಾನೆ. ತಾಳಿಕಟ್ಟಿದ ಗಂಡ ಜೀವಂತವಾಗಿರುವಾಗಲೇ ಅನ್ಯ ಪುರುಷನಿಂದ ತಾಳಿ ಕಟ್ಟಿಸಿಕೊಳ್ಳಲಾರೆನೆಂದು ಚಿಕ್ಕಿ ಹಟಹಿಡಿದಾಗ. ಚಂದ್ರೂ ಮನೆಬಿಟ್ಟು ಹೊರಟುಹೋಗುತ್ತಾನೆ. ಆರುತಿಂಗಳು ಕಳೆಯುತ್ತದೆ. ಗಂಡನ ನೆನಪಿನಲ್ಲಿ ಕೊರಗುತ್ತ ದೇಹದ ಹಸಿವಿಗೆ ಹಲುಬುತ್ತಿದ್ದ ಚಿಕ್ಕಿಗೆ ಗೆಳತಿ ಸಾವಂತ್ರಿಯ ಹಿತೋಪದೇಶ ವಾಸ್ತವತೆಯ ಅರಿವನ್ನು ಮೂಡಿಸುತ್ತದೆ. ಜೀವಕ್ಕಿಂತಲೂ ಅಪಾರವಾಗಿ ಪ್ರೀತಿಸುತ್ತಿದ್ದ ಚೆನ್ನಣ್ಣ ಅವಳ ಬದುಕಿಗೆ ಆಸರೆಯಾಗಲು ಮುಂದೆ ಬಂದಾಗ ಚಂದ್ರೂ ಕಟ್ಟಿದ ತಾಳಿಯನ್ನು ಇಟ್ಟುಕೊಂಡೇ ಚಿಕ್ಕಿ ಚೆನ್ನಣ್ಣನ ನಿಸ್ವಾರ್ಥಪ್ರೀತಿ, ಸುಖಸಂಸಾರದ ಸವಲತ್ತುಗಳನ್ನು ಅನುಭವಿಸಿ ಗಂಗಾನಗರದ ಗುಡಿಸಲುಗೇರಿಯ ಸಾಹುಕಾರ್ತಿಯಾಗಿ ಒಂದು ಗಂಡುಮಗುವಿನ ತಾಯಿಯಾಗುತ್ತಾಳೆ. ಹದಿನೇಳು ವರ್ಷಗಳ ಬಳಿಕ ಮಾಪುರದೇವಿಯ ಜಾತ್ರೆಯಲ್ಲಿ ಚಿಕ್ಕಿಗೆ ಗಂಡ ಚಂದ್ರೂನ ದರ್ಶನವಾಗುತ್ತದೆ. ಅದೇ ಸಮಯದಲ್ಲಿ ಲಾರಿ ಅಘಘಾತದಲ್ಲಿ ಚೆನ್ನಣ್ಣ ಮರಣಿಸಿ ಅವಳಿಗೆ ಪೂರ್ವಪತಿಯನ್ನು ಸೇರುವ ದಾರಿಯೂ ಸುಗಮವಾಗುತ್ತದೆ. ಗಂಡ ಹೆಂಡತಿಯರು ಮತ್ತೆ ಒಂದಾಗುತ್ತಾರೆ. ವಾಸ್ತವ ಬದುಕಿಗೆ ಅಸಂಭವವೆನಿಸುವ ಚಲನಚಿತ್ರದ ಸನ್ನಿವೇಶಗಳಂತೆ ಘಟನೆಗಳು ನಡೆಯುವುದಾದರೂ ಯಾವುದೇ ಪಾತ್ರಶಿಲ್ಪಕ್ಕೆ ಧಕ್ಕೆಯಾಗದಂತೆ ಕಥಾಭಿತ್ತಿಯನ್ನು ಜೋಡಿಸಿರುವುದು ಸಮುಚಿತವಾಗಿದೆ. ಪುರುಷಪಾತ್ರವನ್ನು ಘನತೆಗೊಯ್ದಿರುವುದೂ ವಿಶಿಷ್ಟವಾಗಿದೆ.

ಇನ್ನೊಬ್ಬ ಗಂಡಿನೊಂದಿಗೆ ಬದುಕನ್ನು ಹಂಚಬೇಕಾದಾಗ ಚಿಕ್ಕಿ ಅನುಭವಿಸುವ ತವಕ ತಲ್ಲಣಗಳು, ಪುರುಷತ್ವವನ್ನು ಕಳೆದುಕೊಂಡು ಹೆಂಡತಿಗೆ ದಾಂಪತ್ಯಸುಖವನ್ನು ಕೊಡಲಾಗದ ಚಂದ್ರೂನ ಅಸಹಾಯಕತೆ ಮತ್ತು ಮಾನಸಿಕ ತೊಳಲಾಟ, ಪ್ರೀತಿಸಿದವಳು ಪರಪುರುಷನ ಹೆಂಡತಿಯಾದರೂ ಕೊನೆಯವರೆಗೂ ತನ್ನ ಪ್ರೀತಿಯನ್ನು ಕಾದಿರಿಸಿದ ಚೆನ್ನಣ್ಣ, ದೇಸಾಯಿಯ ಮೋಹದ ಬಲೆಯಲ್ಲಿ ಸಿಲುಕಿ ಮೋಸಹೋಗಿ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾಗಿ ಗರತಿತನ ಸೂಳೆಗಾರಿಕೆಯ ವ್ಯತ್ಯಾಸವೇನೆಂದು ತಿಳಿಯುವ ಮುನ್ನವೇ ವೇಶ್ಯೆಯಾದ ಸಾವಂತ್ರಿ, ಸೊಸೆಯನ್ನು ಮಗಳಂತೆ ಮುಚ್ಚಟೆಯಿಂದ ಕಾಣುವ ಸಿಂಗಾರೆವ್ವ—ಇವರೆಲ್ಲ ಬಹುಕಾಲ ಮನದಲ್ಲಿ ನಿಲ್ಲುವ ಪಾತ್ರಗಳು. ಕೆಳವರ್ಗದ ಜನರ ಕಳಂಕವಿಲ್ಲದ ನಡೆನುಡಿಗಳು, ಮಡಿವಂತಿಕೆಯಿಲ್ಲದ ಸಂಬಂಧಗಳು, ಮುಗ್ಧ ಮತ್ತು ನೇರ ವರ್ತನೆಗಳು ಅನನ್ಯವಾಗಿವೆ.

ಈ ಕಾದಂಬರಿಯ ಚಿಕ್ಕಿ 'ಚಿಕ್ಕಿ ಮತ್ತು ರಿಕ್ಷಾ' ಕತೆಯಲ್ಲೂ 'ಕದ್ದುಮುಚ್ಚಿ' ಕಾದಂಬರಿಗಳಲ್ಲೂ ಬಂದವಳೇ. ಜೋಪಡಿಪಟ್ಟಿಯ ದಿಟ್ಟ ಹೆಣ್ಣುಗಳಿಗೆ ಪ್ರತೀಕವಾದವಳು. ಈ ಕಾದಂಬರಿಯ ಪ್ರಾರಂಭವೂ 'ಧುಮ್ಮಸು'ವಿನ ಆರಂಭವೂ ಏಕಪ್ರಕಾರವಾಗಿದೆ. ಅಲ್ಲಿ ಬಸ್‌ಡ್ರೈವರ್ ಮಲ್ಲೇಶಿ ಮತ್ತು ಸೋನಿಯ ಜಾಗದಲ್ಲಿ ಇಲ್ಲಿ ಟ್ರಕ್‌ಡ್ರೈವರ್ ಚೆನ್ನಣ್ಣ ಮತ್ತು ಚಿಕ್ಕಿ. ಸೋನಿಯ ಸೌಂದರ್ಯದಿಂದ ವಿವಶನಾದ ಮಲ್ಲೇಶಿಯನ್ನು ಕುರಿಗಳ ಹಿಂಡು ದುಬುದುಬು ಎಂದು ಎಚ್ಚರಿಸಿದರೆ ಚೆನ್ನಣ್ಣನನ್ನು ಎತ್ತಿನ ಗಾಡಿಯ ಸದ್ದು ಎಚ್ಚರಿಸುತ್ತದೆ. ಚಿಣಿದಾಂಡು ಆಟವಾಡುತ್ತ ಪರಸ್ಪರ ಪರಿಚಯವಾಗುವುದು ಕೂಡ ಸಮಾನವಾಗಿದೆ. ಚಿಕ್ಕಿ ಅಜ್ಜನ ತೋಳಿನತೊಟ್ಟಿಲಲ್ಲಿ ಬೆಳೆದರೆ ಸೋನಿ ಅಪ್ಪನ ಆಸರೆಯಲ್ಲಿ ದೊಡ್ಡವಳಾಗುತ್ತಾಳೆ. ಸೋನಿ ಮತ್ತು ಚಿಕ್ಕಿಯರ ಪಾತ್ರಚಿತ್ರಣವೂ ಸಮಾನವಾಗಿದೆ. ಇಬ್ಬರ ಸ್ವಭಾವವೂ ತೀಕ್ಷ್ಣ. ಆಗ ತಾನೆ ಸಾಣೆ ಹಿಡಿದಿಟ್ಟ ಕತ್ತಿಯ ಅಲಗಿನಂತೆ ಹರಿತ, ಯಾವ ಗಂಡಿಗೂ ಸೊಪ್ಪು ಹಾಕದ ಸ್ವಾಭಿಮಾನ. ಎಲ್ಲರೊಂದಿಗೂ ಸರಸ, ನಗು, ತಮಾಶೆಯ ಮಾತುಕತೆ, ಹರಟೆ. ದೂರನಿಂತು ಅವರ ಸೊಕ್ಕಿದ ಹರೆಯಕ್ಕೆ ಬಿಸಿಯಾಗುವ ಗಂಡುಗಳಿಗೆ ಅವರ ಹತ್ತಿರ ಬಂದು ಕೆಣಕುವ ಧೈರ್ಯವಿಲ್ಲ. ಕೆಣಕಿದರೆ ಚಂಡಿ. ಸುತ್ತ ನೆರೆದ ಜನರ ನಡುವೆ ಕೆಣಕಿದವನಿಗೆ ಕಾಸಿನ ಕಿಮ್ಮತ್ತು.(ಚಿಕ್ಕಿಯ ಹರೆಯದ ದಿನಗಳು.ಪು.9, ಧುಮ್ಮಸು.ಪು.37) ಸೋನಿಯನ್ನು ನೀರಿನಿಂದ ರಕ್ಷಿಸುವುದರ ಮೂಲಕ ಮಲ್ಲೇಶಿ

ಅವಳಿಗೆ ಆಪ್ತನಾದರೆ ಚಿಕ್ಕಿಯನ್ನು ಹಾವಿನ ಭಯದಿಂದ ಕಾಪಾಡಿ ಚೆನ್ನ ಅವಳ ಹುಚ್ಚು ಹಿಡಿಸಿಕೊಂಡ. ಸೋನಿ ಚಿಕ್ಕಿಯರಿಬ್ಬರೂ ಕೋಳಿ ಮಾರಾಟಮಾಡುತ್ತಾರೆ.

**ಬದಲಾಗುವ ಬಣ್ಣಗಳು**

ಮೌಲ್ಯಾಧಾರಿತ ಬದುಕಿನಲ್ಲಿ ನಂಬಿಕೆಯಿಟ್ಟು ಶೀಲ, ಸಂಯಮಗಳಿಂದ ಸಾಧನೆಯ ತುತ್ತತುದಿಗೇರಿ ವಿಜೃಂಭಿಸಿದ ಓರ್ವ ಹೆಣ್ಣಿನ ಸುತ್ತ ಹೆಣೆದ ಕಥಾನಕ ಈ ಕಾದಂಬರಿ. ಫ್ಲ್ಯಾಷ್ ಬ್ಯಾಕ್ ತಂತ್ರವನ್ನು ಅಳವಡಿಸಿದ ಈ ಕಾದಂಬರಿ ಸುಪ್ರಸಿದ್ಧ ಸಿನಿಮಾತಾರೆ, ಅಭಿಮಾನಿಗಳ ಕನಸಿನ ಕನ್ಯೆ ಶ್ವೇತಾ 'ವರ್ಗೀಸ್ ಸಿಲ್ಕ್ಸ್ & ಸ್ಯಾರೀಸ್' ಮಳಿಗೆಯ ಪ್ರಾರಂಭೋತ್ಸವಕ್ಕೆ ಆಗಮಿಸುವ ಸನ್ನಿವೇಶದಿಂದ ಪುಟತೆರೆಯುತ್ತದೆ. ಲೇಖಕಿ ಅವಳನ್ನು ಪರಿಚಯಿಸುವುದು ಹೀಗೆ: 'ಶ್ವೇತಾ ಇಂದಿನ ಕನ್ನಡ ಚಲನಚಿತ್ರ ಪ್ರಪಂಚದ ಅತ್ಯಂತ ಬೇಡಿಕೆಯಲ್ಲಿರುವ ಸುಪ್ರಸಿದ್ಧ ಏಕೈಕ ತಾರೆ. ಅವಳ ಒಂದು ಕುಡಿ ನೋಟಕ್ಕಾಗಿ, ಒಂದು ಮುಗುಳ್ನಗೆಗಾಗಿ, ಕೊನೆಗೆ ಅವಳ ಒಂದು ಹತ್ತಿರದ ದರ್ಶನಕ್ಕಾಗಿ ಹಗಲಿನಿಂದ ಕಾದ ರೋಡಿನ ಮೇಲೆ, ಉರಿವ ಬಿಸಿಲಡಿಯಲ್ಲಿ ಬೇಯುತ್ತ ಬೆವರು ಸುರಿಸುತ್ತ ಕಾತರಿಸಿ ಕಾದು ನಿಂತ ಸಹಸ್ರ ಸಹಸ್ರ ಅಭಿಮಾನಿಗಳ ಕಿಕ್ಕಿರಿದ ಸಾಲು.' (5–6)

ಸಾರೀಸ್ ಸೆಂಟರ್ ಉದ್ಘಾಟನೆ ಮಾಡಿ ಹಿಂತಿರುಗುವಾಗ ಶ್ವೇತಾ ದಾರಿಯ ಅನಾಥ ಬಂಧುಗಳಿಗೆ ಹತ್ತತ್ತು ರೂಪಾಯಿ ದಾನಮಾಡುತ್ತಾಳೆ. ಆದರೆ ಅವರೆಲ್ಲ ಆ ಹಣವನ್ನು ಬೀದಿಗೆ ಎಸೆದು ಅವಳನ್ನು ಅವಾಚ್ಯವಾಗಿ ನಿಂದಿಸಿದಾಗ ಅಚ್ಚರಿಗೊಂಡ ಪತ್ರಿಕಾ ಪ್ರತಿನಿಧಿ ಶರತ್‌ಖನ್ನಾ ರಹಸ್ಯವನ್ನು ಭೇದಿಸಲು ಬರುತ್ತಾನೆ. ಶ್ವೇತಾಳ ಪಿ.ಎ. ಸಂಜೀವಕುಮಾರ್ ಸಂದರ್ಶನಕ್ಕೆ ಅವಕಾಶ ನೀಡದೆ ಸತಾಯಿಸಿದಾಗ ಅವಳನ್ನು ನೇರವಾಗಿ ಭೇಟಿಯಾಗಿ ಅನುಮಾನವನ್ನು ಮುಂದಿಡುತ್ತಾನೆ. ಆ ಅನಾಥರೆಲ್ಲ ತನ್ನ ಬಂಧುಗಳೆಂದು ತಿಳಿಸಿ ಅವನ ಕುತೂಹಲಕ್ಕೆ ನೀರೆರೆದ ಶ್ವೇತಾ ಬಚ್ಚಿಟ್ಟ ನೆನಪಿನ ಚೀಲದ ದಾರವನ್ನು ಬಿಚ್ಚುತ್ತ ಶರತ್‌ನ ಅನುಮಾನಗಳನ್ನು ಬಗೆಹರಿಸುತ್ತಾಳೆ.

ಮೋಹ್ವಾ ಮತ್ತಿತರ ಮರಗಳು ದಟ್ಟವಾಗಿ ಬೆಳೆಯುವ ಮಲೆನಾಡಿನ ಸೆರಗಿನಲ್ಲಿ ಮೈಚಾಚಿರುವ ಸುಂದರ ಹಳ್ಳಿ ಲಿಂಗದಳ್ಳಿಯ ಕೊರವರ ಮುಖಂಡ ಚಂದಪ್ಪ ಮಗಳು ಬೆಳ್ಳಿಗೆ ತನಗೆ ಜನ್ಮನೀಡಿ ಕಣ್ಣುಮುಚ್ಚಿದ ತಾಯಿಯ ಜಾಗದಲ್ಲಿ ಮೇಲುಜಾತಿಯ ಬ್ರಾಹ್ಮಣರ ಹೆಣ್ಣು ದೇವಕಿ ಚಿಕ್ಕಮ್ಮನಾದುದೊಂದು ವಿಸ್ಮಯ.

ಬಲೆಬೀಸಿ ಹಕ್ಕಿಗಳನ್ನು ಹಿಡಿದು ಮಾರಾಟಮಾಡಿ ಜೀವನಯಾಪನೆ ಮಾಡುವ ಚಂದಪ್ಪ ಒಂದುಸಲ ಬೇಟೆಗೆಂದು ಕಾಡಿಗೆ ಹೋಗಿದ್ದಾಗ ಹೊಳೆಗೆ ಬಿದ್ದ ರತ್ನಾಬಾಯಿಯನ್ನು ರಕ್ಷಿಸುತ್ತಾನೆ. ಮದುವೆಯಾದ ಮೊದಲದಿನವೇ ವಿಧವೆಯಾಗಿ ವೈಧವ್ಯದ ಪಟ್ಟ ಕಟ್ಟಿಕೊಳ್ಳಲು ಇಷ್ಟವಿಲ್ಲದೆ ಆತ್ಮಹತ್ಯೆ ಮಾಡಲು ಓಡಿ ಬಂದ ರತ್ನಾಬಾಯಿ ತನ್ನನ್ನು ಸಾವಿನಿಂದ ಕಾಪಾಡಿದ ಚಂದಪ್ಪನನ್ನು ಸಂತೋಷವಾಗಿಯೇ ಮದುವೆಯಾಗುತ್ತಾಳೆ. ರತ್ನಾಳಿಂದ ಕೊರವರ ಗುಡಿಸಲಿಗೆ ಸರಸ್ವತಿಯ ಪ್ರವೇಶವಾಗುತ್ತದೆ. ಕೊರವ ಜನಾಂಗದಲ್ಲೇ ಮೊತ್ತಮೊದಲು ಅಕ್ಷರಾಭ್ಯಾಸ ಮಾಡಿದ ಹುಡುಗಿ ಬೆಳ್ಳಿ.

ಪ್ರಾಯಪ್ರಬುದ್ಧಳಾದ ಬೆಳ್ಳಿ ಒಂದುದಿನ ಹಕ್ಕಿಗಳನ್ನು ಮಾರಲು ಹೋಗಿ ಹಿಂತಿರುಗುವಾಗ ಕತ್ತಲಾಯ್ತೆಂದು ಚಂದಪ್ಪ ಹೊಡೆಯುತ್ತಾನೆ. ಮಲತಾಯಿ ರತ್ನಾ (ದೇವಕಿ?) ಕೋಪಿಸುತ್ತಾಳೆ. ತನ್ನ ನಡತೆಯ ಬಗ್ಗೆ ಅನುಮಾನಿಸಿದ ಅವರ ವರ್ತನೆಯಿಂದ ಅವಮಾನಿತಳಾದ ಬೆಳ್ಳಿ ಬೆಳಗಾಗುವ ಮುನ್ನವೇ ಮನೆಬಿಟ್ಟು ದೂರದ ಮುಂಬೈ ರೈಲು ಹತ್ತುತ್ತಾಳೆ. ಮೂರುದಿನಗಳಿಂದ ಬರೀ ನೀರು ಸೇವಿಸಿ ಬದುಕಿದ ಆಕೆ ಮುಂದೆ ದಾರಿ ಕಾಣದೆ ವಿಹ್ವಲಳಾಗುತ್ತಾಳೆ. ನಗರದ ರೌಡಿಗಳ ಉಪಟಳವನ್ನು ತಪ್ಪಿಸುವ ಸಲುವಾಗಿ ಯಾವುದೋ ಕಾರಿನ ಚಕ್ರಗಳ ಬಳಿ ಅಡಗಿ ಕುಳಿತವಳನ್ನು ಮಾಲೀಕರಾದ ರತ್ನಪ್ರಭಾ ಮತ್ತು ಚಂದ್ರಪ್ರಭಾ ಎಂಬ ಶ್ರೀಮಂತ ಸೋದರಿಯರು ಮನೆಗೆ ಕರೆದುಕೊಂಡು ಹೋಗುತ್ತಾರೆ. ಕಾವಲಿಯಿಂದ ಒಲೆಗೆ ಬಿದ್ದಂತೆ ಅವರ ವೇಶ್ಯಾಗೃಹದೊಳಗೆ ಬೆಳ್ಳಿ ಬಂಧಿಯಾಗುತ್ತಾಳೆ. ಶೀಲವನ್ನು ಪ್ರಾಣಕ್ಕಿಂತಲೂ ಮಿಗಿಲೆಂದು ಭಾವಿಸುವ ಬೆಳ್ಳಿ ಅಲ್ಲಿಂದ ತಪ್ಪಿಸಿ ಓಡುವ ರಭಸದಲ್ಲಿ ಸಿನಿಮಾನಟಿಯರ ಆಯ್ಕೆಗೆ ಮುಂಬೈಗೆ ಬಂದ ಕನ್ನಡ ಚಿತ್ರ ನಿರ್ಮಾಪಕ ಚಿತ್ತರಂಜನ್ ದಾಸ್‌ನ ಕಾರಿಗೆ ಡಿಕ್ಕಿ ಹೊಡೆಯುತ್ತಾಳೆ. ಬೆಳ್ಳಿಗೆ ವೈದ್ಯಕೀಯ ಶುಶ್ರೂಷೆ ನೀಡಿ ಉಪಚರಿಸಿ ತನ್ನ ಚಿತ್ರಕ್ಕೆ ನಾಯಕಿಯಾಗಿ ಆರಿಸಿ ಚಿತ್ತರಂಜನ್ ದಾಸ್ ಅವಳನ್ನು ಬೆಂಗಳೂರಿಗೆ ಕರೆತರುತ್ತಾನೆ.

ಹಳ್ಳಿಯ ಕೊರವ ಹುಡುಗಿ ಬೆಳ್ಳಿ ಶ್ವೇತಾ ಆಗಿ ಸಿನಿಮಾ ನಾಯಕಿಯಾಗುತ್ತಾಳೆ. ಅವಳ ಕೀರ್ತಿ ಜನಪ್ರಿಯತೆಗಳು ಮುಗಿಲು ಮುಟ್ಟುತ್ತವೆ. ಅನೇಕ ಸಿನಿಮಾ ನಿರ್ಮಾಪಕರು ಅವಳಿಗಾಗಿ ಸರತಿಯ ಸಾಲಿನಲ್ಲಿ ಕಾಯುತ್ತಾರೆ. ಅವಳು ನಟಿಸಿದ ಸಿನಿಮಾಗಳು ರಾಷ್ಟ್ರಪ್ರಶಸ್ತಿಯನ್ನು ಪಡೆಯುತ್ತವೆ. ಹಣ, ಅಧಿಕಾರ, ಕೀರ್ತಿ, ಪ್ರಶಸ್ತಿಗಳ ಸೋಪಾನಗಳನ್ನೇರುತ್ತ ಸಾಗುವ ಬೆಳ್ಳಿಯ

ಒಳಗೆಲ್ಲೋ ನೋವು, ಸಂಕಟ, ಅವ್ಯಕ್ತ ಕುದಿ. ಹರೆಯದ ಆಸೆ, ಬಯಕೆಗಳು ಕಾಡಿದಾಗ. ಶ್ವೇತಾ ಮದುವೆಯಾಗಲು ಹಂಬಲಿಸುತ್ತಾಳೆ. ಆದರೆ ಸಿನಿಮಾಸುಂದರಿಯ ಆರಾಧಕರಾರೂ ಅವಳನ್ನು ಮದುವೆಯಾಗಲು ಸಿದ್ಧರಿಲ್ಲ. ಶರತ್‌ಖನ್ನಾ ತಾನೇ ಮದುವೆಯಾಗಲು ಇಚ್ಛಿಸುತ್ತಾನೆ. ಅವನ ಆರ್ಥಿಕ ಸಮಸ್ಯೆ ಹಾಗೂ ಇನ್ನಿತರ ಅಡಚಣೆಗಳನ್ನು ನಿವಾರಿಸಿ ಪಿ.ಎ. ಜತೆ ಹೊಡೆದಾಡಿ ಶ್ವೇತಾ ಶರತ್‌ನ್ನಾನನ್ನು ಮದುವೆಯಾಗುತ್ತಾಳೆ.

ಇಲ್ಲಿನ ವರ್ಣನೆ, ನಿರೂಪಣೆ, ಕಥಾತಂತ್ರ, ಸನ್ನಿವೇಶಗಳೆಲ್ಲ ಆಕರ್ಷಕವಾಗಿದ್ದರೂ ಕಥಾಸಂವಿಧಾನದಲ್ಲಿ ನೈಜತೆಯ ಕೊರತೆ ಕಾಣಿಸುತ್ತದೆ. ಘಟನೆಗಳೆಲ್ಲ ಒಂದು ಸುಖಾಂತ ಸಿನಿಮಾ ಕಥೆಯಂತೆಯೇ ಸಾಗುತ್ತವೆ. ಶ್ವೇತಾಳನ್ನು ಕೊನೆಯವರೆಗೂ ಯಾರೂ ನಂಬುವುದಿಲ್ಲ. ಸ್ವಯಂ ಅವಳ ತಂದೆಯ ವಿಶ್ವಾಸಕ್ಕೂ ಅವಳು ಪಾತ್ರಳಾಗುವುದಿಲ್ಲ. ಬಂಧುಗಳ ಅನುಮಾನವೂ ಬಗೆ ಹರಿಯುವುದಿಲ್ಲ. ಅವರೆಲ್ಲರ ಭಾವನೆಯಲ್ಲಿ ಶೀಲಗೆಟ್ಟವಳಾಗಿದ್ದರೂ ತನ್ನ ಶೀಲರಕ್ಷಣೆಯನ್ನೇ ಮುಖ್ಯವಾಗಿ ಎತ್ತಿಹಿಡಿದ ಶ್ವೇತಾಳ ಮೂಲಕ ಭಾರತೀಯ ಸಂಸ್ಕೃತಿಯ ಪರಂಪರಾಗತ ನೀತಿಸಂಹಿತೆಯನ್ನು ಒಪ್ಪಿಕೊಂಡ ಓರ್ವ ಸಾಂಪ್ರದಾಯಿಕ, ಸದ್ಗುಣಸಂಪನ್ನಳಾದ ಆದರ್ಶಹೆಣ್ಣನ್ನು ಚಿತ್ರಿಸುವಲ್ಲಿ ಕಾದಂಬರಿಯ ಉದ್ದೇಶವಿದೆಯೆನ್ನುವುದು ಸ್ಪಷ್ಟವಾಗುತ್ತದೆ.

**ನೀಲಗಂಗಾ**

ಈ ಕಾದಂಬರಿ ಶ್ರೇಣೀಕೃತ ಸಮಾಜ ವ್ಯವಸ್ಥೆಯ ದುರಂತಗಳನ್ನೂ ಊಳಿಗಮಾನ್ಯ ಪದ್ಧತಿಯ ಕಪಿಮುಷ್ಟಿಯಲ್ಲಿ ನಲುಗುವ ಜನಸಾಮಾನ್ಯರ ದಾರುಣ ಬದುಕನ್ನೂ ಕಣ್ಣಿಗೆ ರಾಚುತ್ತದೆ. ಮೇಲುಜಾತಿಯ ಗಂಡಸರ ಕಾಮತೃಷೆಗೆ ಬಲಿಯಾದ ನೀಲಗಂಗಾ ಮತ್ತು ಲಚ್ಚಿ ಎಂಬ ಹೆಣ್ಣುಮಕ್ಕಳ ಕಥೆ ಇದು.

ಕಾದಂಬರಿ ತೆರೆಯುವುದೇ ಲೈಂಗಿಕತೆಯ ವರ್ಣನೆಯೊಂದಿಗೆ. ಪ್ರಕೃತಿಯ ಪ್ರತಿಯೊಂದು ಚೈತನ್ಯವೂ ಲೈಂಗಿಕ ಕ್ರಿಯೆಯನ್ನೇ ದರ್ಶಿಸುತ್ತದೆ. 'ಮಳೆ..ಮಕ್ಕಳು.. ಹೆಣ್ಣು..ಕಾಮ..ಇಲ್ಲಿಯ ಜನರ ಅತ್ಯಂತ ಸೂಕ್ಷ್ಮ ಮರ್ಮಾಂಗಗಳು' (5) ಎನ್ನುವ ಕಾದಂಬರಿಗಾರ್ತಿ ಗೊಳ್ಯಾದ ಲಕ್ಕವ್ವ ದೇವತೆಯ ನಿತಂಬ ಪೂಜೆ ಹಾಗೂ ಜೋಕುಮಾರ ಸ್ವಾಮಿಯ ಪೋಲಿ

ಸಾಹಸ, ಕಚ್ಚೆಹರುಕತನವನ್ನು ವರ್ಣಿಸುತ್ತ ಯೋನಿ, ಶಿಶ್ನಗಳ ಪ್ರಸ್ತಾಪ, ಭೂಮಿ, ಬೀಜ, ಬೆದೆ, ಬೆಳೆಗಳನ್ನು ಉಲ್ಲೇಖಿಸಿರುವುದು ಗಮನಾರ್ಹ.

ನೀಲಗಂಗಾ ಭೋಸಗಾ ಹಳ್ಳಿಯ ಸಮಗಾರರ ಹುಡುಗಿ. ಹತ್ತು ವರ್ಷಕ್ಕೇ ತಂದೆ ಸತ್ತು ತಾಯಿ ಲಕ್ಕವ್ವ ಅವಳನ್ನೂ ಅವಳ ತಮ್ಮ ಈರಭದ್ರನನ್ನೂ ಕೂಲಿ ಕೆಲಸ ಮಾಡಿ ಸಾಕುತ್ತಾಳೆ. ಚಿಕ್ಕಂದಿನಿಂದಲೇ 'ಕಾಡಿನಲ್ಲಿ ಸ್ವತಂತ್ರವಾಗಿ ಬೆಳೆದು ಸೊಕ್ಕಿದ ಹರೆಯ ಹೊತ್ತು ನಿಂತು ಮುಸುಗುಡುವ ಗಿಡದಂತೆ ಯಾರ ಅಂಕೆಗೂ ಸಿಗದೆ ಬೆಳೆದ ಗಂಡುಬೀರಿ' ನೀಲಗಂಗಾ ಬಲು ದಿಟ್ಟೆ. ಸಮಗಾರ ಕೇರಿಯ ಅಪ್ರತಿಮ ಚೆಲುವೆ. ಬದುಕಿನ ಬಗೆಗೆ ಬಹಳಷ್ಟು ಆಸೆ, ಕನಸುಗಳನ್ನು ಕಂಡವಳು. ಶ್ರೀಮಂತ, ವಿದ್ಯಾವಂತ ಗಂಡನ್ನು ಮದುವೆಯಾಗಬೇಕೆನ್ನುವ ಆಸೆ ಹೊತ್ತವಳು. 'ಅಂತವರೆಲ್ಲಾ ನಮ್ ಕುಲದಾಗ ಎಲ್ಲ ಸಿಗತಾರ ಕೂಸು.. ಅದೆಲ್ಲ ಹಾರುಗೋಳು ಮಾಡಾ ಕೆಲ್ಸಾ.. ಹಾರಂವಾ ನಿನಗ ಹಾಳ ಮಾಡ್ತಾನ ಖರೇ. ಆದರ ಮದಿ ಮಾಡ್ಕೊಮಂಗಿಲ್ಲ.. ಹಿಂತಾ ಕೆಟ್ಟ ಕನಸ ಕಟ್ಬಾದ ಬಿಡು ನೀ.' ಎನ್ನುವ ಅಜ್ಜಿಯ ಉಪದೇಶ ಕೆಳವರ್ಗದ ಬದುಕಿನ ಕರಾಳ ವಾಸ್ತವಕ್ಕೆ ಕನ್ನಡಿ ಹಿಡಿಯುತ್ತದೆ.

ತನ್ನನ್ನು ಇಷ್ಟಪಟ್ಟ ವರಗಳನ್ನೆಲ್ಲ ನಿರಾಕರಿಸಿದ ನೀಲಗಂಗಾ 'ಕೆಂಪು ಮೈಬಣ್ಣದ ಕುಡಿಮೀಸೆಗಳ ಮಿಂಚುಗಣ್ಣುಗಳ....' ಗಂಡು ಮಲ್ಲೇಶಿಯನ್ನು ಮದುವೆಯಾಗುತ್ತಾಳೆ. ಗೊಳ್ಯಾದ ನಡುವಯಸ್ಸಿನ ಕಚ್ಚೆಹರುಕ ಸಾಹುಕಾರ ಕಾಳಿಂಗಪ್ಪನ ಊಳಿಗದಾಳು ಮಲ್ಲೇಶಿ. ಕಾಳಿಂಗಪ್ಪನಿಗೆ 'ಹಳ್ಳಿಯ ಎಲ್ಲ ಬಡವರ ಎರಹೊಲಗಳೂ ಕಾಲಕೆಳಗೆ ಗಿರವಿ. ಹಳ್ಳಿಯ ಎಲ್ಲ ಚೆಲುವಿನ ಹೆಣ್ಣುಗಳೂ ಸೊಂಟದ ಕೆಳಗೆ ಅಡವು.'(24) ಈ ಕಾಮುಕ ಮಲ್ಲೇಶಿಯ ಚೆಲುವಿನ ಮಡದಿಗೆ ಕಣ್ಣು ಹಾಕಿ ಮಲ್ಲೇಶಿ ಕೆಲಸದ ನಿಮಿತ್ತ ಗುಲಬರ್ಗಕ್ಕೆ ಹೋದಾಗ ಅವನನ್ನು ಸಾಯಿಸುವ ಬೆದರಿಕೆ ಹಾಕಿ ನೀಲಗಂಗಾಳನ್ನು ತನ್ನ ಕಾಮದ ಬೆಂಕಿಗೆ ಆಹುತಿ ಕೊಡುತ್ತಾನೆ.

ಇದೇ ಸಂದರ್ಭದಲ್ಲಿ ಹಾರುವರ ರಾಮಪ್ಪ ಕೆಡಿಸಿದ ಮಾನಿಂಗನೆಂಬವನ ಮಡದಿ ಲಚ್ಚಿಯನ್ನು ಬಂಧಿಸುವ ವಿಚಿತ್ರಪ್ರಕರಣವೊಂದು ನಡೆಯುತ್ತದೆ. ಅತ್ಯಾಚಾರಕ್ಕೊಳಗಾದ ಪತ್ನಿಯನ್ನು ತೊರೆಯುವ ಮಾನಿಂಗನ ಬೇಕೂಫತನ ಮತ್ತು ಅವನನ್ನು ಬೆಂಬಲಿಸಿದ ಸಾಹುಕಾರ ಕಾಳಿಂಗಪ್ಪನ ತೀರ್ಮಾನ ಸ್ತ್ರೀವಿರೋಧೀ ನಿಲುವನ್ನು ಸಾಬೀತುಪಡಿಸುತ್ತದೆ. ಈ ಘಟನೆಯ ಮೂಲಕ

ಪೌರಾಣಿಕ ಪ್ರಸಂಗಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ಮೇಲುವರ್ಗದ ಹುರಿಯಾಳುಗಳ ಕುತಂತ್ರ ಹಾಗೂ ಮೊಸಗಾರಿಕೆಯನ್ನೂ ಲೇಖಕಿ ಅತ್ಯಂತ ಮನೋಜ್ಞವಾಗಿ ಬಯಲಿಗಿಡುತ್ತಾರೆ: 'ಶೂದ್ರ ಹೆಂಗಸ್ರಿಗಿ ಬ್ರಾಂಬ್ರು ಮುಟ್ಟಿದರ ಅವ್ರು ಪವಿತ್ರ ಆಗ್ತಾರಂತ ನಮ್ ಪುರಾಣದೊಳಗೇ ಹೇಳ್ಯಾದ. ಹಿಂದಕ್ಕೆಲ್ಲ ದೊಡ್ಡ ದೊಡ್ಡ ರುಸಿ ಮುನಿಗೋಳು, ಹಾದಿಬೀದಿ ಅನಲಾರ್ದೆ, ಅಡವಿ ಅರಣ್ಯಾ ಅನಲಾರ್ದೆ, ಶೂದ್ರ ಹೆಣ್ಣುಗೋಳ ಬಳಿ ಮಲಕೋತಿದ್ರು ಅಂತ ಮಹಾಭಾರತದಾಗೇ ಬರೆದಿದ್ದಾರೆ. ಆದರೆ ಈಗ ಕಾಲ ಬದಲಾಗ್ಯಾದ. ಈಗ ಬಾಂಬ್ರೇನೂ ಹಾಂಗ ಹಾದ್ಯಾಗ ಬೀದ್ಯಾಗ ಏನೂ ಮಾಡಂಗಿಲ್ಲ.. ಈ ಲಚ್ಚಿ ಸುಳ್ಳಾಡ್ಲಕತ್ತಾಳಂಬಾದು ನಮಗೆ ತಿಳಿದದ....ರಾಮಪ್ಪ ಹಳ್ಯಾಗೇ ದೊಡ್ಡ ಮನುಷ್ಯಾ, ಮರ್ವಾದೆ ಉಳ್ಳವ್ರು. ಅವನ ಮಾರಿಗಿ ಮಸಿ ಬಳ್ಯಾ ಕೆಲ್ಸ ಈ ಶೂದ್ರ ಮಕ್ಕಳ್ದು..ಲಚ್ಚಿ ಮಾ ಹರಾಮ ಹೆಂಗ್ಸದಾ..ಇದು ನಮ್ಮ ಇಜ್ಜತಕಳ್ಯಾ ಕೆಲ್ಸಾ.. ಮಾನಿಂಗ ಏನೂ ತಿಳೀಲಾರ್ದ ಅಮಾಯಕ ನನ್ಮಗಾ.... ನನ್ ಆಳಮಗಾ, ಅವಂದೇನೂ ತಪ್ಪಿಲ್ಲ. ಅವನಿಗಿ ಈ ಲಚ್ಚಿ ಅವ್ವನ್ಹಂತಾ ಹೆಣ್ಣ ತಂದು ಮದಿ ಮಾಡ್ತೀನಿ ನಾ. ಈಗ ನ್ಯಾಯದ ಪ್ರಕಾರ ಮಾನಿಂಗಾಗಲೀ ರಾಮಪ್ಪ ಆಗಲೀ ತಪ್ಪಿತಸ್ಥರಲ್ಲ.. ಲಚ್ಚೀನೇ ಇದಕ್ಕೆಲ್ಲ ತಪ್ಪಿತಸ್ಥಳು..ಲಚ್ಚಿಗಿ ಹೊಡಿಬೇಕು ಮಚ್ಚೀಲಿ ನಮ್ಮೂರ ಮಾನಮರ್ವಾದಿ ಕಳ್ಯಾ ಕೆಲಸಾ ಮಾಡ್ಯಾಳಿಕಿ ಈಕಿಗಿ ಇನ್ನ ನಮ್ ಹಳ್ಳ್ಯಾಗ ಜಾಗಾ ಇಲ್ಲ. ಈಕಿ ಇವತ್ತಿಂದಿವತ್ತೇ ಈ ಹಳ್ಳಿ ಬಿಟ್ಟು ಹೋಗ್ಬೇಕು. ನಾಳಿಗಿ ಈಕಿ ಈ ಹಳ್ಳ್ಯಾಗ ಎಲ್ಲೆರೆ ಕಂಡಳಂದ್ರ ಈ ಚಾವಡಿ ಮುಂದಿನ ಗಿಡಕ್ಕ ಬಿಗ್ದು ಲಕ್ಕಿ ಜಬರ್‍ರಿಲಿಂದ ಹೊಡ್ದು ಹೊರಗ್ಹಾಕತೇನಿ ಹುಷಾರ್? ' ಸಿಡಿಲು ಹೊಡೆದಂತೆ ಪಂಚಾಯಿತಿ ನ್ಯಾಯವನ್ನು ಕೇಳಿ ದಿಗ್ಭ್ರಾಂತಳಾದ ಲಚ್ಚಿ ಬದುಕುವ ದಾರಿ ಕಾಣದೆ ನೇಣುಹಾಕುತ್ತಾಳೆ.

ಸಾಯುವ ಹಿಂದಿನ ದಿನ ರಾತ್ರಿ ನೀಲಗಂಗಾಳ ಜತೆ ಮಾತನಾಡುತ್ತ ಹಾರುವ ರಾಮಪ್ಪ ತನ್ನನ್ನು ಕೆಡಿಸುವುದನ್ನು ಕಂಡರೂ ಸುಮ್ಮನಿದ್ದ ಗಂಡ ರಾತ್ರಿ ಚಪ್ಪಲಿಯಿಂದ ಹೊಡೆದು ಉರಿಯುವ ಕಟ್ಟಿಗೆಯಿಂದ ಹೊಟ್ಟೆ, ಬೆನ್ನು ತೊಡೆಗಳನ್ನು ಸುಟ್ಟು ಹಾಕಿದ ವಿಚಾರವನ್ನು ತಿಳಿಸುತ್ತ ಲಚ್ಚಿ ತಮ್ಮ ಜಾತಿಯ ಗಂಡಸರ ಷಂಡತನವನ್ನು ಹಂಗಿಸುತ್ತಾಳೆ: 'ನಮ್ಮ ಜಾತಿ ಗಂಡಸರು ಬರೇ ಹೆಸರಿಗೆ ಗಂಡಸರೇ ತಂಗೀ.. ನಮ್ ಗಂಡಸರ ಮೀಸಿ ಅಂದ್ರ ಆಡಿನ ಕುತಗ್ಯಾನ ಮಲಿ ಇದ್ದಂಗ. ಹೊಲಗೇರ್‍ಯಾಗ, ಕಬ್ಬಲಗೇರ್‍ಯಾಗ ಗಂಡಸಾಗಿ ಹುಟ್ಟದಕ್ಕಿನ್ನಾ ಅಡವ್ಯಾಗ ಉಡು ಆಗಿ ಹುಟ್ಟಾದು ಬೇಸಿ. ಊರಾಗ

ನಾಯಿಗೋಳಿಗೆ ಬೆಲಿ ಅದಾ ... ಮೈಯಾಗ ಸೊಕ್ಕ, ಹಲ್ಲಾಗ ನಲ್ಗಿ ಇದ್ದೂ ನಮ್ ಗಂಡಗೋಳು ಗೋರ್‍ಯಾನ ಹೆಣಗೋಳ್ಹಂಗ ಬದಕತಾವ. ದೊಡ್ಡ ಕುಲದವರ ಕಾಲಾನ ಕೆರು ಆಗಿ ಸಂಪ್ಯಾದೇ ಇವುದರ ಬಾಳ್ಯಾ..' (42)ಎನ್ನುತ್ತಾಳೆ. ಅದಕ್ಕುತ್ತರವಾಗಿ ನೀಲಗಂಗಾ 'ಹೊಯಿಂದೇ ಲಚ್ಚಿ, ನಮ್ ಗಂಡಸರಿಗೆ ಎಂದು ಧೈರ್ಯ ಬರ್ತದೋ ಏನೋ.... ಹಾಂಗ ನೋಡಿದ್ರ ನಮ್ ಗಂಡಸ್ರೆಲ್ಲಾ ಕೂಡಿ ಕೈಯಾಗ ಬಡಗಿ, ಬಾಚಿ ಹಿಡಿದು ನಿಂತ್ರ ಈ ಹಾರುಗೋಳು, ದೇಸಾಯಿಗಳೆಲ್ಲಾ ಧೋತರದಾಗೇ ಹೇಲಕೋತ ಉಚ್ಚಿ ಹೊಯ್ಕೋತ ಓಡಿ ಹೋಗ್ತಾರ. ಆದರೆ ಇವರೆಲ್ಲಾ ಎಂದ ಒಂದಾಗಿ ಧೈರ್ಯ ತಂದ್ಕೋಬೇಕೋ.. ಯಾ ಕಾಲಕ್ಕೋ..'(ಅದೇ) ಎಂದು ನಿಟ್ಟುಸಿರಿಡುತ್ತಾಳೆ. ನೀಲಗಂಗಾ ಮತ್ತು ಲಚ್ಚಿಯ ಪಾತ್ರರಚನೆಯಲ್ಲಿ ಕಾದಂಬರಿಕಾರ್ತಿ ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಪ್ರತಿರೋಧದ ಕಿಡಿಗಳನ್ನು ಹಚ್ಚುತ್ತಾರೆ. ವಾಸ್ತವತೆಯನ್ನು ನಿರೂಪಿಸುತ್ತ ಪರಿವರ್ತನಶೀಲ ಸಮಾಜ ರಚನೆಗೆ ಬೇಕಾದ ಆತ್ಮವಿಶ್ವಾಸ, ಧೈರ್ಯ, ಛಲಗಳನ್ನು ಉದ್ದೀಪಿಸುತ್ತಾರೆ. ನೀಲಗಂಗಾಳನ್ನು ವಶಪಡಿಸಿಕೊಂಡ ಕಾಳಿಂಗಪ್ಪ ತನಗೆ ಬೇಕಾದಾಗಲೆಲ್ಲ ಕೆಲಸದ ನೆಪಹೇಳಿ ಮಲ್ಲೇಶಿಯನ್ನು ಕಲ್ಬುರ್ಗಿಗೆ ಕಳುಹಿಸುತ್ತಿದ್ದ. ಆಗುವ ಅನ್ಯಾಯವನ್ನು ಗಂಡನಿಗೆ ಹೇಳಲಾಗದೆ ಹೇಳದಿರಲಾಗದೆ ಒಳಗೊಳಗೇ ನರಳುತ್ತಿದ್ದ ನೀಲಗಂಗಾ ಪ್ರಾಯಪ್ರಬುದ್ಧನಾಗುತ್ತಿದ್ದ ತಮ್ಮನ ತಲೆ ನೇವರಿಸಿ ಆಡುವ ಮಾತುಗಳು ಸಮುದಾಯದ ಸುಧಾರಣೆಯ ಬಗ್ಗೆ ಲೇಖಕಿ ಎಷ್ಟು ಗಂಭೀರವಾಗಿ ಚಿಂತಿಸಿದ್ದಾರೆಂಬುದಕ್ಕೆ ನಿದರ್ಶನವಾಗುತ್ತದೆ. 'ನೀ ದೊಡ್ಡಂವಾ ಆಗಿ ಹುಷಾರಾಗ್ಬೇಕು ಈರಾ... ನಮ್ ಜಾತ್ಯಾಗ ಎಲ್ಲಾ ಗಂಡಸ್ರು ಹುಷಾರಾದ್ರಂದ್ರ ಮುಂದಿನ ಹೆಣ್ಣು ಮಕ್ಕಳರ ಸುಖವಾಗಿರ್‍ತಾರ. ಈ ಎಲ್ಲಾ ಸಾವ್ಕಾರಗೋಳ, ದೊಡ್ಡ ಕುಲದ ಗಂಡಗೋಳ ಸೊಕ್ಕ ಮುರೀಬೇಕು ನೀವು.'(45) ಕಾದಂಬರಿಯಲ್ಲಿ ಮಲ್ಲೇಶಿ, ಮಾನಿಂಗಿ, ಲಚ್ಚಿ ಎಲ್ಲರೂ ದುರ್ಮರಣವನ್ನಪ್ಪುತ್ತಾರೆ. 'ಏ ಮೋಜುದಾರಾ, ನನ್ ಹೇಳ್ಕಿನೂ ಬರ್‍ಕೋ.. ನನ್ ಗಂಡ ಯಾಕ್ ಸತ್ತನಂತ ನನಗೆ ಗೊತ್ತದಾ.... ಇಲ್ಲಿ ಕುಂತಾನಲ್ಲ ಕಾಳಿಂಗಾ. ಇಂವಾ ನನ್ನ ಕೆಡಿಸಿದ್ದ. ನನ್ ಮಲ್ಲೂಗ ನಿನ್ನೆ ಅದು ತಿಳೀತ. ಅಂವಾ ತಾಳಲಾರ್ದೆ ಇವನ ತೋಟದ ಭಾಂಯಾಗ ಬಿದ್ದು ಸತ್ತ. ಈ ಸಾವ್ಕಾರನೇ ನನ್ ಗಂಡಗ ಕೊಲ್ಲ್ಯಾನ್ರಪೋ... ಇದು ಖರೇ..' ನೀಲಗಂಗಾಳ ಕೆಚ್ಚೆದೆ, ಆತ್ಮಶಕ್ತಿ, ಧೈರ್ಯ, ರೋಷ ಎಲ್ಲವೂ ಅತ್ಯಂತ ಅರ್ಥಪೂರ್ಣವಾಗಿ ಕಾದಂಬರಿಯ ಉದ್ದೇಶವನ್ನು ಯಶಸ್ವಿಗೊಳಿಸುತ್ತವೆ.

ಗಂಡನನ್ನು ಕಳೆದುಕೊಂಡ ನೀಲಗಂಗಾ ಚೇತರಿಸಿಕೊಳ್ಳದಷ್ಟು ಕುಸಿಯುತ್ತಾಳೆ. ಬುದ್ಧಿಭ್ರಮಣೆಗೊಳಗಾದ ಆಕೆ ಸಾಹುಕಾರ್ತಿ ತನಗೆ ಕೊಡಿಸಿದ ಕಾಳಿಂಗನ ತೋಟಕ್ಕೆ ಬೆಂಕಿ ಹಚ್ಚಿ ಹುಚ್ಚಿಯಂತೆ ಕುಣಿಯುತ್ತ ಊರೂರು ತಿರುಗುತ್ತಾಳೆ. ಕಾದಂಬರಿಯ ಆಶಯ ಮುಂದುವರಿದು ಕಾಳಿಂಗಪ್ಪನ ಮಗಳು ಸಂಗಮ್ಮನನ್ನು ನೀಲಗಂಗಾಳ ತಮ್ಮ ಈರಭದ್ರ ಇಷ್ಟಪಡುವಂತೆ ಯೋಜನೆ ಹಾಕುತ್ತದೆ. ಅಕ್ಕನನ್ನು ಹುಚ್ಚಿ ಮಾಡಿದ ಸಾಹುಕಾರ ಕಾಳಿಂಗಪ್ಪನನ್ನು ಕೊಂದು ಸೇಡು ತೀರಿಸಿದ ಈರಭದ್ರ ಹೊಲೆಯರ ದ್ಯಾವಿಯನ್ನು ಕರೆದೊಯ್ಯಲು ಬಂದ ಆಳನ್ನು ಥಳಿಸುವುದರ ಮೂಲಕ ದಲಿತ ಸಮುದಾಯದ ಎಚ್ಚೆತ್ತ ಪ್ರಜ್ಞೆಯ ಸಾಕಾರವಾಗುತ್ತಾನೆ.

ಕಾದಂಬರಿಯಲ್ಲಿ ಸಾಹುಕಾರನ ಪತ್ನಿ ಶಿವನಿಂಗವ್ವನ ಪಾತ್ರವೂ ವಿಶಿಷ್ಟವಾಗಿದೆ. ಸಾಮಾನ್ಯವಾಗಿ ಗೀತಾರವರ ಕಾದಂಬರಿಗಳಲ್ಲಿ ಈ ಬಗೆಯ ಪಾತ್ರಗಳು ಅವತರಿಸುವುದು ಕಡಿಮೆ. ಇಲ್ಲಿ ಶಿವನಿಂಗವ್ವ ಶಿವಗಂಗಾಳನ್ನು ಸಂತೈಸುತ್ತಾಳೆ. ತನ್ನ ಗಂಡನಿಂದ ಅವಳಿಗಾದ ಅನ್ಯಾಯಕ್ಕೆ ಪರಿಹಾರ ಕೊಡಿಸುತ್ತಾಳೆ. ಮಗಳು ಸಂಗಮ್ಮ ಈರನನ್ನು ಮದುವೆಯಾಗುವ ವಿಚಾರದಲ್ಲೂ ಒತ್ತಾಸೆ ನೀಡುತ್ತಾಳೆ. ಗಂಡನ ಕೊಲೆಗಾರ ಯಾರೆಂಬುದು ತಿಳಿದಿದ್ದರೂ ಸತ್ಯವನ್ನು ಮರೆಮಾಚಿ ಈರಭದ್ರನನ್ನು ರಕ್ಷಿಸುತ್ತಾಳೆ. ಮೇಲುವರ್ಗದಲ್ಲೂ ಕಾಣುವ ಒಳ್ಳೆಯತನಕ್ಕೆ ಶಿವನಿಂಗವ್ವ ಸಾಕ್ಷಿಯಾಗುತ್ತಾಳೆ.

ಶಿವಗಂಗಾ ಪುಟ್ಟ ಕಾದಂಬರಿಯಾದರೂ ಇದರೊಳಗಿನ ಹೂರಣ ತುಂಬ ಮಹತ್ವದ್ದಾಗಿದೆ. ಸುಧಾರಿತ ಸಮಾಜವ್ಯವಸ್ಥೆಯ ಹತ್ತು ಹಲವು ತಳಿಗಳನ್ನು ಕಥೆಯ ಭೂಮಿಕೆಯೊಳಗೆ ಹುದುಗಿಸಿರುವುದು ಕಾದಂಬರಿಕಾರ್ತಿಯ ದರ್ಶನ ಸಂಪತ್ತಿಗೆ ಸಾಕ್ಷಿ.

## ಪ್ರೀತಿಸಿದ್ದು ನಿನ್ನನ್ನೇ

2010ರಲ್ಲಿ ಪ್ರಕಟವಾದ ಈ ಕಾದಂಬರಿ ಗೀತಾ ನಾಗಭೂಷಣರ ಇಪ್ಪತ್ತನೆಯ ಕಾದಂಬರಿ. ದಲಿತಪರ ನಿಲುವುಗಳು ಹೆಪ್ಪುಗಟ್ಟಿರುವ ಈ ಕೃತಿ ಜೋಪಡಿಪಟ್ಟಿಯ ದಲಿತ ಹೆಣ್ಣೊಬ್ಬಳ ಧೈರ್ಯ, ಸಾಹಸ, ಪ್ರೀತಿ, ಪ್ರಣಯಗಳ ಸಾಹಸಮಯ ಜೀವನ ವೃತ್ತಾಂತವನ್ನು ಬಣ್ಣಿಸುತ್ತದೆ. ಶ್ರೀಮಂತಿಕೆ ಮತ್ತು ಬಡತನಗಳ ಮಧ್ಯೆ ಸುಖ, ಸಂಪತ್ತುಗಳ ನಿಜವಾದ ಅರ್ಥವೇನೆಂಬುದನ್ನು ನಿರೂಪಿಸಿ ಉತ್ತಮ ವೈಚಾರಿಕತೆ ಮತ್ತು ಜೀವನ ಸಂದೇಶವನ್ನು ನೀಡುತ್ತದೆ.

ಆಗರ್ಭಶ್ರೀಮಂತನೂ ಬಹುದೊಡ್ಡ ಕಂಪೆನಿಗಳ ಮಾಲೀಕನೂ ಆದ ಆಕಾಶ ವಿದೇಶದಲ್ಲಿದ್ದು ಅಲ್ಲಿಯ ಅಸಂಖ್ಯ ಹೆಣ್ಣುಗಳ ಹಾವಭಾವ ಬೆಡಗುಗಳಿಗೆ ಮನಸೋಲದಿದ್ದವನು ಒಂದೇ ಒಂದು ಸಲದ ಭೇಟಿಯಿಂದ ಅತಿ ಸಾಮಾನ್ಯ ಬೆಸ್ತರ ಹುಡುಗಿ ಚಂದಾಳಲ್ಲಿ ಅನುರಕ್ತನಾಗುತ್ತಾನೆ. ಪ್ರೀತಿ, ಪ್ರಣಯಗಳಿಗೆ ಕಾಲ, ದೇಶ, ಗುರುತು, ಪರಿಚಯ ಯಾವುದೂ ಬೇಕಾಗಿಲ್ಲವೆಂದೂ ಒಂದು ಕ್ಷಣದ ನೋಟ, ಮಾತು ಹೆಣ್ಣುಗಂಡುಗಳನ್ನು ಪರಸ್ಪರ ಒಂದುಗೂಡಿಸಬಲ್ಲುದೆಂದೂ ರುಜುವಾತುಪಡಿಸಿದ ಆಕಾಶ್ ಮತ್ತು ಚಂದಾರ ಅನುರಾಗ ಮತ್ತು ಒಲವಿನ ಬೆಸುಗೆ ಕಾದಂಬರಿಯಲ್ಲಿ ಅನನ್ಯವಾಗಿ ವರ್ಣಿತವಾಗಿವೆ. (ಪು22)

ಭವಾನಿ ಮಿಲ್ಲಿನ ಕಾರ್ಮಿಕ ಚೆನ್ನಪ್ಪ ತಂದೆತಾಯಿಗಳನ್ನು ಕಳೆದುಕೊಂಡು ಚಿಕ್ಕಂದಿನಲ್ಲೇ ಅಕ್ಕನೊಂದಿಗೆ ಹುಟ್ಟೂರಾದ ಸಾವಳಗಿಯಿಂದ ನಗರಕ್ಕೆ ಬಂದ ಶ್ರಮಜೀವಿ. ಬ್ರಾಹ್ಮಣ ಹುಡುಗರ ಬೋರ್ಡಿಂಗ್‌ನಲ್ಲಿ ಕೆಲಸಮಾಡುತ್ತಿದ್ದ ಆತ ದೊಡ್ಡವನಾದಾಗ ಯಾರದೋ ವಶೀಲಿಯಿಂದ ಆರ್ಯಸಮಾಜದಲ್ಲಿ ಕೆಲಸಕ್ಕೆ ಸೇರಿ ಅಲ್ಲಿಗೆ ಬರುವ ಹೋಗುವ ಸ್ವಾತಂತ್ರ್ಯ ಹೋರಾಟಗಾರರ ಸಂಪರ್ಕದಿಂದ, ಅವರ ಭಾಷಣ, ಸಭೆಗಳ ಪ್ರಭಾವದಿಂದ ಕಟ್ಟಾ ದೇಶಪ್ರೇಮಿಯಾಗುತ್ತಾನೆ. ಸೆರೆಮನೆವಾಸವನ್ನೂ ಅನುಭವಿಸಿದ ಆತ ಇಪ್ಪತ್ತೈದನೆಯ ವಯಸ್ಸಿನಲ್ಲಿ ಗಂಗಾ ಎಂಬ ಹುಡುಗಿಯೊಂದಿಗೆ ವಿವಾಹವಾಗಿ ಮೂರು ಮಕ್ಕಳ ತಂದೆಯಾಗುತ್ತಾನೆ. ಆತನ ಚೊಚ್ಚಿಲ ಮಗಳೇ ಚಂದಾ.

ಚೆನ್ನಪ್ಪನಿಗೆ ಅಕ್ಷರಾಭ್ಯಾಸವಿಲ್ಲದಿದ್ದರೂ ಅನೇಕ ಭಾಷೆಗಳು ತಿಳಿದಿದ್ದುವು. ರಾಮಾಯಣ, ಭಾರತಗಳು ಪರಿಚಿತವಾಗಿದ್ದುವು. ಚಂದಾ ಹುಟ್ಟಿದಾಗ ಹಾರುವರ ಕೇರಿಯಲ್ಲಿ ವಾಸಮಾಡುತ್ತಿದ್ದ ಕಾರಣ ಅವಳು ಬ್ರಾಹ್ಮಣ ಮಕ್ಕಳೊಂದಿಗೆ ಶಾಲೆಗೆ ಹೋಗಿ ಕಲಿಯಲು ಅವಕಾಶವಾಗಿತ್ತು. ಚಂದಾ ಮೆಟ್ರಿಕ್ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಪಾಸಾಗಿ ಬ್ರಾಹ್ಮಣ ಹುಡುಗಿಯನ್ನೂ ಮೀರಿಸುವಷ್ಟು ಜಾಣೆಯಾದಾಗ ಊರವರೆಲ್ಲ ಅವರನ್ನು ಹಾರುವರ ಕೇರಿಯಿಂದ ಎತ್ತಂಗಡಿ ಮಾಡಿಸಿದ್ದರು.

ಜೋಪಡಿಪಟ್ಟಿಯ ಏಕೈಕ ಪದವೀಧರೆಯಾದ ಚಂದಾ ಅನಿವಾರ್ಯವಾಗಿ ಕಾರ್ಮಿಕಳಾಗಿ ಕೆಲಸಕ್ಕೆ ಸೇರುತ್ತಾಳೆ. ಕಾರ್ಮಿಕ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುತ್ತಾಳೆ. ಅವರ ಬೇಡಿಕೆಗಳಿಗೆ ಕಿವಿಯಾಗುತ್ತಾಳೆ. ಮಹಿಳಾ ಪ್ರತಿನಿಧಿಯಾಗಿ ಅಧಿಕಾರಿಗಳನ್ನು ಸಂಪರ್ಕಿಸಿ ನ್ಯಾಯಯುತ ಬೇಡಿಕೆಗಳಿಗೆ

ಹಕ್ಕೊತ್ತಾಯ ಮಾಡುತ್ತಾಳೆ. ಮಿಲ್ಲಿನ ಮಾಲೀಕನಾದ ಆಕಾಶ್ ಕಪೂರ್ ಜತೆಯಲ್ಲಿ ಮಾತನಾಡಿ ತಮ್ಮ ಅಹವಾಲನ್ನು ಈಡೇರಿಸಲು ಅಧಿಕಾರಿಗಳಿಗೆ ತಿಳಿಸುತ್ತಾಳೆ. ಮಾಲೀಕರ ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗದೆ ದುಡಿಯುವ ಪಕ್ಷದ ಬೆಂಬಲಿಗಳಾಗಿ ಹೋರಾಡುತ್ತಾಳೆ.

ಕಾದಂಬರಿಯಲ್ಲಿ ಸಿನೀಮಿಯವೆನಿಸುವ ಒಂದು ಕುತೂಹಲಕಾರಿ ತಿರುವಿದೆ. ಆಕಾಶ್ ಮತ್ತು ಚಂದಾ ಪರಸ್ಪರ ಪ್ರೀತಿಸುತ್ತಿದ್ದರೂ ತಾನು ಪ್ರೀತಿಸುವ ಆಕಾಶ್‌ನೇ ಮಿಲ್ಲಿನ ಮಾಲೀಕ ಆಕಾಶ್ ಕಪೂರ್‌ನೆಂದು ಚಂದಾಗೆ ಗೊತ್ತಿರುವುದಿಲ್ಲ. ಚಂದಾ ಆಕಾಶ್‌ನ ಸಮಕ್ಷಮದಲ್ಲಿ ಮಿಲ್ಲಿನ ಮಾಲೀಕನನ್ನು ನಿಂದಿಸುತ್ತಾಳೆ. ರಹಸ್ಯವನ್ನು ಮುಚ್ಚಿಟ್ಟುಕೊಂಡೇ ಆಕಾಶ್ ಅವಳ ಬೇಡಿಕೆಗಳನ್ನು ಈಡೇರಿಸುತ್ತಾನೆ.

ತಾಯಿಯ ಸಾವು ಚಂದಾಳ ಸಂಸಾರದ ವಾತಾವರಣವನ್ನು ಬದಲಿಸುತ್ತದೆ. ಚಂದಾ ಮನೆಯ ಜವಾಬ್ದಾರಿಯನ್ನು ವಹಿಸುತ್ತಾಳೆ. ಜೋಪಡಿಪಟ್ಟಿಯ ಜನರ ಹಿತಕ್ಕಾಗಿ ಅನೇಕ ಕೆಲಸಕಾರ್ಯಗಳನ್ನು ಮಾಡುತ್ತಾಳೆ. ಜೋಪಡಿಪಟ್ಟಿಯ ಬಡವರಿಗೆ ಸಾಲಕೊಡುವ ವರ್ತಕ ರುಕ್ಮುದ್ದೀನ ಹೆಚ್ಚು ರೇಟಿಗೆ ಕಡಿಮೆ ಗುಣಮಟ್ಟದ ಪದಾರ್ಥಗಳನ್ನು ಮಾರುವುದನ್ನು ತಪ್ಪಿಸಿ ಮಾರ್ಕೆಟ್ ರೇಟಿಗೇ ದಿನಸಿಗಳು ಸಿಗುವಂತೆ ಮಾಡುತ್ತಾಳೆ.

ಜೋಪಡಿಪಟ್ಟಿಯ ಮಾದೇವಿ ಎಂಬ ಯುವತಿಯನ್ನು ಕೆಡಿಸಿದ ಅಜಯ್ ಟಾಕೂರ್ ಎಂಬವನ ವಿರುದ್ಧ ದಂಗೆಯೆದ್ದು ಆತ ಮಾದೇವಿಯನ್ನು ಮದುವೆಯಾಗುವಂತೆ ಮಾಡುತ್ತಾಳೆ. ಮಿಲ್ಲಿನ ಸೂಪರ್ ವೈಸರ್ ಮದನ್ ಲಾಲ್ ಕಾರ್ಮಿಕನೊಬ್ಬನನ್ನು ಥಳಿಸಿದ ಕಾರಣಕ್ಕೆ ಅವನನ್ನು ಕೆಲಸದಿಂದ ಅಮಾನತ್ತುಗೊಳಿಸುವುದರಲ್ಲಿ ಯಶಸ್ವಿಯಾಗುತ್ತಾಳೆ.

ಜೋಪಡಿಪಟ್ಟಿಯ ಬಡ ಜನಗಳ ಮಧ್ಯೆ ಆಕಾಶ್ ಮತ್ತು ಚಂದಾರ ನಿಶ್ಚಿತಾರ್ಥ ನಡೆಯುತ್ತದೆ. ತಮ್ಮ ಬದುಕಿನ ಹತ್ತು ಹಲವು ನೋವಿನ ಪುಟಗಳನ್ನು ಆಕಾಶನ ಮುಂದೆ ತೆರೆದಿಟ್ಟ ಚಂದಾ ಬಡತನ ಮತ್ತು ಶ್ರೀಮಂತಿಕೆಯ ಅಂತರ ನಾಶವಾಗಬೇಕೆಂಬ ತನ್ನ ಹಿರಿಯಾಸೆಯನ್ನು ಬಹಿರಂಗಗೊಳಿಸುತ್ತಾಳೆ. ಸುಳ್ಳಿನ ಬಲೆಯಲ್ಲಿ ಸಿಲುಕಿ ಆಕಾಶ ಕಪೂರ್ ಒದ್ದಾಡುತ್ತಾನೆ.

ಭವಾನಿ ಮಿಲ್ಸ್‌ನ ಲೇಬರ್ ಯೂನಿಯನ್ ಚುನಾವಣೆಯಲ್ಲಿ ಸರ್ವಾನುಮತದಿಂದ ಆಯ್ಕೆಯಾದ ಚಂದಾ ಕಾರ್ಮಿಕರ ಪರವಾಗಿ ಮಿಲ್ಲಿನ ಮಾಲೀಕನ ವಿರುದ್ಧ ಬಂಡೇಳುತ್ತಾಳೆ. ಕಾರ್ಮಿಕರ ದುಬಾರಿ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ಹೂಡಿ ಕೊನೆಗೆ ಉಪವಾಸ ಸತ್ಯಾಗ್ರಹಕ್ಕೆ ಮುಂದಾಗುತ್ತಾಳೆ. ಅವಳೊಂದಿಗೆ ತಾನೂ ಉಪವಾಸವಿದ್ದ ಆಕಾಶ್ ನಾಲ್ಕನೆಯ ದಿನ ಅವರೆಲ್ಲರ ಬೇಡಿಕೆಗಳನ್ನು ಈಡೇರಿಸಿದ್ದಲ್ಲದೆ ಚಂದಾಳ ಮಾತಿನಂತೆ ಮಾಲೀಕ ಕಾರ್ಮಿಕ ಎಂಬ ಅಂತರವನ್ನು ತೊಡೆಯುವ ಸಲುವಾಗಿ ತನ್ನ ಸಮಸ್ತ ಆಸ್ತಿ, ಸಂಪತ್ತೆಲ್ಲವನ್ನೂ ಬಡವರಿಗೆ ಹಂಚಲು ನಿರ್ಧರಿಸುತ್ತಾನೆ. ಶ್ರೀಮಂತಿಕೆಯ ಅಹಂಕಾರವನ್ನು ನಾಶಗೊಳಿಸಿ ತನ್ನವರಿಗೆ ಸಂಪೂರ್ಣ ನ್ಯಾಯ ಕೊಡಿಸಿದ ಚಂದಾ ಕೊನೆಗೆ ನಿಶ್ಚಿಂತಳಾಗಿ ಆಕಾಶನನ್ನು ಒಪ್ಪಿಕೊಳ್ಳುತ್ತಾಳೆ. ದಲಿತ ಸಂವೇದನೆಯೇ ಪ್ರಧಾನವಾಗುಳ್ಳ ಈ ಕೃತಿ ಉಳ್ಳವರ ದರ್ಪ, ದಬ್ಬಾಳಿಕೆಗಳನ್ನು ಕೊಂಚ ಅತಿಯಾಗಿಯೇ ಟೀಕಿಸಿದೆ. ಆಕಾಶ್‌ಕಪೂರ್ ಚಂದಾಳಿಗೆ ಅಷ್ಟರಮಟ್ಟಿಗೆ ಶರಣಾಗತನಾಗುವಂತೆ ಚಿತ್ರಿಸಿ ಚಂದಾಳ ಪಾತ್ರದ ಯಶಸ್ಸಿನ ಮುಂದೆ ಆಕಾಶನ ಪಾತ್ರದ ಘನತೆ, ಗೌರವಗಳನ್ನು ಕಡೆಗಣಿಸಿದ್ದಾರೆನಿಸುತ್ತದೆ. ಆದರೂ ಸ್ವಚ್ಛಸುಂದರ ಸಮಾಜ ರಚನೆಯ ಧ್ಯೇಯೋದ್ದೇಶಗಳನ್ನು ಒಡಲಲ್ಲಿಟ್ಟು ಅದಕ್ಕಾಗಿ ಒಂದು ಅನನ್ಯ ಪಾತ್ರಕಲ್ಪನೆಯನ್ನು ಸಂಯೋಜಿಸಿ ಈ ಕಾದಂಬರಿಯ ಮೂಲಕ ಸುಭದ್ರ ಭವಿಷ್ಯಕ್ಕೆ ಚಾಲನೆನೀಡಿದ ಗೀತಾರ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ದಿಟ್ಟ ಹುಡುಗಿ ಚಂದಾ 'ಬಾಕಿ' ಕಾದಂಬರಿಯ ನಾಯಿಕೆಯನ್ನು ಹೋಲುತ್ತಾಳೆನ್ನುವುದು ಗಮನಾರ್ಹ.

### 13) ಮೋಹ್ವಾ

ಗೀತಾರವರ ಉಳಿದೆಲ್ಲ ಕಾದಂಬರಿಗಳಿಗಿಂತ ವಸ್ತು, ಭಾಷೆ ಮತ್ತು ನಿರೂಪಣೆಗಳಿಂದ ಭಿನ್ನವಾದ ಕೃತಿ ಇದು. ಮೈನವಿರೇಳಿಸುವ ಕುತೂಹಲಕಾರೀ ಸನ್ನಿವೇಶಗಳಿಂದ ಪತ್ತೇದಾರಿ ಕಾದಂಬರಿಯಂತೆ ತೋರುವ ಈ ಕಾದಂಬರಿ ಕಳ್ಳ ಸಾಗಾಣಿಕೆದಾರರ ಗುಂಪನ್ನು ಶೋಧಿಸುವ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್‌ನ ಸಾಹಸ ಮತ್ತು ಪ್ರಣಯ ಪ್ರಧಾನವಾಗುಳ್ಳ ಆಕರ್ಷಕ ಕೃತಿ.

ಅಮಲು ಪದಾರ್ಥ ತಯಾರಿಕೆಗೆ ಬಳಕೆಯಾಗುವ ಘಾಟುವಾಸನೆಯುಳ್ಳ ವಿಶಿಷ್ಟಜಾತಿಯ ಹೂವುಗಳನ್ನು ಬೆಳೆಯುವ ಮರಗಳೇ ಮೋಹ್ವಾ. ಇವುಗಳು ಬೆಳೆಯುವ ದಟ್ಟ ಕಾಡುಗಳಲ್ಲಿ ವಾಸಮಾಡುವ ಅಮಾಯಕ ಲಂಬಾಣಿ

ಜನಗಳನ್ನು ಹೊರಪ್ರಪಂಚದ ಸಂಪರ್ಕದಿಂದ ದೂರಮಾಡಿ ದೈವ ಭೂತಗಳ ಹೆಸರಿನಲ್ಲಿ ಹೆದರಿಸಿ ಅಲ್ಲಿಯ ಹೆಣ್ಣುಮಕ್ಕಳನ್ನು ಲೈಂಗಿಕವಾಗಿ ಪೀಡಿಸಿ ಮೋಸದಿಂದ ಮಾರಾಟಮಾಡುವ ಸಮಾಜದ್ರೋಹಿಗಳ ಗುಪ್ತಕಾರಸ್ಥಾನಗಳನ್ನು ಆ ದಂಧೆಗೆ ಶಾಮೀಲಾಗುತ್ತಿದ್ದ ಬಾಬಾ ಮತ್ತು ಅವನ ಕೃತಕ ಮಗಳು ಅನಾಮಿಕಳ ನೆರವಿನಿಂದಲೇ ಶೋಧಿಸಿ ಸ್ವಾಮಿಕಾರ್ಯವನ್ನೂ ಸ್ವಕಾರ್ಯವನ್ನೂ ಸಾಧಿಸಿದ ಮೋಹನ್‌ನ ಬುದ್ಧಿಚಾತುರ್ಯಗಳು ಸಿನೀಮಿಯವಾಗಿ ಸಾಗಿದರೂ ನಿರರ್ಗಳವಾಗಿ ಓದಿಸುವ ಕೃತಿ 'ಮೋಹ್ವಾ'. ವಿಶೇಷವೆಂದರೆ ಈ ಕಳ್ಳಸಾಗಾಣಿಕೆದಾರರ ನೇತೃತ್ವವನ್ನು ವಹಿಸಿದವಳು ಮಹಿಳೆ. ಮಹಿಳೆಯಿಂದಲೇ ಮಹಿಳೆಯರ ಶೋಷಣೆ ನಡೆಯುತ್ತಿರುವಂತೆ ಚಿತ್ರಿಸಿರುವುದು ವಿಶಿಷ್ಟ ತಂತ್ರಗಾರಿಕೆಯಾಗಿದ್ದು ಮಹಿಳಾಶಕ್ತಿಯ ವಿಭಿನ್ನ ಆಯಾಮವೊಂದನ್ನು ಧ್ವನಿಸುತ್ತದೆ.

ಕರಿಮಣಿಸರದಲ್ಲಿ ಹವಳವನ್ನು ಕೋದಂತೆ ಕನ್ನಡದ ಶಿಷ್ಟಭಾಷೆಯಲ್ಲಿ ರಚಿತವಾದ ಈ ಕೃತಿಯಲ್ಲಿ ಅಲ್ಲಲ್ಲಿ ನುಸುಳುವ ಹಿಂದಿಭಾಷೆ ಉತ್ತರ ಕರ್ನಾಟಕದ ವ್ಯವಹಾರಭಾಷೆಯ ವೈಶಿಷ್ಟ್ಯವನ್ನು ದಿಗ್ದರ್ಶಿಸುತ್ತದೆ.

**ಚೈತ್ರದ ಹಾಡು**

ಗೀತಾರವರ ಕಾದಂಬರಿಗಳಲ್ಲಿ ಬಡತನದ ದುಃಖ ದುಮ್ಮಾನಗಳು, ನಿಂದೆ, ಬೈಗುಳಗಳು ಪ್ರತ್ಯೇಕ ಅಧ್ಯಯನಕ್ಕೆ ನಿಲುಕುತ್ತವೆ. ಈ ಕಾದಂಬರಿಯಲ್ಲಿ ಶ್ರೀಮಂತರ ಅಹಂಕಾರ ಮತ್ತು ಲೋಲುಪತೆಗಳಿಗೆ ಬಲಿಯಾಗುವ ಬಡತನದ ನೂರು ನೂರು ಸಂಕಟದ ಮಾಲೆಗಳಿವೆ. ಬಡವರಿಗೆ ಹಂಬಲಿಸುವ ಅತ್ಯಲ್ಪ ಸುಖ ಸಂತೋಷಗಳು ಭ್ರಮನಿರಸನಗೊಳ್ಳುವ, ಸಾಲಕ್ಕಾಗಿ ಇದ್ದ ಭೂಮಿಯನ್ನೂ ಕಳಕೊಳ್ಳುವ, ಅಪಾಯದ ಕತ್ತಿಯ ಮೊನೆಯ ಕೆಳಗೆ ಜೀವವನ್ನು ಒತ್ತೆಯಿಡುವ ಪರಿಸ್ಥಿತಿ. ರಟ್ಟೆಯ ಶಕ್ತಿ, ಹೊಟ್ಟೆಯ ಹಟ, ಎದೆಯ ಸಿಟ್ಟನ್ನೆಲ್ಲ ಲಕ್ಷ್ಯ ಹೊಡೆಸಿ ಬಡವರನ್ನು ಕಾಲಕೆಳಗೆ ತುಳಿಯುವ ಅನೇಕ ಕರಾಳ ಪುಟಗಳು ಇಲ್ಲಿ ತೆರೆದಿವೆ.

ಕಾದಂಬರಿಯಲ್ಲಿ ಒಂದು ಕಡೆ ಹೀಗಿದೆ. '..ನನಗನಿಸ್ತದ ಈ ದೊಡ್ಡಜಾತಿ ದುಡ್ಡಿರಾ ಗಂಡಗೋಳು ಸಣಜಾತಿ ಹೆಂಗಸರಿಗಿ ಕೆಡಸೂ ಹಂಗ, ಸಣಜಾತಿ ಗಂಡಸರನೂ ದೊಡ್ಡಜಾತಿ ಹೆಂಗಸರಿಗಿ ಕೆಡಿಸಿಬಿಡಬೇಕು ನೋಡು..' ಈ ಮಾತನ್ನು ವಿಡಂಬಿಸುವಂಥ ಘಟನೆಯೊಂದು ಕಾದಂಬರಿಯಲ್ಲಿ

ಬಿಚ್ಚಿಕೊಳ್ಳುತ್ತದೆ. ಶ್ರೀಕಾಂತ ಕುಲಕರ್ಣಿಯ ಮಗಳು ರುಕ್ಕವ್ವ ಆಳುಮಗ ಟುಕ್ಕ್ಯಾನನ್ನು ಮೇಲೆಬಿದ್ದು ಪ್ರೀತಿಸುತ್ತಾಳೆ. ಭೋಳೇಸ್ವಭಾವದ ಟುಕ್ಕ್ಯಾ ದೇಹದೊಂದಿಗೆ ಮನಸ್ಸನ್ನೂ ಅವಳಿಗೆ ಅರ್ಪಿಸುತ್ತಾನೆ. ಆದರೆ ಟುಕ್ಕ್ಯಾನ ದೇಹಸುಖವನ್ನು ಅನುಭವಿಸಿದ ರುಕ್ಕವ್ವ ತನ್ನ ಜಾತಿಯ ಹುಡುಗನನ್ನು ಮದುವೆಯಾಗಿ ಅವನನ್ನು ಮರೆಯುತ್ತಾಳೆ. ಮೇಲುವರ್ಗದ ಮಹಿಳೆಯ ದೇಹದ ಹಸಿವಿಗೆ ತನ್ನನ್ನು ಒತ್ತೆಯಿಟ್ಟ ಟುಕ್ಕ್ಯಾನ ಹೃದಯದ ತೊಳಲಾಟ ಶೋಷಣೆಯ ಇನ್ನೊಂದು ವಿಕರಾಳ ಸ್ವರೂಪವನ್ನು ಬಯಲಿಗಿಡು.

ಗುಟ್ಟಳ್ಳಿಯ ಮಟದ ಜಂಗಮ ಗುಡದಯ್ಯನಿಗೂ ಕುಲಕರ್ಣಿಗೂ ಒಂದು ಹೆಣ್ಣಿನ ವಿಷಯದಲ್ಲಿ ಉಂಟಾದ ಜಗಳ ಸೇಡಿಗೆ ತಿರುಗಿ ಮಟದಯ್ಯನನ್ನೇ ಮುಗಿಸುತ್ತದೆ. ಕೊಲೆಯ ಆಪಾದನೆಯನ್ನು ಹೊತ್ತು ಟುಕ್ಕ್ಯಾ ಸರೆಯಾದಾಗ ಆಘಾತಕ್ಕೊಳಗಾದ ಅಮರಿಗೆ ಅಕಾಲದಲ್ಲಿ ಹೆರಿಗೆಯಾಗಿ ಮಗು ಸಾಯುತ್ತದೆ. ಕ್ಷಣಮಾತ್ರದಲ್ಲಿ ಬದುಕು ಧೂಳೀಪಟವಾದರೂ ಗಂಡನ ನೆನಪನ್ನು ಹೊತ್ತುಕೊಂಡು ಬಾಳುವೆ ಮಾಡಲು ಬಂದ ಅಮರಿ ಕುಕ್ಕಣ್ಣಿಯ ಕೆಟ್ಟ ದೃಷ್ಟಿಗೆ ಬಿದ್ದು ಅವನಿಂದ ತಪ್ಪಿಸಿಕೊಂಡು ಮರಳಿ ತವರಿಗೆ ಬರುತ್ತಾಳೆ. ಬರಗಾಲದ ಭೀಕರತೆಯನ್ನು ತಾಳಲಾಗದೆ ಹೆತ್ತವರೊಂದಿಗೆ ಹಳ್ಳಿ ಬಿಟ್ಟು ಕಲ್ಬುರ್ಗಿಗೆ ಬರುತ್ತಾಳೆ. ಝೋಪಡಿ ಪಟ್ಟಿಯೊಂದರಲ್ಲಿ ಬಾಡಿಗೆಗೆ ಮನೆಮಾಡಿ ಕಾಯಿಲೆಬಿದ್ದ ತಾಯಿಯ ಆರೈಕೆಯನ್ನು ಮಾಡುತ್ತ ಕೂಲಿ ಕೆಲಸ ಮಾಡುತ್ತಾಳೆ. ಮಗಳ ಚಿಂತೆಯಲ್ಲಿ ಹಾಸಿಗೆ ಹಿಡಿದು ಕೊರಗಿ ನರಳಿ ತಾಯಿ ತೀರಿಹೋಗುತ್ತಾಳೆ. ತಂದೆ ಚುಂಚೂರು ಜೋಗಣಿಯ ಸಹವಾಸದಲ್ಲಿ ಮನೆಯನ್ನೂ ಮಗಳನ್ನೂ ಮರೆಯುತ್ತಾನೆ.

ಟುಕ್ಕ್ಯಾ ಸೆರೆಯಲ್ಲಿದ್ದು ಮೂರುವರ್ಷಗಳು ಕಳೆಯುತ್ತವೆ. ಹರೆಯದ ಬಯಕೆಗಳನ್ನು ಹತ್ತಿಕ್ಕಲಾಗದ ಅಮರಿ ನರಸ್ಯಾನೆಂಬವನ ಸಹವಾಸವನ್ನು ಮಾಡಿ ಪಾಪಪ್ರಜ್ಞೆಯಲ್ಲಿ ನರಳುತ್ತಾಳೆ. ಪತ್ನಿಕಾರಣ ನರಸ್ಯಾ ಅಮರಿಯಿಂದ ದೂರವಾಗುತ್ತಾನೆ. ಆದರೆ ಅಷ್ಟರಲ್ಲೇ ಬಸುರಿಯಾದ ಅಮರಿ ಗೂಂಡಾಗಳ ಸಾಮೂಹಿಕ ಅತ್ಯಾಚಾರಕ್ಕೂ ಒಳಗಾಗಿ ಮಗುವನ್ನು ಹೆತ್ತು ಸತ್ತುಹೋಗುತ್ತಾಳೆ. ಅದೇ ಹೊತ್ತಿಗೆ ತನ್ನ ಒಳ್ಳೆಯತನದಿಂದ ಅವಧಿಗೆ ಮುಂಚೆಯೇ ಬಿಡುಗಡೆಯಾದ ಟುಕ್ಕ್ಯಾ ಹೆಂಡತಿಯ ಹೆಣದ ಮುಂದೆ ಕುಸಿದು ಬಿಕ್ಕಳಿಸುತ್ತಾನೆ. ಅವಳ ಮಗುವಿಗೆ ತಂದೆಯಾಗಲು ನಿರ್ಧರಿಸುತ್ತಾನೆ. 'ನನ್ನ ಅಮ್ರೀ ಹೊಟ್ಟ್ಯಾಗ ಯಾರ ಬೀಜ ಬಿದ್ದರೇನು? ಭೂಮಿ ನಂದು. ಭೂಮಿ ಮಾಲಕ ನಾನೆ

ಅಂದಮ್ಯಾಲ ಬೆಳೆದದ್ದು ನಂದೇ.. ಹೋಯಿಂದು ನಂದೇ..' (183) ಎನ್ನುತ್ತ ಅಮರಿಯ ಮೇಲೆ ಅತ್ಯಾಚಾರ ಮಾಡಿದವರ ಬಗ್ಗೆ ಪ್ರತೀಕಾರದ ಛಲಹೊತ್ತು ಎದ್ದು ನಿಲ್ಲುತ್ತಾನೆ.

ಕಾದಂಬರಿಯನ್ನು ಓದಿ ಕೆಳಗಿಟ್ಟರೂ ಅಮರಿಯ ಸಾವು, ಟುಕ್ಕ್ಯಾನ ಸ್ವಚ್ಛ ಮನಸ್ಸಿನ ನೋವು ಬಹುಕಾಲ ಮರೆಯಾಗುವುದಿಲ್ಲ. ಹಾಗೆಯೇ ಶೂದ್ರ ಭೂತಾಳಿ ತಂದೆ ಒತ್ತೆಯಿಟ್ಟ ಹೊಲದ ಸಾಲವನ್ನು ತೀರಿಸಿದರೂ ಅದನ್ನು ಬಿಡಿಸಲಾಗದೆ ಯಜಮಾನನ ಆಳುಗಳಿಂದ ಬರ್ಬರವಾಗಿ ಹತ್ಯೆಗೊಳಗಾಗುವುದು, ಮಾದಿಗರ ಮಾನಿಂಗಿ ಗೌಡನ ಮಗನ ಮಾತಿಗೆ ಮರುಳಾಗಿ ಅವನಿಂದ ಕಳ್ಳಬಸಿರು ಹೊತ್ತು ನ್ಯಾಯ ಕೇಳಲು ಹೋದರೆ ಇಡೀ ಕುಟುಂಬವನ್ನೇ ಗೌಡ ಬಲಿಹಾಕುವುದು ಮನಕಲಕುವಂತಿವೆ.

ಬಸಿರು ಮತ್ತು ಅತ್ಯಾಚಾರಗಳಿಗೆ ಸಂಬಂಧಿಸಿದಂತೆ ಕಾದಂಬರಿಯಲ್ಲಿ ನಿರೂಪಿತವಾಗಿರುವ ಕಾಲಮಾನದ ಕೆಲವು ಅಂಶಗಳು ಹಿಂದುಮುಂದಾಗಿವೆ.

**ಧುಮ್ಮಸು**

ಸ್ತ್ರೀವಾದೀಯ ನೆಲೆಯಲ್ಲಿ ರಚಿತವಾದ ಅತ್ಯುತ್ತಮ ಕಾದಂಬರಿ ಇದು. ಬದುಕಿನಲ್ಲಿ ಬಹುದೊಡ್ಡ ಕನಸು, ಹಂಬಲಗಳನ್ನು ಹೊತ್ತುಕೊಂಡಿದ್ದ ಸೋನಿ ಮದುವೆಗೆ ಮುನ್ನವೇ ಡ್ರೈವರ್ ಮಲ್ಲೇಶಿಯನ್ನು ಪ್ರೀತಿಸಿ ಗರ್ಭವತಿಯಾಗುತ್ತಾಳೆ. ಆದರೆ ಅವಳ ದುರದೃಷ್ಟಕ್ಕೆ ಮದುವೆಗೆ ಮೂರು ದಿನ ಇರುವಾಗ ಬಸ್ ಆಕ್ಸಿಡೆಂಟಿನಲ್ಲಿ ಮಲ್ಲೇಶಿ ಸತ್ತು ಹೋಗುತ್ತಾನೆ. ಊರ ಗೌಡ ನ್ಯಾಯಪಂಚಾತಿಕೆ ಮಾಡಿ ಸೋನಿ ತಕ್ಷಣವೇ ಗರ್ಭಪಾತ ಮಾಡಿಸಬೇಕೆಂದೂ ಇಲ್ಲವಾದರೆ ಊರು ಬಿಟ್ಟು ಹೋಗಬೇಕೆಂದೂ ಆದೇಶಿಸುತ್ತಾನೆ. ಮದುವೆಯಾಗದಿದ್ದರೂ ಮಲ್ಲೇಶಿಯೇ ತನ್ನ ಗಂಡನೆಂದು ನಂಬಿದ ಸೋನಿ ತಮ್ಮ ಪ್ರೇಮದ ಪ್ರತೀಕವಾದ ಗರ್ಭವನ್ನು ತೆಗೆಸಲು ಖಡಾಖಂಡಿತವಾಗಿ ನಿರಾಕರಿಸುತ್ತಾಳೆ. ಅಡಕತ್ತರಿಯಲ್ಲಿ ಸಿಲುಕಿದ ಅವಳ ತಂದೆ ಇದರಿಂದ ನೊಂದು ಆತ್ಮಹತ್ಯೆ ಮಾಡುತ್ತಾನೆ. ಅವರ ಮನೆಯನ್ನು ಯಾರೋ ಸುಟ್ಟು ಹಾಕುತ್ತಾರೆ. ಗಂಡ, ತಂದೆ ಇಬ್ಬರನ್ನೂ ಕಳಕೊಂಡು ಇರಲು ಮನೆಯೂ ಇಲ್ಲದೆ ಸೋನಿ ಊರು ಬಿಟ್ಟು ಕಲ್ಬುರ್ಗಿಗೆ ಬರುತ್ತಾಳೆ. ಮಲ್ಲೇಶಿಯ ಗೆಳೆಯ ಸಲೀಮ್‌ನ ಸಹಾಯದಿಂದ ಮಾರುತಿ ಜೋಪಡಿಪಟ್ಟಿಯಲ್ಲಿ ವಾಸಕ್ಕೂ

ಜೀವನೋಪಾಯಕ್ಕೂ ದಾರಿ ಮಾಡಿಕೊಳ್ಳುತ್ತಾಳೆ. ಕಟ್ಟಡ ಕಟ್ಟುವಲ್ಲಿ ಕೂಲಿ ಕೆಲಸ ಮಾಡುತ್ತ ಗಂಡು ಮಗುವಿನ ತಾಯಿಯಾಗುತ್ತಾಳೆ.

ಧುಮ್ಮಸು ಎಂದರೆ ಮರದ ಒಂದು ಸಲಕರಣೆ. ಕೂಲಿ ಹೆಂಗಸರೆಲ್ಲ ಕಟ್ಟಡದ ತಾರಸಿಯನ್ನು ಧುಮ್ಮಸಿನಿಂದ ಹೊಡೆದೂ ಹೊಡೆದು ಗಟ್ಟಿಗೊಳಿಸುತ್ತಾರೆ. ಧುಮ್ಮಸಿನ ಪ್ರಸ್ತಾಪ ಇಲ್ಲಿ ಪ್ರಮುಖವಾಗಿದ್ದು ಇದೊಂದು ರೂಪಕ ಶಕ್ತಿಯಾಗಿಯೂ ಬಳಕೆಯಾಗಿದೆ. 'ಧುಮ್ಮಸಿನ ಪೆಟ್ಟುಗೋಳು ಬಿದ್ದಂಗೆಲ್ಲ ಛಾವಣಿ ಗಟ್ಟ್ಯಾಗ್ತದಲ್ಲ. ಹಂಗೇ ಹೆಂಗಸು ತನ್ನ ಬದುಕನ್ಯಾಗ ಬೀಳೋ ಪೆಟ್ಟಗೋಳಿಗೆ ಎದಿ ಗಟ್ಟಿ ಮಾಡ್ಕೊಂಡು ಬಾಳ್ಯಾ ಮಾಡೋದ ಕಲೀಬೇಕವ್ವಾ..'' ಎನ್ನುವ ಮಿಸ್ತ್ರಿ ತೋಟಪ್ಪನ ಮಾತುಗಳು ಕಾದಂಬರಿಯ ಪ್ರಧಾನ ಆಶಯವಾಗಿದೆ. ಇದಕ್ಕೆ ಸೋನಿಯ ಎದೆಯಾಳದಿಂದ ಬಂದ ಮೌನದ ಪ್ರತಿಕ್ರಿಯೆ: 'ಈ ಧುಮ್ಮಸಿನ್ಹಾಂಗ ಪೆಟ್ಟುಗೋಳು ನನ್ನೆದಿ ಮ್ಯಾಲ, ಮನಸಿನ ಮ್ಯಾಲ, ಮೈಮ್ಯಾಲ ಬೀಳ್ಕೋತೇ ಬಂದಾವಪ್ಪಾ... ಒಂದರ ಮ್ಯಾಲ ಒಂದು; ಗಟ್ಟ್ಯಾಗಿ ಅಪ್ಪಳಸಗೋತೇ ಹೊಂಟಾವು. ಆದರೂನೂ ನಾ ಸೋತಿಲ್ಲ. ನಾ ಸೋಲೋ ಹೆಂಗಸ ಅಲ್ಲ ಮಲ್ಲೂ.... ನಾ ಪೆಟ್ಟುಗೋಳಿಗಿ ಅಂಜಂಗಿಲ್ಲ ಮಲ್ಲೂ.. ನನ್ ಕೂಸಿಗಿ ಬೆಳಿಸ್ತೀನಿ. ದೊಡ್ಡಾಂವಾ ಮಾಡ್ತೀನಿ, ಓದಿಸಿ, ಬರಸಿ, ವಿದ್ಯಾಕಲ್ಸಿ ಥೊಡ್ಡ ತಾಲೂಕದಾರ, ತಸೀಲ್ದಾರ ಮಾಡ್ತೀನಿ ಮಲ್ಲೂ.. ನಮ್ಮಿಬ್ಬರ ಕೂಸು ನಾಳಿಗಿ ಥೊಡ್ಡಾ ಮನಶ್ಯಾ ಆಗಿ ಮೆರೀಬೇಕು. ಈ ಹಳ್ಳಿ ರೀತಿ ರಿವಾಜುಗೋಳಿಗಿ ಬೆಂಕಿಯಿಟ್ಟು ಸುಡ್ಬೇಕು ಅಂವಾ. ಈ ಕೆಟ್ಟಮಂದಿ ಹುಟ್ಟಿಸಿದಾ ಖೊಟ್ಟಿ ಕಾನೂನು, ರೀತಿ ನೀತಿಗೋಳ ಬೇರಿಗಿ ಕೊಡಲಿ ಹಾಕೋ ಹಂತಾ ತಾಕತ್ ನಮ್ಮ ಮಗನಿಗೆ ಬರೋಹಂಗ ಮಾಡ್ತೀನಿ ನಾ...'(184) ತನ್ನ ಬದುಕನ್ನು ತನಗೆ ಬೇಕಾದಂತೆ ರೂಪಿಸುವ ಅಧಿಕಾರವನ್ನು ಕೊಡದ ಸಾಮಾಜಿಕ ವ್ಯವಸ್ಥೆಯನ್ನು ಧಿಕ್ಕರಿಸಿ ಬದುಕಿನ ಮೇಲೆ ಬಿದ್ದ ಪ್ರತಿಯೊಂದು ಹೊಡೆತವನ್ನೂ ಸವಾಲಾಗಿ ಸ್ವೀಕರಿಸಿ ಸೋನಿ ತೋರುವ ಛಲ, ಬಲಗಳು ಅವಳ ವ್ಯಕ್ತಿತ್ವದ ಗಟ್ಟಿತನಕ್ಕೆ ಸಂಕೇತ. ಈ ಸಮಸ್ಯೆ ಸೋನಿ ಒಬ್ಬಳದೇ ಅಲ್ಲ. ಪುರುಷಪ್ರಧಾನ ವ್ಯವಸ್ಥೆಗೆ ಒಳಪಟ್ಟು ಬದುಕುವ ಎಲ್ಲ ಹೆಣ್ಣುಮಕ್ಕಳ ಸಮಸ್ಯೆಯೂ ಇದೇ ಎನ್ನುವ ಕಟುವಾಸ್ತವವನ್ನು ಬಯಲಿಗೆಳೆದು ಅಂಥ ಬದುಕಿಗೆ ಮಹಿಳೆ ಹೇಗೆ ಸ್ಪಂದಿಸಬೇಕೆನ್ನುವಲ್ಲಿ ಕಾದಂಬರಿ ಧ್ವನಿಸುವ ಇತ್ಯಾತ್ಮಕ ನಿಲವು ಅನುಸರಣೀಯ. 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ ಲಚ್ಚಿಯ ಕತೆಯನ್ನು ಇದರೊಂದಿಗೆ ಹೋಲಿಸಬಹುದು. ಎರಡೂ ಪಾತ್ರಗಳ

ವೈರುದ್ಧ್ಯಗಳ ಮೂಲಕ ಗೀತಾರವರ ಮಹಿಳಾ ಪರ ಚಿಂತನೆಯ ವಿಭಿನ್ನ ಆಯಾಮಗಳನ್ನು ಮನಗಾಣಬಹುದು.

ಈ ಕಾದಂಬರಿಯ ಕಥಾವಸ್ತು ತುಂಬ ಚಿಕ್ಕದು. ದ್ಯಾವಾಳ ಬೆತ್ತಲೆ ಸೇವೆ ಮತ್ತು ಗೌರಿಯ ಬದುಕಿನ ನೋವುಗಳನ್ನು ಪ್ರಾಸಂಗಿಕವಾಗಿ ತಂದಿದ್ದಾರೆ. ಕಾದಂಬರಿಯಲ್ಲಿ ನಿರೂಪಿತವಾದ ಕೆಲವು ಮಾನವೀಯ ಗುಣಗಳು ಆಪ್ತವಾಗಿ ಹೃದಯವನ್ನು ಮುದಗೊಳಿಸುತ್ತವೆ. ಸಲೀಂ, ಕೆಂಚಿ, ಪಾಶುಮಿಯಾ, ಮಲ್ಲೇಶಿ ಮುಂತಾದ ಪಾತ್ರಗಳು ಮನಸ್ಸಿನಲ್ಲಿ ಚಿರಕಾಲ ನಿಲ್ಲುತ್ತವೆ.

**ಏರಿಳಿತಗಳು**

ಗೀತಾರವರ ಬಹುತೇಕ ಕಾದಂಬರಿಗಳೂ ಫ್ಲ್ಯಾಷ್ ಬ್ಯಾಕ್ ತಂತ್ರದಲ್ಲಿ ನಿರೂಪಿತವಾಗಿದ್ದು ಕಥಾಪಾತ್ರಗಳ ನೆನಪಿನ ಸುರುಳಿಯೊಳಗೆ ಘಟನೆಗಳು ಬಿಚ್ಚಿಕೊಳ್ಳುತ್ತ ಸಾಗುತ್ತವೆ. ಈ ಕಾದಂಬರಿಯ ಘಟನಾವಳಿಗಳೂ ಸ್ಮಿತಾಖನ್ನಾ ಎಂಬ ಮುಖ್ಯಪಾತ್ರದ ನೆನಪಿನಲ್ಲಿ ಅರಳುತ್ತವೆ.

ಚಿಕ್ಕಂದಿನಲ್ಲಿಯೇ ಹೆತ್ತವರನ್ನು ಕಳೆದುಕೊಂಡ ಸ್ಮಿತಾ ಅಕ್ಕಭಾವನ ಪ್ರೀತಿಯ ಆಸರೆಯಲ್ಲಿ ಬೆಳೆಯುತ್ತಾಳೆ. ಹುಟ್ಟೂರಿನಿಂದ ದೂರದ ಪೂನಾದಲ್ಲಿ ಪದವೀಧರೆಯಾಗಿ 'ಗಿಲಡಾ ಎಂಟರ್ ಪ್ರೈಸಸ್' ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರಳಾಗಿ ಕಾರ್ಯನಿರ್ವಹಿಸುತ್ತಾಳೆ. ಅವಳ ಬಾಲ್ಯದ ಸಹಪಾಠಿ ಸಾಗರ್ ಮಲತಾಯಿಯ ದಬ್ಬಾಳಿಕೆಯನ್ನು ಸಹಿಸಲಾಗದೆ ಚಿಕ್ಕಂದಿನಲ್ಲಿಯೇ ಊರುಬಿಟ್ಟು ಹೋದವನು ಅದೇ ಸಂಸ್ಥೆಯಲ್ಲಿ ಅವಳ ಮೇಲಧಿಕಾರಿಯಾಗಿ ಅವಳನ್ನು ಭೇಟಿಯಾಗುತ್ತಾನೆ. ಬಾಲ್ಯದ ಗೆಳೆಯರು ಪ್ರೇಮಿಗಳಾಗಿ ವಿವಾಹಿತರಾಗಿ ಸ್ವರ್ಗಸುಖದಲ್ಲಿ ತೇಲಾಡುತ್ತಾರೆ.

ಆಫೀಸಿನಲ್ಲಿ ಸಹೊದ್ಯೋಗಿಯಾಗಿದ್ದ ಶಾಮ್‌ನ ಸರಸ ಸಲ್ಲಾಪಗಳು, ಹಾಸ್ಯಚುಟುಕುಗಳು ಕಾದಂಬರಿಯ ಪ್ರಧಾನ ಆಕರ್ಷಣೆ. ಸ್ಮಿತಾಳನ್ನು ಇಷ್ಟಪಟ್ಟಿದ್ದರೂ ಸಂಯಮದ ಎಲ್ಲೆ ಮೀರದ ಆತ ಸ್ಮಿತಾ ಮತ್ತು ಸಾಗರ್ ಮಧ್ಯೆ ಅಡಚಣೆಯಾಗದೆ ತನ್ನ ಸೋದರಸೊಸೆ ಮೂಕಿ ರತ್ನಾಳನ್ನು ಮದುವೆಯಾಗುತ್ತಾನೆ. ವರ್ಷ ಕಳೆಯುತ್ತದೆ. ಸ್ಮಿತಾ ಗರ್ಭಿಣಿಯಾಗುತ್ತಾಳೆ. ಸಾಗರ್‌ಗೆ ತನ್ನ ವೃತ್ತಿಯಲ್ಲಿ ಮೇಲೇರುವ ಆಸೆ, ಸ್ವಂತ ಕಂಪನಿಯನ್ನು ಸ್ಥಾಪಿಸುವ ಕನಸು. ಸಂಸ್ಥೆಯ ಪಾರ್ಟನರ್‌ಶಿಪ್ ಆಮಿಷಕ್ಕೆ ಬಲಿಯಾಗಿ ಸ್ಮಿತಾಳನ್ನು ಸಂಸ್ಥೆಯ ಮಾಲೀಕ ಅರವಿಂದನಿಗೆ ಒಪ್ಪಿಸುತ್ತಾನೆ. ಗಂಡ ಮತ್ತು

ಮಾಲೀಕರಿಬ್ಬರ ನಯವಂಚನೆಗೆ ಒಳಗಾಗಿ ಶೀಲಭ್ರಷ್ಟಳಾದ ಸ್ಮಿತಾ ರೆಕ್ಕೆ ಕತ್ತರಿಸಿದ ಹಕ್ಕಿಯಂತೆ ಒದ್ದಾಡುತ್ತಾಳೆ. ಸಾಗರ್‌ನ ದ್ರೋಹವನ್ನು ಶಾಮ್‌ಗೆ ತಿಳಿಸಿ ಮನೆಬಿಟ್ಟು ಅಕ್ಕನ ಮನೆಯಲ್ಲಿದ್ದು ಮಗಳ ತಾಯಿಯಾಗುತ್ತಾಳೆ. ಶಾಮ್‌ನ ಶಿಫಾರಸ್ಸಿನಿಂದ ಹೈದ್ರಾಬಾದ್‌ನ ಥೋಪ್ರಾ ಎಂಟರ್‌ಪ್ರೈಸಸ್‌ನಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆಗೆ ಸೇರುತ್ತಾಳೆ. ಅಕ್ಕ ಸತ್ತ ಬಳಿಕ ಮಕ್ಕಳನ್ನು ಕರೆದುಕೊಂಡು ಬಂದು ಅಕ್ಕನ ಮಗನನ್ನು ಇಂಜಿನಿಯರಾಗಿಯೂ ತನ್ನ ಮಗಳು ದೀಪ್ತಿಯನ್ನು ಡಾಕ್ಟರಾಗಿಯೂ ಮಾಡುತ್ತಾಳೆ. ಕುಟುಂಬದ ಮಿತ್ರನಂತಿದ್ದ ಶಾಮ್‌ನ ನೆರವಿನಿಂದ ಒಂದು ಖಾಸಗಿ ನರ್ಸಿಂಗ್ ಹೋಮಿನಲ್ಲಿ ವೈದ್ಯಳಾಗಿ ಕೆಲಸಕ್ಕೆ ಸೇರಿದ ದೀಪ್ತಿ ಆಸ್ಪತ್ರೆಗೆ ಚಿಕಿತ್ಸೆಗೆ ಬಂದ ಖನ್ನಾ ಎಂಬವರಿಗೆ ಹತ್ತಿರವಾಗುತ್ತಾಳೆ. ಪರಸ್ಪರ ಮಾತುಕತೆಯಾಗಿ ತಾನೇ ದೀಪ್ತಿಯ ತಂದೆ ಸಾಗರ್‌ಖನ್ನಾ ಎಂದು ಗೊತ್ತಾಗಿ ತನ್ನ ಸಮಸ್ತ ಆಸ್ತಿಯನ್ನು ಮಗಳಿಗೆ ಬರೆದು ಸ್ಮಿತಾಳ ಕ್ಷಮೆಯಾಚಿಸಿ ಖನ್ನಾ ವಿದೇಶಕ್ಕೆ ಹೊರಟುಹೋಗುತ್ತಾನೆ. ತಂದೆಯ ತ್ಯಾಗ, ಔದಾರ್ಯಗಳು ದೀಪ್ತಿಯನ್ನು ಅಲ್ಲಾಡಿಸುತ್ತವೆ.

ಈ ಕಾದಂಬರಿ ವಿಶಿಷ್ಟವಾದ ವಸ್ತುವಿನಿಂದಲೂ ನಿರರ್ಗಳವಾದ ಭಾಷೆ, ಶೈಲಿ, ಸಂಭಾಷಣೆಯ ಚುರುಕು, ಹಾಸ್ಯದ ಅನುಲೇಪನಗಳಿಂದಲೂ ಆಕರ್ಷಕವಾಗಿದೆ. ಸ್ಮಿತಾಳ ಬದುಕಿನಲ್ಲಿ ನಡೆಯುವ ಅನೇಕ ಆಕಸ್ಮಿಕ ಘಟನೆಗಳು, ಏರಿಳಿತಗಳನ್ನು ನಿರೂಪಿಸುವುದಲ್ಲದೆ ಸಮಾಜವ್ಯವಸ್ಥೆಯ ಏರಿಳಿತಗಳ ಪರಿಕಲ್ಪನೆಗೆ ಹೊಸ ವ್ಯಾಖ್ಯಾನವಾಗಿಯೂ ಕೃತಿ ಗಮನಾರ್ಹವಾಗುತ್ತದೆ. ಉದಾಹರಣೆಗೆ ಸ್ಮಿತಾಳಿಗೆ ಗಂಡ ತನ್ನನ್ನು ಅರವಿಂದನಿಗೆ ಅರ್ಪಿಸಿದಾಗ ಮಹಾಭಾರತ ಕಾಲದ ಕುಂತಿ ಮತ್ತು ದ್ರೌಪದಿಯರು ನೆನಪಾಗುತ್ತಾರೆ. ಇವತ್ತು ವಿವಾಹ ಸಂಸ್ಥೆಯ ಒಳಗಾಗಲಿ ಹೊರಗಾಗಲಿ ಭಾರತೀಯ ಸಮಾಜ ನೈತಿಕತೆಗೆ ಅತ್ಯಂತ ಪ್ರಮುಖ ಸ್ಥಾನವನ್ನು ಕೊಡುತ್ತಿರುವಾಗ ಮಹಾಭಾರತ ಕಾಲದಲ್ಲಿ ಅನೇಕ ಗಂಡಂದಿರಿಗೆ ಅವರು ಹೆಂಡತಿಯಾದ ವಿಚಾರ ಅವಳನ್ನು ಕಾಡುತ್ತದೆ. ನೀತಿಯ ವ್ಯಾಖ್ಯೆಗೆ ಬದ್ಧರಾಗದ ಅವರ ಪೊಳ್ಳು ಬದುಕನ್ನು ಪ್ರಶ್ನಿಸುತ್ತಾಳೆ. ಕುಂತಿ ದ್ರೌಪದಿಯರಿಗೆ ನೀತಿ ಸಂಹಿತೆ ಅನ್ವಯವಾಗಲಿಲ್ಲವೆಂದು ಟೀಕಿಸುತ್ತಾಳೆ, ಕರುಬುತ್ತಾಳೆ, ಗೇಲಿಮಾಡುತ್ತಾಳೆ. ಸಾಗರ್ ನೀತಿಯ ಬಗ್ಗೆ ಆಡಿದ ಮಾತುಗಳನ್ನು ಮೆಲುಕು ಹಾಕುತ್ತ ಪಾವಿತ್ರ್ಯತೆ ಮನಸ್ಸಿಗೆ ಸಂಬಂಧಿಸಿದ್ದೇ ದೇಹಕ್ಕೆ ಸಂಬಂಧಿಸಿದ್ದೇ ಎಂಬ ಜಿಜ್ಞಾಸೆಯಲ್ಲಿ ಒದ್ದಾಡುತ್ತಾಳೆ. ಗಂಡ ತನ್ನನ್ನು ದೈಹಿಕವಾಗಿ ವ್ಯಭಿಚಾರಿಣಿ ಮಾಡಿದ್ದನ್ನು

ಒಪ್ಪಿಕೊಳ್ಳಬೇಕಿತ್ತೇ ಎಂಬ ದ್ವಂದ್ವ, ತುಮುಲಗಳಲ್ಲಿ ಘಾಸಿಗೊಳ್ಳುತ್ತಾಳೆ. ಒಂದುಕಾಲದ ನಂಬಿಕೆ, ಆಚರಣೆಗಳು ಇನ್ನೊಂದು ಕಾಲಕ್ಕೆ ಅರ್ಥಹೀನವಾಗುತ್ತವೆಂಬ ಅಂಶವೂ ಇಲ್ಲಿ ಧ್ವನಿತವಾಗುತ್ತದೆ.

**ದಂಗೆ**

'ಹುಟ್ಟು ತಬ್ಬಲಿಯಾದ ಒಬ್ಬ ಹೆಣ್ಣುಮಗಳು ಜೀವನದುದ್ದಕ್ಕೂ ತನ್ನ ಬದುಕನ್ನು ಕಲ್ಲುಮುಳ್ಳುಗಳ ನಡುವೆ ನಡೆಸಿಕೊಂಡು ಬರಲೇಬೇಕಾದ ಅನಿವಾರ್ಯತೆ, ಅಸಹಾಯಕತೆಗಳಿಂದ ಹೈರಾಣಾಗಿ ಕೊನೆಗೆ ಒಂದು ನೆಲೆ ಸಿಕ್ಕಿತು ಅನ್ನುವಾಗ ತಾನು ಪ್ರೀತಿಸಿದವನ ಮತ್ತು ತನ್ನನ್ನು ಪ್ರೀತಿಸಿದವನ ವಿರುದ್ಧ ಏಕದಂ ದಂಗೆ ಏಳುತ್ತಾಳೆ.' ಈ ಕುತೂಹಲವನ್ನು ತಣಿಸುವುದಕ್ಕೆ ಈ ಕಾದಂಬರಿ.

ಮಹಿಳಾಕೇಂದ್ರಿತ ಸಂವೇದನೆಗಳನ್ನು ಹುದುಗಿಸಿಕೊಂಡ ಈ ಕಾದಂಬರಿಯಲ್ಲಿ ಮುಖ್ಯವಾಗಿ ಇಬ್ಬರು ದಲಿತ ಹೆಣ್ಣುಮಕ್ಕಳ ಕಥಾನಕವಿದೆ. ಸಮಸ್ಯೆಯ ಸುಳಿಯಲ್ಲಿ ಸಿಲುಕಿ ನೆಲೆಕಾಣದ ಸ್ಥಿತಿಯಲ್ಲಿ ಒಬ್ಬಳು ಆತ್ಮಹತ್ಯೆಯಲ್ಲಿ ಪರಿಹಾರವನ್ನು ಕಂಡುಕೊಂಡರೆ ಇನ್ನೊಬ್ಬಳು ಕೊಲೆಗಾರ್ತಿಯಾಗಿ ಪರಿಹಾರವನ್ನು ಕಾಣುತ್ತಾಳೆ.

ಸುಟನೂರು ದ್ಯಾವಪ್ಪ ಮತ್ತು ಲಕ್ಕವ್ವರ ಮುದ್ದಿನ ಸೊಸೆ ಕಾಶಿ. ಗಂಡ ಪರಶುರಾಮ ಕಾಶಿಗೆ ಹೆರಿಗೆ ದಿನ ಹತ್ತಿರ ಬಂದಾಗ ಎಣ್ಣೆಮಾಡಿಸಲು ಅಜ್ಜಿಯ ಊರಿಗೆ ಹೋದವನು ಕಾಳಿಂಗ ಸರ್ಪ ಕಚ್ಚಿ ಸತ್ತುಹೋಗುತ್ತಾನೆ. ಮದುವೆಯಾದ ವರ್ಷದಲ್ಲೇ ಗಂಡನನ್ನು ಕಳೆದುಕೊಂಡು ವಿಧವೆಯಾದ ಕಾಶಿ ಮಗುವಿನೊಂದಿಗೆ ಅತ್ತೆ ಮನೆಯಲ್ಲೇ ಬದುಕು ಸಾಗಿಸುವ ನಿರ್ಧಾರ ಮಾಡುತ್ತಾಳೆ. ಅತ್ತೆ ಲಕ್ಕವ್ವನಿಗೂ ಸೊಸೆಯ ಬಗ್ಗೆ ಮರುಕ, ಪ್ರೀತಿ. ಮುಗ್ಧ ಹೆಣ್ಣು ಕಾಶಿ ಮಾವನಿಂದ ಆತ್ಯಾಚಾರಕ್ಕೊಳಗಾಗಿ ಬಸಿರು ಕಟ್ಟಿ ಆತ್ಮಹತ್ಯೆ ಮಾಡುತ್ತಾಳೆ. ಈ ಅನ್ಯಾಯದ ಪರಾಕಾಷ್ಠೆಯನ್ನು ನೋಡಿ ಸಹಿಸಲಾಗದ ಲಕ್ಕವ್ವ ಕಾಶಿಯ ಗೆಳತಿ ದುರಗಿಯಲ್ಲಿ ತನ್ನ ನೋವನ್ನು ತೋಡಿಕೊಳ್ಳುತ್ತಾಳೆ. ತನ್ನ ಬಂಗಾರದಂಥ ಸೊಸೆಯನ್ನು ಕೊಂದ ಪಾಪಿಗಳಿಗೆ ಶಿಕ್ಷೆ ಕೊಡಿಸಬೇಕೆಂದು ಆಕ್ರೋಶಿಸುತ್ತಾಳೆ. ಹೇಲುತಿಂದು ನ್ಯಾಯ ಹೇಳುವ ಕುಕ್ಕಣ್ಣೆಯನ್ನು ಜೈಲಿಗೆ ಕಳುಹಿಸಬೇಕೆನ್ನುತ್ತಾಳೆ. ಬದುಕಿನುದ್ದಕ್ಕೂ ಗಂಡನಿಗೆ ಅಂಜಿ ಅಂಜಿ ನಡೆದ ಲಕ್ಕವ್ವನ ಸಂಕಟ

ರೋಷವಾಗಿ ಸ್ಫೋಟಿಸುತ್ತದೆ. ಮರುದಿನವೇ ಅವಳು ಕಲ್ಬುರ್ಗಿಯ ಪೋಲಿಸ್ ಸ್ಟೇಷನ್‌ಗೆ ಹೋಗಿ ಗಂಡ, ಕುಕ್ಕಣ್ಣಿಯರ ವಿರುದ್ಧ ಕೇಸು ಹಾಕುತ್ತಾಳೆ.

ಚಿಕ್ಕಂದಿನಲ್ಲೇ ಹೆತ್ತವರನ್ನು ಕಳೆದುಕೊಂಡು ಅಕ್ಕ ಭಾವನ ಆಸರೆಯಲ್ಲಿದ್ದ ದುರಗಿ ಭಾವನಿಂದ ಕೆಟ್ಟು ಸೋಮಾರಿ ಮಾಳ್ಯಾನನ್ನು ಮದುವೆಯಾಗಿ ಸಾತಿ ಎಂಬ ಮಗಳನ್ನು ಪಡೆಯುತ್ತಾಳೆ. ಮನೆಯಲ್ಲಿ ರೊಟ್ಟಿ ಮಾಡಿಟ್ಟು ದುಡಿಯಲು ಹೋದರೆ ಮಾಳ್ಯಾ ರೊಟ್ಟಿಯನ್ನು ಮಾರಾಟಮಾಡಿ ಸೇಂದಿ ಕುಡಿಯುತ್ತಿದ್ದ. ಗಂಡನ ಮೋಸಕ್ಕೆ ನೊಂದು ದುರಗಿ ರೊಟ್ಟಿ ಮಾಡಿಡುವುದನ್ನೇ ನಿಲ್ಲಿಸುತ್ತಾಳೆ. ಮನೆಯಲ್ಲಿ ಬೇಳೆ ಬೇಯದಿರುವಾಗ ಮಾಳ್ಯಾ ಮನೆಗೆ ಬರುವುದನ್ನೇ ಕಡಿಮೆಮಾಡುತ್ತ ಕೊನೆಗೆ ಶಾಶ್ವತವಾಗಿ ದೂರವಾಗುತ್ತಾನೆ. ಯೌವನ ತುಂಬಿದ ಕಾಲದಲ್ಲಿ ಒಂಟಿಯಾಗಿ ದೇಹ ಮನಸ್ಸುಗಳನ್ನು ನಿಯಂತ್ರಿಸಿ ಬಾಳುವುದು ಕಷ್ಟಸಾಧ್ಯವಾದರೂ ಅದನ್ನು ಸಹಿಸಿ ಬಾಳಿನ ನೌಕೆಯನ್ನು ಸಾಗಿಸುತ್ತಿದ್ದ ದುರಗಿ ಕಾಮುಕರ ಕೆಟ್ಟ ದೃಷ್ಟಿಗೆ ಆಹಾರವಾಗುತ್ತಾಳೆ. ಹಳ್ಳಿಯ ಕಾಮಣ್ಣಗಳಿಂದ ದೂರವಾಗಿ ಮಗಳನ್ನು ಸಾಕುವ ಛಲಹೊತ್ತು ಬೇರೆ ಹಳ್ಳಿಗೆ ಬಂದರೂ ಕಾಮುಕರ ಕಾಟ ತಪ್ಪಲಿಲ್ಲ. ಯೌವನದ ಆಸೆ, ಬಯಕೆಗಳು ಒಂದೆಡೆ, ತನ್ನ ಮತ್ತು ಮಗಳ ಭವಿಷ್ಯದ ಸುರಕ್ಷೆ ಇನ್ನೊಂದೆಡೆ–ಯೋಚನೆ ಬಲಿತು ದುರಗಿ ಹಳ್ಳಿಯ ಶ್ರೀಮಂತ ಗೋಯಿಂದಪ್ಪ ಕುಕ್ಕಣ್ಣಿಯ ಇಟ್ಟುಕೊಂಡವಳಾಗುತ್ತಾಳೆ. ಅವನ ಹೆಂಡತಿ ರಾಧಾಬಾಯಿ ಗಂಡನ ಅನೈತಿಕ ಸಂಬಂಧವನ್ನು ವಿರೋಧಿಸಿದರೂ ಗಂಡನ ದರ್ಪ, ದಬ್ಬಾಳಿಕೆಗಳ ಮುಂದೆ ಅವಳ ಕಣ್ಣೀರಿಗೆ ಕಾಸಿನ ಬೆಲೆಯೂ ಸಿಗುವುದಿಲ್ಲ. ಕುಕ್ಕಣ್ಣಿ ತೋಟದಲ್ಲಿ ಮನೆಮಾಡಿ ದುರಗಿ ಮತ್ತು ಸಾತಿಗೆ ಎಲ್ಲ ಅನುಕೂಲಗಳನ್ನೂ ಮಾಡಿಕೊಡುತ್ತಾನೆ. ಮೈತುಂಬ ಒಡವೆ, ವಸ್ತ್ರಗಳನ್ನು ಧರಿಸಿದ ದುರಗಿ ಮದುವೆಯಾಗದಿದ್ದರೂ ಊರವರ ಮುಂದೆ ಸಾವುಕಾರ್ತಿಯಾಗಿ ಮೆರೆಯುತ್ತಾಳೆ. ಸದ್ಗುಣ ಸಂಪನ್ನಳಾದ ಆಕೆ ಶ್ರೀಮಂತಿಕೆಯ ಅಹಂಕಾರವಿಲ್ಲದೆ ಬಡವರಿಗೆ ಸಹಾಯಮಾಡುತ್ತಾಳೆ. ಮಗಳು ಸಾತಿಯನ್ನು ಗೋಯಿಂದಪ್ಪನ ಮಗ ಸೀನಪ್ಪನ ಜತೆಗೂಡಿ ಕುದುರೆಯ ಮೇಲೆ ಶಾಲೆಗೆ ಕಳುಹಿಸುತ್ತಾಳೆ. ಓದಿನಲ್ಲಿ ಜಾಣೆಯಾದ ಸಾತಿ ವಿದ್ಯೆ, ರೂಪಗಳಲ್ಲೂ ಅದ್ವಿತೀಯಳಾಗಿ ಬಳೆಯುತ್ತಾಳೆ. ಮೆಟ್ರಿಕ್ ಮುಗಿಸಿ ಕಲ್ಬುರ್ಗಿಯ ಕಾಲೇಜಿಗೆ ಸೇರುತ್ತಾಳೆ. ಚಿಕ್ಕಂದಿನಿಂದಲೇ ಜತೆಯಲ್ಲಿ ಆಡಿ ಬೆಳೆದ ಸಾತಿ ಸೀನಪ್ಪರ ಒಡನಾಟಕ್ಕೆ ದುರಗಿ ಗೋಯಿಂದಪ್ಪನವರಿಗೆ ಯಾವ ತಕರಾರೂ ಇರಲಿಲ್ಲ. ಆದರೆ ಅವರಿಬ್ಬರೂ ಪರಸ್ಪರ ಇಷ್ಟಪಟ್ಟು ಮದುವೆಯಾಗಲು ನಿರ್ಧರಿಸಿದಾಗ

ರಾಧಾಬಾಯಿಗೆ ಆಘಾತವಾಗುತ್ತದೆ. ದುರಗಿ ಕಂಗಾಲಾಗುತ್ತಾಳೆ. ಗೋಯಿಂದಪ್ಪ ಕೆರಳುತ್ತಾನೆ. ಊರವರು ಮುಸಿಮುಸಿ ಆಡಿ ನಗುತ್ತಾರೆ. ಬ್ರಾಹ್ಮಣರ ಹುಡುಗ ಮಾದಿಗರ ಹುಡುಗಿಯನ್ನು ಮದುವೆಯಾಗುವ ವಾರ್ತೆ ಹಳ್ಳಿಯ ಬದುಕನ್ನು ಅಲ್ಲೋಲಕಲ್ಲೋಲಗೊಳಿಸುತ್ತದೆ. ಸಾತಿ ತಾಯಿಗೆ ಧೈರ್ಯ ಹೇಳುತ್ತಾಳೆ.

ದುರಗಿ ತನ್ನ ಹಾಸುಗೆಗೆ ಬರಲಿಲ್ಲವೆಂಬ ಹಳೆಯ ದ್ವೇಷದಿಂದ ಅವಳ ಮೇಲೆ ವಿಷ ಕಾರುತ್ತಿದ್ದ ಗೌಡ ಕುಕ್ಕಣ್ಣಿಯ ಜತೆ ಸೇರಿ ಗೂಂಡಾಗಳಿಂದ ಸಾತಿಯ ಕೊಲೆಗೆ ಫಿತೂರಿ ಹೂಡುತ್ತಾರೆ. ಬೆಂಗಳೂರಿನಲ್ಲಿ ಉದ್ಯೋಗ ಸಿಕ್ಕಿರುವುದರಿಂದ ಅಲ್ಲಿಯೇ ವಾಸ್ತವ್ಯವನ್ನು ಹೂಡುತ್ತೇವೆಂದು ಸಾತಿ ಅಮ್ಮನಿಗೆ ತಿಳಿಸಿರುತ್ತಾಳೆ. ಸಾತಿ ಸೀನಪ್ಪರು ಹೊರಟ ರೈಲಿನಲ್ಲೇ ದುರಗಿಯನ್ನು ಕರೆದುಕೊಂಡು ಗೂಂಡಾಗಳೊಂದಿಗೆ ಹೊರಟ ಕುಲಕರ್ಣಿ ಸಾತಿಯ ಕೊಲೆಯ ಸಂಚು ಯಾರಿಗೂ ಗೊತ್ತಾಗದಂತೆ ಜಾಗರೂಕತೆ ವಹಿಸಿರುತ್ತಾನೆ. ಆದರೆ ಯಾವುದೋ ಹೊತ್ತಿನಲ್ಲಿ ಕಣ್ಣುಮುಚ್ಚಿ ಮಲಗಿದ ದುರಗಿಗೆ ಅವರಾಡುವ ಮಾತುಗಳಿಂದ ಗೋಯಿಂದಪ್ಪ ಮಗಳನ್ನು ಕೊಲ್ಲುವ ಹಂಚಿಕೆ ಹಾಕಿದ್ದು ಗೊತ್ತಾಗುತ್ತದೆ. ಅವಳು ದಿಗ್ಭ್ರಾಂತಳಾಗುತ್ತಾಳೆ. ಗೂಂಡಾಗಳಿಗೆ ಮಗಳನ್ನು ತೋರಿಸಿ ಅವಳನ್ನು ಕೊಲೆಮಾಡಿಸುವ ತಂದೆಯನ್ನೇ ಮುಗಿಸುವ ಯೋಚನೆ ಮಾಡುತ್ತಾಳೆ. ರೈಲಿನ ಬಾಗಿಲ ಬಳಿಯಲ್ಲಿ ಗಾಳಿಗೆ ಮೈಯೊಡ್ಡಿ ನಿಂತಂತೆ ನಟಿಸಿ ನಿಧಾನವಾಗಿ ಗೋಯಿಂದಪ್ಪನ ಬೆನ್ನಿನ ಭಾಗಕ್ಕೆ ಬಂದವಳೇ ಸುತ್ತ ಮುತ್ತ ನೋಡಿ ತನ್ನ ಬಲವೆಲ್ಲವನ್ನೂ ಕೂಡಿಸಿ ಅವನನ್ನು ನೂಕುತ್ತಾಳೆ. ಅಪಾಯದ ನಿರೀಕ್ಷೆಯಿಲ್ಲದ ಗೋಯಿಂದಪ್ಪ ಆಯತಪ್ಪಿ ಓಡುವ ರೈಲಿನ ಚಕ್ರಕ್ಕೆ ಸಿಕ್ಕಿ ಛಿದ್ರ ಛಿದ್ರವಾಗುತ್ತಾನೆ.

ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ. ಅಸಹಾಯಕತೆ, ದುರ್ಬಲತೆಗಳಿಗೆ ಸಂಕೇತವಾಗುವ ಹೆಣ್ಣೇ ಸಾಮರ್ಥ್ಯ, ಛಲ, ಬಲಗಳ ಮೂರ್ತಸ್ವರೂಪಿಯಾಗಬಲ್ಲಳು. ಹೆಣ್ತನದ ಕೋಮಲವಾದ ಎಳೆಗಳಿಂದ ನೈಯ್ದ ಭಾವನೆಗಳ ಕೌದಿಗೆ ಗಂಡಸಿನ ಕ್ರೌರ್ಯದ ಕೈ ಕತ್ತರಿಯಾಗುವಾಗ ಆ ಕೈಯನ್ನು ಕತ್ತರಿಸಲು ಹಿಂಜರಿಯಬಾರದೆನ್ನುವುದಕ್ಕೆ ಈ ಕೃತಿ. ಹಣದ ಆಸೆಗೆ ಮರುಳಾಗುವ ಭ್ರಷ್ಟ ಅಧಿಕಾರಿಗಳ ದುಷ್ಟ ರಾಜಕಾರಣವನ್ನು ಬಯಲಿಗೆಳೆದ ಲಕ್ಕವ್ವ, ಕರುಳಕುಡಿಯನ್ನು ರಕ್ಷಿಸಲು ಗಂಡನ ಮೋಸಕ್ಕೆ ತಕ್ಕ ಶಿಕ್ಷೆ ವಿಧಿಸಿದ ದುರಗಿ ತಲೆ ಮಾರುಗಳಿಂದ ನಡೆದು ಬಂದ 'ಇದು ಹಿಂಗಾಗಬಾರ್ದು. ಆದರೆ ನಂಬಲ್ಲಿ ಇದು ಹಿಂಗೇ ಆಕ್ಕೋತೇ ಬಂದಾದ ಹಿಂದಿಲಿಂದನೂ ನಮ್ಮಾಯಿ

ಮುತ್ತ್ಯಾ ಅವರ ಆಯಿ ಮುತ್ತ್ಯಾ ಅವರ ಆಯಿ ಮುತ್ತ್ಯಾ ಅಂತ ಹಿಂದಿನ ಏಳೇಳು ತಲೆಗೋಳಲಿಂದನೂ ಇದು ಹಿಂಗೇ ನಡ್ಕೊಂಡು ಬಂದಾದ. ಹೆಣ್ಣು ಹೆಂಗಸಿನ ಮ್ಯಾಲ ಆಗಾ ಅನ್ಯಾಯ ಅತ್ಯಾಚಾರಗೋಳಗಿ ಹಿಂಗೇ ಈ ಗಂಡಸ್ ಮುಚ್ಚಿಡತಾದ. ಹೇಳಿ ಕೇಳಿ ಇದು ಗಂಡಸರ ರಾಜಕಿ ನೋಡು. ಅವರದೇ ರಾಜ್ಯ. ಅವರದೇ ನ್ಯಾಯ. ನಾವೆಲ್ಲಾ ಹಿಂಗ ಹಿಂದ ಕುಂತೇ ಈಟೆಲ್ಲಾ ಮಾತಾಡ್ತೀವಿ. ಅವರಿಗಿ ಎದರ ನಿಂತು ಕೇಳಾ ಧೈರ್ಯ ನಮ್ಮ ಹೆಂಗಸರೊಳಗ ಯಾರ ಬಲ್ಲಿ ಅದಾ ಹೇಳು?'(39) ಎಂಬ ಪ್ರಶ್ನೆಗಳಿಗೆ ಉತ್ತರವಾಗಿದ್ದಾರೆ. ಹೊಲೆಯರ ಶಾಣ್ಯಾ, ಹಣಮಂತ ಮತ್ತು ಸಾತಿಯ ಪಾತ್ರದ ಮೂಲಕವೂ ಪ್ರಸಕ್ತ ಪರಿಸ್ಥಿತಿಯನ್ನು ಪರಿವರ್ತಿಸಲೇಬೇಕಾದ ಅಗತ್ಯವನ್ನು ಕಾದಂಬರಿ ಒತ್ತಿಹೇಳಿದೆ. '.. ನಮ್ಮಂದಿ ಹೆಣ್ಣುಗೊಳಿಗಿ ಅವು ಇಟಗೊಂಡು ಸುಕ ಉಣ್ತಾರ ಮಕ್ಕಳು. ಅದೇ ಆ ಮಂದಿ ಹೆಂಗಸರಿಗಿ ನಾವು ಇಟಗೊಂಡು ಸುಕಾ ಪಡಲಕ್ಕ ಬಿಡ್ತಾರೇನು ಹೇಳು? .. .ಯಾಕಪ ಹಿಂಗ? ಇದ್ಯಾವ ಸೀಮೀ ರೀತಿ ರಿವಾಜ? ಇದಗ ಯಾವ ದೇಶಾದ ನ್ಯಾಯ ಅಪಾ?'(82) ಎನ್ನುವ ಹೊಲೇರ ಶಾಣ್ಯಾಂನ ಪ್ರಶ್ನೆ ಮಾರ್ಮಿಕವಾಗಿದೆ. ಸಾತಿ ವಿದ್ಯಾವಂತಳಾದುದು, ಅನ್ಯಜಾತಿಯ ಅದರಲ್ಲೂ ಬ್ರಾಹ್ಮಣ ಹುಡುಗನನ್ನು ಪ್ರೀತಿಸಿದ್ದು ಸಾಮಾನ್ಯವಾದ ವಿಚಾರವಲ್ಲ. ಈ ವಿಚಾರವನ್ನು ಕೇಳಿ ತಬ್ಬಿಬ್ಬಾದ ದುರಗಿಯನ್ನು ಸಂತೈಸುವ ಸಾತಿ 'ಯವ್ವಾ, ನಿನಗೊಂದು ಮಾತ ಹೇಳೋದದಾ.. ಈಗ ದಿನಗೋಳ ಭಾಳ ಬದಲಗ್ಯಾವ. ಮದಲಿದ್ದ ಹಿಂದಿನ ಜಮಾನಾ ಇಲ್ಲೀಗ. ದೊಡ್ಡ ದೊಡ್ಡ ಶಾರ ಪಟ್ಟಣದೊಳಗ ಎಲ್ಲಾ ಜಾತಿ ಕುಲದ ಗಂಡು ಹೆಣ್ಣಾಗೋಳು ಮದವಿ ಮಾಡ್ಕೋತಾರ '(92) 'ಎಲ್ಲಾ ಕಾಲದಾಗೂ ಆ ನಿನ್ನ ಬಸವಣ್ಣನೇ ಬಂದು ಜಾತಿ ಕುಲದ ಮಾತು ಬಗಿಹರಸ್ಬೇಕು, ಬ್ಯಾರೆ ಬ್ಯಾರೆ ಜಾತಿ ಹೆಣ್ಣು ಗಂಡೀಗಿ ಕೂಡ್ಸಿ ಮದಿ ಮಾಡ್ಬೇಕು ಅಂದ್ರ ಆಗಂಗಿಲ್ಲ. ಅಂವಾ ಆ ಕಾಲದಾಗ ಒಂದು ದಾರಿ ಹಾಕಿಕೊಟ್ಟು ಹೋಗ್ಯಾನ. ಈಗ ನಾವು ಆ ಹಾದಿ ಮ್ಯಾಲ ನಡೀಬೇಕ್ಯಾಗದ ಅಷ್ಟೇ. ನಮ್ಮ ಸಣ್ಣಜಾತಿ ಹೆಣ್ಣಗೋಳಂದ್ರ ದೊಡ್ಡ ಜಾತಿಯವ್ರು ಬರೇ 'ಇಟ್ಕೋತಾರ' ತಮ್ಮ ಮೈ ತಿಂಡಿ ತೀರ್ಸೋ ಸಲುವಾಗಿ......ಆದರ ಈಗ ಅದೆಲ್ಲಾ ನಡೆಂಗಿಲ್ಲ. ನಾವು ದೊಡ್ಡ ಜಾತಿ ಗಂಡಸರಿಗಿ ಬೇಕು ಅಂತ ಅನ್ನಿಸಿದರೆ ಅವರು ನಮಗ ಮದವಿ ಮಾಡ್ಕೊಂಡು ಹೆಣ್ತಿ ಅಂತೇ ತಮ್ಮ ವಾಡೇಕ್ಕ, ಅರಮನೀಗಿ, ಕರಿಕಲ್ಲಿನ ಗಚ್ಚಿನ ಮನೀಗಿ, ಕೈ ಹಿಡ್ದು ಕರ್ಕೊಂಡು ಹೋಗಬೇಕು...(94) ಎಂದು ವಾದಿಸುವ ಸಾತಿ ತನ್ನ ಧೈರ್ಯ, ವಿವೇಕ, ಚಿಂತನೆಗಳ ಹೊಳಹುಗಳಿಂದ ಪರಿವರ್ತನಶೀಲ

ಸಮಾಜ ರಚನೆಗೆ ಪಂಥಾಹ್ವಾನ ನೀಡುವ ಜಾಗೃತ ಮಹಿಳೆಯ ಪ್ರತೀಕವಾಗುತ್ತಾಳೆ.

ಸ್ಥಿತ್ಯಂತರಗೊಳ್ಳುವ ಬದುಕಿನಲ್ಲಿ ದಲಿತ ಸಮುದಾಯವೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆಯಿದೆ. ವಿದ್ಯಾಭ್ಯಾಸ, ಅಧಿಕಾರಗಳು ಅವರಿಗೆ ಆತ್ಮವಿಶ್ವಾಸ, ಧೈರ್ಯಗಳನ್ನು ನೀಡಬಲ್ಲುದು ಎಂಬ ಅಂಶವನ್ನು ಕಾದಂಬರಿ ನಿರೂಪಿಸುತ್ತದೆ. ನಗರಜೀವನದಲ್ಲಿ ಬದುಕುವ ದಲಿತ ಸಮುದಾಯಗಳು ಇವತ್ತು ಹಿಂದಿನಂತೆ ಅಸ್ಪೃಶ್ಯತೆ, ಅತ್ಯಾಚಾರಗಳ ಕರಿನೆರಳಿನಲ್ಲಿ ಬದುಕಬೇಕಾಗಿಲ್ಲ. ಅನೇಕ ಪ್ರಗತಿಪರ ಚಿಂತನೆಗಳು, ಸುಧಾರಣಾ ಪ್ರಕ್ರಿಯೆಗಳು ಅವರ ಬದುಕಿನಲ್ಲೂ ಹೊಸಬೆಳಕನ್ನು ಚೆಲ್ಲತೊಡಗಿವೆ. ಈ ಸುಧಾರಣೆಯ ಎಳೆಗಳನ್ನು ಕಾದಂಬರಿ ಬಹುಸೂಕ್ಷ್ಮವಾಗಿ ಅಭಿವ್ಯಕ್ತಿಸಿದೆ.

**ಅಭಿಮಾನ**

ಸ್ನೇಹ, ಸ್ವಾಭಿಮಾನ, ಮಾನವೀಯತೆಗಳನ್ನು ಸಾಕಾರಗೊಳಿಸುವ ಶಿಷ್ಟಭಾಷೆಯಲ್ಲಿ ರಚಿತವಾದ ಒಂದು ಸುಂದರ ಕಾದಂಬರಿ ಇದು. ಈ ಕೃತಿಯ ಪ್ರಧಾನ ಪಾತ್ರ ಕುಂತಿ ಎಂಬ ಹೆಣ್ಣುಮಗಳು. ಬಡವರ ಮನೆಯ ಹುಡುಗಿಯಾದರೂ ಶ್ರೀಮಂತ ಸೋದರತ್ತೆ ಸರ್ವಮಂಗಳಾಳ ಮಗ ಕಾರ್ತಿಕ್‌ನಿಗೆ ಹಕ್ಕಿನ ಹೆಣ್ಣಾಗಿ ಹಿರಿಯರ ಕನಸನ್ನು ನನಸುಮಾಡಿದವಳು. ಮೆಚ್ಚಿ ಮದುವೆಯಾದ ಕಾರ್ತಿಕ್ ಮಡದಿಯನ್ನು ಅತ್ಯಂತ ಗಾಢವಾಗಿ ಪ್ರೀತಿಸಿದರೂ ಸಹವಾಸ ದೋಷದಿಂದ ದುಷ್ಟಚಟಗಳಿಗೆ ಬಲಿಯಾಗುತ್ತಾನೆ. ಬಿಸಿನೆಸ್ ಮ್ಯಾನೇಜ್‌ಮೆಂಟಿನಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆಂದು ಅಮೇರಿಕಕ್ಕೆ ಹೋದಾಗ ಸಹಪಾಠಿ ಪ್ರೇಮ್‌ಗುಪ್ತಾನ ಬಲವಂತದಿಂದ ಮದಿರೆ, ಮಾನಿನಿಯರ ರುಚಿ ಹತ್ತಿಸಿಕೊಳ್ಳುತ್ತಾನೆ. ಊರಿಗೆ ಹಿಂತಿರುಗಿದರೂ ಮನುಷ್ಯನ ರಕ್ತದ ರುಚಿ ತಿಳಿದ ಹುಲಿಯಂತೆ ಮನೆಯಲ್ಲಿ ಮುದ್ದಾದ ಮಡದಿಯಿದ್ದರೂ ಆಫೀಸಿನ ಹೆಣ್ಣುಮಕ್ಕಳ ಮೇಲೆಲ್ಲ ಕಣ್ಣುಹಾಕುತ್ತಾನೆ, ಕಿರುಕುಳ ಕೊಡುತ್ತಾನೆ. ಕುಡಿದು ಉನ್ಮತ್ತನಾಗಿ ತನ್ನ ಕೈಕೆಳಗಿನ ಅಧಿಕಾರಿಯ ಹೆಂಡತಿಯನ್ನೇ ಬಲಾತ್ಕಾರ ಮಾಡಲು ಪ್ರಯತ್ನಿಸಿದಾಗ ಸರ್ವಮಂಗಳಾ ಮಗನನ್ನು ಶಿಕ್ಷಿಸುತ್ತಾಳೆ. ಅವಮಾನದಿಂದ ಇನ್ನಷ್ಟು ಕೆಟ್ಟು ವೇಶ್ಯೆಯರ ಸಂಗದಲ್ಲಿ ಮುಳುಗಿ ಆಫೀಸಿನ ಕೆಲಸ ಕಾರ್ಯಗಳಲ್ಲೂ ಬೇಜವಾಬ್ದಾರಿ ತೋರುತ್ತಾನೆ. ಮದುವೆಯಾದ ವರ್ಷದಲ್ಲೇ ಕುಂತಿ

ಬಸುರಿಯಾದಾಗ ಅವನ ಆಮೋದ, ಪ್ರಮೋದಗಳಿಗೆ ನೀರೆರೆದಂತಾಗುತ್ತದೆ. ಕುಂತಿಗೆ ದೈಹಿಕವಾಗಿಯೂ ಮಾನಸಿಕವಾಗಿಯೂ ಆತ ಚಿತ್ರಹಿಂಸೆ ಕೊಡುವುದನ್ನು ನೋಡಿ ಸರ್ವಮಂಗಳಾ ಸೊಸೆ ಮತ್ತು ಮೊಮ್ಮಗುವನ್ನು ತವರಿಗೆ ಕಳುಹಿಸುತ್ತಾಳೆ. ದುರ್ವ್ಯಸನಗಳಿಗೆ ದಾಸನಾದ ಮಗನನ್ನು ತಿದ್ದಲಾಗದ ಚಿಂತೆಯಲ್ಲೇ ಜರ್ಜರಿತಳಾಗಿ ಅಸುನೀಗುತ್ತಾಳೆ. ಅತಿಯಾದ ಕುಡಿತ, ವೇಶ್ಯಾಗಮನದಿಂದ ಕಾರ್ತಿಕ್ ಕುಷ್ಠರೋಗಕ್ಕೆ ಬಲಿಯಾಗಿ ಎಲ್ಲರ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾನೆ. ಔಷಧೋಪಚಾರವಿಲ್ಲದೆ ಕಾಯಿಲೆ ಹೆಚ್ಚುತ್ತದೆ. ತಂದೆಯ ಸಲಹೆಯಂತೆ ಕುಂತಿಯೇ ಅವನನ್ನು ಆಸ್ಪತ್ರೆಗೆ ಸೇರಿಸಿ ಉಪಚರಿಸಿ ಗುಣಪಡಿಸಿದಾಗ ಕಾರ್ತಿಕ್‌ನ ಕಣ್ಣು ತೆರೆಯುತ್ತದೆ. ಆತ ಹೆಂಡತಿಯ ಕ್ಷಮೆಯಾಚಿಸುತ್ತಾನೆ. ಆದರೆ ಅವನನ್ನು ಮನೆಗೆ ಕರೆದುಕೊಂಡು ಬಂದ ಕುಂತಿ ಅವನ ಯಾವ ಅನುನಯದ ಮಾತಿಗೂ ವಿಚಲಿತಳಾಗದೆ ಮಗ ಅಶ್ವಿನ್‌ನನ್ನು ತಂದೆಯ ಸಾನ್ನಿಧ್ಯದಲ್ಲಿ ಬಿಟ್ಟು ತವರಿಗೆ ಹಿಂತಿರುಗುತ್ತಾಳೆ. ಒಂದು ಬಗೆಯ ಸ್ಥಿತಪ್ರಜ್ಞತೆಯಿಂದ ತನ್ನ ಕರ್ತವ್ಯವನ್ನು ಸಲ್ಲಿಸಿ, ಮಾನವೀಯತೆಯನ್ನು ಮೆರೆದು ಸ್ವಾಭಿಮಾನವನ್ನು ಉಳಿಸಿ ಅವನಿಂದ ದೂರವಾಗುತ್ತಾಳೆ. ಹೋಗುವ ಮುನ್ನ ಅವಳು ಹೇಳುವ ಮಾತುಗಳು ಕಾದಂಬರಿಯ ಜೀವಾಳವಾಗಿದೆ: 'ಕಾರ್ತಿಕ್.... ನಿನ್ನಿಂದ ತಿರಸ್ಕೃತಳಾಗಿ, ಅತ್ತೆಯ ಹೇಳಿಕೆಯಂತೆ ಈ ಮನೆ ಬಿಟ್ಟು ಹೋದಾಗಲೇ ನಿನ್ನ ಹೆಂಡತಿಯ ಸಂಬಂಧ ಸತ್ತಿದೆ. ಈಗ ನಾನು ಬಂದಿದ್ದು ನಿನ್ನ ಸೇವೆ ಮಾಡಿದ್ದು ಎಲ್ಲ ಬರೀ ನಿನ್ನ ಮಾವನ ಮಗಳಾಗಿ ಮಾನವತೆಯ ದೃಷ್ಟಿಯಿಂದ ಅಷ್ಟೇ. ಅತ್ತೆಯ ಆತ್ಮಕ್ಕೆ ಶಾಂತಿ ಸಿಗಲಿ ಅಂತ ಅಪ್ಪಯ್ಯನ ಮಾತು ಮೀರದೆ ನಿನ್ನಲ್ಲಿಗೆ ಬಂದಿದ್ದೆ. ಕಾರ್ತಿಕ್.. ಇನ್ನು ಇಲ್ಲಿಯ ಕೆಲಸ ಮುಗಿಯಿತು..... ಹೀಗಾಗುತ್ತದೆ, ಹೀಗಾಗಬಹುದು ಅಂತ ನನಗೆಂದೂ ಅನ್ನಿಸಿರಲಿಲ್ಲ.. ಆದರೂ.. ಬಾಳಿನ ಒಂದು ತಿರುವಿನಲ್ಲಿ ನಾವಿಬ್ಬರೂ ಹೀಗೆ ಬೇರ್ಪಡುವುದು ಅನಿವಾರ್ಯವಾಯಿತು.. ಹೂಂ.. ನಾನು ನಿನ್ನನ್ನು ಪ್ರೀತಿಸುತ್ತೇನೆ ಕಾರ್ತಿಕ್.. ಆದರೆ ನಿನಗಿಂತ ಹೆಚ್ಚಾಗಿ ನನ್ನ ಸ್ವಾಭಿಮಾನವನ್ನು ಪ್ರೀತಿಸುತ್ತೇನೆ..ಗುಡ್ ಬೈ..'(190–192) ಬಿಲ್ಲಿನಿಂದ ಹೊರಟ ಬಾಣದಂತಿರುವ ಕುಂತಿಯ ಮಾತುಗಳು ಎಲ್ಲ ಸ್ವಾಭಿಮಾನೀ ಮಹಿಳೆಯರಿಗೂ ದಾರಿದೀಪವಾಗಿವೆ.

ಪರೋಪಕಾರಿಯೂ ಸಜ್ಜನ ಸಂಪನ್ನಳೂ ಆಗಿದ್ದ ಸರ್ವಮಂಗಳಾ ತಾಯಿಯೂ ತಂದೆಯೂ ಆಗಿ ಮಗನನ್ನು ಸಾಕಿದ್ದಳು. ಕಾರ್ಖಾನೆಯನ್ನು

ಊರ್ಜಿತಕ್ಕೆ ತಂದು ಕಾರ್ಮಿಕರ ಪ್ರೀತಿ, ವಿಶ್ವಾಸ, ಗೌರವಗಳನ್ನು ಗಳಿಸಿ ಸಮಸ್ತ ಐಶ್ವರ್ಯ, ಅಧಿಕಾರಗಳಿಗೆ ಮಗನನ್ನು ವಾರಸುದಾರನನ್ನಾಗಿ ಮಾಡಿದ್ದಳು. ಆದರೆ ಅಂಥ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಕಾರ್ತಿಕ್ ದುಷ್ಟತನಗಳ ಮೂರ್ತಸ್ವರೂಪಿಯಾಗಿ ಪರಿಸರದ ಪ್ರಭಾವ ಮನುಷ್ಯನನ್ನು ಎಷ್ಟು ಅಧೋಗತಿಗೆ ತಳ್ಳಬಹುದೆಂಬುದಕ್ಕೆ ಸಾಕ್ಷಿಯಾಗುತ್ತಾನೆ.

ಕುಷ್ಠರೋಗ ಮರಣಾಂತಿಕ ಕಾಯಿಲೆಯಾದರೂ ಅದನ್ನು ಸಂಪೂರ್ಣ ಗುಣಪಡಿಸಬಹುದು, ಅದು ಯಾವುದೇ ಬಗೆಯ ಸಾಂಕ್ರಾಮಿಕ ರೋಗವಲ್ಲ ಎಂಬ ವೈಜ್ಞಾನಿಕ ಸತ್ಯ ಇತ್ಯಾತ್ಮಕ ಅಂಶವಾಗಿ ಕಾದಂಬರಿಗೆ ಕಳೆಯೇರಿಸಿದೆ.

**ಬದುಕು**

'ಬದುಕು' ಗೀತಾರವರ 26ನೆಯ ಕಾದಂಬರಿ. ನಾಲ್ಕು ಮುದ್ರಣಗಳನ್ನು ಕಂಡಿರುವ, ಈ ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾಗಿ ಕಾದಂಬರಿ ಕ್ಷೇತ್ರದಲ್ಲೇ ಮಹತ್ವಪೂರ್ಣವಾದ ಸ್ಥಾನವನ್ನು ಪಡೆದಿದೆ. ಟಿ.ಎಸ್. ಈಲಿಯಟ್ ವ್ಯಾಖ್ಯಾನಿಸುವ ಮನಸ್ಸಿನ ಪ್ರಬುದ್ಧತೆ, ಭಾಷೆಯ ಪ್ರಬುದ್ಧತೆ, ಶೈಲಿಯ ಪ್ರಬುದ್ಧತೆ ಮತ್ತು ಜಾಗತಿಕ ವಿಚಾರಗಳ ನಾಲ್ಕು ಸೂತ್ರಗಳ ಮೂಲಕ ಈ ಕೃತಿಯನ್ನು ಅಧ್ಯಯನ ಮಾಡಿ ಪ್ರಶಂಸೆಯ ಕಿರೀಟವನ್ನು ತೊಡಿಸಿದ ಡಾ. ಚೆನ್ನಣ್ಣ ವಾಲೀಕಾರ್ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ 'ಬದುಕು' ಮಹಾಕಾದಂಬರಿ ಎನಿಸತಕ್ಕ ಕೃತಿಯೆಂದಿದ್ದಾರೆ (ಕಲ್ಬುರ್ಗಿಯ ಸ್ಪಂದನ–ಪು.2)

ನಿಸರ್ಗ, ಗ್ರಾಮಾಯಣ, ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮುಂತಾದ ಪ್ರಾದೇಶಿಕತೆಯ ಮೆರುಗುಳ್ಳ ಮಹಾಕೃತಿಗಳ ಅಧ್ಯಯನದ ಪರಿಣಾಮವಾಗಿಯೇ ಮೂಡಿಬಂದುದೆನ್ನಲಾದ 'ಬದುಕು' ಅನೇಕ ಕಾರಣಗಳಿಗಾಗಿ ವಿಶಿಷ್ಟವಾಗಿದೆ. ನಗರಜೀವನದಿಂದ ಹೊರಗುಳಿದಿರುವ ತ್ಯಕ್ತ, ಗ್ರಾಮೀಣ ಸಮುದಾಯವೊಂದರ ಸಾಮಾಜಿಕ ಬದುಕಿನ ವಿಭಿನ್ನ ಚಿತ್ರಗಳನ್ನು ಅನಾವರಣಗೊಳಿಸುವ ಈ ಕೃತಿಯ ಹೂರಣದಲ್ಲಿ ಒಂದು ಸಮುದಾಯದ ಬದುಕಿನ ಸಮಸ್ತ ವಿಚಾರಗಳನ್ನು ಕಟ್ಟಿಕೊಡುವ ಆಶೋತ್ತರವಿದೆ. ಶೋಷಿತ ಜನಾಂಗದ ನೋವು, ಸಂಕಟಗಳು, ಆಚಾರ ವಿಚಾರಗಳು, ಸಂಪ್ರದಾಯ, ನಂಬಿಕೆಗಳು, ಮೌಢ್ಯ, ಮುಗ್ಧತೆಗಳು, ಸಂಘರ್ಷ ಸಂವೇದನೆಗಳು ಅತ್ಯಂತ ನಿಕಟವಾಗಿಯೂ ಆಳವಾಗಿಯೂ ಈ ಕೃತಿಯಲ್ಲಿ ಚಿತ್ರಿತವಾಗಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸ್ವೀಕಾರ ಮಾಡುತ್ತ ಗೀತಾರವರು ಈ ಕಾದಂಬರಿಯನ್ನು ಕುರಿತು ಹೇಳುವ ಮಾತುಗಳು

ಮನನೀಯ: 'ನನ್ನ ಅನಕ್ಷರಸ್ಥ, ಅಮಾಯಕ, ಕೆಳವರ್ಗದ ಮತ್ತು ದಲಿತ ಹೆಂಗಸರ ಶೋಷಣೆಯನ್ನು, ಅವರೆದೆಯಲ್ಲಿ ಹೆಪ್ಪುಗಟ್ಟಿರುವ ಸಂಕಟವನ್ನು ಕೃತಿಗಳಲ್ಲಿ ದಾಖಲಿಸಿ, ಜನತೆಯ ಮುಂದೆ ಇಡಬೇಕೆಂಬ ಛಲದಿಂದ ಮತ್ತು ಈ ದೌರ್ಜನ್ಯಕ್ಕೆ ಕಾರಣರಾಗಿರುವವರ ಕಚ್ಚೆಹರಕುತನ, ಹಲ್ಕಟ್ ಗಿರಿಗಳನ್ನು ಜನರು ಅರಿಯಬೇಕೆಂಬ ಹಟದಿಂದ ಬರೆಯುತ್ತಿದ್ದೇನೆ. ನನ್ನ ಜಿಲ್ಲೆಯ ಕೆಳವರ್ಗದ ಮತ್ತು ದಲಿತ ಹೆಂಗಸರ ಅನುಭವಗಳನ್ನು ನಾನೂ ಒಬ್ಬ ಶೂದ್ರ ಮಹಿಳೆಯಾಗಿ ಈ ಕೃತಿಯಲ್ಲಿ ದಾಖಲಿಸುವುದರ ಮೂಲಕ ಇಡೀ ನನ್ನ ಭಾರತದ ಎಲ್ಲ ದಲಿತ ಮತ್ತು ನಿರ್ಗತಿಕ ಮಹಿಳೆಯರ ನೋವುಗಳನ್ನು, ಅನುಭವಗಳನ್ನು ಇದರಲ್ಲಿ ಕಟ್ಟಿಕೊಟ್ಟಿದ್ದೇನೆ.' (ಬದುಕು: ಪು.xv)[2]

ಬದುಕಿನ ಅರ್ಥವಂತಿಕೆಯ ಹುಡುಕಾಟ, ಜೀವಂತಿಕೆಯ ಹಪಾಹಪಿ, ಮಾನವೀಯ ಚಿಂತನೆಯ ಒರೆಗಲ್ಲಾಗಿ ಸಹೃದಯಲೋಕದಲ್ಲಿ ಅತಿ ಹೆಚ್ಚಿನ ಜನಪ್ರಿಯತೆ ಮತ್ತು ವಿಚಾರಜಾಗೃತಿಯನ್ನು ಮೂಡಿಸಿದ 'ಬದುಕು' 489 ಪುಟಗಳ ಬೃಹತ್ ಕಾದಂಬರಿ. ಈ ಕಾದಂಬರಿಲೋಕದ ಹೆಬ್ಬಾಗಿಲನ್ನು ತೆರೆಯುವವರು ಶಿವಳ್ಳಿಯ ಕಬ್ಬಲಗೇರಿಯ ಕೆಳವರ್ಗದ ಒಂದು ಸಾಧಾರಣ ಮನೆತನದ ಮಲ್ಲಪ್ಪ ಜಮಾದಾರ ಮತ್ತು ಪತ್ನಿ ಮಲ್ಲವ್ವ. ಕಲ್ಬುರ್ಗಿ ಮತ್ತು ಶಿವಳ್ಳಿಯಲ್ಲಿ ನಡೆಯುವ ಈ ಕಾದಂಬರಿಯ ಘಟನಾವಳಿಗಳು ಇತರ ಕಾದಂಬರಿಗಳಂತೆ ಒಂದು ಪ್ರತ್ಯೇಕ ಕಥೆ ಅಥವಾ ಕಥಾಪಾತ್ರಕ್ಕೆ ಮೀಸಲಾಗಿಲ್ಲ. ಇಲ್ಲಿ ಇತರ ಕಾದಂಬರಿಗಳಲ್ಲಿ ಬಿಡಿಬಿಡಿಯಾಗಿ ಅಭಿವ್ಯಕ್ತವಾದ ಭಿನ್ನ ಭಿನ್ನ ಅನುಭವ, ಆಶಯಗಳನ್ನು ಸಮಗ್ರವಾಗಿ ಚಿಂತಿಸಿ ಅತ್ಯಂತ ಸಹಾನುಭೂತಿಯಿಂದಲೂ ಆಪ್ತತೆಯಿಂದಲೂ ವಾಸ್ತವಿಕ ನೆಲೆಯಲ್ಲಿ ಮೂರ್ತಗೊಳಿಸುವ ಉಮೇದಿದೆ.

ಮಲ್ಲಪ್ಪ ಮತ್ತು ಮಲ್ಲವ್ವ ದಂಪತಿಗಳಿಗೆ ಶಾಣಮ್ಮ, ಕಾಶಮ್ಮ(ಕಾಶಿ)ಎಂಬ ಇಬ್ಬರು ಹೆಣ್ಣುಮಕ್ಕಳು ಮತ್ತು ಕಲ್ಯಾಣಿ ಎಂಬ ಮಗ. ಇವರ ಜತೆ ಮನೆಮಗನಂತಿರುವ ಫತರೂ ಎಂಬ ಮುಸಲ್ಮಾನ ಹುಡುಗ–ಒಂದು ಮಧ್ಯಮ ವರ್ಗದ ಮನೆತನದ ಪ್ರಸ್ತಾಪದಿಂದ ಮೊಳಕೆಯೊಡೆದು ಶ್ರೇಣೀಕೃತ ಸಮಾಜದ ಮೇಲು ಮತ್ತು ನಿಮ್ನವರ್ಗದ ರೆಂಬೆಕೊಂಬೆಗಳಿಂದ ಬೆಳೆದು ಮಲ್ಲಪ್ಪನ ಮಗಳು ಶಾಣಮ್ಮ, ಅವಳ ಮಗಳು ಬೆಳ್ಳಿ, ಅವಳ ಮಗಳು ಸುಕದೇವಿ–ಹೀಗೆ ನಾಲ್ಕು ತಲೆಮಾರುಗಳ ಬಿಳಲುಗಳನ್ನೊಳಗೊಂಡ ಬೃಹತ್ ಕಥಾವೃಕ್ಷ 'ಬದುಕು.'

ಈ ಬದುಕಿನೊಳಗೆ ನಡೆಯುವ ಹತ್ತು ಹಲವು ಘಟನಾವಳಿಗಳ ವಿಶ್ಲೇಷಣೆ ಕೃತಿಯ ಮೌಲ್ಯ ಮತ್ತು ಹೆಗ್ಗಳಿಕೆಗಳಿಗೆ ಸಾಕ್ಷಿ.

ಮಾಪುರತಾಯಿಯ ಮಕ್ಕಳು ಕಾದಂಬರಿಯಲ್ಲಿ ಜೋಗತಿ ಬಿಡುವ ಅನಿಷ್ಟಪದ್ಧತಿ ಕಥಾರೂಪದಲ್ಲಿ ಅವತರಿಸಿದರೆ ಇಲ್ಲಿ ವೈಚಾರಿಕ ಪ್ರಜ್ಞೆಯಾಗಿ, ಜಿಜ್ಞಾಸೆಯಾಗಿ ವಿಶ್ಲೇಷಣೆಗೊಳ್ಳುತ್ತದೆ. ಹೊಲೆಯರ ಭರಮ್ಯಾನ ಮಗಳು ನೀಲವ್ವನೆಂಬ ಹುಡುಗಿ ಅದಾಗಲೇ ನೆರೆಮನೆಯ ತುಕಾರಾಮನೆಂಬ ಯುವಕನನ್ನು ಇಷ್ಟಪಟ್ಟಿದ್ದು ಇಬ್ಬರೂ ದೂರದೂರಿಗೆ ಹೋಗಿ ಮದುವೆಯಾಗಿ ಸಂಸಾರ ಮಾಡುವ ಕನಸನ್ನು ಕಟ್ಟಿದ್ದರೂ ಗುಡಿಯ ಪೂಜಾರಿಯ ಆಣತಿಯಂತೆ ಅವಳು ಜೋಗಣಿಯಾಗಬೇಕಾಗುತ್ತದೆ. ಆ ಮೇಲಾದರೂ ಗರತಿಯಾಗಿ ಬದುಕಬೇಕೆಂದು ಬಯಸಿದರೆ ತುಕಾರಾಮ ಕೆಟ್ಟ ಹೆಣ್ಣನ್ನು ಮದುವೆಯಾಗೆನೆಂದಾಗ ಹತಾಶಳಾದ ನೀಲವ್ವ ಆತ್ಮಹತ್ಯೆ ಮಾಡುತ್ತಾಳೆ. ಅನಕ್ಷರಸ್ಥ ಜನಗಳಲ್ಲಿ ಆಳವಾಗಿ ಬೇರೂರಿದ ಈ ಜೀವಂತ ಕುಸಂಸ್ಕೃತಿಯ ಪದರಗಳನ್ನು ನಂಬಿಕೆ ಮತ್ತು ವೈಚಾರಿಕತೆಯ ಅತಿಸೂಕ್ಷ್ಮವಾದ ನೆಲೆಗಳಲ್ಲಿ ಗೀತಾರವರು ವಿಶ್ಲಷಣೆಗೆ ಒಡ್ಡುತ್ತಾರೆ. ಮಲ್ಲಪ್ಪ ಜಮಾದಾರ ದಂಪತಿಗಳ ಸಂಭಾಷಣೆಯೊಳಗೆ ಈ ಅಂಶ ಪ್ರಸ್ಫುಟವಾಗುತ್ತದೆ: '..ನನಗ್ಯಾಕೋ ಸಂಶಯ ಬರ್ತದ ನೋಡು.. ಆ ದೇವತಿ ಈ ಹೆಣ್ಣು ಪೋರಿಗೋಳೀಗಿ 'ಜೋಗಣಿ' ಆಗಿ ಹಾದರ ಮಾಡಂತ ಹೇಳ್ತಳಂತಿ? ಆಕಿನೂ ಹೆಣ್ಣಲ್ಲ? ದೇವರಾದ್ರೇನು ದೆವ್ವಾದ್ರೇನು.. ಹೆಣ್ಣ ಹೆಣ್ಣೇ ಅಲ್ಲೇನು? ಹಿಂತಾ ಹಲ್ಕಟ್ ಹರಕಿ ಮಾಡ್ರಿ ಅಂತ ಹೇಳ್ತಾಳೇನು ದೇವಿ.. ಮತ್ತ ಹಿಂತಾ ಹರಕಿ, ಅದೇ ಕೆಳಜಾತಿ ಮಂದೀನೇ ಮಾಡ್ತಾರ.. ಮ್ಯಾಲಿನ ಜಾತಿ ಮಂದಿ ತಮ್ಮ ಹೆಂಗಸರಿಗಿ ಹಿಂಗ್ ಜೋಗಣಿ ಬಿಡ್ತಾರಾ ಎಂದರೆ? ಅವರಿಗಿಲ್ಲದ ಹರಕಿ ಇವರಿಗ್ಯಾಕೋ.. ಇದರ ಹಿಂದೆ ಏನರೆ, ನಮಗೆ ತಿಳೀಲಾರ್ದ ಮಸಲತ್ತ ಗಿಸಲತ್ತ ಅದಾನೋ ಏನೋ ಅಂತ..'(67) ಮಲ್ಲವ್ವಳ ಮಾತಿಗೆ ಮಲ್ಲಪ್ಪ ನಿಟ್ಟುಸಿರೆಳೆಯುತ್ತಾನೆ. ಸ್ವಲ್ಪ ಹೊತ್ತು ಬಿಟ್ಟು 'ನೀ ಅಂದ ಮಾತುಗೋಳೇ ನನ್ ನಿದ್ದೀಗಿ ತಡೀಲಕತ್ತಾವೇ ಮಲ್ಲಿ.. ಹೊಲಗೇರಿ ಹೆಂಗಸರು ಜೋಗಣಿ ಆಗಾದೂ.. ಮ್ಯಾಗೇರಿ ಮಂದಿ ಅಂದರ ಗಂಡಸರು ಅವರಿಗಿ 'ಪಟ್ಟಕ್ಕ' ಹಾಯ್ಕೊಂಡು ಅವರ ಮೈ ಉಂಡು ಬಿಡಾದೂ.. ತಮ್ಮ ಮೈ ತಿಂಡಿ ತೀರದ ಮ್ಯಾಲ ಆಕಿಗಿ ದೂರ ತಳ್ಳಾದೂ.. ಮುಂದಕಿ ಹಾದರಕ್ಕಿಳ್ದು ಹೊಟ್ಟಿ ತುಂಬಸ್ಗೊಳ್ಳಾದೂ ಅಂದ್ರ.. ಹೂಂ.. ನಮಗ್ಯಾಕ ಬಿಡು. ಇದು ಹಿಂದಿನ ಹತ್ತೆಂಟು ತೆಲಿಮಾರಿಂದ ನಡ್ಕೋತಾ ಬಂದಾದ. ನಾವು ಏನೆರೆ

ಅಂದು ಆ ಮಾಪುರತಾಯಿ ದೇವಿ ಸಿಟ್ಟಿನ ಕಣ್ಣಿಗಿ ಗುರಿಯಾಗಾದು.. ನಮಗ್ಯಾಕ ಬೇಕು ಬಿಡು ಇದೆಲ್ಲಾ.. ತಾಯಿ ನಮ್ಮವ್ವಾ.. ಮಾಫ ಮಾಡು ನಮಗ. ಈ ಹೆಣ್ಣ ಹೆಂಗಸರು ಏನರೆ ಹೇಳ್ತಾರ.. ಇಕಿಗಿ ತಿಳೆಂಗಿಲ್ಲ ತಾಯೀ.. ದಡ್ಡದಾ ಇದೂ.. ಮಾಫಿ ನೀಡೇ ನಮ್ಮವ್ವಾ..' ಅಂತಂದು ಮಲಗಿದಲ್ಲೇ ಗಲ್ಲ ಗಲ್ಲ ಬಡಿದುಕೊಳ್ತಾನೆ. (67)

ನೀಲವ್ವಳ ವಿಚಾರದಲ್ಲಿ ನಂಬಿಕೆ ಮೇಲ್ಗೈಯಾದರೆ ಜಂಬಗಿಯ ಹೊಲಗೇರಿಯ ಪರಪ್ಪನ ಮಗಳು ತುಳಜಾ ಎಂಬ ಹುಡುಗಿಯ ಕಥೆ ವೈಚಾರಿಕ ನೆಲೆಯಲ್ಲಿ ಸಕಾರಾತ್ಮಕವಾಗಿ ಅಭಿವ್ಯಕ್ತಗೊಳ್ಳುವ ಇನ್ನೊಂದು ಪ್ರಮುಖ ವಿಚಾರ. ತನಗಿಷ್ಟವಿಲ್ಲದಿದ್ದರೂ ಮೂರು ವರ್ಷದ ಹಿಂದೆಯೇ ಮನೆಯವರ ಬಲವಂತಕ್ಕೆ ಜೋಗತಿಯಾಗಿ ಊರ ಸಾವ್ಕಾರನ ಆಶ್ರಯದಲ್ಲಿದ್ದ ತುಳಸಾ ಆತನ ಆಸಕ್ತಿ ತಣ್ಣಗಾಗಿ ವರಮಾನ ಶೂನ್ಯವಾದಾಗ ಹೊಟ್ಟೆಪಾಡಿಗಾಗಿ ಜೋಗ ಬೇಡುತ್ತ ಕಲ್ಬುರ್ಗಿಯ ಪೇಟೆಯಲ್ಲಿ ತಿರುಗುತ್ತಿದ್ದಾಗ ಹುಸನಪ್ಪನೆಂಬ ಮುಸಲ್ಮಾನ ಯುವಕ ಅವಳನ್ನು ನೋಡಿ ಇಷ್ಟಪಟ್ಟು ಮುಂಬೈಗೆ ಕರೆದುಕೊಂಡು ಹೋಗಿ ಮದುವೆಯಾಗಿ ಸುಖಸಂಸಾರ ನಡೆಸುತ್ತಾನೆ. ಎರಡು ವರ್ಷಗಳ ಬಳಿಕ ಒಂದು ಮಗುವಿನ ತಾಯಿಯಾಗಿ ಆರಾಮವಾಗಿದ್ದ ತುಳಜಾ ತಂದೆ ತಾಯಿಯರನ್ನು ನೋಡುವ ಸಲುವಾಗಿ ಊರಿಗೆ ಬರುತ್ತಾಳೆ. ಜೋಗತಿ ಗೃಹಿಣಿಯಾದುದನ್ನು ಕಂಡು ಜನ ದಂಗಾಗುತ್ತಾರೆ. ಊರ ಹಿರಿಯರು ಮತ್ತು ಪೂಜಾರಪ್ಪನವರೆಲ್ಲ ಸೇರಿ ಪಂಚಾಯಿತಿ ಕರೆಯುತ್ತಾರೆ. ಪಂಚಾಯಿತಿಯ ಮುನ್ನಾದಿನ ರಾತ್ರಿಯೇ ಪರಪ್ಪನ ಮನೆಗೆ ಬೆಂಕಿಯಿಟ್ಟು ಅದು ಮಾಪುರತಾಯಿಯ ಕೋಪದ ಪರಿಣಾಮವೆಂದು ಪುಕಾರು ಹಬ್ಬಿಸುತ್ತಾರೆ. ಪಂಚಾಯಿತಿಯಲ್ಲಿ ಪೂಜಾರಪ್ಪ ತುಳಜಾ ಮಾಡಿದ್ದು ಮಹಾಪರಾಧ, ಧರ್ಮದ್ರೋಹವೆಂದು ಅಬ್ಬರಿಸಿದಾಗ ತುಳಜಾ ಕೆರಳುತ್ತಾಳೆ. ಧೈರ್ಯ, ಆತ್ಮವಿಶ್ವಾಸ, ಸ್ವಾಭಿಮಾನಗಳಿಂದ ಇಡೀ ಸಭೆ ಬೆರಗಾಗುವಂತೆ ಸವಾಲು ಹಾಕುತ್ತಾಳೆ: 'ಕೋಳಿ ಕುರೀಗಿ ತಂದು ದೇವರ ಮುಂದ ಬಲಿಕೊಟ್ಟಂಗ ನಮ್ಮಂತಾ ಹಸಿಬಿಸಿ ಹರ್‍ಯಾದ ಪೋರಿಗೋಳ ಶೀಲಕ್ಕನೂ ಬಲಿಕುಡ್ತಿ. ಆ ಕುರಿಕೋಳಿಗೋಳೇನೋ ನೀವು ಹಾಕೋ ಕೊಡಲಿಯೇಟಿಗಿ ಒಂದೇ ಸರ್‍ತಿ ಕುತಗಿ ಕತ್ತರಸ್ಕೊಂಡು ಸತ್ತು ಬೀಳ್ತಾವ! ಆದರೆ ನಮ್ಮ ಬಾಳ್ಯಾ ಹಾಂಗಲ್ಲ. ನಮಗೆ ಈ ಹಲ್ಕಟ್ ಧಂಧಾಕ್ಕೆ ಹಚ್ಚಿ ದಿನಾ ಈಟೀಟು ನೆಳ್ಳೀ ನೆಳ್ಳೀ ಸಾಯಂಗ ಮಾಡಿ ಚಿತ್ತರಹಿಂಸಿ ಕುಡ್ತೀರಿ. ಒಮ್ಮೇ ನಮ್ದೂ ಕುತಗಿ ಕತ್ತರಿಸಿಬಿಟ್ಟರ ಒಂದ ರೀತಿಲಿಂದ ಛಲೋ ಆಗ್ತದ.. ಮುತ್ತ್ಯಾ .. ಖರೇ ಹೇಳು

.. ಆ ಮಾಪುರತಾಯಿ ನಿನ್ನ ಮೈಯಾಗ ಬಂದು ನಮ್ಮ ಕೇರ್‍ಯಾಗಿನ ಹರೇದ, ಚೆಲುವಿನ ಪೋರಿಗೋಳಿಗಿ ಸೂಳೇರು ಆಗಲಿ ಅಂತ ಹೇಳ್ತಾಳೇನು? ನೀ ಖರೇ ಆಕಿನ ಭಕ್ತ ಇದ್ದೆಂದ್ರ ಆ ದೇವಿಮ್ಯಾಲ ಆಣಿಮಾಡಿ ಹೇಳು..'(221) ಒಂದು ಚರಿತ್ರಾರ್ಹವಾದ ಘಟನೆಗೆ ಸಾಕ್ಷಿಯಾಗಿ ದಿಗ್ಭ್ರಾಂತರಾಗಿ ನಿಂತ ಜನಗಳ ಮುಂದೆ ತುಳಜಾಳ ಪ್ರಶ್ನೆಗೆ ಉತ್ತರಿಸಲಾಗದೆ ಪೂಜಾರಿ ತತ್ತರಿಸುತ್ತಾನೆ. ಕೋಪದಿಂದ ಕೆಂಡವಾಗುತ್ತಾನೆ. ಊರ ಹಿರಿಯ ತಂದೆ ಮಗಳು ಇಬ್ಬರಿಗೂ ದಂಡ ವಿಧಿಸಿ ತುಳಜಾ ಪೂಜಾರಿಯ ಕಾಲಿಗೆ ಬಿದ್ದು ತಪ್ಪಿಗೆ ಕ್ಷಮೆಕೇಳಿ ಪುನಃ ಜೋಗತಿಯಾಗಬೇಕೆಂದು ಅಪ್ಪಣೆ ಕೊಡುತ್ತಾನೆ. ಆದರೆ ತುಳಜಾ ಸೆಡ್ಡು ಹೊಡೆದು ಅವರ ಆದೇಶವನ್ನು ಧಿಕ್ಕರಿಸಿ ಹೆತ್ತವರನ್ನು ಕರೆದುಕೊಂಡು ಊರು ಬಿಡುತ್ತಾಳೆ. ತಲೆತಲಾಂತರದಿಂದ ನಡೆದುಕೊಂಡು ಬಂದ ಈ ನಂಬಿಕೆಯ ಬೇರನ್ನು ಅಲ್ಲಾಡಿಸುವ ತುಳಜಾಳ ಸವಾಲಿನ ನಿಗೂಢ ಹಿನ್ನೆಲೆ ಊರಿನಗೌಡ ಚೆಂಬಸಪ್ಪ ಮತ್ತು ಗುಡಿಯ ಪೂಜಾರಿಯ ಮಾತುಗಳಲ್ಲಿ ಸಾಕಾರಗೊಳ್ಳುತ್ತದೆ. 'ಅಲ್ಲೋ ಭೂತಾಳೀ.. ನೀ ಪೂಜಾರಿ ಆಗಿ ನಿನ್ನ ದೇವಿ ಸತ್ತ್ಯಾ ನಿನಗೇ ತಿಳಿದಿಲ್ಲಂದ್ರ ಹ್ಯಾಂಗೋ.....ಖರೇ ಹೇಳು. ನಿನ್ನ ಮೈಯಾಗ ದೇವರು ಬರ್‍ತಾದೇನು? ಹೊಲಮಾದರ ಕೇರ್‍ಯಾಗಿನ ಚೆಲುವಿನ ಪೋರಿಗೋಳಿಗಿ ಜೋಗಣಿ ಬಿಡು ಅಂತ ಕೇಳ್ತಾದೇನು ಆ ನಿನ್ನ ಗುಡ್ಯಾಗಿನ ಮಾಪುರ ತಾಯಿ ದೇವಿ?'' ಗೌಡನ ಈ ಪ್ರಶ್ನೆಗೆ ಪೂಜಾರಿಯ ನಗುವಿನ ಉತ್ತರ: 'ಹೆಂತಾ ಮಾತ್ರೀ ಗೋಡಾ.. ಪಾಪ ಅದು ಏನೂ ಹೇಳಂಗಿಲ್ರೀ.. ಯೆಲ್ಲಾ ನೀವೇ ಹೇಳ್ತಿರೆಲ್ಲ. ಯಾ ಪೋರಿ ಮ್ಯಾಲರೆ ನಿಮ್ಮ ಮನಸು ಬಿತ್ತಂದ್ರ ನೀವೇ ನನಗ ಕರ್‍ಸಿ ಹೇಳ್ತಿರೆಲ್ಲ. ಸುಕರಾರ ದಿನ ಸಿಂದಿ ಕುಡ್ಸಿ, ದೇವಿ ಸವಾರಿ ಬಂದಾದಂತೇಳಿ ನಿಮ್ಮ ಮಾತಗೋಳೆಲ್ಲಾ ಆ ಮಾಪುರೆವ್ವಾ ದೇವಿ ಹೇಳ್ಯಾಳಂತೇ ನಾ ನಮ್ಮಂದೀಗಿ ಹೇಳಕಿ ಮಾಡ್ತೀನಿ ಆಯ್ತು. ಆ ಹೊಂಬ ಮಂದಿ ನನ್ ಮಾತಂದ್ರ ದೇವಿ ಮಾತಂತೇ ನಂಬ್ಕೊಂಡು ನಾವು ಹೇಳಿದಂಗ ಕೇಳ್ತಾರ..'(213) ಗೌಡ ಪೂಜಾರಿಯ ಮಾತುಗಳನ್ನು ಸಮರ್ಥಿಸುವುದು ಹೀಗೆ: 'ನಮಗೆ ಬೇಕಾದ ಹೊಲಮಾದರ ಪೋರಿಗೋಳಗಿ ದೇವಿ ಹೆಸರಿನ ಮ್ಯಾಲ ಜೋಗಣಿ ಮಾಡಿ ನಾವೂ ಸಾವ್ಕಾರು ಆಕಿನ ಮೈ ಉಣತೀವಿ ಏನಪಾ.. ನಮಗ ಸಾಕಾಗೋಟು ಉಂಡಮ್ಯಾಲ, ಆ ಮ್ಯಾಲ ಬೇಕಾದ್ರ ಬ್ಯಾರೆ ಮಂದಿ ನಮ್ಮ ಎಂಜಲ ಉಣ್ಣಲಿ ಅಂತ ಬಿಟ್ಟುಬಿಡ್ತೀವಿ. ಇದು ಹಿಂಗೇ ನಡ್ಕೋತ ಬಂದಾದ..'(213) ಈ ಸನ್ನಿವೇಶವನ್ನು ಸೃಷ್ಟಿಸಿ ಗೀತಾರವರು ಒಂದು ಅರ್ಥಹೀನ, ಅಮಾನವೀಯ ಪದ್ಧತಿಯ ಪೂರ್ವಾಪರ ದೋಷ, ದುರಂತಗಳೆಲ್ಲವನ್ನೂ ಇಂಚಿಂಚಾಗಿ

ಅನಾವರಣ ಮಾಡಿರುವುದಲ್ಲದೆ ತುಳಜಾಳಂಥ ಗಟ್ಟಿ ಪಾತ್ರವನ್ನು ಚಿತ್ರಿಸಿ ಅನ್ಯಾಯವನ್ನು ಪ್ರತಿಭಟಿಸಬೇಕಾದ ದಿಕ್ಕಿನಲ್ಲಿ ದಿಕ್ಸೂಚಿಯೂ ಆಗಿದ್ದಾರೆ.

ಮಲ್ಲಪ್ಪ ಜಮಾದಾರನ ಮಗಳು ಕಾಶಿಯ ವೃತ್ತಾಂತದ ಮೂಲಕವೂ ಗೀತಾರವರು ಪ್ರಗತಿಪರತೆ ಮತ್ತು ಸಂಪ್ರದಾಯಗಳನ್ನು ಮುಖಾಮುಖಿಯಾಗಿಸಿದ್ದಾರೆ. ಚಿಕ್ಕಂದಿನಿಂದಲೇ ಛಲ, ಸ್ವಾಭಿಮಾನಗಳನ್ನು ಮೈಗೂಡಿಸಿಕೊಂಡಿದ್ದ ಕಾಶಿ ಒಂದು ಅದ್ಭುತ ಪಾತ್ರ. ಊರಜಾತ್ರೆಯಲ್ಲಿ ಗೊಂಬೆ ವ್ಯಾಪಾರಿಯೊಂದಿಗೆ ಅವಳು ಮಾಡಿದ ಜಗಳವಾಗಲೀ ಅವಳ ಬಣ್ಣದ ಕನಸುಗಳ ರಾಜಕುಮಾರನಾಗಿ ಗುರ್ಲಿಂಗಪ್ಪ ಸಾವ್ಕಾರನ ಮಗ ಲಿಂಗರಾಜ ಸಾಕ್ಷಾತ್ಕಾರಗೊಳ್ಳುವುದಾಗಲೀ ಕೆಳವರ್ಗದ ಸ್ವಾಭಿಮಾನ ಮತ್ತು ಪ್ರಗತಿಪರ ಚಿಂತನೆಗೆ ಗ್ರಾಸವಾಗುತ್ತದೆ. ಆದರೆ ಕಾಶಿಯ ಪ್ರೇಮಪ್ರಕರಣ ಊರಮಂದಿಯ ಬಾಯಲ್ಲಿ ಎಲೆಅಡಿಕೆಯಂತೆ ಹೊರಳಾಡುವುದೂ ಮಲ್ಲಪ್ಪ ಮಲ್ಲವ್ವರು ಅವಮಾನದ ಬೆಂಕಿಯಲ್ಲಿ ವಿಲವಿಲನೆ ಒದ್ದಾಡುತ್ತ ಮಗಳನ್ನು ಕತ್ತರಿಸಿ ಎಸೆಯುವಷ್ಟು ರೋಷತಪ್ತರಾಗುವುದೂ ನಂಬಿಕೆ ಮತ್ತು ಸಂಪ್ರದಾಯಗಳಿಗೆ ಸಂಕೇತವಾಗುತ್ತದೆ. ಹೆಣ್ಣುಮಕ್ಕಳ ವಿಚಾರದಲ್ಲಿ ಖಂಡಿತವಾದಿಯಾದ ಮಲ್ಲಪ್ಪ ತಮ್ಮ ಮನೆತನದ ಯಾವ ಹೆಣ್ಣುಮಕ್ಕಳೂ ಕಚ್ಚೆಹರುಕ ಕೆಲಸವನ್ನು ಮಾಡಲಿಲ್ಲವೆನ್ನುತ್ತಾನೆ. ನೆರೆಮನೆಯ ನಾಗವ್ವಾಯಿ ಮಲ್ಲಪ್ಪನ ಪರವಾಗಿ ಮಾತನಾಡುತ್ತ 'ಮಾನುಳ್ಳ ಮನಶ್ಯಾ ಮಗಳಿಂದ ಉರುಲು ಹಾಕ್ಕೊಂಡು ಸಾಯ್ಬೇಕಾಗ್ತದೆ' ಅನ್ತಾಳೆ. ಕೊನೆಗೆ ಎರಡೂ ಮನೆಯ ಮರ್ಯಾದೆ ಉಳಿಸಲು ಕಾಶಿಯನ್ನು ಬಲವಂತವಾಗಿ ಕಲ್ಬುರ್ಗಿಯ ಅಕ್ಕ, ಭಾವನ ಮನೆಗೆ ಕರೆತಂದು ಅಲ್ಲಿಯೇ ಸೊಲ್ಲಾಪುರದ ಮಾರ್ತಾಂಡನೆಂಬ ವರನನ್ನು ನೋಡಿ ಮದುವೆ ಮಾಡಿಸುತ್ತಾರೆ. ಈ ಮದುವೆ ಸ್ಥಾಪಿತ ವ್ಯವಸ್ಥೆಯನ್ನು ಅತಿಕ್ರಮಿಸಲಾಗದ ವಾಸ್ತವತೆಗೆ ಸಾಕ್ಷಿ. ಲಿಂಗರಾಜನೂ ಮನೆಯವರ ಇಷ್ಟದಂತೆ ತನ್ನದೇ ಜಾತಿಯ ನೀಲಮ್ಮನೆಂಬ ಹುಡುಗಿಯನ್ನು ಮದುವೆಯಾಗುತ್ತಾನೆ. ಮನೆಯವರ ಬಲವಂತಕ್ಕೆ ಮದುವೆಯಾದರೂ ಕಾಶಿ ಮಾರ್ತಾಂಡನನ್ನು ಮನಸಾರೆ ಪ್ರೀತಿಸಲಿಲ್ಲ. ಮೂರು ವರ್ಷಗಳ ಬಳಿಕ ಹಬ್ಬಕ್ಕೆ ಊರಿಗೆ ಬಂದಾಕೆ ಮತ್ತೆ ಲಿಂಗರಾಜನ ನೆನಪಿನಲ್ಲಿ ಬೆಂಡಾಗುತ್ತಾಳೆ. ಮೊಹರಂ ದಿನ ಪಂಜಿ ಹಿಡಿದು ಮಲ್ಲಪ್ಪನ ಮನೆಗೆ ಸವಾರಿ ಬಂದ ಮುಸಲ್ಮಾನ ದೇವರು 'ಕಟ್ಟೀ ಕಲ್ಲ ಕಟ್ಟೀಗಿ ಕುಡ್ಸದಿ ಖರೇ.. ಆದರದು ಉಚ್ಚಿ ಬೀಳಲಾರ್ದಂಗ ಎಚ್ಚರದಿಂದಿರೋ ಮಲ್ಲೂ..'ಎಂದ ಒಗಟಿನ ಅರ್ಥ ತಿಳಿಯದೆ ಅಪಾಯದ ಶಂಕೆಯಿಂದ ಮಲ್ಲಪ್ಪ

ಗಲಿಬಿಲಿಗೊಂಡರೆ ರಾತ್ರಿ ಕಳೆದು ಬೆಳಗಾಗುವುದರೊಳಗೆ ಕಾಶಿ ತೋಟದ ಮನೆಯಲ್ಲಿದ್ದ ಲಿಂಗರಾಜನ ತೋಳತೆಕ್ಕೆಯಲ್ಲಿ ಕರಗಿಹೋಗುತ್ತಾಳೆ. ವಿಚಾರ ತಿಳಿದ ಮಲ್ಲಪ್ಪ ಕ್ಷಣದಲ್ಲೇ ಮಾತು ಕಳೆದಂತಾಗಿ ಕುಸಿಯುತ್ತಾನೆ. ದೇವರ ಸವಾರಿಯ ಮಾತುಗಳು ಅವನ ಕಿವಿಯೊಳಗೆ ರಪರಪನೆ ಬಡಿಯತೊಡಗುತ್ತದೆ. ಕೆಳಗೇರಿಯ ರಾಜನಂತೆ ಬದುಕಿದ್ದ ಮಲ್ಲಪ್ಪ ಬೆಳಕಿಂಡಿಯಿಲ್ಲದ ಮನೆಯೊಳಗೆ ಹೊಗೆ ಆವರಿಸಿ ಉಸಿರುಕಟ್ಟಿದ ಸ್ಥಿತಿಯಲ್ಲಿ ಮೂರು ದಿನ ಅನ್ನ ನೀರಿಲ್ಲದೆ ಜೀವಚ್ಛವದಂತಿದ್ದು ಕೊನೆಗೂ ಅವಮಾನ ತಾಳಲಾರದೆ ಹೊಳೆಯ ನೀರಿಗೆ ಹಾರಿ ಪ್ರಾಣತ್ಯಾಗ ಮಾಡುತ್ತಾನೆ. ಊರಗೌಡನನ್ನೇ ಎದುರಿಸಿ ಮಾತನಾಡುವಷ್ಟು ಶಕ್ತಿಯಿದ್ದ ಅವರಂತೆಯೇ ಬದುಕಿದ ಮಲ್ಲಪ್ಪನಿಗೆ ಮಗಳ ಕೃತ್ಯ ಅತ್ಯಂತ ಘೋರ ಅಪರಾಧವಾಗಿ ಕಾಣಿಸಿ ಆತ್ಮಹತ್ಯೆಗೆ ಪ್ರಚೋದಿಸಿತೆಂದರೆ ಸಮಾಜದಲ್ಲಿ ಜಾತೀಯತೆ ಮತ್ತು ಸಂಪ್ರದಾಯ ಶರಣತೆ ಎಷ್ಟು ಆಳವಾಗಿದೆ ಎಂಬುದನ್ನು ಊಹಿಸಬಹುದು. ಪ್ರಾರಂಭದಲ್ಲಿ ಗಟ್ಟಿಪಾತ್ರವಾಗಿ ಕಾಣಿಸುವ ಮಲ್ಲಪ್ಪ ಕೊನೆಕೊನೆಗೆ ಟೊಳ್ಳಾಗುವುದು ಮಾರ್ಮಿಕವಾಗಿದೆ.

ಕಾಶಿ ಮತ್ತು ಲಿಂಗರಾಜರ ಸಂಬಂಧದ ಮೂಲಕ ಗೀತಾರವರು ಪ್ರಣಯ ಲೋಕದ ಇನ್ನೊಂದು ಸೂಕ್ಷ್ಮ ವಿಚಾರವನ್ನೂ ಬಯಲಿಗೆಳೆದು ಪ್ರೀತಿ, ಪ್ರಣಯಗಳಲ್ಲಿ ದೇಹ ಸಂಬಂಧ ಮುಖ್ಯವೋ ಮಾನಸಿಕ ಸಂಬಂಧ ಮುಖ್ಯವೋ ಎಂಬ ಜಿಜ್ಞಾಸೆಯನ್ನು ಹುಟ್ಟುಹಾಕುತ್ತಾರೆ. ಕಾಶಿಯ ಧೈರ್ಯ, ಮನೋಬಲ, ಪ್ರೀತಿಸಿದವನಿಗಾಗಿ ಗಂಡನನ್ನೂ ಬಿಟ್ಟು ಬರುವ ಪ್ರಣಯದ ತೀವ್ರತೆ ಮನಶ್ಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡತಕ್ಕ ವಿಚಾರವಾಗಿಯೂ ಪ್ರಮುಖವಾಗುತ್ತದೆ.

'ಬದುಕು' ಕಾದಂಬರಿ ಅತ್ಯಂತ ಜನಪ್ರಿಯವಾಗಲು ಅದು ಅನಾವರಣ ಮಾಡುವ ಸಾಮಾಜಿಕ ಜೀವನದ ಬಹುಮುಖೀ ದರ್ಶನವೂ ಒಂದು ಕಾರಣ. ಮಾರುತಿ ಜೋಪಡಿಪಟ್ಟಿಯಲ್ಲಿ ವಾಸಿಸುವ ವಿಭಿನ್ನ ಕುಲಕಸುಬುಗಳ ಜನಸಮುದಾಯದ ಅನ್ಯೋನ್ಯತೆ, ಜಾತಿ, ಮತ ಭೇದವಿಲ್ಲದೆ ಹಬ್ಬ, ಹರಿದಿನಗಳಲ್ಲಿ ಇಷ್ಟಮಿತ್ರರನ್ನು ಕರೆಸಿ ಉಪಚರಿಸುವ, ಕಷ್ಟ ಸುಖಗಳನ್ನು ಹಂಚಿ ಬದುಕು ಸಾಗಿಸುವ ಚಿತ್ರ ಆಕರ್ಷಕವಾಗಿದೆ. ಜೀವನ ಪ್ರೀತಿ, ಜೀವನೋತ್ಸಾಹಗಳ ಆಗರವಾದ ಈ ಮಂದಿ ದುಡಿಮೆಯಲ್ಲೇ ಸುಖವನ್ನು ಅರಸುವವರು. ಹತ್ತು ಹಲವು ಆಯಾಮಗಳಲ್ಲಿ ಬಿಚ್ಚಿಕೊಳ್ಳುವ ಬದುಕಿನ ವಿವರಗಳು ಕಾದಂಬರಿಯುದ್ದಕ್ಕೂ ಹೃದಯಸ್ಪರ್ಶಿಯಾಗಿ ನಿರೂಪಿತವಾಗಿವೆ. ಇವರು ಅಲ್ಪ

ತೃಪ್ತರು. ಊರಜಾತ್ರೆಯಲ್ಲೂ ಸ್ವರ್ಗಸುಖವನ್ನು ಕಾಣಬಲ್ಲರು. ಕಲ್ಬುರ್ಗಿಯ ಶಾಣ ಬಸಪ್ಪನ ಜಾತ್ರೆಯ ವಿವರಣೆ ಅನನ್ಯವಾಗಿದ್ದು ಜಾತ್ರೆಯ ದಿನಗಳಲ್ಲಿ ಜನಗಳ ಸಂಭ್ರಮ, ಸಡಗರಗಳನ್ನು ಗೀತಾರವರು ತುಂಬ ಆತ್ಮೀಯವಾಗಿ ನಿರೂಪಿಸುತ್ತಾರೆ.

ಯಾವುದೇ 'ಇಸಂ' ಗಳಿಗೆ ಜೋತುಬೀಳದ, ಪ್ರತಿಷ್ಠಾಪ್ರಿಯರಲ್ಲದ ಈ ಜನರು ಕುಟುಂಬದ ಚಿಕ್ಕಪುಟ್ಟ ವಿಚಾರಗಳಿಗೂ ಸಂಭ್ರಮಿಸಬಲ್ಲರು. ಮಕ್ಕಳು ಮೈನೆರೆದಾಗ ಬಂಧು ಬಳಗವೆಲ್ಲ ಸಂಭ್ರಮಿಸಿ ಕೂಡಿಸಿ ಹಾಡಿಸುವ ಪದ್ಧತಿಯಾಗಲೀ(152), ಕೋಳಿಸಾಕಣೆಯ ವೈಖರಿಯಾಗಲೀ(58), ತೆನೆ ರಾಶಿಮಾಡುವ ಸಂಭ್ರಮದ ಹಾಡು, ಕುಣಿತ, ಕುಡಿತ, ಮೋಜು, ತಮಾಶೆ, ನಗೆಚಾಟಿಕೆವಾಗಲೀ(78), ಮೀನು, ಮಾಂಸಾಹಾರ ತಯಾರಿಸುವ ವೈವಿಧ್ಯವಾಗಲೀ, ಊಟದ ಗರ್ದಿಗಮ್ಮತ್ತಾಗಲೀ, ಪ್ರೀತಿ, ಪ್ರಣಯಗಳಾಗಲೀ ಗ್ರಾಮೀಣ ಜನರ ಜೀವನಪ್ರೀತಿಯನ್ನು ದರ್ಶಿಸುತ್ತದೆ. ಯಳ್ಳಾಮಾಸಿ, ಕಾರಹುಣ್ಣಿಮೆ, ಬಸವಣ್ಣನ ಜಯಂತಿ, ಸಂಕ್ರಾಂತಿ, ಹೋಳಿ ಮುಂತಾದ ಅನೇಕ ಹಬ್ಬಗಳ ವಿಚಾರಗಳು, ಆ ಸಂದರ್ಭದ ಉಡುಗೆ, ತೊಡುಗೆ, ಅಡುಗೆಗಳ ವೈವಿಧ್ಯಗಳು ತುಂಬ ಸೊಗಸಾಗಿ ವರ್ಣಿತವಾಗಿವೆ. ಕಾರಹುಣ್ಣಿಮೆ ಮತ್ತು ಮೊಹರಂ ಹಬ್ಬದ ಆಚರಣೆ ಕಣ್ಣಿಗೆ ಕಟ್ಟುವಂತೆ ವರ್ಣಿಸಲಾಗಿದೆ. (175—176)

ಆದರೆ ನಾಗರಪಂಚಮಿಯ ಸಮಯದಲ್ಲಿ ಶಾಣಪ್ಪ ಸುಗಲವ್ವರ ಮನೆಯೊಳಗೆ ಹುತ್ತಕಟ್ಟುವುದು, ಅದರೊಳಗೆ ಹಾವು ಸೇರಿ ಬುಸುಗುಡುವುದು, ದೇವರ ಹಾವೆಂದು ನಂಬಿ ಅದಕ್ಕೆ ಹಾಲೆರೆಯುವುದು, ಅದೇ ಹಾವು ಶಾಣಪ್ಪನನ್ನು ಕಚ್ಚಿ ಸಾಯಿಸುವುದು ಹಳ್ಳಿಯ ಮೂಢನಂಬಿಕೆಗೆ ಒಂದು ನಿದರ್ಶನ.

ಮೊಹರಂ ಹಬ್ಬರ ಆಚರಣೆಯಲ್ಲಿ ಕಂಡುಬರುವ ಮತೀಯ ಸಾಮರಸ್ಯ ಕೂಡ ಕಾದಂಬರಿಯ ಇತ್ಯಾತ್ಮಕ ಅಂಶ (179–80)

ಕಲ್ಯಾಣಿ ಬೆಳ್ಳಿಯರ ಮದುವೆಯ ಸಂಭ್ರಮ, ಅನುರಾಗದ ವರ್ಣನೆ ಯಾವ ರಸಿಕ ಕಲಾವಿದನ ವರ್ಣಚಿತ್ರಕ್ಕೂ ಕಡಿಮೆಯಿಲ್ಲದಂತೆ ಬಣ್ಣಿತವಾಗಿದೆ. ಗೀತಾರವರ ಕಾದಂಬರಿಗಳಲ್ಲಿ ಮುಖ್ಯ ಕಥೆಯೊಳಗೊಂದು ಉಪಕಥೆಯಿರುವಂತೆ ಬೆಳ್ಳಿ ಕಲ್ಯಾಣಿಯರ ಸುಖ ದಾಂಪತ್ಯಕ್ಕೆ ತದ್ವಿರುದ್ಧವಾಗಿ ಮೂಕ್ಯಾ ಮತ್ತು ಕಲ್ಲವ್ವರ ದಾಂಪತ್ಯದ ವರ್ಣನೆಯೊಂದು ಗಮನ ಸೆಳೆಯುತ್ತದೆ.

ಎಂಟರಿಂದ ಒಂದು ವರ್ಷ ಅಂತರದ ಆರು ಮಕ್ಕಳ ತಾಯಿ ಕಲ್ಲವ್ವ ತುಂಬು ಬಸಿರಿ. ಮನೆಯಲ್ಲಿ ಉಡಲು ಉಣಲು ಇಲ್ಲದ ದಾರಿದ್ರ್ಯ. ಇಂಥ ಸ್ಥಿತಿಯಲ್ಲಿ ಕುಡಿದು ಬಂದ ಮೂಕ್ಯಾ ಹೆಂಡತಿ ಬೇಡ ಬೇಡವೆಂದರೂ ಕೇಳದೆ ಕಾಡು ಮೃಗದಂತೆ ಅವಳ ಮೇಲೆ ಎರಗುತ್ತಾನೆ, ಅವಳು 'ಬ್ಯಾಡೋ ಬ್ಯಾಡೋ ನಿನಗೆ ಕೈಮುಗೀತೀನಿ. ಎಂಟು ತಿಂಗಳ ತುಂಬ್ಯಾದ ನನಗ.. ಕೂಸಿನ ನೆತ್ತಿ ಅಂಬಾದು ನನ್ನ ಕಿಪ್ಪಡ್ಯಾಗ ಬಂದು ಕಲ್ಲ ಕುಂತಂಗಾಗ್ಯಾದೋ..ನಾ ಸತ್ತು ಹೋಗ್ತೀನಿ. ನಿನ್ನ ಕಾಲಿಗೆ ಬಿದ್ದು ಕೈ ಮುಗೀತೇನೋ. ನನ್ನ ಕೈಲಿಂದಾಗಲ್ಲೋ' ಎಂದು ಎಷ್ಟೇ ಬೇಡಿಕೊಂಡರೂ ಅವನ ಹಿಡಿತ ಸಡಿಲವಾಗುವುದಿಲ್ಲ. ಕಂಗಾಲಾದ ಕಲ್ಲವ್ವ 'ಯವ್ವೋ ನಾ ಸಾಯ್ತೀನೋ' ಎಂದು ವಿಕಾರವಾಗಿ ಕೂಗುತ್ತ ಏಕದಂ ತಟಸ್ಥಳಾಗಿ ಹೆಡಕು ವಾರೆ ಮಾಡಿ ಕಣ್ಣುಮುಚ್ಚುತ್ತಾಳೆ. ಮೂಕ್ಯಾ ತನ್ನ ತೀಟೆ ತೀರಿಸಿಕೊಂಡು ಕೆಳಗುರುಳಿದಾಗ ಕಲ್ಲವ್ವಳ ದೇಹದಿಂದ ನೆತ್ತರ ಕಣ್ಣಿಗಳು ಬುಳಬುಳನೆ ಹೊರಗುಕ್ಕಿ ಬಂದು ಅವಳ ಉಸಿರು ನಿಲ್ಲುತ್ತದೆ. (285) ಈ ಘಟನೆಯ ಮೂಲಕ ದಾಂಪತ್ಯದ ಒಳಗೂ ನಡೆಯಬಹುದಾದ ಲೈಂಗಿಕ ಕ್ರೌರ್ಯ ಮತ್ತು ದಬ್ಬಾಳಿಕೆಗಳ ಕರಾಳಮುಖವನ್ನೂ ಗೀತಾರವರು ದರ್ಶಿಸುತ್ತಾರೆ. ಈ ಸನ್ನಿವೇಶ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ ಬಸಣ್ಣಿಯ ವಿಕೃತಕಾಮವನ್ನು ನೆನಪಿಸುತ್ತದೆ.

ನೀತಿ ಸಂಹಿತೆಗೆ ಸಂಬಂಧಿಸಿದಂತೆ ಕಾದಂಬರಿಯಲ್ಲಿ ಇನ್ನೊಂದು ವಿಶಿಷ್ಟ ಆಯಾಮವಿದೆ. ಮೇಲುಜಾತಿಯ ಗಂಡು ಕೀಳುಜಾತಿಯ ಹೆಣ್ಣನ್ನು ಹೇಗೆ ಬಳಸಿದರೂ ಅಪರಾಧವಲ್ಲ; ಆದರೆ ಮದುವೆಯಾಗುವುದು ಅಪರಾಧ. ಕಾಶಿ ಲಿಂಗರಾಜರ ಮದುವೆಯಾಗುವುದನ್ನು ಒಪ್ಪದ ಸಮಾಜ ಲಿಂಗರಾಜ ಆಕೆಯನ್ನು ತೋಟದ ಮನೆಯಲ್ಲಿ ಇಟ್ಟುಕೊಂಡಾಗ ಮೌನವಾಗುತ್ತದೆ. ಮಗಳು ಲಿಂಗರಾಜನನ್ನು ಮದುವೆಯಾಗಲು ಇಷ್ಟಪಟ್ಟರೆ ಅವಮಾನವಾಯ್ತೆಂದು ಭಾವಿಸುವ ಮಲ್ಲಪ್ಪ ಜಮಾದಾರನೂ ತನಗಿಂತ ಕೀಳುಜಾತಿಯ ಹೊಲೆಯರ ಈರಿಯನ್ನು ಇಟ್ಟುಕೊಳ್ಳುತ್ತಾನೆ. ಸ್ವತಃ ಜೋಕುಮಾರನಂತೆ ಮೆರೆಯುವ ಆತ ಕಚ್ಚೆಹರುಕವಾಗಿ ಎಷ್ಟು ಹೆಣ್ಣುಗಳ ಜತೆ ರಾಸಲೀಲೆಯಾಡಿದರೂ 'ಅವಂದೇನು ಬಿಡು, ಹೇಳಿಕೇಳಿ ಗಂಡಸುಮಗ' ಅನ್ನುವ ಜನ ಕಾಶಿಯ ಪ್ರೇಮಪ್ರಕರಣ ಕೇಳಿದಾಗ ಮಾನ ಮರ್ಯಾದೆಯ ಬಗ್ಗೆ ಯೋಚಿಸುತ್ತಾರೆ. ತುಳಜಾ ಜೋಗತಿಯ ಹೆಸರಿನಲ್ಲಿ ಯಾರ್‍ಯಾರಿಗೋ ಸೆರಗು ಹಾಸಿ ವೇಶ್ಯಾವೃತ್ತಿ ಮಾಡಬಹುದು. ಆದರೆ ಮದುವೆಯಾಗಿ ಗರತಿಯಾಗಿ ಬಾಳುತ್ತೇನೆಂದರೆ

ಸಮಾಜದ ಪರವಾನಗಿ ಇಲ್ಲ. ಆದರ್ಶ ಗಂಡನಾದ ಕಲ್ಯಾಣಿಯೂ ಬೆಳ್ಳಿ ಬಾಣಂತನದಲ್ಲಿರುವಾಗ ಜೋಗತಿಯ ಹಿಂದೆ ಎಡತಾಕುತ್ತಾನೆ. ಮೇಲ್ಜಾತಿಯ ಗಂಡಸು ಕೆಳಜಾತಿಯ ಹೆಣ್ಣಿನ ಮೇಲೆ ಯಾವ ಬಗೆಯ ಅನ್ಯಾಯ, ಅತ್ಯಾಚಾರಗಳನ್ನು ಮಾಡಿದರೂ ಅತ್ಯಾಚಾರಕ್ಕೊಳಗಾದವರು ಉಸಿರೆತ್ತುವಂತಿಲ್ಲ; ಗೌರವದಿಂದ ಬದುಕಬೇಕೆಂದು ಬಯಸುವಂತಿಲ್ಲ. ನೀಲವ್ವ, ತುಳಜಾನಂಥವರ ಕಥೆ ಒಂದು ಬಗೆಯಾದರೆ ಸಾವ್ಕಾರನ ಅತ್ಯಾಚಾರಕ್ಕೊಳಗಾಗಿ ತಂಗಿ ಆತ್ಮಹತ್ಯೆ ಮಾಡಿದಳೆಂದು ನೆರಿಹಳ್ಳಿ ಈರ್ಯಾ ಪ್ರತಿರೋಧಿಸಿದರೆ ಸಾವ್ಕಾರನ ಬಂದೂಕು ಅವನ ಎದೆಯನ್ನು ಸೀಳುತ್ತದೆ. ಸಾವ್ಕಾರನನ್ನು ನಿಂದಿಸಿದ ಕಾರಣಕ್ಕೆ ಲಮಾಣರ ಖಾಂಡೊಬಾನ ನಾಲಗೆ ಕತ್ತರಿಸಲ್ಪಡುತ್ತದೆ.

ಕಾಮದಂತೆಯೇ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಇನ್ನೊಂದು ಚಟ ಕುಡಿತ. ಬಾಯಾರಿದಾಗ ನೀರು ಕುಡಿಯುವಷ್ಟು ಸಲೀಸಾಗಿ ಅವರು ಸೇಂದಿ ಕುಡಿಯುತ್ತಾರೆ. 'ನಮ್ಮ ಕರಿ ಮಂದೀಗಿ ಈ ಸಿಂದಿ ಬನಾ ಆಗಲಿ, ದುಕಾನಾಗಲೀ ಕಂಡ್ರ ಸಾಕು. ಕಾಲುಗೋಳು ಆಕಾಡೇ ಎಳ್ಕೊಂಡೋಯ್ತಾವಾ ಕೋಡಿ' ಎನ್ನುವ ಮಲ್ಲಪ್ಪ ಜಮಾದಾರನ ಮಾತುಗಳಲ್ಲಿ ಈ ವಿಚಾರ ಸಾಕಾರವಾಗುತ್ತದೆ. ಮನೆಯ ಯಜಮಾನ ಸೇಂದಿ ಕುಡಿಯುತ್ತ ಹೆಂಡತಿ ಮಕ್ಕಳಿಗೂ ಕುಡಿಸುತ್ತಾನೆ. ಮನೆಗೆ ನೆಂಟರು ಬಂದರೂ ಸೇಂದಿಯ ಸಮಾರಾಧನೆ. ಗುಡಿಯ ಪೂಜಾರಿಗೂ ಸಿಂದಿಗೂ ಅವಿನಾಭಾವ ನಂಟು. ಸಿಂದಿ ಕುಡಿಯಬೇಕೆನಿಸಿದಾಗ ಮಾತ್ರ ಗುಡಿಗೆ ಬಂದು ಪೂಜೆ ಮಾಡುತ್ತಾನೆ.

ಕಾದಂಬರಿಯಲ್ಲಿ ಗಮನಿಸಲೇ ಬೇಕಾದ ಕೆಲವು ವಿಶಿಷ್ಟ ಪಾತ್ರಗಳಿವೆ. ಕಾಶಿಯ ಗಂಡ ಮಾರ್ತಾಂಡನದು ಅಂಥ ಒಂದು ಪಾತ್ರ. ಹೆಂಡತಿಗಾಗಿ ಪ್ರಾಣಬಿಟ್ಟ ಅಮರಪ್ರೇಮಿ ಆತ. ತನ್ನನ್ನು ಉಪೇಕ್ಷಿಸಿ ಪ್ರಿಯಕರನ ಹಿಂದೆ ಹೋದ ಹೆಂಡತಿಯನ್ನು ಕ್ಷಮಿಸಿದ್ದೂ ಅಲ್ಲದೆ ಅವಳ ಸಂತೋಷಕ್ಕೆ ಅಡ್ಡಿಬರದೆ ವಿರಹವ್ಯಥೆಯನ್ನು ಸಹಿಸಲಾಗದೆ ತನ್ನನ್ನೇ ದಂಡಿಸಿಕೊಂಡವನು. ಗಂಡನ ತಿರಸ್ಕಾರದಿಂದ ಹೆಂಡತಿಯಾದವಳು ಅನುಭವಿಸುವ ದುಃಖ, ದುಮ್ಮಾನಗಳಿಗೆ ತುಲ್ಯವಾಗಿ ಮಾರ್ತಾಂಡ ಕಾಶಿಗಾಗಿ ಹಂಬಲಿಸುತ್ತಾನೆ. ಮಾರ್ತಾಂಡನ ಅತಿಯಾದ ಪ್ರೀತಿ ಮತ್ತು ಶರಣಾಗತಿ ಕಾಶಿಗೆ ಅಸಹನೀಯವಾಗುತ್ತಿತ್ತೆನ್ನುವುದರ ಮೂಲಕ ಹೆಣ್ಣಿನ ಸ್ವಭಾವದ ಒಂದು ವಿಶಿಷ್ಟ ಅಂಶವನ್ನು ಕಾದಂಬರಿ ದಾಖಲಿಸುತ್ತದೆ. ಗಂಡನ ಪ್ರೀತಿ, ಪ್ರೇಮದೊಂದಿಗೆ ಅವನ ಗಂಡಸುತನ, ಆಳಿಕೆ, ಅಧಿಕಾರ, ಗರ್ವಗಳನ್ನು ಇಷ್ಟಪಡುತ್ತಾಳಲ್ಲದೆ ಹೆಂಡತಿ ತನ್ನ ಕಾಲು ಹಿಡಿಯುವ,

ಕೈಮುಗಿಯುವ ಗಂಡನೆಂದರೆ ಹೆಂಡತಿಯೂ ಅಸಹ್ಯಪಡುತ್ತಾಳೆ. ಮಾತ್ರವಲ್ಲ ಮಾರ್ತಾಂಡನ ಅತಿಪ್ರೀತಿ ಕಾಶಿಯ ಅಪರಾಧೀಭಾವವನ್ನು ಕೆಣಕಿದಂತಾಗಿ ಅವನ ಮೇಲೆ ಸಿಟ್ಟು ಬಂದು ಉರುಲು ಹಾಕಿ ಸಾಯುವಷ್ಟು ಅಸಹ್ಯವಾಗುತ್ತಿತ್ತೆಂದೂ ಇಬ್ಬರು ಗಂಡರು ಪ್ರೀತಿಯ ನೀರೆರೆದು ತನ್ನನ್ನು ಬೆಳೆಸಿದರೂ ತನ್ನ ಬದುಕಿನ ಗಿಡ ಮಾತ್ರ ಹುಳಹತ್ತಿ ಒಣಗುತ್ತಲೇ ಹೋಯ್ತೆಂದೂ ಅವಳು ನೊಂದುಕೊಳ್ಳುತ್ತಾಳೆ. ಮಾರ್ತಾಂಡನ ಪ್ರೀತಿಯನ್ನು ಅರಗಿಸಲಾಗದ ಲಿಂಗರಾಜನ ಪ್ರೀತಿಯನ್ನು ದಕ್ಕಿಸಲಾಗದ ಕಾಶಿಯ ಮನೋಲೋಕದಲ್ಲಿ ತಾಕಲಾಟಗೊಳ್ಳುವ ತುಡಿತಗಳಲ್ಲಿ ಈ ಅಂಶ ಮೂರ್ತವಾಗುತ್ತದೆ. ಕೊನೆಗೂ ಮಾರ್ತಾಂಡ ಕಾಶಿಯ ಪ್ರೀತಿಯನ್ನು ಪಡೆಯದೆ ವಿರಹವ್ಯಥೆಯಿಂದ ನೊಂದು ಬೆಂದು ಸನ್ಯಾಸಿಯಂತೆ ಬದುಕುತ್ತ ಹೆಂಡತಿಯನ್ನೊಮ್ಮೆ ನೋಡುವ ಕೊನೆಯಾಸೆಯನ್ನು ತೀರಿಸಿ ಧನ್ಯತೆಯ ಭಾವದಿಂದ ಸತ್ತುಹೋಗುತ್ತಾನೆ. ಊಟದಲ್ಲಿ ತಾಯಿಯಂತೆ, ಹಾಸುಗೆಯಲ್ಲಿ ವೇಶ್ಯೆಯಂತೆ ಹೆಂಡತಿ ಗಂಡನ ಸೇವೆ ಮಾಡಬೇಕೆಂದು ಶಾಸ್ತ್ರಗಳು ಹೇಳಿವೆ. ಆ ಹೇಳಿಕೆಗೆ ತದ್ವಿರುದ್ಧವಾಗಿ ಇಲ್ಲಿ ಮಾರ್ತಾಂಡ ಹೆಂಡತಿಯ ಸೇವೆ ಮಾಡುತ್ತಾನೆನ್ನುವ ಅಂಶ ಗಮನಾರ್ಹ. ಸ್ತ್ರೀಶೋಷಣೆಗೆ ತಿರುಮಂತ್ರವಾಗಿಯೂ ಗೀತಾರವರು ಈ ಪಾತ್ರಪರಿಕಲ್ಪನೆಯನ್ನು ಮಾಡಿದ್ದಾರೆನ್ನಿಸುತ್ತದೆ.

ಮಲ್ಲಪ್ಪನ ಮಗಳು ಶಾಣಮ್ಮ ಮತ್ತು ಗಂಡ ಹಾಲಪ್ಪನ ಪಾತ್ರಚಿತ್ರಣ ತುಂಬ ಅರ್ಥಪೂರ್ಣವಾಗಿವೆ. ಅವರದು ಒಂದು ಆದರ್ಶ ದಾಂಪತ್ಯ. ಮಲ್ಲಪ್ಪನ ಕುಟುಂಬಕ್ಕೆ ಅವರ ನೆರವು, ಕಾಶಿಯ ವಿಚಾರದಲ್ಲಿ ಹಾಲಪ್ಪನ ಸಹಾಯ, ಬೆಳ್ಳಿ ಕಲ್ಯಾಣಿಯರ ಜೀವನದ ಹಾದಿಯಲ್ಲಿ ಅವರು ನೀಡುವ ಪ್ರೀತಿಯ ರಕ್ಷೆ–ಸಮುದಾಯದ ಪ್ರೀತಿ, ವಿಶ್ವಾಸಗಳನ್ನು ಗಳಿಸಿದ ಅವರ ಆದರ್ಶ ಸುಖಸಂಸಾರದ ರೀತಿ ನೀತಿಗಳು ಒಂದು ಆಪ್ತವಾದ ಅನುಭವವನ್ನು ನೀಡುವುದರಲ್ಲಿ ಯಶಸ್ವಿಯಾಗುತ್ತವೆ.

ಕಲ್ಯಾಣಿ ಬೆಳ್ಳಿಯರದ್ದು ಕೂಡ ಒಂದು ರೀತಿಯಲ್ಲಿ ಆದರ್ಶ ದಾಂಪತ್ಯವಾದರೂ ಅದನ್ನು ಬಹುಕಾಲ ಅನುಭವಿಸುವ ಅದೃಷ್ಟ ಅವರಿಗಿರುವುದಿಲ್ಲ. ಕಾಮನ ಹಬ್ಬದಂದು ಕುಡಿದ ನಿಶೆಯಲ್ಲಿ ಕಾಶಿಯ ಅನೈತಿಕ ಸಂಬಂಧದ ಬಗ್ಗೆ ತನ್ನನ್ನು ಅವಮಾನಿಸಿದನೆಂದು ಮುಕುಡಪ್ಪನೊಂದಿಗೆ ಜಗಳವಾಡಿ ಕೊಲೆಗಾರನಾದ ಕಲ್ಯಾಣಿ ಹದಿನಾಲ್ಕು ವರ್ಷ ಜೈಲು ಸೇರುತ್ತಾನೆ. ಇತ್ತ ಕಷ್ಟಗಳ ದುಮ್ಮಸು ಬಿದ್ದು ಬಿದ್ದು ಬೆಳ್ಳಿ ಗಟ್ಟಿಯಾಗುತ್ತಾಳೆ. 'ಬದುಕು ನಾವು

ಬಯಸಿದಂಗೆಲ್ಲಿ ನಡೀತಾದ? ಬದುಕಿನ ದಾರ್‍ಯಾಗ ಅದೇಸು ಕಂಟಿಕಮರಿ ಕಲ್ಲು ಮುಳ್ಳುಗೋಳು? ಅದೇಟು ಗೋಜಲು?'(418) ಎಂದು ಅವಳಿಗೆ ಅನ್ನಿಸುತ್ತದೆ. ಮನೆಯ ಜವಾಬ್ದಾರಿಯನ್ನು ಹೊತ್ತು ದುಡಿಮೆಗೆ ತನ್ನನ್ನು ಮಾರಿದ ಆಕೆ ಕೊರವರ ಈರವ್ವನಿಂದ ಬಿದಿರ ಬುಟ್ಟಿ, ಚಾಪೆ ಹೆಣೆಯುವುದನ್ನು ಕಲಿಯುತ್ತಾಳೆ. ಸಿಂದಿ ಬನಕ್ಕೆ ಹೋಗಿ ಸಿಂದಿಘರಕಿ ಹೊರುತ್ತಾಳೆ. ಆಮಿಷಗಳಿಗೆ ಸೊಪ್ಪು ಹಾಕದೆ ಯೌವನದ ಆಸೆ, ಬಯಕೆಗಳನ್ನು ನಿಗ್ರಹಿಸಿ ಕಣ್ಣೀರಿನಿಂದ ಹಾಸುಗೆ ಬಟ್ಟೆ ನೆನೆಯುತ್ತಿದ್ದರೂ ಗೌರವದಿಂದ ಬದುಕುತ್ತಾಳೆ. ಬೆಳ್ಳಿಯ ಪಾತ್ರ ಆದರ್ಶಗರತಿಯ ಅತ್ಯುತ್ತಮ ಚಿತ್ರಣವಾಗಿ ಮನಸೆಳೆಯುತ್ತದೆ.

ಬೆಳ್ಳಿ ಕಲ್ಯಾಣಿಯರ ಮಗ ಸಣ್ಣಮಲ್ಲು ಕಾಲೇಜು ವಿದ್ಯಾರ್ಥಿಯಾಗಿ ಆಧುನಿಕ ಯುವಪೀಳಿಗೆಯ ಪ್ರತೀಕವಾಗುತ್ತಾನೆ. ಕೊಲೆಗಾರನಾಗಿ ಜೈಲು ಸೇರಿದ ತಂದೆಯ ಬಗ್ಗೆ ಯಾವುದೇ ಅಭಿಮಾನ, ಗೌರವ ಅವನಿಗಿಲ್ಲ. ಶಿಕ್ಷೆ ಮುಗಿಸಿ ಬಂದು ಆರು ತಿಂಗಳಾದರೂ ತಂದೆ ಮಗನ ಭೇಟಿಯಾಗುವುದಿಲ್ಲ. ಉದ್ಯೋಗಸ್ಥನಾದ ಬಳಿಕ ಅಪ್ಪನ ಮೇಲಿನ ಕೋಪಕ್ಕೆ ಎಲ್ಲ ಆಸ್ತಿಯನ್ನೂ ತಂಗಿಯ ಹೆಸರಿಗೆ ಬರೆಸಿ ತನ್ನ ಸಹೋದ್ಯೋಗಿಯಾಗಿರುವ ಅನ್ಯಜಾತಿಯ ಹುಡುಗಿಯನ್ನು ಮದುವೆಯಾಗಿ ಆಧುನಿಕತೆಯ ಥಳುಕು ಬೆಳಕಿನ ಹಾದಿಗೆ ಹೊರಳುತ್ತಾನೆ. ತಲೆಮಾರುಗಳ ಅಂತರದಲ್ಲಿ ಮನುಷ್ಯಸಂಬಂಧಗಳು ಹೇಗೆ ಅರ್ಥಹೀನವೂ ಕೃತಕವೂ ಆಗುತ್ತದೆಂಬುದಕ್ಕೆ ಸಣ್ಣಮಲ್ಲು ಸಾಕ್ಷಿಯಾಗುತ್ತಾನೆ.

ಕಾಲಚಕ್ರ ಉರುಳುತ್ತದೆ. ಮಕ್ಕಳು ವಿದ್ಯಾವಂತರಾಗಿ ಕೈತುಂಬ ಸಂಬಳ ಸಿಗುವ ಸರಕಾರೀ ನೌಕರಿ ಪಡೆಯುತ್ತಾರೆ. ಕಲ್ಯಾಣಿಯ ಮಗಳು ಸುಕದೇವಿಗೆ ಮದುವೆಯಾಗಿ ದೇವೀಂದ್ರ ಮನೆಯಳಿಯನಾಗುತ್ತಾನೆ. ಶಾಣಮ್ಮ, ಕಾಶಿ, ಕಲ್ಯಾಣಿಯರು ಮುಪ್ಪಿನ ಹೊಸ್ತಿಲಿಗೆ ಕಾಲಿಡುತ್ತಾರೆ. ಮನೆಯಲ್ಲಿ ಜಮೀನು, ಜಾನುವಾರು, ದವಸ, ಧಾನ್ಯಗಳು ತುಂಬುತ್ತವೆ. ಜೀವನ ಚಕ್ರ ಮತ್ತೆ ಸುಖದ ಹಾದಿಯಲ್ಲಿ ಸಾಗುತ್ತದೆ. ಮಲ್ಲಪ್ಪ ಜಮಾದಾರನ ಕಾಲದ ವೈಭವದ ದಿನಗಳು ಮತ್ತೆ ಬರುತ್ತವೆ. ಮನೆಯ ಜನರ ಶ್ರಮ ದುಡಿಮೆ, ಪ್ರೀತಿ ವಿಶ್ವಾಸಗಳು ತಕ್ಕ ಪ್ರತಿಫಲವನ್ನು ನೀಡುತ್ತವೆ.

ಫತರೂ ಕೂಡ ಒಂದು ಮರೆಯಲಾಗದ ಉತ್ತಮ ಪಾತ್ರ. ಈತ ಜೀವಮಾನವೆಲ್ಲ ಮಲ್ಲಪ್ಪನ ಮನೆಯ ಕಷ್ಟಸುಖಗಳಲ್ಲಿ ಸ್ಪಂದಿಸಿದವನು. ಅವನ ಹೆಂಡತಿ ನಜಮಾ ಕೂಡ ಉತ್ತಮ ಗುಣನಡತೆಯ ಹುಡುಗಿ. ಮಗ

ಸಣ್ಣಮಲ್ಲುವಿನಿಂದ ಸಿಗದ ಪ್ರೀತಿ, ಸ್ನೇಹಗಳನ್ನು ಕಲ್ಯಾಣಿ ಬೆಳ್ಳಿಯರು ಅನ್ಯಜಾತಿಯ ಫತರೂನಿಂದ ಪಡೆಯುತ್ತಾರೆ. ತಮ್ಮ ಕುಟುಂಬದ ಅವಿಭಾಜ್ಯ ಅಂಗವಾಗಿ ತನಗೆ ಹಿರಿಯಣ್ಣನಂತಿದ್ದ ಫತರೂಗೆ ಕಲ್ಯಾಣಿ ಇಪ್ಪತ್ತೆಕೆರೆ ಜಮೀನು ಖರೀದಿಸಿ ರಿಜಿಸ್ಟರ್ ಮಾಡಿಸುತ್ತಾನೆ. ಫತರೂ ಮೂಲಕ ಮಾನವೀಯ ಸಂಬಂಧಗಳು ಬದುಕಿನಲ್ಲಿ ಮುಖ್ಯವೆಂದೂ ಅದಕ್ಕೆ ಜಾತಿಮತಗಳ ಬೇಲಿಗಳಿರಬೇಕಿಲ್ಲವೆಂದೂ ಲೇಖಕಿ ಸಾಬೀತುಗೊಳಿಸಿದ್ದಾರೆ.

ಕಲ್ಯಾಣಿ ಜೈಲುವಾಸ ಮುಗಿಸಿ ಬಂದರೂ ಮೊದಲಿನ ಉತ್ಸಾಹ ಲವಲವಿಕೆ ಕಳೆದುಕೊಳ್ಳುವುದು, ತೋಟದಲ್ಲೇ ಕಾಲಕಳೆಯುತ್ತ ಕನಸಿನಲ್ಲಿ ತಂದೆ ಕರೆದು ಶ್ರೀಶೈಲಕ್ಕೆ ಹೊರಟೆನೆಂದು ಹೇಳಿ ಬೆಳ್ಳಿಯೊಂದಿಗೆ ಶ್ರೀಶೈಲಕ್ಕೆ ಹೋಗೋಣವೆನ್ನುವುದು ಬರುವ ದಾರಿಯಲ್ಲಿ ಬಸ್ ಅಫಘಾತದಲ್ಲಿ ಇಬ್ಬರೂ ಮರಣಿಸುವುದು ಮನೆ ಮತ್ತೆ ದುಃಖದ ಕಡಲಿನಲ್ಲಿ ಮುಳಗುವುದು ಒಂದುರೀತಿಯಲ್ಲಿ ಕೃತಕವೆನಿಸಿದರೂ ಹಗಲು ರಾತ್ರಿಗಳಂತೆ ನಿರಂತರವಾಗಿ ತಿರುಗುವ ಸುಖದುಃಖಗಳನ್ನು ಒಪ್ಪಿ ಬಾಳುವುದೇ ಜೀವನವೆನ್ನುವುದನ್ನು ತಿಳಿಸಲು ಕಾದಂಬರಿಕಾರರು ಉದ್ದೇಶಿಸಿದಂತಿದೆ.

ಕಾದಂಬರಿಯುದ್ದಕ್ಕೂ ಸಾಕ್ಷೀಭೂತಳಾಗಿ ಕಾಣಿಸುವ ವೃದ್ಧೆ ನಾಗವ್ವಾಯಿ ಬದುಕಿನ ಎಲ್ಲ ಆಗುಹೋಗುಗಳಿಗೂ ಬೆನ್ನಮೂಳೆಯಂತೆ ನಿಲ್ಲುವ ಒಂದು ಗಟ್ಟಿಪಾತ್ರ. ಮಲ್ಲಪ್ಪ ಜಮಾದಾರನ ಕುಟುಂಬದೊಂದಿಗೆ ಅವಿನಾಭಾವ ಸಂಬಂಧವನ್ನು ಬೆಳೆಸಿಕೊಂಡ ಅವಳ ಮಾಗಿದ ಅನುಭವ, ಜೀವನ ದರ್ಶನಗಳು ಅನುಸರಣೀಯ.

ಗ್ರಾಮೀಣ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಸಂಪ್ರದಾಯ, ನಂಬಿಕೆಗಳನ್ನು ಯಥಾವತ್ತಾಗಿ ದಿಗ್ದರ್ಶಿಸುವುದರೊಂದಿಗೆ ಪರಿವರ್ತನಶೀಲ ಸಮಾಜದ ಸುಧಾರಿತ ಮನೋಭಾವ ಮತ್ತು ಆಶೋತ್ತರಗಳನ್ನೂ ಸಾಕಾರಗೊಳಿಸಿದ ಗೀತಾರವರು ಶಿಷ್ಟ ಸಾಹಿತ್ಯವೇದಿಕೆಗೆ ಇದುವರೆಗೂ ಅಪರಿಚಿತವಾದ ಜಾನಪದೀಯ ಸತ್ವಾತಿಶಯದಿಂದ ತುಂಬಿದ ಗ್ರಾಮೀಣ ಬದುಕೊಂದರ ಮೂರು ನೆಲೆಗಳ ವಿಸ್ತಾರವಾದ ವಿನ್ಯಾಸವನ್ನು 'ಬದುಕು' ಕಾದಂಬರಿಯಲ್ಲಿ ತೆರೆದಿಟ್ಟಿದ್ದಾರೆ. ಜೀವವಿರೋಧೀ ನೆಲೆಗಳಲ್ಲಿ ಹಿಂಜಿ ಸ್ತ್ರೀ ಪಕ್ಷಪಾತಧೋರಣೆಯ ಹಾಸಿನಲ್ಲಿ ಹೆಣೆದ ಬದುಕಿನ ಅಸಂಖ್ಯಾತ ಎಳೆಗಳನ್ನು ಪ್ರಾದೇಶಿಕತೆಯ ಸೊಗಸು ಸೊಗಡು ತುಂಬಿದ ಅಯಸ್ಕಾಂತೀಯ ಭಾಷೆಯಲ್ಲಿ

ಕೋದು ಕಾಮ, ಪ್ರೇಮದ ಲಾಳಿಯಲ್ಲಿ ಹಾಕಿ ವಾಸ್ತವದ ಮಗ್ಗದಲ್ಲಿ ಬದುಕಿನ ಕೌದಿಯನ್ನು ನಾಜೂಕಾಗಿ ನೈಯ್ದು ವರ್ಣನೆಯ ಬಣ್ಣ ತುಂಬಿದ್ದಾರೆ. ಗಾಢವಾದ ಜೀವನಾನುಭವ, ಮಾಗಿದ ಮನಸ್ಸು, ಸ್ತ್ರೀಪರ ಕಾಳಜಿ, ಪ್ರಗತಿಪರ ಚಿಂತನೆ, ಮೌಲ್ಯಾಧಾರಿತ ಸಂದೇಶಗಳಿಂದಲೂ ಪಕ್ವವಾದ ಶೈಲಿ, ಭಾಷೆಯ ತಾಜಾತನ, ಉತ್ತಮ ಕಲೆಗಾರಿಕೆಯಿಂದಲೂ ಕೂಡಿದ 'ಬದುಕು'ನ್ನು ಸಂಸ್ಕೃತಿ ಚಿಂತಕರೆಲ್ಲರೂ ಅನುಭವಿಸಬೇಕು, ಆಸ್ವಾದಿಸಬೇಕು.

ಭೌಗೋಲಿಕ ಕ್ಷೇತ್ರದ ವಿಸ್ತಾರವಾದ ವರ್ಣನೆಯಿಲ್ಲದಿರುವುದು, ಆಳವಾದ ತಾತ್ವಿಕ ವಿಚಾರಗಳಿಲ್ಲದಿರುವುದು ಅನುಭವಗಳ ಚೆಲ್ಲಾಟ–'ಬದುಕು' ಕಾದಂಬರಿಗೆ ಗಂಭೀರತೆ ಮತ್ತು ಆಳವನ್ನು ಧಕ್ಕಿಸಲಿಲ್ಲವೆನ್ನುವ ವಿಮರ್ಶಕರ ಅಭಿಪ್ರಾಯವನ್ನು ಅನುಲಕ್ಷಿಸಬಹುದಾದರೂ (ಮಹಿಳಾಮಾರ್ಗ.ಪು50) ಅನಕ್ಷರತೆ, ಅಜ್ಞಾನ, ಮೂಢನಂಬಿಕೆಯ ಕಾಲದಿಂದ ಜ್ಞಾನ, ಆಧುನಿಕತೆ, ಜಾಗೃತಲೋಕದವರೆಗೆ ಕಥಾವಾಹಿನಿಯನ್ನು ಹರಿಯಿಸಿ ಆ ಸುದೀರ್ಘವಾದ ಕಾಲಘಟ್ಟದಲ್ಲಿ ಗ್ರಾಮೀಣ ಬದುಕಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ನೆಲೆಗಳನ್ನು ಪರಿವರ್ತಿತ ಲೋಕದತ್ತ ಕೊಂಡೊಯ್ದು ಲೋಕವನ್ನು ತೆರೆದು 'ಬದುಕಿ'ಗೆ ಧನ್ಯತೆಯನ್ನು ನೀಡಿದ ಗೀತಾರವರ ಸಾಧನೆಯನ್ನು ಕೊಂಡಾಡದಿರುವುದು ಸಾಧ್ಯವೇ ಇಲ್ಲ.

**ಕಾಗೆ ಮುಟ್ಟಿತು**

'ಪಾಪ ಎಷ್ಟೇ ಘೋರವಾದರೂ ಬಹಿರಂಗವಾಗುವ ತನಕ ಅಪರಾಧವಲ್ಲ' ಎಂಬ ವಿಚಿತ್ರ ನ್ಯಾಯವಿದೆ. ಈ ಕಾದಂಬರಿಯಲ್ಲಿ ಅಂಥ ಒಂದು ರಹಸ್ಯ ಸ್ಫೋಟಗೊಂಡು ಪಾಪ ಪುಣ್ಯಗಳ ಪರಿಕಲ್ಪನೆಗೆ ಒಂದು ವಿನೂತನ ಭೂಮಿಕೆಯನ್ನು ಒದಗಿಸುತ್ತದೆ.

'ಕಾಮಾತುರಾಣಾಂ ನ ಲಜ್ಜಾಂ ನ ಭಯಾಂ' ಎಂಬಂತೆ ಸೂಕ್ತಿಯಿದೆ. ಗೀತಾರವರ ಕಾದಂಬರಿಗಳ ಶೇಕಡಾ 90% ಕಥಾಪಾತ್ರಗಳೂ ಇಂಥ ಕಾಮುಕರು. ಅಪರೂಪಕ್ಕೊಮ್ಮೆ ಕೆಳವರ್ಗದ ಪುರುಷರೂ ಇವರಿಗೆ ಶಾಮಿಲಾಗುತ್ತಾರೆ. ಬಡವರು ಮಾಡುವ ತಪ್ಪು ಡಾಣಾಡಂಗುರವಾಗಿ ಅವರನ್ನು ಅಪರಾಧಿಯ ಕಟೆಕಟೆಯಲ್ಲಿ ನಿಲ್ಲಿಸಿದರೆ ಶ್ರೀಮಂತರು ಮಾಡುವ ಅಪರಾಧಗಳು ಸಮಾಜದ ಕಣ್ಣಿಗೆ ಕಾಣಿಸುವುದಿಲ್ಲ. ಇಂಥ ದೊಡ್ಡಜನರ ಸಣ್ಣತನವನ್ನು ಬಹಿರಂಗಪಡಿಸುವ ಕುತೂಹಲಕಾರಿ ಘಟನೆಗಳೇ 'ಕಾಗೆ ಮುಟ್ಟಿತು' ಕಾದಂಬರಿಯ ಮುಖ್ಯ ಹೂರಣ. ಲೈಂಗಿಕ ವಿಷಯಲಾಲಸೆಗಳ ಸುತ್ತ ಗಿರಕಿ

ಹೊಡೆದು ಅದರ ಅತಿರೇಕ ಮತ್ತು ಅನಾಹುತಗಳನ್ನು ಸಾರುವ ಈ ವಿಶಿಷ್ಟ ಕೃತಿ ತನ್ನ ಆಳ ಎತ್ತರಗಳಲ್ಲಿ ಬಹಳ ಗಟ್ಟಿಯಾಗಿದ್ದು ಸಹೃದಯ ವಲಯದಲ್ಲಿ ಸಾಕಷ್ಟು ಜಿಜ್ಞಾಸೆ, ಚರ್ಚೆಗಳಿಗೂ ಒಳಗಾಗಿದೆ.

ಈ ಕಾದಂಬರಿಯಲ್ಲಿ ಮುಖ್ಯವಾಗಿ ಎರಡು ಕುಟುಂಬಗಳ ಕಥೆಯಿದೆ. ಒಂದು ಶಿವಳ್ಳಿಯ ಮೇಲುವರ್ಗದ ಗೌಡ ಉಗ್ರಪ್ಪನದು. ಇನ್ನೊಂದು ಅವನ ನಿಷ್ಠಾವಂತ ಆಳು ಬಾಳ್ಯಾನದು. ಗೌಡನ ಹಿರಿಹೆಂಡತಿಯ ಮಗಳು ಗೌರಿಗೆ ಕಾಯಿಲೆಯಾಗಿ ಚಿಕಿತ್ಸೆಗೆ ಪಟ್ಟಣಕ್ಕೆ ಹೋದಾಗ ಗೌಡನ ಎರಡನೆಯ ಹೆಂಡತಿ ಗಂಗಾ ಮತ್ತು ಬಾಳ್ಯಾ ಕೆಲಕಾಲ ಅಲ್ಲೇ ಬಾಡಿಗೆ ಮನೆಮಾಡಿ ಇರುತ್ತಾರೆ. ಆ ಸಮಯದಲ್ಲಿ ಇತ್ತ ಬಾಳ್ಯಾನ ಹೆಂಡತಿ ಸೋನಿಯನ್ನು ಗೌಡ ಬಲಾತ್ಕರಿಸಿದ ಪರಿಣಾಮವಾಗಿ ಅವಳು ಗೌಡನ ಬೀಜಕ್ಕೆ ಹೊಲವಾಗುತ್ತಾಳೆ. ಅತ್ತ ಹದಿಹರೆಯದ ಹೆಣ್ಣಾದ ಗಂಗಾ ಗಂಡನಿಂದ ಸುಖ ಪಡೆಯಲಾರದೆ ಬಾಳ್ಯಾನೊಂದಿಗೆ ಕೂಡಿ ಗಂಡುಮಗುವಿನ ತಾಯಿಯಾಗುತ್ತಾಳೆ. ಮುಗ್ಧಳಾದ ಸೋನಿ ಪಾಪಪ್ರಜ್ಞೆಯಿಂದ ಗಂಡನಿಗೆ ಸತ್ಯವನ್ನು ತಿಳಿಸಿ ಮಗ ಕರಿಸಿದ್ದನನ್ನು ಬಾಳ್ಯಾ ದ್ವೇಷಿಸಲು ಕಾರಣಳಾಗುತ್ತಾಳೆ. ಆದರೆ ಗಂಗಾ ಮಗ ಶಾಣಬಸಪ್ಪ ಬಾಳ್ಯಾನ ಮಗನೆಂಬ ಸತ್ಯವನ್ನು ಮುಚ್ಚಿಟ್ಟು ಗಂಡನ ಕಚ್ಚೆಹರುಕತನಕ್ಕೆ ತಕ್ಕ ಶಾಸ್ತಿ ಮಾಡಿದೆ ಅಂದುಕೊಳ್ಳುತ್ತಾಳೆ.

ಬಾಳ್ಯಾನ ಬೀಜಕ್ಕೆ ಹುಟ್ಟಿದ ಶಾಣಬಸಪ್ಪ ಗೌಡನ ಮಗನಾಗಿ ಎಲ್ಲ ಸುಖಭೋಗಗಳಲ್ಲಿ ಮೆರೆಯುತ್ತಾನೆ. ಗೌಡನ ಮಗ ಕರಿಸಿದ್ದ ಶಾಣಬಸಪ್ಪನ ಎಂಜಿಲನ್ನು ತಿಂದು ಅವನು ಬಿಟ್ಟಿದನ್ನು ಉಟ್ಟು ಬಾಳ್ಯಾನ ಮಗನಾಗಿ ಗೌಡನ ಮನೆಯಲ್ಲೇ ಆಳಾಗಿ ದುಡಿಯುತ್ತಾನೆ.

ಭಾರತೀಯ ಸಂಸ್ಕೃತಿಯಲ್ಲಿ ಮರಣೋತ್ತರ ಸಂಸ್ಕಾರಗಳಲ್ಲಿ ಸತ್ತವರಿಗೆ ಎಡೆ ಬಡಿಸುವ ಕ್ರಮವಿದೆ. ಸತ್ತುಹೋದವರ ಆತ್ಮ ಕಾಗೆಯ ಶರೀರದಲ್ಲಿ ಸೇರುತ್ತದೆಂದೂ ಸತ್ತವರಿಗೆ ಬಡಿಸಿದ ಎಡೆಯನ್ನು ಕಾಗೆ ಮುಟ್ಟಿದರೆ ಆತ್ಮಕ್ಕೆ ಸದ್ಗತಿಯೆಂದೂ ನಂಬಿಕೆ. ಪಿಂಡಪ್ರದಾನ ಮಾಡುವ ಅಧಿಕಾರವಿರುವುದು ಸತ್ತವನ ಮಗನಿಗೆ. ಬಾಳ್ಯಾ ಸತ್ತ ಮೂರನೆಯ ದಿನ ಅವನಿಗೆ ಅರ್ಪಿಸಿದ 'ಮೂರು ಕೂಳ'ನ್ನು ಕರಿಸಿದ್ದ ಕರೆದರೆ ಕಾಗೆಗಳು ಬಂದು ಮುಟ್ಟುವುದಿಲ್ಲ. ಆದರೆ ಶಾಣಬಸಪ್ಪ ಪಿಂಡಕ್ಕೆ ಊದು ಹಾಕಿ ಕರೆದ ತಕ್ಷಣವೇ ಎಲ್ಲ ಕಾಗೆಗಳೂ ಮುಗಿಬಿದ್ದು ಒಂದಗುಳೂ ಬಿಡದಂತೆ ತಿನ್ನುತ್ತವೆ. ಅದನ್ನು ನೋಡಿದ ಗೌಡನ

ಮುಖದ ಬಣ್ಣ ಬದಲಾಗುತ್ತದೆ. ಅನುಮಾನದ ಹುಳ ಅವನನ್ನು ಕೊರೆಯುತ್ತದೆ. ಗಂಡನ ಉದ್ವೇಗ, ಚಿಂತೆ, ಅಸಹಾಯಕತೆಗಳನ್ನು ನೋಡಲಾರದೆ ಗಂಗಮ್ಮ ಮುಚ್ಚಿಟ್ಟ ಸತ್ಯವನ್ನು ಗೌಡನ ಮುಖಕ್ಕೆ ರಾಚುತ್ತಾಳೆ; 'ಕಲಬುರ್ಗ್ಯಾಗ ಇದ್ದಾಗ ನೀ ಇಲ್ಲಿ ಅವನ ಮನಿ ಹೊಕ್ಕಿ,.. ಅಂವಾ ಅಲ್ಲಿ ನಿನ್ನ ಮನಿ ಹೊಕ್ಕನು ಆಟೇ..'

ಹೆಂಡತಿ ಸೋನಿಯನ್ನು ಗೌಡ ಅತ್ಯಾಚಾರ ಮಾಡಿದ ವಿಚಾರ ತಿಳಿದಾಗ ಬಾಳ್ಯಾನಿಗೆ ಭೂಕಂಪವಾದಂತೆ, ಭೂಮ್ಯಾಕಾಶಗಳೆಲ್ಲ ತಿರುಗಿದಂತೆ ಭಾಸವಾಗುತ್ತದೆ. 'ನೀ ಹಾದರಗಿತ್ತಿ ಅಂತ ಗೊತ್ತಾದ ಮ್ಯಾಲನೂ ನಿನ್ನ ಜತಿ ಮದಲಿನಂಗೇ ಇರೊಟು ದೊಡ್ಡ ಮನಶ್ಯಾ ನಾ ಅಲ್ಲ..' ಎನ್ನುತ್ತಾನೆ. ಅದಾಗಲೇ ಗೌಡ್ತಿಯ ಹೊಲದಲ್ಲಿ ಬೀಗ ಬಿತ್ತಿದ್ದ ಬಾಳ್ಯಾ ನನ್ನ ಪತ್ನಿಯ ವಿಚಾರದಲ್ಲಿ ಹೀಗನ್ನುವುದು. ಒಟ್ಟು ಗಂಡಸು ಜಾತಿಯ ಸ್ವಾರ್ಥವನ್ನು ಪ್ರತಿಫಲಿಸಿದರೆ ಗೌಡನ ಹಿರಿಹೆಂಡತಿಯ ನಿಗೂಢ ಸಾವು, ಪರೆಪ್ಪನ ನಪುಂಸಕತ್ವ, ಎತ್ತಿನ ಕಾಲು, ಕತ್ತು ಕತ್ತರಿಸಿದ್ದು, ರಾಮನಾಯ್ಕನ ಕೈ ಕತ್ತರಿಸಿದ್ದು, ರಾಣ್ಯಾನ ಮೊಣಕಾಲಿನ ಮೂಳೆ ಮುರಿದುದು ಪುರೋಹಿತಶಾಹಿ ಸಮಾಜದ ಸ್ವಾರ್ಥ ಮತ್ತು ಕ್ರೌರ್ಯವನ್ನು ಅನಾವರಣಗೊಳಿಸುತ್ತವೆ. ಮುಖ್ಯ ಕಥಾವಾಹಿನಿಯಿಂದ ಬೇರೆಯಾಗಿದ್ದರೂ ಮೂಕ್ಯಾ ಮತ್ತು ಚೆನ್ನಿಯರೆಂಬ ದಂಪತಿಗಳ ವಿಚಾರದಲ್ಲಿ ನಡೆಯುವ ಇನ್ನೊಂದು ಕಥಾಪ್ರಸಂಗ ಹೆಚ್ಚು ಮೌಲಿಕವಾಗಿದೆ. ಕುಲಕರ್ಣಿ ಪ್ರಲ್ಹಾದಪ್ಪನಿಂದ ಪಡೆದ ಸಾಲಕ್ಕಾಗಿ ಹೆಂಡತಿಯನ್ನು ಒತ್ತೆಯಿಡುವ ಮೂಕ್ಯಾ ದುಡಿದು ಸಂಪಾದಿಸಿ ಅವಳನ್ನು ಬಿಡಿಸಿಕೊಳ್ಳಬೇಕೆನ್ನುವುದರೊಳಗೆ ಕುಲಕರ್ಣಿಯ ಕಾಮಕ್ಕೆ ಬಲಿಯಾಗಿ ಚೆನ್ನಿ ಬಸುರಾಗುತ್ತಾಳೆ. ಪಂಚಾಯತಿ ಸಭೆ ಕುಲಕರ್ಣಿಗೆ ತಪ್ಪುದಂಡ ವಿಧಿಸಿದರೂ ಮೂಕ್ಯಾ ಹೆಂಡತಿಯನ್ನು ಸ್ವೀಕರಿಸಲು ಸಿದ್ಧನಾಗುವುದಿಲ್ಲ. ಕೊನೆಗೆ ಚೆನ್ನಿಯ ಸಮಸ್ತ ಜವಾಬ್ದಾರಿಯನ್ನು ಕುಲಕರ್ಣಿಯೇ ವಹಿಸಬೇಕೆಂದು ಸಭೆ ತೀರ್ಪು ಕೊಟ್ಟಾಗ ಮೂಕ್ಯಾ ನಿರುಮ್ಮಳನಾಗಿ ಹೆಂಡತಿಯನ್ನು ಕಳುಹಿಸಲು ಒಪ್ಪುತ್ತಾನೆ. ಆದರೆ ತೀರ್ಪಿಗೆ ತಲೆಬಾಗದ ಚೆನ್ನಿ ತನಗಾದ ಅನ್ಯಾಯಕ್ಕೆ ವಿರುದ್ಧವಾಗಿ ತುಂಬಿದ ಸಭೆಗೆ ಸವಾಲು ಹಾಕುತ್ತಾಳೆ. '.. ಈ ಫೈಸಲಾ ನನಗ ಮಂಜೂರ ಇಲ್ರಿ ದೈವದೋರೆ..ಇದು ಏಕತರಫಿ ನ್ಯಾಯ ಅದಾ.. ಗಂಡಸರ ಕಡೀಗೆ ಫೈಸಲಾ ಅದಾ.. ನಂದೇನೂ ಇದರಾಗ ಲೆಕ್ಕಕ್ಕೇ ತಗೊಂಡಿಲ್ಲ! ಖರೇವಂದ್ರ ಇದರಾಗ ಅನ್ಯಾಯ ಆಗಿದ್ದು ನನಗ, ಬಲಾತ್ಕಾರ ನಡೆದದ್ದು ನನ್‌ಮ್ಯಾಲ! ನನಗೆ

ಬ್ಯಾಡಾದ ಹಾದರ ಪಿಂಡಾ ಹೊಟ್ಟ್ಯಾಗ ಹೊತಗೊಂಡು ನಿಂತಿದ್ದು ನಾನು! ನನಗೀಗ ನ್ಯಾಯಾ ಬೇಕು. ನಾಯೇನೂ ಪಾಪ ಮಾಡಿಲ್ಲ. ನನಲಿಂದೇನೂ ಚೂತ ನಡೆದಿಲ್ಲ. ಅಂದಮ್ಯಾಲ ಗಂಡನಲಿಂದ ಫಾರೀಕತಿ ಪಡ್ಕೊಂಡು ಈ ಕುಕ್ಕಣ್ಣಿ ಮನ್ಯಾಗೇ ನಾ ಸಾಯಾತನಕ ಆಳಾಗಿ ದುಡ್ಯಾ ಸಜಾ ನನಗ್ಯಾಕ ಕೊಟ್ರಿ ನೀವು?...ನನಗಿದು ಒಪ್ಪಗಿ ಇಲ್ಲ. ನನಗ ನ್ಯಾಯಾ ಬೇಕು(115)' ಪುರುಷರ ಸ್ವಾರ್ಥಜನ್ಯ ಪದ್ಧತಿಯ ಭದ್ರಕೋಟೆಗೆ ಸಿಡಿಗುಂಡಿನಂತೆ ಮಾತಿನ ಕಿಡಿಯನ್ನು ಹಚ್ಚಿದ ಚೆನ್ನಿ ತನಗೆ ನ್ಯಾಯ ಸಿಗುವುದಿಲ್ಲವೆಂದು ಖಾತ್ರಿಯಾದಾಗ ಆತ್ಮಹತ್ಯೆಗೆ ಶರಣಾಗುತ್ತಾಳೆ. ಚೆನ್ನಿಯಲ್ಲಿ ಸತ್ಯಸಂಧತೆ, ಪ್ರಾಮಾಣಿಕತೆ, ಧೈರ್ಯ, ಅನ್ಯಾಯವನ್ನು ಪ್ರತಿಭಟಿಸುವ ಎದೆಗಾರಿಕೆ, ಕಿಚ್ಚು ಎಲ್ಲವೂ ಇದ್ದುವು. ಆದರೆ ಅವಳ ಪ್ರತಿಭಟನೆ ವ್ಯಕ್ತಿಗತ ನೆಲೆಯಲ್ಲಿಯೇ ಸಮಾಧಿಯಾಗಿ ಅವಳು ಆತ್ಮಹತ್ಯೆಗೆ ಶರಣಾಗುವುದು ವ್ಯವಸ್ಥೆಯ ಕೈ ಎಷ್ಟು ಮೇಲಾಗಿದೆ ಎಂಬುದನ್ನು ಖಾತ್ರಿಪಡಿಸುತ್ತದೆ.

ಸೋನಿಯೂ ಅಮಾಯಕ ಮುಗ್ಧ ಹೆಂಗಸು. ಅವಳ ಅಂತರಂಗದ ಮಾತುಗಳಲ್ಲಿ ವ್ಯಕ್ತವಾಗುವ ದುಃಖ ದುಮ್ಮಾನಗಳು ಅವಳ ನಿರಪರಾಧಿತ್ವನ್ನು ಸಾಬೀತುಪಡಿಸುತ್ತವೆ. ಸ್ವತಂತ್ರ ವ್ಯಕ್ತಿತ್ವದ ಛಾಪಿನಿಂದ ಗಟ್ಟಿಯಾಗಿ ಎದ್ದುನಿಲ್ಲಬಹುದಾದ ಮಹಿಳಾಪಾತ್ರಗಳು ತಬ್ಬಲಿತನದಿಂದ ನರಳುತ್ತ ಅನ್ಯಾಯವನ್ನು ಎದುರಿಸಲಾಗದೆ ಪರಿಸ್ಥಿತಿಯ ಕೈಗೊಂಬೆಗಳಾಗುವುದು ವಿಷಾದನೀಯ. ಮೂಕ್ಯಾ ಮತ್ತು ಬಾಳ್ಯಾರ ಪಾತ್ರಚಿತ್ರಣದ ಮೂಲಕ ಸಮಾಜದ ಎಲ್ಲ ವರ್ಗದ ಪುರುಷರೂ ಮಹಿಳೆಯ ವಿಚಾರದಲ್ಲಿ ಎಷ್ಟು ಸಂಕುಚಿತ ಸ್ವಭಾವದವರಾಗಿರುತ್ತಾರೆಂಬುದನ್ನು ಕಾದಂಬರಿಕಾರ್ತಿ ಮನವರಿಕೆ ಮಾಡುತ್ತಾರೆ. ಶೋಷಣೆಯೆನ್ನುವುದು ಕೆಳವರ್ಗದ ಮಹಿಳೆಗೆ ಮಾತ್ರ ಸೀಮಿತವಲ್ಲ ಎಂಬ ಕಟುಸತ್ಯವೂ ಇಲ್ಲಿ ನಿರೂಪಿತವಾಗಿದೆ. ಹದಿಹರೆಯದ ಹೆಣ್ಣುಮಕ್ಕಳನ್ನು ಮದುವೆಯಾಗಿ ಮನೆತುಂಬಿಸಿಕೊಂಡ ಯಜಮಾನ ಕೊಳಗೇರಿಯ ಹೆಣ್ಣಿನ ಮೈಯ ಬಿಸುಪನ್ನು ಅರಸಿಕೊಂಡು ಹೋಗುವಾಗ ಒಬ್ಬಂಟಿಯಾಗಿ ನರಳುವ ಮೇಲುವರ್ಗದ ಮಹಿಳೆಯ ಅಂತರಂಗದ ನೋವಿನ ಪಿಸುಮಾತುಗಳನ್ನೂ ಗೀತಾರವರು ಆಲಿಸುತ್ತಾರೆ. 'ಗೌಡರೆಂಡ್ರು ಅಂತ ಮ್ಯಾಲೆಲ್ಲಾ ಮೆರೀತೀವಿ. ಆದರ ಒಳಗೆಲ್ಲಾ ನಮ್ಮ ಹೆಂಗಸರ್ದು ಕೊಳ್ಳಿ ಹತ್ತಿದ ಬದುಕದಾ ಮಗಾ.. ' ಗಂಗಮ್ಮಳ ತಾಯಿಯ ಮಾತುಗಳಲ್ಲಿ ಈ ಅಂಶ ಸ್ಫುಟವಾಗುತ್ತದೆ. 'ಈ ಮಾನ ಮರ್ವಾದೆ ಅಂಬೋದು ಭಾಳಂದ್ರ ಭಾಳ ನಾಜೂಕಿರ್ತಾದ.. ಮುಟಗ್ಯಾಗ

ಮುಚಗೊಂಡು ಹಿಡದರ ಮುಚ್ಚಿರ್‍ತಾದ..ಮುಟಗಿ ಬಿಚ್ಚಿದರ ಮುಗೀತು, ಗುಟ್ಟು ಗುಲ್ಲಾಗಿ ಮುಂದ ತೆಲಿಯೆತ್ತಿ ತಿರಗಾದೇ ಮುಸ್ಕಿಲ್ ಆಗ್ತದ..'(80) ಬಾಳ್ಯಾನ ಈ ಮಾತುಗಳು ಮನುಷ್ಯ ಸ್ವಭಾವದ ಮುಚ್ಚಿಟ್ಟ ರಹಸ್ಯಗಳನ್ನು ಭೇದಿಸುತ್ತ ಜೀವನದ ಅರ್ಥವಂತಿಕೆಯನ್ನು ಪ್ರಶ್ನಿಸುವಂತಿವೆ.

ಕ್ರೌರ್ಯದ ಸಾಕಾರ ಮೂರ್ತಿಯಾಗಿದ್ದ ಉಗ್ರಪ್ಪ ಗೌಡ ಕೊನೆಗೆ ಪಶ್ಚಾತ್ತಾಪದಿಂದ ಹಿಡಿಯಾಗಿ ಸೋನಿಯ ಮುಂದೆ ಕೈಮುಗಿದು ನಿಲ್ಲುವ ದೃಶ್ಯ ಹೃದಯಸ್ಪರ್ಶಿಯಾಗಿದ್ದು ದುಷ್ಟಮನಸ್ಸಿನೊಳಗೂ ಹುದುಗಿದ ಮಾನವೀಯತೆಯ ಎಳೆಗಳ ಹುಡುಕಾಟವನ್ನು ನಿಚ್ಚಳಗೊಳಿಸಿದೆ. ಪಾಪಪ್ರಜ್ಞೆಯಲ್ಲಿಯೇ ಕೊರಗಿ ಕರಗಿ ಗೌಡ ಸತ್ತು ಹೋದಾಗ ಗಂಗಮ್ಮಳನ್ನು ಗುಟ್ಟಾಗಿ ಕರೆದು ಸೋನಿ ಹೇಳುವ ಮಾತುಗಳಾಗಲೀ, ಗೌಡನಿಗೆ ಅರ್ಪಿಸಿದ ಪಿಂಡವನ್ನು ಕಾಗೆಗಳು ಸ್ಪರ್ಶಿಸದಿದ್ದಾಗ ಸೋನಿಯ ಮರ್ಯಾದೆಯನ್ನು ಉಳಿಸಿದ ಗಂಗಮ್ಮಳ ನಡವಳಿಕೆಯಾಗಲೀ ಸತ್ಯ ಮತ್ತು ಮರ್ಯಾದೆಯ ಪರಿಕಲ್ಪನೆಗೆ ಹೊಸ ಕಾಯಕಲ್ಪವನ್ನು ನೀಡುತ್ತದೆ. ಕನ್ನಡ ಸಾಹಿತ್ಯದಲ್ಲಿ ಯಾವ ಬರಹಗಾರರೂ ಇಷ್ಟರಮಟ್ಟಿಗೆ ಯೋಚಿಸದ, ಬರೆಯಲು ಮನಸ್ಸು ಮಾಡದ ಊಳಿಗಮಾನ್ಯ ಬದುಕಿನಲ್ಲಿ ನಡೆಯುವ ಕುಟಿಲಕಾರಸ್ಥಾನಗಳ ಮುಚ್ಚಿಟ್ಟ ಕೆಲವು ಮುಖಗಳನ್ನು ತಮ್ಮ ಪ್ರತಿಭೆಯ ಕನ್ನಡಿಯಲ್ಲಿ ಸೆರೆಹಿಡಿದು ಗೀತಾರವರು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

**ಬಾಕಿ**

2012ರಲ್ಲಿ ಪ್ರಕಟವಾದ 'ಬಾಕಿ' ಕಾದಂಬರಿ ಗೀತಾರವರು ನಡೆದುಬಂದ ಹಾದಿಯ ಸಮಸ್ತ ನೋವು, ನಲಿವು, ಅನುಭವಗಳ ಹೆಜ್ಜೆಗುರುತುಗಳನ್ನು ದಾಖಲಿಸುತ್ತದೆ. ಅವರದನ್ನು ಒಂದು ಕಾದಂಬರಿಯೆಂದು ಕರೆದರೂ ಕಾದಂಬರಿಯ ನಾಯಿಕೆ ಅವರೇ. 'ಬಾಕಿ ನನ್ನ ಉಳಿದೆಲ್ಲ ಕಾದಂಬರಿಗಳಂತೆ ಒಂದು ಕಾದಂಬರಿ ಅಷ್ಟೇ. 'ಆತ್ಮಕಥೆಯಲ್ಲ. ಕಾರಣ, ನಾನು ಆತ್ಮನೋಡಿಲ್ಲ, ಇನ್ನು ಚರಿತ್ರೆಯಾಗುವಂಥ ಸಾಧನೆಯನ್ನು ನಾನೇನೂ ನನ್ನ ಜೀವನದಲ್ಲಿ ಮಾಡಿಲ್ಲ. ಹಾಗಾಗಿ ಇದು ಜೀವನ ಚರಿತ್ರೆಯೂ ಅಲ್ಲ. (ಬಾಕಿ:ನನ್ನ ನುಡಿ.) ಎಂದು ತಮ್ಮ ವಿನಯವಂತಿಕೆಯನ್ನು ತೋರಿಸಿದರೂ ಅದು ಗೀತಾರವರ ನೈಜ ಬದುಕಿನ ಕನ್ನಡಿಯಾಗಿದ್ದು. ಮಹತ್ವಾಕಾಂಕ್ಷಿ ಬದುಕಿನ ಎಲ್ಲ ಮಜಲುಗಳನ್ನೂ ದರ್ಶಿಸುವ ಒಬ್ಬ ಹೋರಾಟಗಾರ್ತಿಯ ಸಾಧನೆಯ ಹಾದಿಯ ಹೂವು–

ಮುಳ್ಳುಗಳ ಯಾತನೆ-ತೃಪ್ತಿಗಳ ಕಥಾನಕವಾಗಿದೆ. ಕಾದಂಬರಿಯ ಕಥಾನಾಯಿಕಿ ಶಾಂತಿಯ ಪಾತ್ರದಲ್ಲಿ ಲೇಖಕಿಯವರು ತಮ್ಮ ನಿಡುಗಾಲದ ಬದುಕಿನಲ್ಲಿ ಅನುಭವಿಸಿದ ಏಳುಬೀಳುಗಳನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ತೆರೆದಿಡುತ್ತಾರೆ. 'ಪ್ರವಾಹದ ವಿರುದ್ಧ ಕೈಕಾಲು ಬಡಿಯುತ್ತಲೇ ಅವಳು ಬದುಕಿಗಾಗಿ ಹೋರಾಡುತ್ತಾಳೆ. ಹಾಗೆ ನೋಡಿದರೆ ಅವಳ ಬದುಕೇ ಹೋರಾಟ. ಗಟ್ಟಿಯಾದ ಧಾರಣ ಶಕ್ತಿಯಿರುವುದರಿಂದಲೇ ತನ್ನ ಜೀವನದೊಂದಿಗೆ ಜಗಳವಾಡುತ್ತ ಅದು ಒಡ್ಡಿದ ಬೆಂಕಿ ಕೊಂಡವನ್ನು ತುಳಿಯುತ್ತ ಅವಳಿನ್ನೂ ಬದುಕಿದ್ದಾಳೆ. ಜೀವನದಲ್ಲಿ ಎಂಥೆಂಥ ಭಯಂಕರ ವಿಷಮ ಪರಿಸ್ಥಿತಿ ಬಂದರೂ ಇನ್ನು ಬದುಕುವುದೇ ಬೇಡ ಅನ್ನುವಂಥ ಅದಮ್ಯ ಅನಿವಾರ್ಯತೆಗಳು ಎದುರಾದಾಗಲೂ ಶಾಂತಿ ಉರುಳಿಗೆ ಕೊರಳು ಕೊಡಲಿಲ್ಲ. ಬೆಂಕಿಗೆ ಮೈಕೊಟ್ಟೋ ರೈಲ್ವೇ ಹಳಿಗಳಿಗೆ ತಲೆಕೊಟ್ಟೋ ಆತ್ಮಹತ್ಯೆಯ ಹಾದಿಗೆ ತಿರುಗುವಂಥ ಹೇಡಿಯಾಗಲಿಲ್ಲ! ಈ ಕಾದಂಬರಿ ಅವಳ ಸಾವು ಬದುಕಿನ ಕಥೆ.' ಎನ್ನುವ ಕಾದಂಬರಿಯ ಮಾತುಗಳು ಗೀತಾರವರ ಜೀವನ ಗಾಥೆಯೇ ಆಗಿದೆ. ಮತ್ತು ಇದು ಬದುಕಿನಲ್ಲಿ ನೊಂದ ಅನೇಕ ಅಮಾಯಕ, ಹತಾಶ ಹೆಣ್ಣುಮಕ್ಕಳಿಗೆ ದಾರಿದೀಪವೂ ಆಗಿದೆ.

ತಮ್ಮ ಹುಟ್ಟೂರಿನ ರಾಜಕೀಯ ವಿದ್ವೇಷಗಳು, ಕೋಮುಗಲಭೆಗಳು, ಹಿಂದೂ ಮುಸ್ಲಿಂ ದ್ವೇಷ, ಜಾತೀಯತೆ, ಅಸ್ಪೃಶ್ಯತೆ, ಅವಮಾನ, ಮಾನಸಿಕ ಯಾತನೆ-ಎಲ್ಲವನ್ನೂ ಶಾಂತಿ ಅನುಭವಿಸಿದ್ದಾಳೆ. ತಮ್ಮ ಊರಿನ ದೇವರುಗಳು, ನಂಬಿಕೆಗಳು, ಆಚರಣೆಗಳು, ಮೂಢನಂಬಿಕೆಗಳು, ಜೋಗತಿಬಿಡುವುದು, ಬೆತ್ತಲೆ ಸೇವೆ ಮಾಡುವುದು ಇವೆಲ್ಲವನ್ನೂ ಕಂಡು ನೊಂದಿದ್ದಾಳೆ. ಅನೇಕ ಅನುಮಾನ ಪ್ರಶ್ನೆಗಳನ್ನು ಮನದಲ್ಲಿ ತುಂಬಿ ಬಗೆಹರಿಸಲಾಗದಿದ್ದರೂ ಓದಿನ ಬಗ್ಗೆ ಆಸಕ್ತಿ ಮೂಡಿ ಹಳ್ಳಿಯಲ್ಲಿ ಶಾಲೆಗೆ ಹೋದ ಮೊದಲ ಹೆಣ್ಣುಮಗಳಾಗಿ ಯಶಸ್ಸಿನ ಸೋಪಾನದಲ್ಲಿ ಹೆಜ್ಜೆಯಿಟ್ಟು ನಡೆದ ಅನನ್ಯ ವ್ಯಕ್ತಿ, ಶಕ್ತಿಯಾಗಿದ್ದಾಳೆ.

ನಾಗರಿಕ ಪ್ರಜ್ಞೆಯಿಂದ ದೂರವಾಗಿ ಯಾವುದೇ ಕೃತಕತೆಯ ಸೋಂಕಿಲ್ಲದ ನೇರ ನಡೆನುಡಿಗಳಿಂದ ಬದುಕು ಸಾಗಿಸುವ ಅನಕ್ಷರಸ್ಥರೇ ತುಂಬಿದ್ದ ಮಣ್ಣಿನ ಮಕ್ಕಳ ಪ್ರೀತಿ, ವಾತ್ಸಲ್ಯಗಳನ್ನು ಉಂಡವಳು ಶಾಂತಿ (ಗೀತಾ) ಬಡತನವನ್ನು ಹಾಸಿ ಹೊದೆಯುತ್ತಿದ್ದರೂ ಬಾಲ್ಯದಲ್ಲಿ ಹೆತ್ತವರ, ಅಜ್ಜಿ ತಾತಂದಿರ, ಸೋದರ ಮಾವಂದಿರ ಪ್ರೀತಿ, ಸ್ನೇಹಗಳು ಧಂಡಿಯಾಗಿಯೇ ಅವಳಿಗೆ ಲಭಿಸಿದ್ದುವು. ಹಳ್ಳಿಯ ಜನಗಳ ಮುಗ್ಧತೆ, ಅವರ ಬದುಕಿನ ರೀತಿ ನೀತಿಗಳು, ಹೆಣ್ಣುಗಂಡು ಭೇದವಿಲ್ಲದೆ ಹಾಲು, ನೀರು, ಪಾನೀಯಗಳಂತೆ

ಹೆಂಡ, ಸಾರಾಯಿಗಳ ಕುಡಿತ, ಮಾಂಸಾಹಾರ ಸೇವನೆ, 'ಸಂಡೇ' ಆಚರಣೆ, ಜಾತ್ರೆ, ಬಯಲಾಟಗಳ ಆಮೋದ ಪ್ರಮೋದಗಳ ಉಲ್ಲಾಸದ ಅನುಭವ, ಸ್ವಚ್ಛಂದ ವಾತಾವರಣದಲ್ಲಿ ಕಲಬೆರಕೆಯಿಲ್ಲದೆ ಬದುಕು, ದೀಪಾವಳಿ ಹಬ್ಬದ ನೋವು ನಲಿವುಗಳು, ತಾತನ ಊರಾದ ಭೀಮಳ್ಳಿಯ ಕೆರೆಯ ಈಜು – ಶಾಂತಿಯ ಬಾಲ್ಯ ಜೀವನದ ಸಿಹಿಕಹಿ ಅನುಭವಗಳೆಲ್ಲವನ್ನೂ ಗೀತಾರವರು ಈ ಕಾದಂಬರಿಯಲ್ಲಿ ಬಹು ಸುಂದರವಾಗಿ ನಿರೂಪಿಸಿದ್ದಾರೆ.

ಹೆತ್ತವರ ಬಲವಂತದಿಂದ ಆದ ಮೊದಲ ವಿವಾಹ, ತನ್ನಿಷ್ಟಕ್ಕೆ ಆದ ಪುನರ್ವಿವಾಹ, ದಾಂಪತ್ಯಜೀವನದ ಕಷ್ಟ ನಷ್ಟಗಳು, ವೃತ್ತಿಜೀವನದ ಅನುಭವಗಳು, ಸಾಧನೆಯ ಮೈಲಿಗಲ್ಲುಗಳು, ಅಧಿಕಾರ, ಪ್ರತಿಷ್ಠೆಗಳು, ಬರವಣಿಗೆಯ ಹಾದಿಯ ಎಡರು ತೊಡರುಗಳು, ಹೆತ್ತವರ, ಸಮಾಜದ ವಿರೋಧ, ಒಂಟಿತನದ ದುಃಖ ದುಮ್ಮಾನಗಳು, ತಾಯ್ತನದ ಸುಖ, ಸಂತೋಷಗಳು, ನೆರೆಕರೆಯವರ ಸಹಾಯ, ಸಮಾಧಾನಗಳು, ಸಾಧನೆಯ ಉತ್ತುಂಗತೆಗೇರಿದ ಸಾರ್ಥಕತೆ, ಸಂತೋಷಗಳು, ಸಹೃದಯರ ಅಭಿಮಾನ, ಪ್ರೀತಿಗಳು, ಬಾಳಿನ ಮುಸ್ಸಂಜೆಯ ಸಿಹಿಕಹಿ ಅನುಭವಗಳು, ಬದುಕು ಇನ್ನೂ ಬಾಕಿಇದ್ದು ನಿರೀಕ್ಷೆ, ನಿರಾಶೆಗಳ ತೂಗುಲ್ಯಾಲೆಯ ಹಂತದಲ್ಲಿ ಬಾಳಿನ ನೆನಪುಗಳ ಮೆಲುಕಾಟ– ಎಲ್ಲವೂ ಹೃದಯಂಗಮವಾಗಿವೆ. ಆತ್ಮಕಥೆಯಾಗಿಯೂ ಆತ್ಮಕಥೆಯಂತಲ್ಲದೆ ಒಂದು ಸುಂದರ ಸಾಮಾಜಿಕ ಕಾದಂಬರಿಯಂತೆ ನಿರರ್ಗಳವಾಗಿ ಓದಿಸಿಕೊಂಡು ಹೋಗುವ ಅನುಭವದ ಟಂಕಸಾಲೆ 'ಬಾಕಿ'.

**ಕಪ್ಪು ನೆಲ ಕೆಂಪು ಹೂವು**

2013ರಲ್ಲಿ ಮೊದಲ ಮುದ್ರಣ ಕಂಡ ಈ ಕಾದಂಬರಿ 'ಚಿತ್ತಿ ಮತ್ತು ರಿಕ್ಷಾ' ಕತೆಯ ವಿಸ್ತೃತರೂಪ. ಕಥೆಯಲ್ಲಿ ಚಿತ್ತಿಯ ತಂದೆ ಕಾಮಣ್ಣ. ಮಲತಾಯಿ ದುರ್ಗಿ. ಕಾದಂಬರಿಯಲ್ಲಿ ಅವಳ ಹೆತ್ತವರು ತಿಪ್ಪಣ್ಣ ಮತ್ತು ನೀಲಮ್ಮ. ಸಂಸಾರ ಸುಂದರವಾಗಿ ಎಲ್ಲ ಅನುಕೂಲಗಳು ಇದ್ದಾಗಲೇ ನೀಲಮ್ಮ ನಿಗೂಢವಾದ ಕಾಯಿಲೆಯಿಂದ ತೀರಿಹೋಗುತ್ತಾಳೆ. ನೆರೆಹೊರೆಯವರ ಒತ್ತಾಸೆಗೆ ಕಟ್ಟುಬಿದ್ದು ತಿಪ್ಪಣ್ಣ ಎರಡನೆಯ ಮದುವೆ ಮಾಡಿಕೊಳ್ಳುತ್ತಾನೆ. ಐವತ್ತರ ವಯಸ್ಸಿನಲ್ಲಿ ಎರಡನೆ ಹೆಂಡತಿಯಾಗಿ ಮನೆಗೆ ಬಂದ ಬೆಕ್ಕಿನ ಕಣ್ಣಿನ ಮಾಯವ್ವ ಚಿತ್ತಿಗೆ ತಾಯಿಯಾಗಲಿಲ್ಲ.

ಬರಗಾಲದಿಂದ ಮಳೆಬೆಳೆಗಳಿಲ್ಲದೆ ಭೂಮಿ ಬಂಜರು ಬಿದ್ದು ಊರಿಗೇ ಊರೇ ಗುಳೆಎದ್ದು ಹೊರಟಾಗ ತಿಪ್ಪಣ್ಣ ಹೆಂಡತಿ ಮಗಳೊಂದಿಗೆ ಊರುಬಿಟ್ಟು ನಗರಕ್ಕೆ ಬರುತ್ತಾನೆ. ಐದು ರುಪಾಯಿ ಬಾಡಿಗೆಯ ತಗಡಿನ ಮನೆ ಹಿಡಿದು ಕಟ್ಟಡ ನಿರ್ಮಾಣ ಮಾಡುವಲ್ಲಿ ಕೂಲಿಕೆಲಸಕ್ಕೆ ಸೇರುತ್ತಾನೆ. ಮನೆಯಲ್ಲಿ ಮಾಯವ್ವಳ ದರ್ಬಾರು. ಚಿತ್ತಿಗೆ ಅರೆಹೊಟ್ಟೆ, ಹಿಂಸೆ. ಕಟ್ಟಡದ ಕೆಲಸ ಮಾಡುತ್ತಿರುವಾಗಲೇ ಮೆಟ್ಟಲಿನಿಂದ ಕೆಳಗೆ ಬಿದ್ದು ತಿಪ್ಪಣ್ಣ ಸತ್ತುಹೋದಾಗ ಚಿತ್ತಿ ಸಂಪೂರ್ಣ ಅನಾಥಳಾಗುತ್ತಾಳೆ. ಮಾಯವ್ವ ಮುಕ್ಕಣ್ಣನೆಂಬವನ್ನು 'ಉಡಕಿ' ಮಾಡಿ ಚಿತ್ತಿಯನ್ನು ಜೀತದಾಳಿನಂತೆ ಬಳಸುತ್ತಾಳೆ. ಚಿತ್ರಹಿಂಸೆಯನ್ನು ತಾಳಲಾರದೆ ಚಿತ್ತಿ ಮನೆಬಿಟ್ಟು ಪರಾರಿಯಾಗುತ್ತಾಳೆ. ಹಸಿವು ಕಳ್ಳತನಕ್ಕೆ ಪ್ರೇರೇಪಿಸುತ್ತದೆ. ಒಮ್ಮೆ ಸಿಕ್ಕಿಬಿದ್ದು ಹೊಡೆತ ತಿಂದು ಪ್ರಜ್ಞೆ ತಪ್ಪಿದಾಗ ತುಂಗಾನಗರಿಯ ಝೋಪಡಿಪಟ್ಟಿಯ ರಿಕ್ಷಾ ಓಡಿಸುವ ಫಕೀರ ಆರೈಕೆ ಮಾಡಿ ಮನೆಗೆ ಕರೆದುಕೊಂಡು ಹೋಗಿ ಮಗಳಂತೆ ಸಾಕುತ್ತಾನೆ. ಹೆಂಡತಿ ಮಕ್ಕಳಿಲ್ಲದ ಬಡವನಾದ ಆತನ ಮನಸ್ಸು ತುಂಬ ಕರುಣೆ, ಪ್ರೀತಿ. ಅವನ ರಕ್ಷಣೆಯಲ್ಲಿ ಚಿತ್ತಿ ಸೌಂದರ್ಯದ ಖನಿಯಾಗಿ ಎಲ್ಲರ ಆಸೆ, ಬಯಕೆಗಳನ್ನು ಕೆರಳಿಸುವ ಹೆಣ್ಣಾಗುತ್ತಾಳೆ. ಕಾಲುಜಾರಿ ಬಿದ್ದದ್ದೇ ನೆಪವಾಗಿ ಹಾಸುಗೆ ಹಿಡಿದ ಫಕೀರ ಮನೆ ನಡೆಸಲು ಅಸಮರ್ಥನಾದಾಗ ಚಿತ್ತಿಯೇ ರಿಕ್ಷಾ ಓಡಿಸಲು ಆರಂಭಿಸುತ್ತಾಳೆ. ಊರವರ ಕುಹಕ, ಟೀಕೆ, ಟಿಪ್ಪಣಿಗಳಿಗೆ ಕಿವುಡಳಾಗಿ ಸತ್ಯಶುದ್ಧವಾದ ಮಾರ್ಗದಲ್ಲಿ ನಡೆದು ಸ್ವಾಭಿಮಾನದಿಂದ ಬದುಕುತ್ತಾಳೆ.

ಈ ಕಾದಂಬರಿ ಉಳಿದ ಕಾದಂಬರಿಗಳಿಗಿಂತ ಭಿನ್ನವಾಗಿದ್ದು ಹೆಣ್ಣುಮಕ್ಕಳಿಗೆ ಮದುವೆ, ಮಕ್ಕಳು, ಸಾವು ನೋವುಗಳಲ್ಲದೆ ಬದುಕಿನಲ್ಲಿ ಇತರ ಆಯಾಮಗಳೂ ಇವೆಯೆಂಬುದನ್ನು ತೋರಿಸಿದೆ. ಇಲ್ಲಿ ಹೆಣ್ಣಿನ ಸ್ವಾಭಿಮಾನ, ಸ್ವಾವಲಂಬನೆ, ಹೋರಾಟ, ಸಾಹಸ, ಸಾಮರ್ಥ್ಯಗಳ ಬಹುಮುಖೀ ದರ್ಶನವಿದೆ. ಬದುಕಿನಲ್ಲಿ ಸೋಲನ್ನು ಹೇಗೆ ಗೆಲುವಾಗಿ ಪರಿವರ್ತಿಸಬೇಕೆನ್ನುವ ಪಾಠವಿದೆ. ಮದುವೆಯಿಲ್ಲದೆಯೂ ಹೆಣ್ಣು ಗೌರವದಿಂದ ಬದುಕಬಲ್ಲಳು, ಸಾಧನೆಯ ಪಥದಲ್ಲಿ ಎಡರು ತೊಡರುಗಳಿದ್ದರೂ ಛಲ, ಬಲ, ಭರವಸೆ, ಆತ್ಮವಿಶ್ವಾಸಗಳಿದ್ದರೆ ಯಶಸ್ಸಿನ ಬಾಗಿಲು ತಾನಾಗಿ ತೆರೆಯುತ್ತದೆ ಎಂಬುದನ್ನು ತೋರಿಸಿ ಎಲ್ಲ ಮಹಿಳೆಯರಿಗೂ ಉತ್ತಮ ಮಾರ್ಗದರ್ಶನವನ್ನು ನೀಡಬಲ್ಲ ಕೃತಿಯಾಗಿ ಈ ಕಾದಂಬರಿ ಸಾರ್ಥಕವಾಗಿದೆ.

ಈ ಕಥೆಯ ನಾಯಕಿ ಚಿತ್ತಿಯಾದರೂ ಇಲ್ಲಿ ಬರುವ ಇತರ ಕಥಾಪಾತ್ರಗಳೂ ಜೀವನದ ವಿಭಿನ್ನ ಮೌಲ್ಯಗಳಿಗೆ ನಿದರ್ಶನವಾಗುತ್ತಾರೆ. 'ಚಿತ್ತಿ ಮತ್ತು ರಿಕ್ಷಾ' ಕಥೆಗಿಂತ ಕಾದಂಬರಿಯ ಅಂತ್ಯ ಭಿನ್ನವಾಗಿದ್ದು ಕಾದಂಬರಿಕಾರ್ತಿಯ ಪ್ರಗತಿಪರ ನಿಲುವಿಗೆ ಸಾಕ್ಷಿಯಾಗುತ್ತದೆ. ಚಿಕ್ಕಿ ತನ್ನ ಪ್ರಿಯಕರ ಸೋಮುವಿನ ದುರಂತ ಮರಣದಿಂದ ನೊಂದು ಬದುಕಿನ ಗಾಡಿಯನ್ನು ಮುಂದುವರಿಸುವ ನಿರ್ಧಾರವನ್ನು ಮಾಡುತ್ತಾಳೆನ್ನುವಲ್ಲಿ ಕಥೆ ಕೊನೆಯಾದರೆ ಕಾದಂಬರಿಯಲ್ಲಿ ಅವಳ ಸಾಧನೆಯ ಹಾದಿ ಅಲ್ಲಿಂದ ಪ್ರಾರಂಭಗೊಂಡು ತ್ಯಾಗಮಯಿಯಾಗಿ, ವಿವೇಕಿಯಾಗಿ, ಪ್ರೌಢತೆಯ ಸಾಕಾರ ಸ್ವರೂಪಳಾಗಿ ಬೆಳೆಯುತ್ತಾಳೆ. ಕಥೆಯಲ್ಲಿ ಸೋಮುವಿನ ಸಾವು ಅವಳನ್ನು ಅವಿವಾಹಿತಳನ್ನಾಗಿ ಮಾಡಿದರೆ ಕಾದಂಬರಿಯಲ್ಲಿ ವರದಕ್ಷಿಣೆಯ ಕಾರಣಕ್ಕಾಗಿ ಮದುವೆಯನ್ನು ಧಿಕ್ಕರಿಸಿ ಜೀವಮಾನಪರ್ಯಂತ ಒಂಟಿಯಾಗಿ ಬದುಕುವ ನಿರ್ಧಾರವನ್ನು ಮಾಡುತ್ತಾಳೆ. ತನ್ನ ಸಾಕುತಂದೆ ಮತ್ತು ಪ್ರೀತಿಸಿದ ಅಕ್ಕ ರತ್ನಾರಿಗಾಗಿ ಬದುಕನ್ನು ಒತ್ತೆಯಿಡುತ್ತಾಳೆ. ರಿಕ್ಷಾವಾಲಿಗಳ ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷಳಾಗಿ ಅನೇಕ ಮಹಿಳೆಯರಿಗೆ ಬದುಕುವ ದಾರಿಯನ್ನು ಕಲಿಸಿಕೊಡುತ್ತಾಳೆ. ದುಡಿಮೆಯಲ್ಲಿ ಹೆಂಗಸು ಗಂಡಸರೆಂಬ ಭೇದಭಾವವಿಲ್ಲವೆಂದೂ ಗೌರವದಿಂದ ಬಾಳುವುದೇ ಮುಖ್ಯವೆಂದೂ ಸಹೋದ್ಯೋಗಿಗಳಿಗೆ ತಿಳಿಸಿ ಹೇಳುತ್ತಾಳೆ. ದುಡಿದ ಹಣವನ್ನು ಪೋಲುಮಾಡದೆ ಬ್ಯಾಂಕಿನಲ್ಲಿ ಖಾತೆ ತೆರೆದು ಆಪದ್ಧನವಾಗಿ ಉಳಿತಾಯ ಮಾಡುವುದನ್ನು ಕಲಿಸುತ್ತಾಳೆ. ರೂಪಾ ಎಂಬ ಹೆಣ್ಣುಮಗಳಿಗೆ ಸ್ವಾತಂತ್ರ್ಯವೆನ್ನುವುದು ಸ್ವಚ್ಛಂದತೆಗೆ ಕಾರಣವಾಗಬಾರದೆಂದು ಉಪದೇಶಿಸುತ್ತಾಳೆ. ಸಂಘಟನೆಯ ಮೂಲಕ ಹೆಣ್ಣುಮಕ್ಕಳಿಗಾಗುವ ಅನ್ಯಾಯವನ್ನು ಸರಿಪಡಿಸುವ ದಿಸೆಯಲ್ಲಿ ಕಾರ್ಯಪ್ರವೃತ್ತಳಾಗುತ್ತಾಳೆ. ರೂಪಾಳ ಮೇಲೆ ಸಾಮೂಹಿಕ ಅತ್ಯಾಚಾರವಾದಾಗ ಅವಳಿಗೆ ನ್ಯಾಯ ಕೊಡಿಸಲು ಜಿಲ್ಲಾಧಿಕಾರಿಗಳ, ಪೋಲಿಸ್ ಅಧಿಕಾರಿಗಳ ಬಳಿಗೆ ಮೆರವಣಿಗೆ ಹೋಗುತ್ತಾಳೆ. ಘೋಷಣೆ, ಬೀದಿ ನಾಟಕ, ಸಾಕ್ಷ್ಯಚಿತ್ರಗಳ ಮೂಲಕ ಹೋರಾಡಿ ಯಶಸ್ವಿಯಾಗುತ್ತಾಳೆ. ಯಾವ ಪೋಲೀಸ್ ಅಧಿಕಾರಿಗಳಿಗಾಗಲೀ ಮಿನಿಷ್ಟರುಗಳಿಗಾಗಲೀ ಅಂಜದ ಅವಳ ಗಟ್ಟಿ ನಿಲವು, ದಿಟ್ಟತನ, ಛಲಗಳಿಗೆ, ಬಂದೂಕಿನಿಂದ ಗುಂಡು ಸಿಡಿದಂಥ ಹೋರಾಟದ ದನಿಗೆ, ಸವಾಲುಗಳಿಗೆ ನಗರದ ಜನತೆ ಮೂಕವಿಸ್ಮಿತರಾಗುತ್ತಾರೆ. (427) ಚಿತ್ತಿಯ ಪಾತ್ರದ ಮೂಲಕ ಅಸಹಾಯಕರಿಗೆ, ದಿನದಲಿತರಿಗೆ ಆತ್ಮಬಲವೇ ಶಕ್ತಿ ಹೋರಾಟವೇ ಯುಕ್ತಿ ಎಂಬುದನ್ನು ಸಾಧಿಸಿ ತೋರಿಸಿದ ಅತ್ಯಂತ ಬೋಧಪ್ರದವಾದ ಕಾದಂಬರಿ

ಇದು. “.. ಈಗ ದುನಿಯಾದಾಗ ಎಲ್ಲಾ ಕಡಿ ಹೊಸಾ ಗಾಳಿ ಬೀಸಲಕತ್ತಾದ ಅದಕ್ಕ ತಕ್ಕಂತ ನಾವೂ ಮುಂದಕ ಬರ್ಬೇಕು ನೋಡು. ನಮ್ಮನಿ ಬಾಗಿಲು, ಕಡಕಿಗೋಳನೂ ತೆರ್ದಿಟ್ಟು ಹೊಸಾ ಗಾಳಿ ಬೆಳಕಾ ಬರೋದಕ್ಕ ಅನುಕೂಲ ಮಾಡಿಕುಡ್ಬೇಕು . ಜಗತ್ತು ಬದಲಾದಂಗ ಅದಕ್ಕ ತಕ್ಕಂಗ ನಾವೂ ಬದಲಾಗ್ಬೇಕು ಮಗಾ ಇಲ್ಲಂದ್ರ ನಾವು ಖೋಟಾ ಸಿಕ್ಕಾ ಆಗಿ ಬಿಡ್ತೀವಿ..'(293) ಎಂಬತ್ತರ ವಯಸ್ಸಿನ ಮುದುಕಿಯ ಅನುಭವದ ಮಾತುಗಳು ಕಾದಂಬರಿಯ ಮುಖ್ಯ ಆಶಯವಾಗಿದೆ.

ಈ ಕಾದಂಬರಿ ಸ್ಥಿತ್ಯಂತರಗೊಂಡ ಸಾಮಾಜಿಕ, ರಾಜಕೀಯ ಬದುಕನ್ನು ನಿಕಟವಾಗಿ ದರ್ಶಿಸಿ ಸರ್ವಸಮಾನತಾ ವಾದವನ್ನು ಎತ್ತಿಹಿಡಿದಿದೆ. ಚಿತ್ತಿ ಹುಟ್ಟಿ ಅವಳಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ ರತ್ನಾ 'ಕಾಲ ಬದಲಾಗಲಕತ್ತಾದ. ನಾವೂ ಅದರ ಜತಿಗಿ ಬದಲಾಗಬೇಕು.. ಇಲ್ಲಂದರ ಉತ್ತಮ ಕುಲದ ಮಂದೆಲ್ಲಾ ನಮಗ ಹಿಂದ ವತ್ತಿ ತಾವೇ ಮುಂದ ಓಡ್ತಾರ. .ನಾವು ಮಾತ್ರ ಇದ್ದಲ್ಲೇ ಇರ್ಬೇಕಾಗ್ತದ ಅವರ ಕೈ ತೆಳಗ ಚಾಕರಿ ಮಾಡ್ಕೋತ.'(80)ಎನ್ನುವುದಾಗಲೀ ಹೊಸಕತೆ ಹೇಳೆಂದು ದುಂಬಾಲು ಬಿದ್ದ ಚಿತ್ತಿಗೆ 'ರಾಜಾ ರಾಣಿ ಬಿಟ್ಟೇನು ಬಿಕ್ಕಿ ಬೇಡವರ ಮ್ಯಾಲ ಯಾರರೆ ಕತಿ ಕಟ್ಟಿ ಹೇಳ್ತಾರೇನು ಕೋಡಿ..' ಎಂದು ಅಜ್ಜಿ ಕೇಳಿದರೆ 'ಯಾಕ ಹೇಳಬಾರ್ದು? ಬಿಕ್ಕಿ ಬೇಡವರ ಮ್ಯಾಲ ಬಡೂ ಮಂದಿ ಮ್ಯಾಲನೂ ಕತಿ ಕಟ್ಟಬೇಕವ್ವ. ಅವರೂ ಮನಶ್ಯಾರಲ್ಲೇನು ಮತ್ತ..' ಎನ್ನುವ ಚಿತ್ತಿಯ ಪ್ರಶ್ನೆಯಾಗಲೀ (85) ಗಮನಾರ್ಹವಾಗಿದ್ದು ಕಾದಂಬರಿಕಾರ್ತಿಯ ಪ್ರಗತಿಪರ ನಿಲುವಿಗೆ ಸಾಕ್ಷಿಯಾಗುತ್ತವೆ.

ಅಲ್ಲಿಲ್ಲಿ ಮಿಂಚುವ ಗಾದೆಗಳು, ನುಡಿಗಟ್ಟುಗಳು, ವರ್ಣನೆಗಳು, ಭಾಷೆ, ಕಾವ್ಯ ಶೈಲಿ ಆಪ್ಯಾಯಮಾನವಾಗಿವೆ. ಹರೆಯದ ಹೆಣ್ಣನ್ನು ನೋಡಿದಾಗ ಇಂದ್ರಿಯ ಲಾಲಸೆಗೆ ಒಳಗಾಗಿ ಸಂಕೋಚ, ನಾಚಿಕೆಗಳಿಲ್ಲದೆ ಹಸಿಹಸಿಯಾಗಿ ತಮ್ಮ ಚಪಲವನ್ನು ತೀರಿಸುವ ಚಿತ್ರವನ್ನೇ ಇತರ ಕಾದಂಬರಿಗಳಲ್ಲಿ ನೋಡಿದ ಸಹೃದಯರಿಗೆ ಇಲ್ಲಿನ ವರ್ಣನೆಗಳು ಉಲ್ಲಾಸದ ಸಿಂಚನವನ್ನು ನೀಡುತ್ತವೆ. ಚಿತ್ತಿ ದೇವೇಂದ್ರರ ಪ್ರೀತಿ 'ಬೆಳಗಿನಲ್ಲಿ ಅರಳುವ ಹೊಚ್ಚ ಹೊಸ ಹುವ್ವಿನಂತೆ, ಬಾನಂಗಳದಲ್ಲಿ ಸರಿದಾಡುವ ಮೋಡಗಳ ಮೋಹಕತೆಗೆ ರೆಕ್ಕೆ ಬಿಚ್ಚಿ ನಲಿದಾಡುವ ನವಿಲಿನ ಮೊಟ್ಟಮೊದಲ ಕುಣಿತದಂತೆ, ವಸಂತ ಋತುವಿನಲ್ಲಿಯ ಕೋಗಿಲೆಯ ಮೊದಲ ಕುಹೂ ಕೂಗಿನಂತೆ, ಹುಣ್ಣಿಮೆಯ ಚಂದಿರ ಹರಿಸುವ

ಬೆಳದಿಂಗಳಿನ ಮೊದಲ ಹನಿಯಂತೆ, ಜೇನು ಹುಟ್ಟಿನಿಂದ ತೊಟ್ಟಿಕ್ಕುವ ಮೊಟ್ಟಮೊದಲ ಹನಿಯಷ್ಟೇ ಸಿಹಿ ಮಧುರ...'(382–83)ವಾದರೆ ಬರಗಾಲದ ಆಕಾಶ 'ಆಗಸದ ಮೈಯ ಬೆತ್ತಲೆ ಮುಚ್ಚಲು ಹೆಣಗಾಡುವ ಹಿಂಡು ಹಿಂಡು ಚುಕ್ಕಿಗಳು, ಬಿಳಿಜೋಳದ ತುಣುಕಿನಂತಿರುವ ಚಂದಿರ, ತಲೆಕೆದರಿಕೊಂಡು ಎಲ್ಲೋ ಓಡುವ ನಾಕಾರು ಬಿಳಿ, ಬೂದು ಮೋಡಗಳು, ಕ್ಷಣ ಕ್ಷಣಕ್ಕೂ ಹುಟ್ಟಿ ಸಾಯುವ ಚಿಕ್ಕಿಗಳ ಮೂಕ ಬಿಕ್ಕಳಿಕೆ'(178)ಯಾಗುತ್ತದೆ. ಗಟಗಟನೆ ಸಿಂದಿ ಕುಡಿಯುವುದು, ಸೊರಸೊರ ಆವಾಜುಮಾಡುತ್ತ ಚಹಾ ಕುಡಿಯುವುದು ಶಬ್ದ ಚಿತ್ರಕ್ಕೆ ಉತ್ತಮ ಉದಾಹರಣೆ.

ಮಲಗುವಾಗ ತಲೆದಿಂಬಿನ ಬಳಿಯಲ್ಲಿ ನೀರಿನ ಪಾತ್ರೆ ಇಟ್ಟರೆ ದೆವ್ವ, ಭೂತಗಳು ಬರುವುದಿಲ್ಲ, ಬೆಳಗ್ಗೆ ಏಳುವಾಗ ಮುಂಗುಲಿಯನ್ನು ನೋಡಿದರೆ ಶುಭ ಇತ್ಯಾದಿ ಮೂಢನಂಬಿಕೆ, ಸಂಪ್ರದಾಯ, ತರಹಾವರಿ ಅಡುಗೆಗಳ ವಿವರ, ಶಕುನಗಳು, ಹೇನು ಹೆಕ್ಕುವುದು ಇತ್ಯಾದಿ ಗ್ರಾಮ್ಯ ನಡವಳಿಕೆಗಳೆಲ್ಲವೂ ಕಾದಂಬರಿಯ ಒಡಲಲ್ಲಿ ಧಾರಾಳವಾಗಿ ಕಣ್ಣಿಗೆ ಕಟ್ಟುತ್ತವೆ.

### ಕದ್ದು–ಮುಚ್ಚಿ

2016ರಲ್ಲಿ ಬಿಡುಗಡೆಗೊಂಡ ಕಾದಂಬರಿ 'ಕದ್ದುಮುಚ್ಚಿ'. 'ಶೋಷಣೆಯ ಮುಖಗಳು ನೂರಾರು ಸಾವಿರಾರು. ಮುಖವಾಡಗಳ ಸಾವಿರ ಬಣ್ಣಗಳಲ್ಲಿ ಮರೆಯಾಗಿ ಸೀದಾ ಸಾದಾ ಕಾಣುವ ಈ ಮುಖಗಳು ಬೇಟೆಗಾಗಿ ಹೊಂಚುಹಾಕಿ ಕಾಯುವ ಕಾಡು ಮೃಗಗಳಂತೆ ಸದ್ದುಮಾಡದೆ ಬಂದು ಧಡ್ಡಂತ ಅಮಾಯಕರ ಮೇಲೆರಗಿ ಗಂಟಲಿಗೇ ಬಾಯಿ ಹಾಕುತ್ತವೆ. ಹಣದ ಆಮಿಷವನ್ನು ತೋರಿಸಿ ಬಡಜನರ ಅಂಗಾಂಗಗಳನ್ನೇ ಕತ್ತರಿಸಿ ತಮಗೆ ಜೋಡಿಸುತ್ತವೆ. ಕೆಲವರು ಸೌಜನ್ಯದ ಸೋಗಿನಲ್ಲಿ ಭೋಳೇಮಂದಿಯನ್ನು ತಣ್ಣಗಿನ ಕ್ರೌರ್ಯದಿಂದ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಇಂಥ ಪ್ರೀತಿ, ಮಮತೆ, ವಾತ್ಸಲ್ಯಗಳ ಚೌಕಟ್ಟಿನಲ್ಲಿ ಸದ್ದಿಲ್ಲದೆ ಕದ್ದು ಮುಚ್ಚಿ ನಡೆಯುವ ಅಮಾಯಕ ಹೆಣ್ಣಿನ ಶೋಷಣೆಯ ಸುತ್ತ ಹೆಣೆದ ಕಾದಂಬರಿ ಇದು' ಎನ್ನುವ ಕಾದಂಬರಿಕಾರ್ತಿಯ ಮಾತುಗಳೊಂದಿಗೆ ಈ ಕೃತಿಯನ್ನು ಪ್ರವೇಶಿಸಬಹುದು. ಇಲ್ಲಿ ಶೋಷಣೆಗೆ ಒಳಗಾಗುವವಳು ಮೇಲುವರ್ಗದ ಹೆಣ್ಣು. ಜಾತಿಭೇದವಿಲ್ಲದೆ ವರ್ಗಭೇದವಿಲ್ಲದೆ ನಿರಂತರ ಶೋಷಿತಳಾಗುವ ಹೆಣ್ಣನ್ನು ಶೋಷಣೆಯ ಬಲೆಯಿಂದ ಪಾರುಮಾಡಿಸುವ ಕಾರ್ಯವನ್ನು ಮಾಡಿರುವುದು ಈ

ಕಾದಂಬರಿಯ ಹೆಗ್ಗಳಿಕೆ. ವಿಶೇಷವೆಂದರೆ ಇಲ್ಲಿ ಗಂಡು ಕೂಡ ಶೋಷಣೆಗೊಳಗಾಗುತ್ತಾನೆ.

ಮೇಲುವರ್ಗದ ಎರಡು ಸುಬೇದಾರ ಕುಟುಂಬಗಳ ಕಥೆಯನ್ನು ನಿರೂಪಿಸುವ ಈ ಕಾದಂಬರಿಯ ವಸ್ತು ಹೊಸದೇನಲ್ಲ. 'ಕ್ಯಾದಿಗಿ ಬನದಾಗ ಕಥೆಯಾಗಿ ನಿಂತವರು' ಕಥಾಸಂಕಲನದ 'ಗೂಡಿನೊಳಗಿನ ಗುಟ್ಟು' ಮತ್ತು 'ಗರ್ಭ' ಎಂಬ ಎರಡು ಕಥೆಗಳು ಕ್ವಚಿತ್ ಬದಲಾವಣೆಗೊಂಡು ಕಾದಂಬರಿಯಲ್ಲಿ ಮೂಡಿಬಂದಿವೆ.

ಶಿವಳ್ಳಿ ಎಂಬ ಊರಿನ ಶಂಭುಲಿಂಗೇಶ್ವರ ಮಟಕ್ಕೆ ವಲಸೆ ಬಂದ ದಂಪತಿಗಳು ಮಾಂತಯ್ಯ ಮತ್ತು ಗಂಗಮ್ಮ. ಮರಾಠವಾಡಾದ ತಮ್ಮ ಊರು ಭೂಕಂಪಕ್ಕೊಳಗಾದಾಗ ಚೆನ್ನಾಗಿದ್ದ ಮನೆ ಬದುಕುಗಳನ್ನು ಕಳೆದುಕೊಂಡು ಬಂದವರಿಗೆ ಶಿವಳ್ಳಿಯ ಸುಬೇದಾರನ ಮೂಲಕ ಮಟದ ಉಸ್ತುವಾರಿ ಲಭಿಸುತ್ತದೆ. ಮಾದಿಗರ ಧೂಳಪ್ಪ ಮತ್ತು ತಳವಾರ ಸಂಗವ್ವನ ಸಹಾಯದಿಂದ ಅವರಿಗೆ ಹೊಸ ಬದುಕು ಕಟ್ಟಿಕೊಳ್ಳಲು ಸುಲಭವಾಗುತ್ತದೆ. ಧೂಳಪ್ಪ ಮಾದಿಗರ ಕೇರಿಯ ಹಿರಿಯ. ಎಲ್ಲರ ಅನುವು ಆಪತ್ತಿಗೆ ನೆರವಾಗುತ್ತ ಎಲ್ಲರಿಗೂ ಬೇಕಾದವನು. ಕುಲದಲ್ಲಿ ಮಾದಿಗನಾದರೂ ಗುಣದಲ್ಲಿ ಉತ್ತಮ ಕುಲದವರಿಗಿಂತ ಎತ್ತರದಲ್ಲಿದ್ದ.

ಸಂಗವ್ವ ಒಂಟಿ ಹೆಂಗಸು. ಗಂಡ ಜಮೀನ್ದಾರನೊಬ್ಬನ ಆಳಾಗಿದ್ದು ಅವನ ಸಲುವಾಗಿ ಕೊಲೆಗೀಡಾದಾಗ ಹರೆಯದಲ್ಲೇ ವಿಧವೆಯಾಗಿ ಊರು ಬಿಟ್ಟು ಶಿವಳ್ಳಿಗೆ ಬಂದಿದ್ದಳು. ಮಸೂಟಗಿಯ ಹಣಮಪ್ಪನ ಗುಡಿಯಲ್ಲಿ ಕಸಗುಡಿಸುತ್ತ ಜಮೀನ್ದಾರನ ಹೊಲಗದ್ದೆಗಳಲ್ಲಿ ದುಡಿಯುತ್ತ ತನ್ನ ಜೀವನೋಪಾಯವನ್ನು ನಿರ್ವಹಿಸುತ್ತಿದ್ದಳು. ದೇವರು ದಿಂಡರ ಬಗ್ಗೆ ಮೂಢನಂಬಿಕೆಯಿಲ್ಲದ ವಿಚಾರವಾದಿ ಆಕೆ. ಮಾಂತಯ್ಯ ದಂಪತಿಗಳು ಬ್ರಾಹ್ಮಣರಾದರೂ ಜಾತೀಯತೆಯ ಬಗ್ಗೆ ಅಂಥ ಮಡಿವಂತಿಕೆ ಇಲ್ಲ. ತಳವಾರ ಸಂಗವ್ವನನ್ನು ಮನೆಯೊಳಗೆ ಕರೆದು ತಾವು ಕುಡಿಯುವ ಲೋಟದಲ್ಲೇ ಚಹಾ ಕೊಡುತ್ತಾರೆ. 'ದೇವರಿಗಿ ಯಾವುದೇ ಜಾತಿಕುಲಾ ಅಂತೇನಿಲ್ಲ. ಎಲ್ಲೋರಿಗೂ ಅವನೇ ಹುಟ್ಟಿಸಿದ್ದು. ನಾವೆಲ್ಲೂರೂ ಆ ಶಂಭುಲಿಂಗನ ಮಕ್ಕಳೇ ಇದ್ದೀವಿ.' ಎನ್ನುವುದು ಅವರ ಅಭಿಪ್ರಾಯ. 'ಖರೇವಂದ್ರ ಯಾರಿಗಿನೂ ಏನೂ ಬೇಡಲಾರ್ದಂಗೆ ಬದುಕು ನಡೆಸ್ಬೇಕು.. ಅಂವಾ ದೇವರೇ ಆಗಿರಲಿ, ಮನಶ್ಯಾನೇ

ಆಗಿರಲಿ..' (51) ಎನ್ನುವ ಸ್ವಾಭಿಮಾನಿ. ಊರ ಜನರ ಯೋಗಕ್ಷೇಮ ವಿಚಾರಿಸುವ ಸಲುವಾಗಿಯೇ ಮನೆ ಮನೆಗೆ ಭಿಕ್ಷಾಟನೆಗೆ ಹೋಗುವ ಹೃದಯವಂತ, ಮಾನವೀಯತೆ ಉಳ್ಳವ. ಚಿಕ್ಕಪುಟ್ಟ ಕಾಯಿಲೆಗಳಿಗೆ ಆತ ಔಷಧಿಯನ್ನೂ ಮಾಡುತ್ತಾನೆ.

ಅಂಥ ವ್ಯಕ್ತಿ ಮಾದಿಗರ ಧೂಳಪ್ಪನ ಮಗಳು ಹೊನ್ನಿಯ ಮೇಲೆ ಅತ್ಯಾಚಾರ ಮಾಡುತ್ತಾನೆಂದರೆ! ವಿಧವೆ ಮಗಳಿಗೆ ಎರಡನೆಯ ವರಾನ್ವೇಷಣೆಗೆ ಹೋದ ಸಂದರ್ಭದಲ್ಲಿ ಹೊನ್ನಿಯನ್ನು ಮಟದ ಸ್ವಾಮಿಯ ರಕ್ಷಣೆಯಲ್ಲಿ ಬಿಡುತ್ತಾನೆ ಧೂಳಪ್ಪ. ತನ್ನ ನೀತಿ, ನಿಯತ್ತಿನಿಂದ ಊರಿಗೇ ದೇವರಾಗಿದ್ದ ಮಾಂತಯ್ಯ ಹೊಲಸು ಕೆಲಸಕ್ಕೆ ಮನಸ್ಸು ಮಾಡಿ ತನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯುತ್ತಾನೆ. ಘಟಿಸಿದ ಅಚಾತುರ್ಯಕ್ಕಾಗಿ ಪಶ್ಚಾತ್ತಾಪ ಪಡುತ್ತಾನೆ. ಪಾಪಪ್ರಜ್ಞೆಯಲ್ಲಿ ನರಳುತ್ತಾನೆ. ಹೆಂಡತಿ ಗಂಗಮ್ಮ ಕಾಯಿಲೆಬಿದ್ದು ಸತ್ತುಹೋದಾಗ ಮಗಳು ಶಿವನಿಯನ್ನು ಸುಬೇದಾರ ಶಿವರುದ್ರಯ್ಯನ ಮನೆಯವರಿಗೊಪ್ಪಿಸಿ ತೀರ್ಥಯಾತ್ರೆಯ ನೆಪದಲ್ಲಿ ದೇಶಾಂತರ ಹೋಗುತ್ತಾನೆ. 'ಗೂಡಿನೊಳಗಿನ ಗುಟ್ಟು' ಕತೆಯಲ್ಲಿ ಘಟನೆಗಳು ಸಮಾನವಾಗಿದ್ದರೂ ಅಂತ್ಯ ಬೇರೆಯೇ ತಿರುವನ್ನು ಪಡೆಯುತ್ತದೆ. ಅಲ್ಲಿ ಮಟದಯ್ಯ ಮಾದೇವಯ್ಯ ಮಡದಿ ಸಾಂತವ್ವ. ಮಟದ ಕೆಲಸಕ್ಕೆ ಬರುತ್ತಿದ್ದ ಗಿನ್ಯಾನಿ ಎಂಬ ದಲಿತ ವಿಧವೆಯ ತಂದೆ ಮಗಳಿಗೆ ಉಡುಕಿ ಮಾಡಲು ಸನಾದಿ ಅಪ್ಪಣ್ಣನೆಂಬ ವಿಧುರನನ್ನು ಗೊತ್ತು ಮಾಡಲು ಹೋದಾಗ ಮಟದಲ್ಲಿ ಮಲಗಲು ಬಂದ ಗಿನ್ಯಾನಿಯ ಮೇಲೆ ಮಾದೇವಯ್ಯ ಬಲಾತ್ಕಾರ ಮಾಡಲು ಪ್ರಯತ್ನಿಸುತ್ತಾನೆ. ಅನಂತರ ಹೆಂಡತಿಗೆ ದ್ರೋಹ ಬಗೆದೆನೆಂಬ ಚಿಂತೆಯಲ್ಲಿ ಕೊರಗುತ್ತಿರುತ್ತಾನೆ. ಆದರೆ ಕೊನೆಯಲ್ಲಿ ಹೆಂಡತಿ ಸಾಂತಮ್ಮ ಸಮಗಾರ ಅಪ್ಪಣ್ಣನೊಂದಿಗೆ ಹಾದರ ಮಾಡುತ್ತಿದ್ದ ವಿಚಾರ ತಿಳಿಯುತ್ತದೆ. ಆದರೆ ಕಾದಂಬರಿಯಲ್ಲಿ ಗಂಗಮ್ಮ ಶುದ್ಧಚಾರಿತ್ರ್ಯವುಳ್ಳ ಗರತಿಯಾಗಿಯೇ ಚಿತ್ರಿತಳಾಗಿದ್ದಾಳೆ.

'ಗರ್ಭ' ಕಥೆಯ ವಸ್ತು 'ಕದ್ದುಮುಚ್ಚಿ' ಕಾದಂಬರಿಯ ಉತ್ತರಾರ್ಧದಲ್ಲಿ ಬರುತ್ತದೆ. 'ಗೂಡಿನೊಳಗಿನ ಗುಟ್ಟು' ಕಥೆಯ ಪಾತ್ರಗಳೇ ಇಲ್ಲೂ ಮುಂದುವರಿಯುತ್ತವೆ. ಹೆಸರು ಮಾತ್ರ ಬೇರೆ. 'ಗರ್ಭ'ದ ಈಸೂರಪ್ಪ ಇಲ್ಲಿ ಮಲಕಾರ್ಜುನ, ಗೌರಮ್ಮ ಮತ್ತು ಚಿಕ್ಕಿಯರು ಇಲ್ಲಿ ಕಸ್ತೂರಿ ಮತ್ತು ಶಿವನಿ. ಮಗುವನ್ನು ಪಡೆಯುವ ಕಾರಣಕ್ಕೆ ಕಸ್ತೂರಿ ಶಿವನಿಯನ್ನು ಗಂಡನ ಹಾಸುಗೆಗೆ ಹೋಗಲು ಒಪ್ಪಿಸುವುದು, ಗಂಡನನ್ನು ಒಡಂಬಡಿಸಲು ಪಾಡುಪಡುವುದು,

ಶಿವನಿ ಮೊದಲಸಲ ಮಲಕಾರ್ಜುನನ ಹಾಸಿಗೆಯನ್ನು ಹಂಚಿಕೊಂಡದಿನ ಆತನ ತಾಯಿ ಸುಬೇದಾರ್ತಿಯ ಹಾಸ್ಯದಲ್ಲಿ ಹುದುಗಿದ ಧ್ವನಿ, ಕಸ್ತೂರಿ ಗಂಡನ ಮತ್ತು ಶಿವನಿಯ ಸಂಬಂಧದ ಬಗ್ಗೆ ಭಯಪಡುವುದು, ಶಿವನಿಯ ಗರ್ಭ ತನ್ನದೆಂದು ಸುಳ್ಳುಹೇಳಿ ಮನೆಯವರನ್ನು ನಂಬಿಸಿ ಮುಂಬೈಗೆ ಹೋಗಿ ಹೆರಿಗೆ ಮಾಡಿಸುವುದು, ಹಿಂತಿರುವಾಗ ಸ್ಟೇಷನ್‌ನಲ್ಲಿ ಕಸ್ತೂರಿಗೆ ಹೊಟ್ಟೆ ನೋವಾಗುವುದು, ಶಿವನಿ ಮಗುವನ್ನು ಎತ್ತಿಕೊಂಡು ಯಾವುದೋ ರೈಲು ಹತ್ತಿ ತಪ್ಪಿಸಿಕೊಳ್ಳುವುದು ಪ್ರತಿಯೊಂದು ಅಂಶವೂ ಚಾಚೂ ತಪ್ಪದೆ ಗರ್ಭ ಕತೆಯ ಪುನರಾವರ್ತನೆಯಾಗಿದೆ. ಆದರೆ 'ಗರ್ಭ' ಮತ್ತು 'ಗೂಡಿನೊಳಗಿನ ಗುಟ್ಟು' ಕಥೆಗಳನ್ನು ಓದಿದಾಗ ಆಗುವ ಅನುಭವದ ತೀವ್ರತೆ ಕಾದಂಬರಿಯಲಿಲ್ಲ. ಶೈಲಿಯಲ್ಲಾಗಲೀ ನಿರೂಪಣೆಯಲ್ಲಾಗಲೀ ಅಂಥ ಬಿಗಿ, ಗಟ್ಟಿತನ ಇಲ್ಲ. ಅನೇಕ ಸಂದರ್ಭಗಳಲ್ಲಿ ವಿವರಗಳು ಪುನರಾವರ್ತನೆಯಾಗುವುದೂ ಕತೆಯ ನಿರರ್ಗಳತೆಗೆ ಧಕ್ಕೆಯಾಗುತ್ತದೆ.

ಈ ಕಾದಂಬರಿಯ ವಿಶಿಷ್ಟತೆಯಿರುವುದು ಅದರೊಳಗೆ ಲೇಖಕಿ ನಡೆಸಿದ ಅನೇಕ ಚಿಂತನೆಗಳು. ಆದರೆ ಸ್ಥಿತ್ಯಂತರಗೊಂಡ ಸಾಮಾಜಿಕ, ಧಾರ್ಮಿಕ, ರಾಜಕೀಯ, ವೈಜ್ಞಾನಿಕ ಜಗತ್ತಿನ ನಂಬಿಕೆ, ಮೋಸ, ವ್ಯವಹಾರಗಳನ್ನು ಉದ್ದೇಶಪೂರ್ವಕವಾಗಿಯೇ ತಂದಿರುವುದರಿಂದ ಈ ಆಲೋಚನಾ ಪದರಗಳು ಕೆಲವೊಮ್ಮೆ ಕಾದಂಬರಿಯೊಳಗೆ ಸಾವಯವಗೊಳ್ಳದೆ ಕಥೆಯ ಶಿಲ್ಪದಿಂದ ಹೊರತಾಗಿ ಕಾಣಿಸುತ್ತವೆ. ದಲಿತ ಹೆಂಗಸು ಸಂಗವ್ವ, ಮಾದಿಗರ ಧೂಳಪ್ಪ ಮಟದಯ್ಯನೊಂದಿಗೆ ಧರ್ಮ, ದೇವರುಗಳ ಬಗ್ಗೆ ಮಾಡುವ ಚರ್ಚೆಯಾಗಲೀ (26) ಲೇಖಕಿಯ ಮನೋಭೂಮಿಕೆಯಲ್ಲಿ ಮೂಡುವ ವಿಚಾರಗಳಾಗಲೀ ಕಾದಂಬರಿಯ ಮುಖ್ಯ ಪ್ರಣಾಳಿಕೆಯಿಂದ ಬಳಸುದಾರಿಯತ್ತ ತಿರುಗುತ್ತವೆ.(40) ಸಂಭೋಗದ ಅರ್ಥವಂತಿಕೆ, ಶಿವಲಿಂಗದ ಪರಿಕಲ್ಪನೆ, ದೇವಾಲಯಗಳ ಕೆತ್ತನೆಗಳ ಔಚಿತ್ಯ, ಜೋಕುಮಾರ ಸ್ವಾಮಿಯ ಹಾದರದ ಕಥೆಗಳು, (75–76) ಕಪಟಸನ್ಯಾಸಿಗಳ ಪ್ರಸ್ತಾಪ(93, 209) ಇವೆಲ್ಲವೂ ಕಾದಂಬರಿಯಲ್ಲಿ ಪ್ರಶ್ನಾರ್ಹವಾಗುತ್ತವೆ.

ಈ ಕಾದಂಬರಿ ಅತ್ಯುತ್ತಮ ಜೀವನ ಸಂದೇಶಗಳನ್ನು ರವಾನಿಸುತ್ತದೆ. 'ಕುಲ, ಜಾತಿ ಎಲ್ಲ ಮನುಷ್ಯರೇ ಮಾಡಿದ್ದು...ಆತ್ಮಕ್ಕೆ ಯಾವುದೇ ಜಾತಿ, ಕುಲ ಎನ್ನುವ ಭೇದವಿಲ್ಲ '(21), 'ಗುಡಿ, ಮಠಗಳನ್ನು ಕಟ್ಟಿಸಿದವರು ಉತ್ತಮ ಕುಲದವರಾದರೂ ಆ ಗುಡಿ, ಮಠಗಳಿಗೆ ಕಲ್ಲು, ಕೆಸರು ಹೊತ್ತವರಿಗೆ ಗುಡಿ

ಹೊಸ್ತಿಲು ಮುಟ್ಟಬಾರದು ಅನ್ನುವುದು ಯಾವ ನ್ಯಾಯ? '(31), 'ಪ್ರೀತಿ ಎನ್ನುವುದು ಎಲ್ಲದಕ್ಕಿಂತ ದೊಡ್ಡದು ಪ್ರೀತಿ ಇಲ್ಲದಿದ್ದರೆ ಮಾತು ಮುಂದುವರಿಯುವುದಿಲ್ಲ, ಮೊಗ್ಗು ಅರಳುವುದಿಲ್ಲ, ಬೆಳೆ ಬೆಳೆಯುವುದಿಲ್ಲ. ಸಂಬಂಧ ಉಳಿಯುವುದಿಲ್ಲ. ಪ್ರೀತಿಯೊಂದೇ ಎಲ್ಲದಕ್ಕೂ ಆಧಾರ" (55), 'ದೇಹ ಮೈಲಿಗೆ ಆದರೂ ಮನಸ್ಸು ಮೈಲಿಗೆ ಆಗಬಾರದು' (300)ಇತ್ಯಾದಿ.

ಕಾದಂಬರಿಯಲ್ಲಿ ಮಟದ ಮಾಂತಯ್ಯನಿಗೂ ಮಾದಿಗರ ಧೂಳಪ್ಪನಿಗೂ ಸಂಸಾರ ಮತ್ತು ಸನ್ಯಾಸತ್ವದ ಬಗ್ಗೆ ಒಂದು ಸಂದರ್ಭದಲ್ಲಿ ಸುದೀರ್ಘವಾದ ವೈಚಾರಿಕ ಚರ್ಚೆ ನಡೆಯುತ್ತದೆ. ಜ್ಞಾನಿಯಾದ ಮಾಂತಯ್ಯನಿಗಿಂತ ಅಜ್ಞಾನಿಯೂ ಅನಕ್ಷರಸ್ಥನೂ ಆದ ಧೂಳಪ್ಪನ ವಿಚಾರಧಾರೆಗಳು ಹರಿತವೂ ಮಾರ್ಮಿಕವೂ ಆಗಿರುತ್ತವೆ. ಧೂಳಪ್ಪನ ಸರಳ ವಾದಕ್ಕೆ ಮಾಂತಯ್ಯನೂ ತಲೆಬಾಗುತ್ತಾನೆ.(135–13) ಅನುಭವದ ಪಾಠಗಳು ಶಾಸ್ತ್ರಗಳಿಗಿಂತ ಮೌಲಿಕವಾಗಿರುತ್ತದೆಂದು ತಿಳಿಸುವುದು ಕಾದಂಬರಿಯ ಉದ್ದೇಶವೋ ತಿಳಿಯದು. ವೈಚಾರಿಕತೆಯ ಜತೆಯಲ್ಲಿ ಮೂಢನಂಬಿಕೆಗಳೂ ಹೇರಳವಾಗಿವೆ. ಹುಣಸೆಮರದಲ್ಲಿ ದೆವ್ವಗಳು ವಾಸಮಾಡುವುದು(2), ಬಂಜೆ ಮಕ್ಕಳನ್ನು ಮುಟ್ಟಬಾರದೆನ್ನುವುದು(276), ಸನ್ಯಾಸಿಯ ಶಾಪದಿಂದ ಸುಬೇದಾರ ಕುಟುಂಬಕ್ಕೆ ವಂಶಪಾರಂಪರ್ಯವಾಗಿ ಏಕ ಸಂತಾನ ಪ್ರಾಪ್ತಿಯಾಗುವುದು(271), ಕಾಯಿಲೆಗೆ, ಮಕ್ಕಳಾಗಬೇಕಿದ್ದರೆ ಹಕೀಮನ ಔಷಧಿಗೆ ಮೊರೆಹೋಗುವುದು, ಹರಕೆ, ವ್ರತೋಪವಾಸಗಳನ್ನು ಮಾಡುವುದು, ಹೆಣ್ಣುಮಕ್ಕಳು ಮನೆಯಾಚೆ ಹೋಗಬಾರದೆನ್ನುವುದು, ಬೆಳೆಗೆ ಬೇಲಿ ಎಷ್ಟು ಅಗತ್ಯವೊ ಹೆಣ್ಣಿಗೆ ವಿವಾಹವೂ ಅಷ್ಟೇ ಅಗತ್ಯವೆನ್ನುವುದು, (92)ಮಕ್ಕಳಾಗದಿದ್ದರೆ ಎರಡನೆಯ ಮದುವೆ ಮಾಡಿಸುವುದು ಇತ್ಯಾದಿ.

ಕಾದಂಬರಿಯಲ್ಲಿ ಕೆಲವು ಮನಕಲಕುವ ಸನ್ನಿವೇಶಗಳೂ ಇವೆ. ಸುಬೇದಾರನ ಮಗ ಶಂಭುಲಿಂಗನನ್ನು ಮನಸಾರೆ ಪ್ರೀತಿಸಿ ಬೇರಾರನ್ನೂ ಮದುವೆಯಾಗುವುದಿಲ್ಲವೆಂದು ತೀರ್ಮಾನಿಸಿದ ಶಿವನಿ ಕಸ್ತೂರಿಯ ಪ್ರೀತಿಗೆ ಕಟ್ಟುಬಿದ್ದು ಅವಳ ಮಗುವಿಗೆ ಬಾಡಿಗೆ ತಾಯಿಯಾಗಬೇಕಾದಾಗ ಅವಳ ಮನಸ್ಸಿನ ದ್ವಂದ್ವ, ತುಮುಲಗಳನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ಕಾದಂಬರಿಕಾರ್ತಿ ನಿರೂಪಿಸುತ್ತಾರೆ. ಸಮಾಜವ್ಯವಸ್ಥೆಯ ಬಗ್ಗೆ, ಕಾಮಪ್ರೇಮಗಳ ಬಗ್ಗೆ ಶಿವನಿಯ ಜಿಜ್ಞಾಸೆ ಗಮನಾರ್ಹ.(209) ಕಸ್ತೂರಿಯ ಒತ್ತಾಯದಿಂದ ಶಿವನಿಯ ಬಸಿರಲ್ಲಿ ತನ್ನ ವಂಶದ ಬೀಜವನ್ನು ಬಿತ್ತಬೇಕಾದ ಸಂದರ್ಭದಲ್ಲಿ

ಮಲಕಾಜನಪ್ಪ ಆಡುವ ಮಾತುಗಳು ಇಡೀ ಕಾದಂಬರಿಯ ಜೀವಾಳವಾಗಿದ್ದು ದಲಿತ ಸಂವೇದನೆಗೆ ಸಾಕ್ಷಿಯಾಗುತ್ತವೆ: 'ಆಕಿಗಿ ಅನ್ಯಾಯ ಆಗಬಾರ್ದು ಅನ್ನುವಾಕಿನೂ ನೀನೇ ಮತ್ತಕಿಗಿ ನಮ್ಮ ಸ್ವಾರ್ಥಕ್ಕ ಬಳಸ್ಕೋಬೇಕಂತ ನನಗ ಜುಲುಮಿ ಮಾಡುವಾಕ್ಕಿನೂ ನೀನೇ....ಬಲಹೀನರ ಮ್ಯಾಲ ಬಲವಂತರ ದಬ್ಬಾಳಿಕೆ ಹಿಂದಿನಿಂದಲೂ ನಡ್ಕೊಂಡೇ ಬಂದಾವಲ್ಲ. ದೊಡ್ಡಮೀನು ಸಣ್ಣ ಮೀನುಗೊಳಿಗಿ ತಿಂದು ಬದಕ್ತಾವ..ಹುಲಿ ಚಿಗರಿಗಿ ತಿಂದು ಹೊಟ್ಟೆ ತುಂಬಸ್ಕೋತಾದ.. ಅದೇ ಆನಿಗಿ ತಿಂತಾದೇನು? ಇದೆಲ್ಲಾ ದುನಿಯಾದ ನಿಯಮಾ ಆದಬಿಡು..'(312–313)

ಕಾದಂಬರಿಯ ಕುತೂಹಲಕಾರೀ ಅಂಶವೆಂದರೆ ಪುರುಷರಿಂದ ಶೋಷಣೆಗೊಳಗಾಗುವ ಮಹಿಳೆಯರ ಕಥೆಗಳನ್ನೇ ಬರೆಯುವ ಲೇಖಕಿ ಇಲ್ಲಿ ಮಹಿಳೆಯಿಂದ ಶೋಷಣೆಗೊಳಗಾಗುವ ಪುರುಷಪಾತ್ರವನ್ನು ಚಿತ್ರಿಸಿದ್ದಾರೆ. ಸುಬೇದಾರ ಶಂಭುಲಿಂಗ ಅಂಥ ಒಂದು ಪಾತ್ರ.

**ಕಾದಂಬರಿಗಳ ಸಾರಲೇಖ**

1980ರ ವರೆಗೂ ಶಿಷ್ಟಸಾಹಿತ್ಯ ಪರಂಪರೆಗೆ ಒಗ್ಗುವಂಥ ಜನಪ್ರಿಯ ಕತೆ, ಕಾದಂಬರಿಗಳನ್ನು ಬರೆದ ಗೀತಾ ನಾಗಭೂಷಣರು ಅನಂತರದ ವರ್ಷಗಳಲ್ಲಿ ವಿಶಿಷ್ಟವಾದ ಮಾದರಿಯಲ್ಲಿ ಬರಹವನ್ನು ಗಟ್ಟಿಗೊಳಿಸಿ ನಿಮ್ನಲೋಕದ ನೋವಿನ ಅನುಭವಗಳನ್ನು ಸೃಜನಶೀಲ ಕೃತಿಗಳ ರೂಪದಲ್ಲಿ ಅನಾವರಣ ಮಾಡಿದರು. ಪುರುಷಪ್ರಧಾನ ವ್ಯವಸ್ಥೆಗಳನ್ನು ಪ್ರತಿರೋಧಿಸುವ ಕೃತಿಗಳನ್ನು ಬರೆದು ಅತ್ಯಂತ ಸಂವೇದನಾಶೀಲವಾದ ಆರ್ದ್ರ ಮನಸ್ಸಿನಿಂದ ಅಪರೂಪದ ದಿಟ್ಟ ಹೆಜ್ಜೆಯಿಟ್ಟು ನಿರ್ಲಕ್ಷಿತ ಮಹಿಳೆಯರ ಬದುಕಿನ ಸಂಕೀರ್ಣ ನೆಲೆಗಳನ್ನು ಶೋಧಿಸುತ್ತ ಸಾಗಿದ ಅವರ ವಿಚಾರವಾಹಿನಿಗೆ ದಲಿತ––ಬಂಡಾಯ ಸಾಹಿತ್ಯ ಚಳುವಳಿಯ ಸಂದರ್ಭ ಸೂಕ್ತ ಪ್ರಣಾಳಿಕೆಗಳಾದುವು.

ಕಾದಂಬರಿಯ ವೇದಿಕೆಯಲ್ಲಿ ಬಹುಬಗೆಯ ಪಾತ್ರ, ಸನ್ನಿವೇಶಗಳನ್ನು ಸೃಷ್ಟಿಸಿದ ಗೀತಾ ಶೋಷಿತ ಮಹಿಳೆಯ ಅಂಧಕಾರದ ಲೋಕಕ್ಕೆ ಬೆಳಕಿಂಡಿಯಾದರು. ವಸ್ತು ಒಂದೇ ಆದರೂ ಅದನ್ನು ವಿಭಿನ್ನ ಪಾತ್ರ ಮತ್ತು ಸನ್ನಿವೇಶಗಳಲ್ಲಿ ಪರಿಶೋಧಿಸಿರುವುದು ಅವರ ಕೃತಿಗಳ ವೈಶಿಷ್ಟ್ಯ. ವಸ್ತು ಮಾತ್ರವಲ್ಲ ಉತ್ತರ ಕರ್ನಾಟಕದ ಗ್ರಾಮೀಣ ಜನರ ಅಸಲೀ ಭಾಷೆಯ ಬನಿ, ಬಿಗಿ, ಜೀಕು, ಪರಿಣಾಮ ರಮಣೀಯತೆ ಕೂಡ ಅಭೂತಪೂರ್ವ. ಮರಾಠಿ,

ಉರ್ದು, ಕನ್ನಡ ಬೆರೆತ ಈ ಆಡುಭಾಷೆಯನ್ನು ಸಾಹಿತ್ಯಮಾಧ್ಯಮದಲ್ಲಿ ಇಷ್ಟರಮಟ್ಟಿಗೆ ದುಡಿಸಿಕೊಂಡವರಲ್ಲಿ ಗೀತಾರವರೇ ಸರ್ವಪ್ರಥಮರೆನಿಸುತ್ತದೆ. ಭಾಷಾಮಡಿವಂತಿಕೆಯನ್ನು ಅಲ್ಲಗಳೆದು ತಾವು ಆರಿಸಿದ ವಸ್ತುವಿಗೆ ಅದೇ ಮಣ್ಣಿನ ಭಾಷೆ ಸೂಕ್ತವಾಗಬಲ್ಲುದೆಂದು ಅವರು ಭಾವಿಸಿದ್ದು ಅತ್ಯಂತ ಸಮುಚಿತವಾಗಿದೆ. ತಮ್ಮ ಅನುಭವದ ತೆಕ್ಕೆಯೊಳಗೆ ಸಿಕ್ಕಿದ ಪ್ರತಿಯೊಂದನ್ನೂ ಅನುಭವಿಸಿ ಅರಗಿಸಿ ಸಾಹಿತ್ಯದ ಪರಿಭಾಷೆಯಲ್ಲಿ ಹಿಡಿದಿಟ್ಟ ವಿಧಾನ ಅನನ್ಯವಾದುದು.

ಗೀತಾರವರ ಸಾಹಿತ್ಯಪ್ರಪಂಚದಲ್ಲಿ ವರ್ಣನೆಗೇ ಒಂದು ಅಮೂಲ್ಯ ಸ್ಥಾನವಿದೆ. ಪ್ರತ್ಯೇಕವಾಗಿ ಅಧ್ಯಯನ ಮಾಡಬಹುದಾದಷ್ಟು ವಿಪುಲವಾದ ದ್ರವ್ಯಸಂಪತ್ತು ಅದರಲ್ಲಿದೆ. ಉದಾಹರಣೆಗೆ ಕಾಶಿ ಮತ್ತು ಲಿಂಗರಾಜರ ಪ್ರೇಮಪ್ರಕರಣ ತಿಳಿದಾಗ ತಾಯಿ ಮಲ್ಲವ್ವಳಿಗಾದ ಆಘಾತ: 'ಮಲ್ಲವ್ವನ ಎದೆ ಧಸಕ್ಕೆಂದಿತು. ಯಾವುದೋ ಅಗೋಚರ ಶಕ್ತಿಯೊಂದು ಅವಳನ್ನು ಗಿಡುಗ ಪಾರಿವಾಳದ ಕುತ್ತಿಗೆ ಹಿಡಿದೆಳೆದು ಮ್ಯಾಲಕ್ಕೆ ಜಿಗಿದು ಏಕದಂ ನೆಲಕ್ಕೆ ಕುಕ್ಕಿದಂಗಾಗಿ ಬೆಚ್ಚಿಬಿದ್ದಳು.....ಗ್ವಾಡಿಗೆ ಬಡಿದ ಹೆಣದಂಗೆ ಗಪಚಿಪ್ಪಾಗಿ ಕುಂತುಬಿಟ್ಟಳು!(ಬದುಕು–95) 'ದುಮ್ಮಸು' ಕಾದಂಬರಿಯಲ್ಲಿ ಕೆಳಗೇರಿಯ ಧರಮ್ಯಾನ ಬಡತನದ ವರ್ಣನೆ ಎಷ್ಟು ಸಹಜವಾಗಿದೆಯೆಂದರೆ ಅದನ್ನು ಓದಿಯೇ ಆಸ್ವಾದಿಸಬೇಕು: 'ಒಂದು ತೋಳು ಹರಿದ ಹೊಟ್ಟೆಯ ಬಳಿ ತುಂಡಾದ ಹೊಲಸು ಅಂಗಿ, ಕೆಳಗೆ ಎರಡೂ ಕುಂಡೆಯ ಬಳಿ ಕಿತ್ತುಹೋದ ಖಾಕಿ ನಿಕ್ಕರು, ಕರ್‍ರಗೆ ಹೆಂಚಿನ ಮಸಿಯಂತಿದ್ದ ಧರಮ್ಯಾನ ಮುಖದ ಮೇಲೆ ಅಲ್ಲಲ್ಲಿ ಗಣಜಲದ ಕತಿಗಳು.'(32) ಲವಂಗಿಯ ಕೋಳಿ ಕಳ್ಳತನದ ವರಸೆ ಹೀಗಿದೆ: ಲವಂಗಿ ತಟ್ಟನೆ ಹಾರಿ ಗಬಕ್ಕನೆ ಅದನ್ನು ಹಿಡಿದು ಕರಕ್ಕನೆ ಅದರ ಗೋಣು ಮುರಿದು ಗಸಕ್ಕನೆ ತನ್ನ ಚೀಲದಲ್ಲಿ ಒತ್ತಿಟ್ಟು..'(61) ಬೈಗಳು ಕೂಡ ಅಷ್ಟೇ ವೈವಿಧ್ಯ. ಅವುಗಳ ತರಹಾವರಿ ಪದಗಳು ನಾಲಿಗೆಯಿಂದ ಅದು ಹೇಗೆ ಅಷ್ಟೊಂದು ಲೀಲಾಜಾಲವಾಗಿ, ಪುಂಖಾನುಪುಂಖವಾಗಿ ಹರಿದು ಬರುತ್ತದೆನ್ನುವುದೇ ಅಚ್ಚರಿ. ಅಜ್ಜಿಯರ ನಾಲಗೆಯಲ್ಲಿ ಬರುವ ಪ್ರೀತಿಯ ಬೈಗುಳಗಳಿಗೆ ಕೊನೆಯೇ ಇಲ್ಲ. ಪದಬಳಕೆ, ನುಡಿಗಟ್ಟು, ಶಬ್ದಚಿತ್ರಗಳ ಬಣ್ಣ, ರುಚಿ, ವಾಸನೆ ಎಲ್ಲವೂ ಅದ್ಭುತ. ಭಕ್ಷ್ಯದ ವರ್ಣನೆ ಅದನ್ನು ಆಸ್ವಾದಿಸುವ ವಿಧಾನ ಎಷ್ಟು ಸ್ವಾರಸ್ಯವೆಂದರೆ 'ಕುದಿಯುವ ಖಂಡದ ಚೂರುಗಳನ್ನು ಪ್ರತ್ಯೇಕವಾಗಿ ತೆಗೆದು ಅದಕ್ಕೆ ಕರಿಕಾರ, ಮಸಾಲೆ, ಕೊಬ್ಬರಿಪುಡಿ, ಅಲ್ಲಾ ಬೆಳ್ಳುಳ್ಳಿ

ಹಾಕಿ ಘಾಣ್ಯಾ ಕೊಟ್ಟು ನೀರು ಹಾಕಲಾರ್ದೆ ಬರೇ ಕುಸುಬಿಯೆಣ್ಣ್ಯಾಗೇ ತಾಳಿಸಿ ಕಂಚಿನ ಪರಿಯಾಣದಲ್ಲಿ ತುಂಬಿಸಿ ತಂದಿಟ್ಟು ಮರದಿಂದ ಆಗತಾನೆ ಇಳಿಸಿದ ಅಪ್ಪಟ ಸೇಂದಿಯನ್ನು ಸಿಲಾವರ ಗಿಲಾಸಿಗೆ ಬಗ್ಗಿಸಿ ಗುಟುಕರಿಸಿ ಚೂರುಗಳನ್ನು ಬಾಯಾಡಿಸಿ..... ಇಂಥ ವರ್ಣನೆಗಳು ಆಗಾಗ್ಗೆ ಆವರ್ತಿಸುತ್ತ ಹಳ್ಳಿಯ ಜನರ ಜೀವನಪ್ರೀತಿಯನ್ನು ಅತ್ಯಂತ ರಮಣೀಯವಾಗಿ ಕಣ್ಣಮುಂದೆ ಕಟ್ಟುತ್ತವೆ.

ಮನುಷ್ಯಲೋಕದ ಪ್ರೀತಿ, ಪ್ರಣಯ, ದ್ವೇಷ, ರೋಷಗಳ, ಊಟ ಉಪಚಾರಗಳ ವರ್ಣನೆಯಲ್ಲಿ ಗೀತಾರವರು ಎಷ್ಟು ತನ್ಮಯಗೊಳ್ಳುತ್ತಾರೋ ಪ್ರಕೃತಿ ವರ್ಣನೆಯಲ್ಲಿ ಅದಕ್ಕಿಂತಲೂ ಹೆಚ್ಚು ತಾದಾತ್ಮ್ಯಗೊಳ್ಳುತ್ತಾರೆ. ಆಕಾಶ, ಮೋಡಗಳು, ಸೂರ್ಯ, ಚಂದ್ರ, ನಕ್ಷತ್ರಗಳು ಅವುಗಳ ಬಣ್ಣ, ರೂಪ, ಚಲನೆಗಳು ಕಥಾವಸ್ತುವಿನೊಂದಿಗೆ ಸಾವಯವಗೊಳ್ಳುವ ವಿಧಾನ ಅದ್ಭುತರಮ್ಯ! ಸನ್ನಿವೇಶಗಳ ಗಾಢಪರಿಣಾಮ ಹಾಗೂ ಪಾತ್ರಗಳ ಭಾವತುಮುಲಗಳನ್ನು ಅಭಿವ್ಯಕ್ತಿಸಲು ಪ್ರಕೃತಿಯನ್ನೇ ರೂಪಕಶಕ್ತಿಯಾಗಿಸುವ ಗೀತಾರವರ ಪ್ರತಿಭೆಗೆ ಸಾಟಿಯೇ ಇಲ್ಲ. ಇದಕ್ಕೆ ನಿದರ್ಶನವಾಗಿ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ ಆರಂಭದ ಸೂರ್ಯಾಸ್ತಮಾನದ ವರ್ಣನೆಯನ್ನು ನೋಡಬಹುದು. 'ಮೂಡಲ ದಿಕ್ಕಿನಲ್ಲಿ ತಲೆಯೆತ್ತಿ ಬೆಂಕಿಯುಂಡೆಯಂತೆ ಬಂದ ಸೂರ್ಯ ಬಿಳುಪಿಗೆ ತಿರುಗಿ ಸೊಕ್ಕೇರಿದ ಬಿಳಿಗೂಳಿಯಂತೆ ಗುಟುರು ಹಾಕುತ್ತ, ನೀಲಿ ಆಕಾಶದ ಉದ್ದಕ್ಕೂ ಕುಣಿಯುತ್ತ ಮೆರೆದು ಕೊನೆಗೂ ಪಡುವಣಕ್ಕಿಳಿದು ವೀರ್ಯಸ್ಖಲನ ಹೊಂದಿದ ಮುದಿಯನಂತೆ ತೇಕುತ್ತ ರಕ್ತ ಕಾರಿ ಸತ್ತ... ಸೂರ್ಯನ ಹೆಣವನ್ನು ಮಣ್ಣುಮಾಡಿ ಕತ್ತಲೆ ಏರಿ ನಿಂತಿತು'(1)

ಗೀತಾರವರ ಕೃತಿಗಳಲ್ಲಿ ಲೈಂಗಿಕತೆಗಿರುವ ಸ್ಥಾನ ಬಹುಶಃ ಬದುಕಿನ ಯಾವುದೇ ಕ್ರಿಯೆಗಳಿಗಿಲ್ಲ. ಪ್ರಕೃತಿ, ಪುರುಷರ ಪ್ರತಿಯೊಂದು ಚರ್ಯೆಯ ಹಿಂದೆಯೂ ಅದನ್ನೇ ದರ್ಶಿಸುವ ಗೀತಾರವರು ಅದಕ್ಕೆ ಸಂಬಂಧಿಸಿದಂತೆ ಉಲ್ಲೇಖಿಸುವ ವಿಚಾರ ಅತಿಮುಖ್ಯವಾಗಿದೆ: 'ಹೆಣ್ಣು, ಸಂತಾನ, ಎರೆಭೂಮಿಗಳೆಂದರೆ ಈ ಜನಕ್ಕೆ ಅತಿಯಾಸೆ. ಹಾದರ, ಹೆಣ್ಣುಮಕ್ಕಳು ಇಲ್ಲಿಯ ಸೂಕ್ಷ್ಮಾಂಗಗಳು. ಇಲ್ಲಿಯ ದೇವರುಗಳೂ ಇದು ಬಿಟ್ಟಿಲ್ಲ. ಕಲ್ಬುರ್ಗಿಯ ಹತ್ತಿರದ ಸಣ್ಣ ಹಳ್ಳಿ ಗೋಳ್ಯಾ. ಆ ಗ್ರಾಮದೇವತೆ ಲಕ್ಕವ್ವನ ಪೂಜೆ ಅವಳ ಮುಖಕ್ಕಲ್ಲ. ಜೋಡಿ ನಿತಂಬಗಳಿಗೆ. ಆ ದೇವಿಗೆ ಮುಖವೇ ಇಲ್ಲ! ಬರೀ ದೊಡ್ಡ ದೊಡ್ಡ ಎರಡು ನಿತಂಬಗಳು. ಅವಕ್ಕೆಯೇ ಪೂಜೆ. ಅರಿಶಿಣ, ಕುಂಕುಮ, ಆರತಿ, ಹೂವು, ತೆಂಗುಗಳೆಲ್ಲ. ಲಿಂಗಾಕಾರದ ಜೋಕುಮಾರನ ಮರ್ಮಸ್ಥಾನ ಒಂದು

ಉದ್ದನೆಯ ಒನಕೆ. ಅದನ್ನೇ ಪ್ರಮುಖವಾಗಿ ತೋರಿಸುತ್ತ ದೊಡ್ಡ ದೊಡ್ಡ ಡೊಳ್ಳಿಯಲ್ಲಿ ಜೋಕ್ಯಾನನ್ನು ಹೊತ್ತು ತರುವ ಗಂಗಾಮತದ ತಳವಾರ್ತಿಯರು. ಅವರು ಹಾಡುವ ಹಾಡೂ ಅದೇ. ಹಾರುವರ ಹರೆಯದ ಹೆಣ್ಣುಗಳ ಕಚ್ಚೆ ಕಳಚಿದ, ಹೊಲಗೇರಿ ಹೊಕ್ಕು ಅಲ್ಲಿಯ ಹೆಂಗಸರಿಗಾಗಿ ಓಡಾಡಿ ಹೊಡೆಯಿಸಿಕೊಂಡು ಸತ್ತ ಜೋಕುಮಾರನ ಸಾಹಸ ಚರಿತ್ರೆ. ಗುಡಿಗಳಲ್ಲಿಯ ದೇವರೂ ಅದೇ. ಕೆಳಗೆ ಯೋನಿಯಾಕಾರದ ಪಾನಸೋಪಾನ. ಅದರಲ್ಲಿ ನೆಟ್ಟು ನಿಂತ ಕಪ್ಪಗಿನ ಪುರುಷಲಿಂಗ!' ('ಚಿಕ್ಕಿಯ ಹರೆಯದ ದಿನಗಳು. ಪು.34–35) ಚಿಕ್ಕಿಯ ಕೈಹಿಡಿದುಕೊಂಡು ಸಾವಂತ್ರಿ ಕೂಡ ಇದೇ ಮಾತನ್ನು ಹೇಳುತ್ತಾಳೆ: ' .. 'ಅದಕ ಬಿಟ್ಟು ಈ ದುನಿಯಾದಾಗ ಬ್ಯಾರೆ ಅದಾ ಅರೆ ಏನು ಅಂತೀನಿ. ಒಂದು ಹೊಟ್ಟಿ ಹಸು. ಹಿನಾ ಒಂದು ಅದರ ಕೆಳಗಿನದರ ಹಸು ಇವೆಡ್ಡೂ ತುಂಬದರ ಸಾಕು. ಮನಶ್ಯಾರು ಆರಾಮಾಗಿ ಇರ್ತಾರೆ ನೋಡು.' (ಅದೇ.ಪು114)

ಇದಕ್ಕೆ ಪೂರಕವಾಗಿ 'ಧುಮ್ಮಸು' ಕಾದಂಬರಿಯ ಚಿತ್ರವೊಂದನ್ನು ಅವಲೋಕಿಸಬಹುದು: 'ಕೋಟೆಯ ಬಲಬದಿಯ ಸಾಲು ಮನೆಗಳಂತಿರುವ ಕಲ್ಲು ಮಂಟಪಗಳು ಈಗ ನೂರಾರು ಬಡವರಿಗೆ, ಭಿಕ್ಷುಕರಿಗೆ ತಂಗುದಾಣಗಳಾಗಿವೆ. ಹಮಾಲರು ಡಬ್ಬಲ್ ರೊಟಿ ಮಾರುವವರು, ರಿಕ್ಷಾವಾಲಾಗಳು, ಕೂಲಿಗಳು, ರಸ್ತೆಯ ಕಸ ಆರಿಸಿ ಹೊಟ್ಟೆ ತುಂಬಿಸಿಕೊಳ್ಳುವ ಅನಾಥ ಮಕ್ಕಳೆಲ್ಲ ಚಳಿಮಳೆಗಳ ರಾತ್ರಿ ಕಳೆಯೋದು ಇಲ್ಲಿಯೇ. ಬೇಸಿಗೆಯ ರಾತ್ರಿಗಳಲ್ಲಿಯಂತೂ ಕಲಬುರ್ಗಿಯ ಫುಟ್ ಪಾತ್‌ಗಳೆಲ್ಲ ಅವರವೇ. ಈ ಫುಟ್ಪಾತ್ ವಾಸಿಗಳಿಗೆ ಈ ಕೋಟೆ ಎಲ್ಲ ಕೆಲಸಕ್ಕೂ ಕಮಕ್ ಕಿಮಕ್ ಅನ್ನದೆ ಮೈಯೊಪ್ಪಿಸುತ್ತದೆ. ಕೋಟೆಯ ಬಯಲಲ್ಲಿಯೇ ಹಗಲೆಲ್ಲ ಚಿಂದಿ ಬಟ್ಟೆಯುಟ್ಟು ತನ್ನ ಹೊಟ್ಟೆ, ಕುಂಡಿಗಳನ್ನು ಮುಚ್ಚಿಕೊಳ್ಳಲು ಹೆಣಗಾಡುವ ಬಡತನವು ರಾತ್ರಿ ಮಾತ್ರ ಯಾವ ಮುಲಾಜೂ ಇಲ್ಲದೆ ಇದ್ದ ಬಿದ್ದ ಹರಕು ಮುರಕು ಬಟ್ಟೆಯನ್ನು ಕಿತ್ತೆಸೆದು ಹಾದರಕ್ಕೆ ನಿಲ್ಲುತ್ತದೆ. ಹಗಲು ಹೊಟ್ಟೆಯ ಹಸಿವು, ರಾತ್ರಿ ಅದರ ಕೆಳಗಿನದರ ಹಸಿವು. ಈ ಬಡ, ಕಂಗಾಲ ಮಂದಿಗೆ ಎರಡೂ ಹತ್ತಿಕ್ಕಲಾಗದ ಹಸಿವುಗಳೇ. ಎರಡಕ್ಕೂ ಅಷ್ಟೇ ಹಪಾಹಪಿ. ಅಷ್ಟೇ ಹೊಡೆದಾಟ, ಬಡಿದಾಟ, ರಕ್ತಖೂನಿ, ಖತಲ್, ಪೋಲಿಸು, ಲಾಠಿ, ಲಾಕಪ್ಪು, ಜೈಲು ಇತ್ಯಾದಿಗಳು. ಕಂದಕದ ಕೊಳಕು ನೀರಿನಲ್ಲಿ ಬಿದ್ದು ಸತ್ತ ಹೆಣ್ಣುಗಳಿಗೆ ಲೆಕ್ಕವಿಲ್ಲ, ಒಳಗಡೆ ಹಳುವಿನಲ್ಲಿ ಹುದುಗಿಸಿಟ್ಟ ಹೆಣಗಳು ಉಬ್ಬಿ, ಒಡೆದು, ಸೋರಿ, ಗಬ್ಬುನಾತ ಎಬ್ಬಿಸಿದರೂ ಕೇಳುವವರಿಲ್ಲ. ಆಗೀಗ ಅಷ್ಟಿಷ್ಟು ಪೋಲೀಸರು ಬಂದು ಸುತ್ತಾಡಿ

ಹೋಗುತ್ತಾರೆ, ಆದರೂ ನಡೆಯುವುದು ನಡೆಯುತ್ತಲೇ ಇರುತ್ತದೆ. ಅದನ್ನು ತಡೆದು ನಿಲ್ಲಿಸುವವರಾರೋ.. ಎಂದೋ..(ಪು. 111) ಸಾಹಿತ್ಯ, ಕಲೆಗಳಿಗೆ ನಿಲುಕದ ಕಾಲಗರ್ಭದಲ್ಲಿ ಹೂತುಹೋಗಿರುವ ಲೈಂಗಿಕ ಶೋಷಣೆಯ ಅನೇಕ ಪದರಗಳನ್ನು ಬಹಿರಂಗಗೊಳಿಸುವ ತುರ್ತು ಗೀತಾರವರ ಕಾದಂಬರಿಗಳಲ್ಲಿ ಕಾಣಿಸುತ್ತವೆ. ಹೀಗಾಗಿ ಕೆಲವೊಮ್ಮೆ ಲೈಂಗಿಕತೆಯ ವಿವರಗಳು ರೇಜಿಗೆ ಅನ್ನಿಸುವಷ್ಟು ವಿಪುಲವಾಗುತ್ತವೆ; ಪುನರುಕ್ತಿಗಳೂ ಕಾಣಿಸುತ್ತವೆ.

ಕಾದಂಬರಿಗಳಲ್ಲಿ ನೀತಿಯ ವ್ಯಾಖ್ಯಾನವೂ ವಿಶಿಷ್ಟವಾಗಿದೆ. ಕಾಮ–ಕುಡಿತ–ಹಸಿವು ಕೆಳವರ್ಗದ ಜನಜೀವನದಲ್ಲಿ ಅತ್ಯಂತ ಪ್ರಧಾನವಾದ ಕ್ರಿಯೆಗಳಾದರೂ ಮಾನ ಮರ್ಯಾದೆಗಾಗಿ ಪ್ರಾಣವನ್ನೂ ಕಳೆದುಕೊಳ್ಳುವ, ಶೀಲವನ್ನು ಬಹುದೊಡ್ಡ ಮೌಲ್ಯವನ್ನಾಗಿ ಪರಿಗಣಿಸುವವರೂ ಇಲ್ಲಿದ್ದಾರೆ. ಅದರ ಬಗ್ಗೆ ಯಾವ ಮುಲಾಜಿಲ್ಲದೆ ಲೈಂಗಿಕತೆಯಲ್ಲಿ ಮುಳುಗುವವರೂ ಇದ್ದಾರೆ. ಗಂಡನಿರುವಾಗಲೇ ಕದ್ದುಮುಚ್ಚಿ ಇನ್ನೊಬ್ಬ ಗಂಡಸಿಗೆ ಮೈಯೊಪ್ಪಿಸಿ ಬಸುರಾಗುವವರಿದ್ದಾರೆ. ಹೆಂಡತಿಯೊಂದಿಗೆ ಚೆನ್ನಾಗಿದ್ದಾಗಲೂ ಇತರ ಹೆಂಗಸರ, ಜೋಗತಿಯರ ಮಗ್ಗುಲಲ್ಲಿ ಮೈ ಬಿಸಿ ಮಾಡುವ ಗಂಡಸರಿದ್ದಾರೆ. ಮಕ್ಕಳಾಗದ ಬಂಜೆಯರಿಗೆ ಬಾಡಿಗೆ ತಾಯಿಯಾಗುವವರಿದ್ದಾರೆ. ಮೇಲುಜಾತಿಯವರ ಜಾತೀಯತೆಯ ಅಹಂ ಕೆಡಿಸಲು ವ್ಯಭಿಚಾರ ಮಾಡಿ ಸೇಡು ತೀರಿಸಿದೆ ಅಂದುಕೊಳ್ಳುವವರಿದ್ದಾರೆ. ತಾನು ವೇಶ್ಯಾಗಮನ ಮಾಡುತ್ತಲೇ ತನ್ನ ಹೆಣ್ಣುಮಕ್ಕಳು ಗರತಿ ಗಂಗಮ್ಮನಾಗಿರಬೇಕೆಂದು ಬಯಸುವ ತಂದೆಯರಿದ್ದಾರೆ. ತನ್ನ ಕಚ್ಚೆಹರುಕತನ ಜಗಜ್ಜಾಹೀರಾದರೂ ನಾಚಿಕೆಪಡದೆ ಮಕ್ಕಳು ಹಾದಿತಪ್ಪಿದರೆ ಮಾನ ಹರಾಜಾಯ್ತೆಂದು ಗಲಾಟೆಮಾಡುವವರಿದ್ದಾರೆ. ಗೀತಾರವರು ತಮ್ಮ ಕಥೆಗಳಲ್ಲು ಕಾದಂಬರಿಗಳಲ್ಲೂ ಈ ಅಂಶಗಳನ್ನು ಸಮತೂಕವಾಗಿಯೇ ನಿರೂಪಿಸುತ್ತಾರೆ.

ಕೆಳವರ್ಗದ ಹೆಂಗಸರು ಮೇಲುವರ್ಗದ ಪುರುಷರ ದಬ್ಬಾಳಿಕೆ ಮತ್ತು ಅತ್ಯಾಚಾರಕ್ಕೆ ಒಳಗಾಗುವಂತೆಯೇ ಕೆಳವರ್ಗದ ಪುರುಷರು ಮೇಲುವರ್ಗದ ಮಹಿಳೆಯರ ಲೈಂಗಿಕದಾಹಕ್ಕೆ ಬಲಿಯಾಗಿ ವ್ಯಕ್ತಿತ್ವಹೀನರಾಗಿ ಬದುಕುವಂಥ ಚಿತ್ರಗಳನ್ನೂ ಗೀತಾರವರು ರಚಿಸುತ್ತಾರೆ. 'ನೀಲಗಂಗಾ' ಕಾದಂಬರಿಯಲ್ಲಿ ಗಂಡಸರ ಷಂಡತನವನ್ನು ಹಂಗಿಸುವ ಸನ್ನಿವೇಶವಿದೆ. 'ನಮ್ಮ ಜಾತಿ ಗಂಡಸರು ಬರೇ ಹೆಸರಿಗೆ ಗಂಡಸರೇ ತಂಗೀ.. ನಮ್ ಗಂಡಸರ ಮೀಸಿ ಅಂದ್ರ ಆಡಿನ ಕುತಗ್ಯಾನ ಮಲಿ ಇದ್ದಂಗ. ಹೊಲಗೇರ್‍ಯಾಗ, ಕಬ್ಬಲಗೇರ್‍ಯಾಗ ಗಂಡಸಾಗಿ

ಹುಟ್ಟಿದಕ್ಕಿನ್ನಾ ಅಡವ್ಯಾಗ ಉಡು ಆಗಿ ಹುಟ್ಟಾದು ಬೇಸಿ. ಊರಾಗ ನಾಯಿಗೋಳಿಗೆ ಬೆಲಿ ಅದಾ ... ಮೈಯಾಗ ಸೊಕ್ಕ, ಹಲ್ಲಾಗ ನಲ್ಗಿ ಇದ್ದೂ ನಮ್ ಗಂಡಗೋಳು ಗೋರ್‍ಯಾನ ಹೆಣಗೋಳ್ಹಂಗ ಬದಕತಾವ. ದೊಡ್ಡ ಕುಲದವರ ಕಾಲಾನ ಕೆರು ಆಗಿ ಸಂವ್ಯಾದೇ ಇವುದರ ಬಾಳ್ಯಾ..' (42)ಎನ್ನುವ ಲಚ್ಚಿಗೆ ಉತ್ತರಿಸುತ್ತ ನೀಲಗಂಗಾ 'ಹೊಯಿಂದೇ ಲಚ್ಚಿ, ನಮ್ ಗಂಡಸರಿಗೆ ಎಂದು ಧೈರ್ಯ ಬರ್ತದೋ ಏನೋ.... ಹಾಂಗ ನೋಡಿದ್ರ ನಮ್ ಗಂಡಸ್ರೆಲ್ಲಾ ಕೂಡಿ ಕೈಯಾಗ ಬಡಗಿ, ಬಾಚಿ ಹಿಡಿದು ನಿಂತ್ರ ಈ ಹಾರುಗೋಳು, ದೇಸಾಯಿಗಳೆಲ್ಲಾ ಧೋತರದಾಗೇ ಹೇಲಕೋತ ಉಚ್ಚಿ ಹೊಯ್ಕೋತ ಓಡಿ ಹೋಗ್ತಾರ. ಆದರೆ ಇವರೆಲ್ಲಾ ಎಂದ ಒಂದಾಗಿ ಧೈರ್ಯ ತಂದ್ಕೋಬೇಕೋ.. ಯಾ ಕಾಲಕ್ಕೋ..'(ಅದೇ) ಶೋಧಿತ ಜನ ವರ್ಗದ ಬದುಕಿನಲ್ಲಿ ಗೀತಾರವರು ನಿರೀಕ್ಷಿಸುವ ಬದಲಾವಣೆಗಳಿಗೆ ಸಾಕ್ಷಿಯಾಗಿಯೇ ಇಂಥ ಕತಾ ಪಾತ್ರಗಳು ಜೀವತಾಳುತ್ತವೆ.

ಗೀತಾರವರ ಅನುಭವಗಳ ವಿಶಾಲತೆಯನ್ನು ದರ್ಶಿಸುವ ಕಥಾಪಾತ್ರಗಳ ಬಗ್ಗೆ ಸಹೃದಯರನ್ನು ಕಾಡುವ ಒಂದು ಪ್ರಶ್ನೆಯಿದೆ. ಒಂದು ಪಾತ್ರದ ಗುಣರೂಪ ವರ್ಣನೆ ಆ ಪಾತ್ರದ ನಡವಳಿಕೆಗಳೊಂದಿಗೆ ಸಾವಯವಗೊಳ್ಳಬೇಕಾದುದು ಕಥಾಶಿಲ್ಪದ ದೃಷ್ಟಿಯಿಂದ ಅಗತ್ಯವಾಗುತ್ತದೆ. ಆದರೆ ಇಲ್ಲಿನ ಕೆಲವು ಮಹಿಳಾಪಾತ್ರಗಳು ತಮ್ಮ ಗುಣ, ರೂಪ, ನಡೆ, ನುಡಿಗಳಲ್ಲಿ ಅನನ್ಯರಾಗಿ ವರ್ಣಿತರಾಗಿದ್ದರೂ ಕಾದಂಬರಿಯ ವೇದಿಕೆಯಲ್ಲಿ ಆ ಅನನ್ಯತೆಯನ್ನು ಕಾಪಾಡಿಕೊಳ್ಳುವುದಿಲ್ಲ. ಅವರ ಆದರ್ಶ, ಆವೇಶಗಳು ಪಾತ್ರಗಳ ಒಳಗಿನ ಜೀವದ್ರವ್ಯವಾಗದೆ ಹೊರಗಿನಿಂದ ಆರೋಪಿಸುವ ಮೌಲ್ಯವಾಗಿ ಮಾತ್ರ ನಿಂತುಬಿಡುತ್ತವೆ. ಕೆಲವು ಪಾತ್ರಗಳು ಹದಿಹರೆಯದಲ್ಲಿ ಜೀವನೋತ್ಸಾಹ ಮತ್ತು ಜೀವನಪ್ರೀತಿಗಳನ್ನು ಮೊಗೆಮೊಗೆದು ಅನುಭವಿಸಿದರೂ ಮಧ್ಯವಯಸ್ಸು ದಾಟುವುದರೊಳಗೆ ಎಲ್ಲವನ್ನೂ ಕಳಕೊಂಡು ನಿರ್ಜೀವವಾಗುತ್ತವೆ. ಬದುಕಿನ ಕಹಿ ಅನುಭವಗಳು ಅವರನ್ನು ಅಷ್ಟೊಂದು ಹಣ್ಣುಮಾಡಿದರೂ ಅವರೊಳಗಿನ ಅದಮ್ಯವಾದ ವಿಷಯಲಾಲಸೆ ಅಚ್ಚರಿ ಹುಟ್ಟಿಸುತ್ತದೆ. ನಿಮ್ನ ಬದುಕಿನ ಮೌಢ್ಯಾಚರಣೆ ಹಾಗೂ ಲಿಂಗಸಮಸ್ಯೆಯ ಬಗ್ಗೆ ಇನ್ನಿಲ್ಲದಷ್ಟು ಚಿಂತನೆಯ ಕ್ಷಕಿರಣಗಳನ್ನು ಹರಿಯಿಸಿದ ಗೀತಾರವರು ಶೋಷಿತಲೋಕದ ಇತರ ಆಯಾಮಗಳ ಬಗ್ಗೆಯೂ ತಮ್ಮ ಆಯುಧವನ್ನು ಹರಿತಗೊಳಿಸಬಹುದಿತ್ತು ಎನಿಸುತ್ತದೆ.

ಮಹಿಳಾಶೋಷಣೆಯ ಬಗ್ಗೆ ಪ್ರಖರವಾಗಿ ಸ್ಪಂದಿಸುವ ಲೇಖಕಿ ವ್ಯಷ್ಟಿಪ್ರಜ್ಞೆಯ ನೆಲೆಯಲ್ಲಿ ಮಾತ್ರ ಪ್ರತಿರೋಧಿಸುವ ಸನ್ನಿವೇಶಗಳನ್ನು ಬೆಳೆಸುತ್ತಾರಲ್ಲದೆ ಸಮಷ್ಟಿಯ ನೆಲೆಯಲ್ಲಿ ಮೌನವಾಗಿದ್ದಾರೆಂಬ ಅಭಿಪ್ರಾಯವಿದೆ. ಗೀತಾರವರ ಕಾದಂಬರಿಗಳಲ್ಲಿ ಸಾಂಘಿಕ ಹೋರಾಟ ಅಷ್ಟೊಂದು ಕ್ರಿಯಾಶೀಲವಾಗಿಲ್ಲವೆನ್ನುವುದು ನಿಜವೇ. ಆದರೂ ಆ ವಿಚಾರದಲ್ಲಿ ಅವರು ಸಂಪೂರ್ಣ ನಿರಾಸಕ್ತರಲ್ಲ. 'ಕಪ್ಪುನೆಲ ಕೆಂಪು ಹೂವು' ಮತ್ತು 'ಪ್ರೀತಿಸಿದ್ದು ನಿನ್ನನ್ನೇ' ಮುಂತಾದ ಕಾದಂಬರಿಗಳಲ್ಲಿ ಸಾಂಘಿಕ ಶಕ್ತಿ ಮತ್ತು ಸಾಮುದಾಯಿಕ ಹೋರಾಟದ ಬಗ್ಗೆ ಪ್ರಸ್ತಾಪವಿದೆ. 'ಕಪ್ಪು ನೆಲ ಕೆಂಪು ಹೂವಿ'ನ ಚಿಕ್ಕಿ ಸಂಘಟನೆಯ ಮೂಲಕ ಅನೇಕ ಮಹಿಳಾಕೇಂದ್ರಿತ ಕಾರ್ಯಕ್ರಮಗಳನ್ನು ರೂಪಿಸುತ್ತಾಳೆ. 'ಪ್ರೀತಿಸಿದ್ದು ನಿನ್ನನ್ನೇ' ಎಂಬ ಕಾದಂಬರಿಯಲ್ಲಿ ಕಾರ್ಮಿಕ ಹೋರಾಟದ ಪ್ರಸ್ತಾಪವಿದ್ದು ಅಲ್ಲಿನ ಮುಖ್ಯ ಕಥಾಪಾತ್ರ ಚಂದಾ ಬಟ್ಟೆ ಕಾರ್ಖಾನೆಯಲ್ಲಿ ದುಡಿಯುವ ಸಹಕಾರ್ಮಿಕರೊಂದಿಗೆ ಮಾಲೀಕನ ವಿರುದ್ಧ ಹೋರಾಟದ ಕಣಕ್ಕಿಳಿಯುತ್ತಾಳೆ. ಆದರೂ ಬಹುತೇಕ ಮಹಿಳಾಪಾತ್ರಗಳು ಅಮಾನವೀಯ ಧೋರಣೆ ಮತ್ತು ಊಳಿಗಮಾನ್ಯ ಪದ್ಧತಿಗಳನ್ನು ಸ್ವಶಕ್ತಿಯ ಮೇಲೆ ಮಾತ್ರ ಭರವಸೆಯಿಟ್ಟು ಪ್ರತಿಭಟಿಸಿ ಪ್ರವಾಹದ ವಿರುದ್ಧ ಈಜಲು ಹೋದ ಅನನುಭವಿ ಈಜುಗಾರರಂತಾಗುತ್ತಾರೆ. ಸಮಷ್ಟಿ ಪ್ರಜ್ಞೆಯಲ್ಲಿ ಕ್ರಿಯಾಶೀಲವಾದ ಸಾಮಾಜಿಕ ಕ್ರಾಂತಿಯ ಯಶಸ್ಸಿನ ಬಗೆಗಿನ ಲೇಖಕಿಯ ಅವಿಶ್ವಾಸವೂ ಇದಕ್ಕೆ ಕಾರಣವೆನಿಸುತ್ತದೆ.

ಒಟ್ಟಿನಲ್ಲಿ ಗೀತಾರವರು ತಮ್ಮ ಕತೆ, ಕಾದಂಬರಿಗಳ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಶಿಷ್ಟಸಮಾಜ ಅಸಹ್ಯ ಪಡುತ್ತಿದ್ದ ಲೋಕವೊಂದರ ಅತಿಸೂಕ್ಷ್ಮವಾದ ನೋವಿನ ನೆಲೆಗಳನ್ನೂ ಆರ್ತತೆಗಳನ್ನೂ ಆಪ್ತವಾಗಿಯೂ ರೋಮಾಂಚಕಾರಿಯಾಗಿಯೂ ದರ್ಶನ ಮಾಡಿಸಿದ್ದಾರೆ. ದಲಿತ ಸಂವೇದನೆ ಹಾಗೂ ಮಹಿಳಾಶೋಷಣೆಗೆ ಸಂಬಂಧಿಸಿದಂತೆ ಈ ಬಹುಮುಖೀ ಸಂಸ್ಕೃತಿಯ ಸಮಾಜ ಅಪೇಕ್ಷಿಸಬಹುದಾದ ಸುಧಾರಣೆಯ ಹೊಸಶೋಧಗಳನ್ನು ನಡೆಸಿದ್ದಾರೆ. ಹತಾಶೆಯ ಕತ್ತಲೆಯಲ್ಲಿ ಆಸೆ, ಭರವಸೆಗಳ ಬೆಳಕನ್ನು ತುಂಬಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯ ದಲಿತ ಪ್ರಜ್ಞೆ ಹಾಗೂ ಸ್ತ್ರೀವಾದೀ ಪರಂಪರೆಯ ಹಾದಿಯಲ್ಲಿ ಮೈಲಿಗಲ್ಲುಗಳಾಗಿ ದಾಖಲಾಗಬಲ್ಲ ಮಹತ್ವದ ಕಾಣಿಕೆಗಳನ್ನು ನೀಡಿದ್ದಾರೆ.

ಸೃಜನಶೀಲ ಸಾಹಿತ್ಯವಲ್ಲದೆ ಸಂಶೋಧನ, ಸಂಪಾದನ ಕ್ಷೇತ್ರದಲ್ಲೂ ಗೀತಾರವರ ಕೊಡುಗೆ ಇದೆ. ಇವರ 'ದುರಗ ಮುರಗಿಯವರ ಸಂಸ್ಕೃತಿ' ಎಂಬ ಸಂಶೋಧನ ಹಾಗೂ 'ಖೇಮಣ್ಣ' ಎಂಬ (ತತ್ವಪದಗಳ ಸಂಗ್ರಹ) ಸಂಪಾದಿತ ಕೃತಿಗಳು ಸಹೃದಯರ ಗಮನವನ್ನು ಸೆಳೆದಿವೆ.

**ದುರಗ ಮುರಗಿಯರ ಸಂಸ್ಕೃತಿ**

'ದುರಗ ಮುರಗಿಯರ ಸಂಸ್ಕೃತಿ' ಬುಡಕಟ್ಟು ಜನಾಂಗವೊಂದರ ಬದುಕಿನ ಅಧ್ಯಯನ. ಒಂದು ಜನಾಂಗದ ಮೂಲಭೂತವಾದ ಆಚಾರ, ವಿಚಾರ, ನಡವಳಿಕೆ, ಸಂಪ್ರದಾಯ, ಪರಂಪರೆಗಳು ಆ ಜನಾಂಗದ ಸಂಸ್ಕೃತಿ ಎನಿಸಿಕೊಳ್ಳುತ್ತವೆ. ಜೀವನವಿಧಾನ ಮುಂದುವರಿದುಕೊಂಡು ಬರುವ ಹಂತದಲ್ಲಿ ಇತರ ಸಂಸ್ಕೃತಿಗಳ ಪ್ರಭಾವ, ಪ್ರೇರಣೆಗಳು ಮೂಲ ಆಚಾರವಿಚಾರಗಳಿಗೆ ಬಣ್ಣ ಬಳಿಯುತ್ತವೆ. ಹೊಸ ಸಂಪ್ರದಾಯ, ಸುಧಾರಣೆ, ಆವಿಷ್ಕಾರಗಳೂ ಮೂಲ ಸಂಸ್ಕೃತಿಯ ನೆಲೆ, ಬೆಲೆಗಳನ್ನು ಪರಿವರ್ತಿಸುತ್ತವೆ. ಹೀಗೆ ಪರಿವರ್ತಿತಗೊಂಡ ಪ್ರಕ್ರಿಯೆಗಳನ್ನು ನಾಗರಿಕತೆ ಎನ್ನಬಹುದು. ನಾಗರಿಕತೆ ಬೆಳೆದಂತೆ ಮೂಲ ಸಂಸ್ಕೃತಿ ಮರೆಯಾಗುತ್ತದೆ. ಸಂಸ್ಕೃತಿ ಒಂದು ಕಟ್ಟಡದ ಬುನಾದಿಯಾಗಿದ್ದರೆ ನಾಗರಿಕತೆ ಅದರ ಮೇಲೆ ಕಟ್ಟಿದ ಸೌಧ. ಅಂತರಂಗದ ಆವೇಶ ಸಂಸ್ಕೃತಿಯಾದರೆ ಬಹಿರಂಗದ ವೇಷಭೂಷಣಗಳು ನಾಗರಿಕತೆ ಎನಿಸುತ್ತವೆ. ಇವೆರಡೂ ಒಂದಕ್ಕೊಂದು ಪೂರಕವಾಗಿದ್ದರೂ ಒಂದು ಜನಾಂಗದ ನಿಜದ ದರ್ಶನವನ್ನು ನಿಖರವಾಗಿ ಅರಿಯಬೇಕಿದ್ದರೆ ಆ ಜನಾಂಗದ ಸಂಸ್ಕೃತಿಯ ಅಧ್ಯಯನದಿಂದಷ್ಟೇ ಸಾಧ್ಯ. ಗೀತಾನಾಗಭೂಷಣರು ಸಂಶೋಧನಾತ್ಮಕ ನೆಲೆಯಲ್ಲಿ ಇಂಥ ಒಂದು ಸಂಸ್ಕೃತಿ ಶೋಧವನ್ನು ನಡೆಸಿದ್ದಾರೆ.

ಈ ಕೃತಿಯಲ್ಲಿ ಬರಗೂರು ರಾಮಚಂದ್ರಪ್ಪನವರ ಸುದೀರ್ಘವಾದ ಪ್ರಸ್ತಾವನೆಯೊಂದಿಗೆ ದುರಗಮುರಗಿಯವರ ಸಂಸ್ಕೃತಿಗೆ ಸಂಬಂಧಿಸಿದಂತೆ ಹಿನ್ನೆಲೆ, ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಭಾಷೆ–ಸಾಹಿತ್ಯ, ಆಚರಣೆ ಮತ್ತು ಕಲೆ, ಪ್ರದರ್ಶನಾತ್ಮಕ ಕಲೆಗಳು, ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ಮತ್ತು ಸಮಾರೋಪ ಎಂಬ ಅಧ್ಯಾಯಗಳಿವೆ. ಕೃತಿಯ ಕೊನೆಯ ಅನುಬಂಧದಲ್ಲಿ ದುರಗಮುರಗಿಯರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸೋಬಾನದ ಹಾಡುಗಳು, ಮದುವೆಯ ಹಾಡುಗಳು, ಕಥನಗೀತೆಗಳು, ಒಗಟು ಒಡೆಯುವ

ಹಾಡು, ಕತೆಗಳು, ಪೌರಾಣಿಕ ಕತೆ, ಗಾದೆಗಳು –ಹೀಗೆ ವೈವಿಧ್ಯಪೂರ್ಣ ಮಾಹಿತಿಗಳೂ ಉಪಲಬ್ಧವಾಗುತ್ತವೆ.

ಕರ್ನಾಟಕದಲ್ಲಿ ಸುಮಾರು ಅರವತ್ತೈದಕ್ಕೂ ಹೆಚ್ಚು ಬುಡಕಟ್ಟು ಜನಾಂಗಗಳಿವೆಯೆಂದೂ ಇವರೆಲ್ಲ ಅಲೆಮಾರಿ ಜನಾಂಗದವರಾಗಿದ್ದು ಇವರಲ್ಲಿ ಒಂದು ಪಂಗಡ ದುರುಗಮುರುಗಿಯವರೆಂದೂ ಜೀವನೋಪಾಯಕ್ಕಾಗಿ ಭಿಕ್ಷೆಯನ್ನೇ ಅವಲಂಬಿಸಿ ಬದುಕುವ ಇವರು ಭಾಷೆ, ವೇಷ, ರೂಪ, ರಚನೆ, ಆಚಾರ ವಿಚಾರಗಳಲ್ಲಿ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ್ದು ಈ ಜನಾಂಗದ ಬಗ್ಗೆ ವ್ಯಾಪಕವಾದ ಅಧ್ಯಯನ ಇನ್ನೂ ನಡೆದಿಲ್ಲವೆಂದೂ ಆ ಕೊರತೆಯನ್ನು ಪ್ರಸ್ತುತ ಕೃತಿ ಸ್ವಲ್ಪ ಮಟ್ಟಿಗೆ ನೀಗಿಸಿದೆಯೆಂದೂ ಸಂಶೋಧಕಿ ಹೇಳುತ್ತಾರೆ.

ದುರುಗಮುರುಗಿಯವರಲ್ಲಿ ಪೋತುರಾಜನ ಕುಣಿತ ಮತ್ತು ಬುರುಬುರು ವಾದ್ಯಗಳು ಮಹತ್ವವಾಗಿವೆ. ಭಯಂಕರವಾದ ಮುಖವಾಡದೊಂದಿಗೆ ಕರ್ಕಶವಾಗಿ ಆರ್ಭಟಿಸುತ್ತ ಕುಣಿಯುತ್ತ ಮೈಗೆ ಲಡ್ಡು ಹೊಡೆದುಕೊಂಡು ರಕ್ತ ಚಿಮ್ಮಿಸಿಕೊಳ್ಳುವವನೇ ಪೋತುರಾಜ. ಅವನು ಕುಣಿಯುವ ಸಮಯದಲ್ಲಿ ಅವನ ಹೆಂಡತಿ ನುಡಿಸುವ ವಾದ್ಯವೇ ಬುರುಬುರು ವಾದ್ಯ. ಜನಾಂಗಕ್ಕೆ ಮಾತ್ರ ಸಿಮಿತವಾಗಿರುವ ಈ ಮಹತ್ವದ ವಿಚಾರದೊಂದಿಗೆ ಅವರ ಜನನದಿಂದ ಮರಣದ ವರೆಗಿನ ಆಚಾರವಿಚಾರ, ಸಂಪ್ರದಾಯಗಳನ್ನು ಅನುಲಕ್ಷಿಸಿ ಈ ಪ್ರಬಂಧವನ್ನು ಗೀತಾರವರು ರಚಿಸಿದ್ದಾರೆ.

ಈ ಜನಾಂಗ ಊರ ಹೊರಗಡೆ ಗುಡಿಸಲುಗಳಲ್ಲಿ ನೆಲೆಸಿ ಭಿಕ್ಷಾಟನೆಗೆ ಮಾತ್ರ ಊರೊಳಗೆ ಸಂಚರಿಸುತ್ತ ಗುಂಪಾಗಿ ವಾಸಮಾಡುತ್ತಾರೆ. ಒಂದೇ ಕುಟುಂಬದ ಸುಮಾರು ಮೂವತ್ತು ನಲವತ್ತು ಜನ ಒಂದೇ ಜಾಗದಲ್ಲಿ ಹತ್ತು ಹನ್ನೆರಡು ಗುಡಿಸಲು ಕಟ್ಟಿಕೊಳ್ಳುತ್ತಾರೆ. ವಯಸ್ಸಾದವರು ಗುಡಿಸಲುಗಳಲ್ಲಿದ್ದು ಪುಟ್ಟ ಮಕ್ಕಳನ್ನು ನೋಡಿಕೊಂಡರೆ ಯುವಕರು ಪೋತುರಾಜನ ಮುಖವಾಡ ಧರಿಸಿ ಕುಣಿಯಲು ಹೋಗುತ್ತಾರೆ. ಯವತಿಯರು ಬುರುಬುರು ವಾದ್ಯಗಳನ್ನು ನುಡಿಸುತ್ತಿರುತ್ತಾರೆ. ಬಾಲಕರು ಹಿರಿಯರೊಂದಿಗೆ ಕುಣಿತದ ಅಭ್ಯಾಸ ಮಾಡುತ್ತಿದ್ದರೆ ಬಾಲಕಿಯರು ಭಿಕ್ಷೆ ಬೇಡಲು ಹೋಗುತ್ತಾರೆ.

ಕರ್ನಾಟಕದ ಗುಲ್ಬರ್ಗಾ, ಬೀದರ್, ರಾಯಚೂರು, ಬಿಜಾಪುರಗಳ ಅನೇಕ ತಾಲೂಕುಗಳಲ್ಲಿ ಹೆಚ್ಚಾಗಿ ನೆಲಸಿರುವ ಇವರ ಜನಸಂಖ್ಯೆ ಕರ್ನಾಟಕದಲ್ಲಿ

ಸುಮಾರು ಐದರಿಂದ ಹತ್ತು ಸಾವಿರದವರೆಗಿದ್ದು ಇತ್ತೀಚೆಗೆ ಅದೂ ಕಡಿಮೆಯಾಗುತ್ತದೆಂದು ಅಂದಾಜುಮಾಡಲಾಗಿದೆ.

ದುರುಗ ಮುರುಗಿಯವರೆಂದರೆ ದುರ್ಗಮ್ಮ ಮತ್ತು ಮುರುಗಮ್ಮ (ಆದಿಶಕ್ತಿಯ ಅಥವಾ ಪಾರ್ವತಿಯ ಅವತಾರ) ಶಕ್ತಿದೇವತೆಯ ಆರಾಧಕರು. ಇವರ ಜಾತಿ ಮತ್ತು ದೇಶದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಅವರು ಆಂಧ್ರಮೂಲದವರೆಂದೂ ಮಹಬೂಬ ನಗರದ ಆತ್ಮಕೂರು ತಾಲೂಕಿನ ಗೋಪನಪೇಟೆಯ ಹಳ್ಳಿ ಮೂಲದವರೆಂದೂ ಸಂಶೋಧಕಿ ಗುರುತಿಸುತ್ತಾರೆ. ಶಾಸ್ತ್ರ ಹೇಳುವವರು, ಕವಲೆತ್ತಿನವರು, ಬಾಳಸಂತರು, ದುರುಗಮುರುಗಿಯವರು ಹೀಗೆ ಜೀವನೋಪಾಯಕ್ಕಾಗಿ ಬಗೆಬಗೆಯ ವೃತ್ತಿಗಳನ್ನು ಅವಲಂಬಿಸಿದ ಇವರಲ್ಲಿ ದೇವರ ಹೆಸರಿನಲ್ಲಿ ಜನಗಳನ್ನು ಹೆದರಿಸಿ ಜೋಳ, ಬೇಳೆ, ಅಕ್ಕಿ, ಬಟ್ಟೆಗಳನ್ನು ಪಡೆದುಕೊಳ್ಳುವ ಅಭ್ಯಾಸವೂ ಇದೆ.

ದೇವತೆಯ ಬಗ್ಗೆ ನಂಬಿಕೆ, ಭಯ, ಗೌರವ, ಭಕ್ತಿ ಇದ್ದ ಕಾಲದಲ್ಲಿ ಈ ಜನರು ಪೋತುರಾಜನಾಗಿ ತಮ್ಮ ದೇವತೆಯನ್ನು ಹೊತ್ತುಕೊಳ್ಳುತ್ತ ಊರಿನ ಮುಖ್ಯಸ್ಥಳಗಳಲ್ಲಿ ಅದನ್ನು ಇಳಿಸಿ ಮೈಗೆ ಲಡ್ಡು ಹೊಡೆದು ಕುಣಿಯುವುದೂ ಅವರ ಮಡದಿಯರು ಬುರುಬುರು ವಾದ್ಯಗಳನ್ನು ಬಾರಿಸುವುದೂ ಮಾಡುತ್ತಿದ್ದರೆ ಊರವರೆಲ್ಲ ಮೊರದಲ್ಲಿ ದವಸ ಧಾನ್ಯಗಳನ್ನು ತುಂಬಿಸಿ ಕೊಡುತ್ತಿದ್ದರು. ದೇವತೆಯ ಪೂಜೆಗೆ ಸಾಮಗ್ರಿಗಳನ್ನೂ ಗಂಡ ಹೆಂಡತಿಯರಿಗೆ ಸೀರೆ, ಕುಪ್ಪಸ, ಹಳೆ ಬಟ್ಟೆಗಳನ್ನೂ ಕೊಡುತ್ತಿದ್ದರು. ಆಗ ಬದುಕು ಸುಖಕರವಾಗಿತ್ತು.

ಈ ಜನಾಂಗಕ್ಕೆ ಸುಮಾರು ನಾನ್ನೂರು ವರ್ಷಗಳ ಪ್ರಾಚೀನತೆಯನ್ನು ಗುರುತಿಸುವ ಲೇಖಕಿ ಇವರ ಮನೆತನ, ಗೋತ್ರ(ಬೆಡಗು)ಗಳಿಗೆ ಸಂಬಂಧಿಸಿದಂತೆ ಸೊಗಸಾದ ಒಂದು ಪ್ರಚಲಿತ ಕಥೆಯನ್ನು ಉಲ್ಲೇಖಿಸುತ್ತಾರೆ. ಈ ಬೆಡಗುಗಳಲ್ಲಿ ರಾವಲೊಲು, ದೊಡ್ಡ ರಾವಲೊಲು, ಸಣ್ಣ ರಾವಲೊಲು, ಸಿವರಾವಲೊಲು, ಕೋಟಲು ಹಾಗೂ ದ್ಯಾವನ ಮನಿ, ಸಿಂದ್ಯಾವನ ಮನಿ, ಕಟ್ಟೀಮನಿ ಎಂಬ ಎರಡು ಬಗೆಗಳಿವೆಯೆಂದೂ ಪರಸ್ಪರರಲ್ಲಿ ವಿವಾಹ ಸಂಬಂಧಗಳು ನಡೆಯುತ್ತಿದ್ದುವೆಂದೂ ತಿಳಿಸುತ್ತಾರೆ. ಇವರಲ್ಲೂ ಸಗೋತ್ರವಿವಾಹ ನಿಷಿದ್ಧ.

ಈ ಜನಾಂಗಕ್ಕೆ ದುರಗ ಮುರಗಿಯವರೆಂಬ ಹೆಸರು ಬರಲು ಕಾರಣವಾದ ಹಿನ್ನೆಲೆ ಕೂಡ ಸ್ವಾರಸ್ಯಕರವಾಗಿದೆ. ಕುರಿಸಾಕಾಣಿಕೆ ವೃತ್ತಿಯಾಗಿದ್ದ ಇವರ ಕುಟುಂಬದ ಒಬ್ಬ ಹೆಣ್ಣುಮಗಳು ಕುರಿ ಕಾಯುತ್ತಿದ್ದ ಸಮಯದಲ್ಲಿ ಮಣ್ಣಿನಿಂದ ಒಂದು ಬೊಂಬೆಯನ್ನು ಮಾಡಿ ಕಾಡಿನಲ್ಲಿದ್ದ ಹೂವುಗಳಿಂದ ಅದನ್ನು ಪೂಜಿಸುತ್ತಿದ್ದಳೆಂದೂ ಅನಂತರದಲ್ಲಿ ಅದನ್ನು ಊರಿಗೆ ತಂದರೆ ಗಂಡ ಅದರ ಮುಂದೆ ಕುಣಿಯುತ್ತಿದ್ದನೆಂದೂ ಈಕೆ ಕಟ್ಟಿಗೆಯ ತುಂಡುಗಳಿಂದ ಕೋಲಾಟದ ಕೋಲುಗಳಂತೆ ಬಾರಿಸುತ್ತಿದ್ದಳೆಂದೂ ಅಂದಿನಿಂದ ಜನರು ಅವರನ್ನು ಬುರುಬುರು ಪೋಚಮ್ಮ ಅಂದ್ರೆ ಮರುಗಮ್ಮ ಆಡಿಸುವವರೆಂದು ಕರೆದರೆಂದೂ ಅದೇ ಮುರುಗಮ್ಮ ಮುಂದೆ ಅವರ ಆರಾಧ್ಯ ದೈವವಾಯ್ತೆಂದೂ ಜನಾಂಗದ ಹಿರಿಯರು ಹೇಳುತ್ತಾರೆ.(10) ಕ್ರಮೇಣ ಈ ದೇವತೆಯನ್ನು ಸವಾರೆಮ್ಮ, ಗಜಲಮ್ಮ, ಪೋಜಮ್ಮ, ಎಲ್ಲಮ್ಮ ಎಂದೂ ಕರೆಯತೊಡಗಿದರು. ಮುರುಗಮ್ಮ ಮತ್ತು ದುರುಗಮ್ಮ ಅಕ್ಕತಂಗಿಯರಾದ್ದರಿಂದ ಆ ದೇವತೆಯ ಭಕ್ತಜನಾಂಗಕ್ಕೂ ಆ ಹೆಸರು ಬಂತು.

ಪ್ರಾರಂಭದಲ್ಲಿ ಹೊಟ್ಟೆಪಾಡಿಗಾಗಿ ಕಾಡಿನಲ್ಲಿ ಬೇಟೆಯಾಡುವುದನ್ನೇ ವೃತ್ತಿಯಾಗಿಸಿಕೊಂಡ ಈ ಜನಾಂಗ ಈಗ ಕಾಡು ನಾಡಾದುದರಿಂದ ಉದರಂಭರಣಕ್ಕೆ ಭಿಕ್ಷಾಟನೆಯನ್ನೇ ಅವಲಂಬಿಸಿದ್ದಾರೆ. ಜತೆಯಲ್ಲಿ ಬುರುಬುರು ವಾದ್ಯ, ಪೋತುರಾಜನ ವೇಷ, ಕುಣಿತಗಳೂ ಇರುತ್ತವೆ. ಇವರು ಅಡುಗೆಮಾಡಲು ಮಣ್ಣಿನ ಪಾತ್ರೆಗಳನ್ನೇ ಹೆಚ್ಚಾಗಿ ಬಳಸುತ್ತಿದ್ದು ಇತ್ತೀಚೆಗೆ ಮರ ಹಾಗೂ ಲೋಹದ ಉಪಕರಣಗಳನ್ನೂ ಬಳಸಲಾರಂಭಿಸಿದ್ದಾರೆ. ರಾತ್ರಿ ಮಲಗಲು, ಬಿಸಿಲು ಮಳೆಗಳಿಂದ ರಕ್ಷಿಸಿಕೊಳ್ಳಲು ಕಿಟಿಕಿಗಳಿಲ್ಲದ, ಕುಳಿತು ನುಗ್ಗಬಹುದಾದ ಗುಡಿಸಲು ಅಥವಾ ಡೇರೆಗಳನ್ನು ಕಟ್ಟಿಕೊಂಡು ತಾತ್ಕಾಲಿಕ ವಸತಿ ಸೌಕರ್ಯವನ್ನು ಮಾಡಿಕೊಳ್ಳುತ್ತಾರೆ. ಹೆಂಡ, ಖಂಡಗಳೆಂದರೆ ಇಷ್ಟಪಡುವ ಇವರು ತಮ್ಮ ಗುಡಿಸಲುಗಳ ಮುಂದೆಯೇ ಜಾನುವಾರು, ಕೋಳಿ, ಹಂದಿ ಸಾಕಣೆಯನ್ನೂ ಮಾಡುತ್ತಾರೆ.

ದುರಗ ಮುರಗಿಯವರ ವೇಷಭೂಷಣಗಳು ವಿಶಿಷ್ಟವಾಗಿದ್ದು ಹೆಂಗಸರು ಮತ್ತು ಗಂಡಸರು ಉಡುಗೆ ತೊಡುಗೆಗಳ ಬಗ್ಗೆ ಸಂಶೋಧಕಿ ಸಾಕಷ್ಟು ಮಾಹಿತಿಗಳನ್ನು ದಾಖಲಿಸಿದ್ದಾರೆ. ಮಹಿಳೆಯರಿಗೆ ಮೂಗುತಿ ಪ್ರಧಾನವಾಗಿದ್ದು ಅದೇ ಮುತ್ತೈದೆ ಕುರುಹು ಎಂಬ ನಂಬಿಕೆ ಅವರದು.

ಇವರ ಕುಲಕಸುಬು ದುರ್ಗಮ್ಮ ಅಥವಾ ಮರುಗಮ್ಮನನ್ನು ತಲೆಯ ಮೇಲೆ ಹೊತ್ತು ಭಿಕ್ಷಾಟನೆ ಮಾಡುವುದು. ಹೆಂಗಸರೇ ಭಿಕ್ಷಾಟನೆಯ ಕೆಲಸ ಮಾಡುವುದರಿಂದ ಕೆಲವು ಗಂಡಸರು ಅದಕ್ಕಾಗಿಯೇ ಮೂರ್‍ನಾಲ್ಕು ಮದುವೆ ಆಗುತ್ತಾರೆನ್ನುವುದು ಸ್ವಾರಸ್ಯಕರವಾಗಿದೆ.

ಇವರು ಪರಿಶ್ರಮಿಗಳಲ್ಲವಾದರೂ ಪೋತುರಾಜನಾಗಿ ದೇಹವನ್ನು ರಕ್ತಸುರಿಯುವಷ್ಟು ಭಯಂಕರವಾಗಿ ದಂಡಿಸುವುದು ನೋಡಿದರೆ ಇವರನ್ನು ಧೀರರೆಂದೇ ಕರೆಯಬೇಕಾಗುತ್ತದೆಂದು ಲೇಖಕಿ ಅಭಿಪ್ರಾಯ ಪಡುತ್ತಾರೆ. 'ಅಲಲಲಲಾ..' ಎಂದು ಕೂಗುತ್ತ ಬಯಲಾಟದ ಪಾತ್ರಧಾರಿಗಳನ್ನು ನೆನಪಿಸುವ ಈ ಪೋತುರಾಜರು ಸಾಮಾನ್ಯದಿನಗಳಲ್ಲಿ ಮುಖಕ್ಕೆ ಅರಸಿನ ಬಣ್ಣ ಬಳಿದು ಕಣ್ಣಿಗೆ ಕಾಡಿಗೆ ತೀಡಿ ಗಲ್ಲದ ಮೇಲೆ ಕೆಂಪು ಚುಕ್ಕೆ ಇಟ್ಟು ಹಣೆಗೆ ಕುಂಕುಮ ಹಚ್ಚಿ ಬಂದರೆ ಕೆಲವು ವಿಶೇಷದಿನಗಳಲ್ಲಿ ಮಹಿಷಾಸುರನ ಮುಖವಾಡವನ್ನು ಹಾಕುತ್ತಾರೆ.

ಬುರುಬುರು ವಾದ್ಯ ಬಾರಿಸುತ್ತ ಪೋತುರಾಜನಾಗಿ ಕುಣಿಯುತ್ತ ಅನ್ನದ ದಾರಿ ಕಾಣುವ ಇವರಿಗೆ ಹಾಗೆ ಮಾಡದಿದ್ದರೆ ದೇವಿ ಮುನಿಸಿ ತಾವು ರಕ್ತಕಾರಿ ಸತ್ತುಹೋಗುತ್ತೇವೆ, ವಂಶ ನಿರ್ವಂಶವಾಗುತ್ತದೆನ್ನುವ ನಂಬಿಕೆ. ದೇವಿಯ ಆರಾಧಕರಾಗಿರುವುದರಿಂದ ಶುಕ್ರವಾರ ಮತ್ತು ಮಂಗಳವಾರ ಇವರಿಗೆ ಶುಭದಿನಗಳು. ಅನೇಕ ಮೌಢ್ಯಾಚಾರಗಳೂ, ಶಕುನಗಳ ನಂಬಿಕೆಗಳೂ ಇವರಲ್ಲಿವೆ. ಶುಭದಿನಗಳಾಗಲೀ ಅಶುಭದಿನಗಳಾಗಲೀ ಮಾಂಸಾಹಾರ ಕಡ್ಡಾಯ. ಪ್ರತಿವರ್ಷ ಮರುಗಮ್ಮನ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಜಾತ್ರೆಯಲ್ಲಿ ಪ್ರಾಣಿಬಲಿ ಪ್ರಮುಖ.

ಅನಕ್ಷರಸ್ಥರಾದ ಇವರು ತಮ್ಮ ನಂಬಿಕೆ, ವೃತ್ತಿಗಳಿಗೆ ಬಲವಾಗಿ ಅಂಟಿಕೊಂಡಿದ್ದು ಅದರಿಂದ ಹೊರಗೆ ಬರಲು ಇಚ್ಛಿಸುವುದಿಲ್ಲ. ಆಧುನಿಕ ಜೀವನ ವಿಧಾನಕ್ಕೆ ತೆರೆದುಕೊಳ್ಳುವುದನ್ನು ಇವರು ವಿರೋಧಿಸುತ್ತಾರೆ. ಪ್ರಾಣಿ, ಪಕ್ಷಿಗಳಂತೆ ತಾವೂ ಪ್ರಕೃತಿಯ ಅವಿಭಾಜ್ಯ ಅಂಗವೆಂದು ಭಾವಿಸುವ ಇವರು ಬದುಕಿನಲ್ಲಿ ಕೆಲವು ವಿಶಿಷ್ಟ ವ್ಯವಸ್ಥೆಯನ್ನು ಮಾಡಿಕೊಂಡು ಅದರಂತೆಯೇ ಬದುಕುತ್ತಾರೆ. ಭಿಕ್ಷೆ, ಬೇಟೆ ಮತ್ತು ಪೋತುರಾಜನ ಕುಣಿತವಲ್ಲದೆ ಬೇರೆ ಯಾವ ಮನರಂಜನೆಯ ಕಲೆಗಳು ಇವರಿಗಿಲ್ಲ.

ನಾಗರಿಕ ಜನರ ರೀತಿ ರಿವಾಜುಗಳ ಬಗ್ಗೆ ಸಂಪೂರ್ಣ ಅಜ್ಞಾನಿಗಳಾದ ಇವರಿಗೆ ಜನಾಂಗದ ಹಿರಿಯನೇ ನ್ಯಾಯಾಧೀಶ. ಮುರುಗಮ್ಮನ ಗುಡಿಯ ಕಟ್ಟೆಯೇ ಕೋರ್ಟು. ದೇವಿಯ ಮೂರ್ತಿಯನ್ನು ಮುಟ್ಟಿ ಪ್ರಮಾಣ ಮಾಡುವುದರಲ್ಲೇ ನಂಬಿಕೆ.

ಇವರ ಮಾತೃಭಾಷೆ ತೆಲುಗು. ಆದರೆ ಇವರು ವಲಸೆ ಹೋದಲ್ಲೆಲ್ಲ ಆಯಾ ಸ್ಥಳೀಯ ಭಾಷೆಗಳನ್ನು ಕಲಿತು ತಮ್ಮ ಪೂಜೆ, ವ್ಯವಹಾರಗಳಿಗೆ ಆಯಾ ಭಾಷೆಗಳನ್ನೇ ಬಳಸುತ್ತಾರೆ. ಬುಡಕಟ್ಟು ಜನಾಂಗದವರಾದ ಇವರಲ್ಲಿ ಶಿಷ್ಟ ಸಾಹಿತ್ಯ ಪರಂಪರೆ ಇಲ್ಲ. ತಾವು ಪೂಜಿಸುವ ದೇವಿಯ ಮಹಿಮೆ ಮತ್ತು ಗುಣಗಾನವನ್ನು ಮೌಖಿಕವಾಗಿ ಹಾಡುವ ಸಂಪ್ರದಾಯ ಆಚರಣೆಯಲ್ಲಿರುವ ಇವರಲ್ಲಿ ಜನಪದ ಸಾಹಿತ್ಯ ವಿಪುಲವಾಗಿದೆ. ನೆಲಕ್ಕೆ ಹಸಿರುಕ್ಕುವಷ್ಟು ಸಹಜವಾಗಿ ಮನುಷ್ಯ ಉಸಿರಾಡುವಷ್ಟು ನೈಸರ್ಗಿಕವಾಗಿ ಈ ಜನರು ಹಾಡುಗಳನ್ನು ಹುಟ್ಟಿಸುತ್ತಾರೆ, ಕತೆಗಳನ್ನು ಕಟ್ಟುತ್ತಾರೆ, ಒಗಟುಗಳನ್ನು ಹೇಳುತ್ತಾರೆನ್ನುವುದು ಸಂಶೋಧಕಿಯ ಅಭಿಪ್ರಾಯ.(31)ಜೀವನೋತ್ಸಾಹ ಮತ್ತು ಜೀವನಪ್ರೀತಿ ತುಂಬಿತುಳುಕುವ ಈ ಮಂದಿಯ ಜನಪದ ಸಾಹಿತ್ಯದಲ್ಲೂ ಪ್ರೀತಿ, ಪ್ರೇಮಗಳ ವರ್ಣನೆ ಸಾಕಷ್ಟಿವೆ.

ಈ ಜನಾಂಗ ದೇವಿಯ ಆರಾಧಕರಾಗಿದ್ದರೂ ಪಿತೃಪ್ರಧಾನ ವ್ಯವಸ್ಥೆಯೇ ಇವರಲ್ಲೂ ಚಾಲ್ತಿಯಲ್ಲಿದೆ. ಬಾಲ್ಯವಿವಾಹ ರೂಢಿಯಲ್ಲಿದೆ. ಕನ್ಯಾದಕ್ಷಿಣೆ ಇವರ ಪದ್ಧತಿ. ಮದುವೆಯಾಗುವುದು ಗಂಡಿನ ಮನೆಯಲ್ಲಿ. ಮದುವೆಯಲ್ಲೂ ಇವರಿಗೆ ಹೆಂಡ ಮತ್ತು ಮಾಂಸಾಹಾರವೇ. ಮಕ್ಕಳಾಗದಿದ್ದರೆ ಹೆಂಡತಿಯ ದೋಷವೆಂದೇ ತೀರ್ಮಾನಿಸಿ ಗಂಡಸು ಎರಡನೆಯ ಮದುವೆ ಆಗುತ್ತಾನೆ. ಬಹುಪತ್ನಿತ್ವ ಜಾರಿಯಲ್ಲಿದೆ. ಉಡಕಿ ಅಥವಾ ಕೂಡಾವಳಿ ಮದುವೆಯೂ ನಡೆಯುತ್ತದೆ. ಬಸಿರಾದ ಹೆಣ್ಣುಮಗಳನ್ನು ತಾಯಿ ಮನೆಯವರು ಕರೆದೊಯ್ಯುತ್ತಾರೆ. ಸೀಮಂತದ ಶಾಸ್ತ್ರವಿಲ್ಲವಾದರೂ ಮೊದಲ ಹೆರಿಗೆ ತವರಿನಲ್ಲಿಯೇ ಆಗಬೇಕೆಂಬ ನಂಬಿಕೆ ಇವರಲ್ಲೂ ಇದೆ.

ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ಈ ಜನಾಂಗದ ಅಧ್ಯಯನವನ್ನು ಮಾಡಿದ ಗೀತಾರವರು ದುರಗ ಮುರಗಿಯವರೂ ಊಳಿಗಮಾನ್ಯ ಪದ್ಧತಿಯಿಂದ ಸಾಕಷ್ಟು ನಲುಗಿದವರೆಂದೂ ಇವತ್ತು ಆ ಪದ್ಧತಿ ಇಲ್ಲವಾಗಿದ್ದರೂ ಸಾಮಾಜಿಕವಾಗಿ ಇವರ ಪರಿಸ್ಥಿತಿ ಅತ್ಯಂತ

ಹೀನಾಯವಾಗಿದೆಯೆಂದೂ ಶೋಧಿಸಿದ್ದಾರೆ. ಸ್ಥಿತ್ಯಂತರಗೊಂಡ ಸಾಮಾಜಿಕ ಜನಜೀವನ ಇವರ ಬದುಕಿನ ಮೇಲೂ ಅಗಾಧವಾದ ಪರಿಣಾಮವನ್ನು ಬೀರಿದ್ದು ಆರ್ಥಿಕ ಪರಿಸ್ಥಿತಿ ತುಂಬ ಬಿಗಡಾಯಿಸಿದೆ. ಹೊಟ್ಟೆಪಾಡಿಗಾಗಿ ಅವಲಂಬಿಸಿದ್ದ ಕುಲಕಸುಬನ್ನೇ ಮರೆತು ವಿಭಿನ್ನವಾದ ಕಸುಬುಗಳನ್ನು ಅವಲಂಬಿಸಬೇಕಾದ ಅನಿವಾರ್ಯತೆ ಪ್ರಾಪ್ತವಾಗಿದೆ. ಸಮಾಜದಲ್ಲಿ ಇವರ ಕುಣಿತಕ್ಕೆ ಈಗ ಯಾವ ಕಿಮ್ಮತ್ತೂ ಇಲ್ಲದೆ ಭಿಕ್ಷಾಟನೆಯಿಂದ ಬದುಕುವುದು ಅತ್ಯಂತ ದುಸ್ತರವಾಗಿದೆ. ಬದುಕು ಹೋರಾಟವಾಗ್ತಿದೆ. ವಿದ್ಯಾವಂತರಲ್ಲದ ಇವರು ನಗರಜೀವನದಲ್ಲೂ ಸುಖವಾಗಿಲ್ಲ. ಕೂಲಿಯಾಳುಗಳಾಗಿಯೋ ಕಾರ್ಮಿಕರಾಗಿಯೋ ಜೀತಮಾಡಿ ಜೀವನ ನಿರ್ವಹಣೆ ಮಾಡುವ ಇವರಲ್ಲಿ ಇವತ್ತಿಗೂ ಕೇವಲ ಒಂದೂವರೆ ಶೇಕಡಾ ಜನರಷ್ಟೇ ಆಧುನಿಕತೆಗೆ ಮೈಯೊಡ್ಡಿದ್ದಾರೆನ್ನುವುದನ್ನು ಗೀತಾರವರ ಸಂಶೋಧನೆ ತಿಳಿಸುತ್ತದೆ.

ಇತರ ಬುಡಕಟ್ಟು ಜನಾಂಗದವರೊಂದಿಗೆ ಹೋಲಿಸಿದರೆ ದುರುಗ ಮುರಗಿಯವರು 'ಅಮಾಯಕರು, ಮುಗ್ಧರು, ಭೋಳೇ ಸ್ವಭಾವದ ನಿರುಪದ್ರವಿಗಳು..... ಇವರು ಮೋಸಗಾರರಲ್ಲ, ಕಪಟಿಗಳಲ್ಲ. ಮರುಗಮ್ಮ ದೇವತೆಯ ಭಕ್ತರಾದ ಇವರು ಊರ ಜನರಿಗೆ ಬಲು ಬೇಕಾದವರು, ಪ್ರಿಯರು.'(70)

ಭಾರತ ಅನೇಕ ಬುಡಕಟ್ಟು ಜನಾಂಗಗಳ ತವರು. ಅವರ ಸಂಸ್ಕೃತಿಯೇ ಭಾರತದ ಮೂಲಸಂಸ್ಕೃತಿ. ಸಂಸ್ಕೃತಿಯ ತಾಯಿಬೇರಾದ ಈ ಮುಗ್ಧ ಜನರ ಬಾಳಿಗೆ ಕವಿದಿರುವ ಕೆಲವು ಅನಿಷ್ಠಗಳನ್ನು ತೊಡೆದುಹಾಕಿ ಇವರಲ್ಲಿರುವ ಒಳ್ಳೆಯ ಅಂಶಗಳನ್ನು ಸ್ವೀಕರಿಸುವುದು ನಾಳಿನ ಪೀಳಿಗೆಗೆ ತುಂಬ ಆರೋಗ್ಯಕರ ಎಂಬ ಲೇಖಕಿಯ ಕಾಳಜಿ ಗಮನಾರ್ಹ. ಸಾಕಷ್ಟು ಕ್ಷೇತ್ರಕಾರ್ಯದ ಮೂಲಕ ನಾಮಾವಶೇಷವಾಗುತ್ತಿರುವ ಒಂದು ಅಲೆಮಾರಿ ಬದುಕಿನ ಅಧ್ಯಯನವನ್ನು ಮಾಡಿ ಭಾರತೀಯ ಸಂಸ್ಕೃತಿಯ ಅರಿವು ಮತ್ತು ವಿಕಾಸಕ್ಕೆ ಗೀತಾರವರು ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಕೆಲವು ಪುನರಾವರ್ತನೆಗಳನ್ನು ಹೊರತುಪಡಿಸಿದರೆ ಈ ಕೃತಿ ದುರುಗ ಮುರಗಿ ಜನಾಂಗದ ಬಗ್ಗೆ ಆಳವಾಗಿ ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಆಕರಗ್ರಂಥವಾಗಬಲ್ಲುದು.

## ಇತರ ಸಾಧನೆ

ತಮ್ಮ ಅವಿರತವಾದ ಸಾಹಿತ್ಯ ರಚನೆಯ ಜತೆಜತೆಗೇ ಗೀತಾ ನಾಗಭೂಷಣರು ಡಾ. ಶಿವರಾಮ ಕಾರಂತ ಪ್ರಶಸ್ತಿ ಆಯ್ಕೆ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಚಲನಚಿತ್ರ ಪ್ರಶಸ್ತಿ ಸಮಿತಿ, ರಾಜ್ಯದ ಉತ್ತಮ ಶಿಕ್ಷಕ ಆಯ್ಕೆ ಸಮಿತಿಗಳಲ್ಲಿ ಸದಸ್ಯರಾಗಿಯೂ ಕರ್ನಾಟಕ ಸಾಹಿತ್ಯ ಅಕಾಡೆಮಿ, ದಾನ ಚಿಂತಾಮಣಿ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವಲ್ಲದೆ ಗುಲ್ಬರ್ಗಾ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಶರಣ ಸಾಹಿತ್ಯ ಪರಿಷತ್ತು ಬೆಂಗಳೂರಿನ ಕದಳಿ ಸಮಾವೇಶದ ಅಧ್ಯಕ್ಷರಾಗಿಯೂ ಆಯ್ಕೆಯಾಗಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ 2010ರಲ್ಲಿ ಗದಗದಲ್ಲಿ ನಡೆದ 76ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡು ಸಮಸ್ತ ಮಹಿಳಾ ವರ್ಗಕ್ಕೆ ಹೆಮ್ಮೆಯ ಕೋಡು ಮೂಡಿಸಿದ್ದಾರೆ.

## ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆ

2005ರಿಂದ 08ರವರೆಗೆ ಬೆಂಗಳೂರಿನ ಸಾಹಿತ್ಯ ಅಕಾಡೆಮಿಯ ಮೊತ್ತಮೊದಲ ಮಹಿಳಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಗೀತಾರವರು ಅನೇಕ ಸಂಘಟನೆಗಳೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು. ತಮ್ಮ ಆಡಳಿತಾವಧಿಯಲ್ಲಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನೆರವೇರಿಸಿದ ಇವರು ನಾಡಿನಾದ್ಯಂತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಿರಿಯ ಸಾಹಿತಿಗಳು, ಗಣ್ಯರು, ಚಿಂತಕರನ್ನೊಳಗೊಂಡಂತೆ ಅನೇಕ ವಿಚಾರ ಸಂಕಿರಣಗಳನ್ನು ನಡೆಸಿದ್ದಾರೆ.

ತಮ್ಮ ಅಧಿಕಾರಾವಧಿಯಲ್ಲಿ ಶಿವಮೊಗ್ಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ 'ಕನ್ನಡ ಸಾಹಿತ್ಯ ಮತ್ತು ಸಮೂಹ ಮಾಧ್ಯಮ'' ಎಂಬ ಕಾರ್ಯಕ್ರಮವನ್ನೂ ದ.ಕ.ದ ಮಂಗಳ ಗಂಗೋತ್ರಿಯಲ್ಲಿ ಸಾಹಿತ್ಯ ಮೀಮಾಂಸೆಯನ್ನು ಕುರಿತಂತೆ ಎರಡು ದಿನಗಳ ವಿಚಾರಸಂಕಿರಣವನ್ನೂ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿದ್ದರು. ಮಂಡ್ಯದಲ್ಲಿ ಸಾಹಿತ್ಯ ಪರಿಷತ್ತು ಮತ್ತು ಪಿ.ಇ.ಎಸ್. ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆಸಿದ 'ಪುತಿನ ನೂರರ ನೆನಪು' ಎಂಬ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ ಗೀತಾರವರು ಭಾಷಾ ಮಡಿವಂತಿಕೆಯ ಬಗ್ಗೆ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿದ್ದು ಗಮನಾರ್ಹ. ಮೈಸೂರಿನಲ್ಲಿ

ಕುವೆಂಪು ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ 'ದಲಿತ ಸಾಹಿತ್ಯ ಮತ್ತು ಮೊದಲ ತಲೆಮಾರಿನ ಲೇಖಕರು ' ಎಂಬ ವಿಚಾರ ಸಂಕಿರಣವನ್ನೂ, ಹಾಸನದಲ್ಲಿ ಹೇಮ ಗಂಗೋತ್ರಿ ಹಾಗೂ ಮೈಸೂರು ವಿ.ವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಕವಿಗೋಷ್ಠಿ ಮತ್ತು ವಿಚಾರಸಂಕಿರಣವನ್ನೂ, ದಾವಣಗೆರೆಯಲ್ಲಿ ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತಿನ ಜತೆಯಲ್ಲಿ 'ಕನ್ನಡ ಸಾಹಿತ್ಯ ಮತ್ತು ಜನಪರ ಚಳುವಳಿ' ಎಂಬ ವಿಚಾರಸಂಕಿರಣವನ್ನೂ ಆಯೋಜಿಸಿದ್ದು ಗೀತಾರವರ ಅಧಿಕಾರಾವಧಿಯಲ್ಲಿಯೇ. ಬಳ್ಳಾರಿಯಲ್ಲಿ ವಿವಿಧ ಲೇಖಕರ ಕೃತಿಗಳಲ್ಲಿ ಸ್ತ್ರೀಪರ ಕಾಳಜಿಗೆ ಸಂಬಂಧಿಸಿದಂತೆ ಅಭಿವ್ಯಕ್ತವಾದ ಅಂಶಗಳನ್ನು ಕುರಿತು 'ನಮ್ಮ ಕಣ್ಣಲ್ಲಿ ನೀವು' ಎಂಬ ಎರಡು ದಿನಗಳ ವಿಚಾರಸಂಕಿರಣವನ್ನು ಏರ್ಪಡಿಸಿದ್ದು ಒಂದು ವಿಶೇಷ ಸಾಧನೆ. ಕುಂದಾಪುರದಲ್ಲಿ ಯುವ ಕಥೆಗಾರರಿಗಾಗಿ ಜನಪ್ರತಿನಿಧಿ ಪತ್ರಿಕೆಯೊಂದಿಗೆ 4ದಿನಗಳ ಕಥಾಕಮ್ಮಟವನ್ನು ನಡೆಸಿದ್ದಲ್ಲದೆ ರಾಮನಗರ ತಾಲೂಕಿನ ಅವ್ವೇರಹಳ್ಳಿಯ ರೇವಣಸಿದ್ದೇಶ್ವರ ಬೆಟ್ಟದಲ್ಲಿ ಕೆ.ಎಸ್. ಎಮ್. ಟ್ರಸ್ಟ್ ಸಹಯೋಗದಲ್ಲಿ 'ಕಾವ್ಯ ಬೆಳದಿಂಗಳು' ಎಂಬ ಕವಿಗೋಷ್ಠಿಯನ್ನೂ ಹಮ್ಮಿಕೊಂಡಿದ್ದರು. ಗೀತಾರವರ ಸಾರಥ್ಯದಲ್ಲಿ ಅಕಾಡೆಮಿ ಅನೇಕ ಲೇಖಕಿಯರ ಸಾಧನೆಗಳನ್ನು ಗುರುತಿಸಿರುವುದು, ಮಹಿಳಾ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಸಾಹಿತ್ಯ ರಚನೆಗೆ ಪ್ರೇರೇಪಣೆ ನೀಡಿರುವುದು, ಗಮನಾರ್ಹ. ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯೊಂದಿಗೆ ವಿದ್ಯಾರ್ಥಿನಿಯರಿಗಾಗಿ ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಅಧ್ಯಯನ ಶಿಬಿರವನ್ನು ನಡೆದ ಗೀತಾನಾಗಭೂಷಣರು ತಮ್ಮ ಅಧಿಕಾರಾವಧಿಯಲ್ಲಿ ನಾಡಿನ ಹಲವು ಹಿರಿಯ ಸಾಹಿತಿಗಳ ಸ್ಮರಣೆಗಾಗಿ ಅವರ ಸಮಗ್ರ ಸಾಹಿತ್ಯವನ್ನು ಕುರಿತು ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡಿದ್ದರು. ಎಲ್. ಗುಂಡಪ್ಪ ಹಾಗೂ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರ ಜನ್ಮಶತಮಾನೋತ್ಸವದ ಆಚರಣೆ ಕೂಡ ಗೀತಾರವರ ನೇತೃತ್ವದಲ್ಲಿ ನಡೆದು ಅವರ ಹೆಗ್ಗಳಿಕೆಗೆ ಗರಿ ಮೂಡಿಸಿದೆ.

## ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ

ಕನ್ನಡ ಸಾಹಿತ್ಯಕ್ಕೆ ಗೀತಾನಾಗಭೂಷಣರು ಸಲ್ಲಿಸಿದ ಅಮೋಘ ಸೇವೆಯನ್ನು ಗುರುತಿಸಿ ಅಖಿಳ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 76 ನೆಯ ಅಧ್ಯಕ್ಷರನ್ನಾಗಿ ಅವರನ್ನು ಸರ್ವಾನುಮತದಿಂದ ಆಯ್ಕೆಮಾಡಿದ್ದು ಇಡೀ ಮಹಿಳಾ ವರ್ಗಕ್ಕೆ ಸಂದ ಗೌರವವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಗಿನ ಅಧ್ಯಕ್ಷರಾದ ನಲ್ಲೂರು ಪ್ರಸಾದ್ ಮತ್ತು ಕಾರ್ಯದರ್ಶಿ ಪುಂಡಲೀಕ

ಹಾಲಂಬಿಯವರು ಈ ಘೋಷಣೆ ಮಾಡಿದಾಗ ನಾಡಿನ ಸಮಸ್ತ ಮಹಿಳೆಯರೂ ಸಂತೋಷಪಟ್ಟದ್ದು ಅವಿಸ್ಮರಣೀಯ.

ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಸುಸಂದರ್ಭದಲ್ಲಿ ಸಂದರ್ಶಕರೊಂದಿಗೆ ಮಾತನಾಡುತ್ತ ಈ ಸ್ಥಾನವನ್ನು ಒಟ್ಟು ಲೇಖಕಿಯರಿಗೆ, ನನ್ನ ಸಾಹಿತ್ಯಕ್ಕೆ ಮತ್ತು ಅಸಂಖ್ಯ ದಮನಿತ ಸಾಮಾನ್ಯ ಮಹಿಳೆಯರ ಬದುಕಿಗೆ ಸಂದ ಗೌರವದ ಸಂಕೇತವಾಗಿ ಸ್ವೀಕರಿಸಬಯಸುತ್ತೇನೆಂದ ಗೀತಾರವರ ಮನದಾಳದ ಮಾತುಗಳು ಸ್ಮರಣೀಯ. ಸಮ್ಮೇಳನದ ಪ್ರಸ್ತುತತೆಯ ಬಗ್ಗೆ ಗೀತಾರವರ ಅಭಿಪ್ರಾಯವನ್ನು ಕುರಿತು ಪ್ರಶ್ನಿಸಿದಾಗ ಇತ್ತೀಚೆಗೆ ಸಮ್ಮೇಳನಗಳು ಮೌಲ್ಯರಹಿತವಾಗಿ ಜಾತ್ರೆಯಾಗುವ ಪರಿಸ್ಥಿತಿಯ ಬಗ್ಗೆ ವಿಷಾದಿಸಿದ ಅವರು 'ಸಮ್ಮೇಳನಗಳು ಒಂದು ಜನಸಮುದಾಯದ ಬದುಕಿನ ಚಿಂತನೆಯಾಗಿ ಪ್ರಭುತ್ವಗಳ ಆತ್ಮವಿಮರ್ಶೆಯಾಗಿ ಸಾಂಸ್ಕೃತಿಕ ವಾರಸುದಾರರ ನೈತಿಕ ಹೊಣೆಗಾರಿಕೆಯಾಗಿ ಅರಳಬೇಕಾಗಿದೆ' ಎಂದಿರುವುದು ಉಲ್ಲೇಖನೀಯ. 2010, ಫೆಬ್ರವರಿ 19, 20, 21ರಲ್ಲಿ ಗದುಗಿನ ಕುಮಾರವ್ಯಾಸನ ತವರೂರಿನಲ್ಲಿ ಜರುಗಿದ 76ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಕನ್ನಡ ಭಾಷಾ ಸಾಹಿತ್ಯದ ಬಗ್ಗೆ ಅಧಿಕೃತವಾಗಿ ಮಾತನಾಡಿದ ಗೀತಾರವರು ಕನ್ನಡನಾಡಿನ ರಾಜಧಾನಿಯಲ್ಲಿ ಕನ್ನಡಕ್ಕುಂಟಾದ ದುರವಸ್ಥೆಯ ಬಗ್ಗೆ ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದ್ದಾರೆ. ಕನ್ನಡನಾಡಿನಲ್ಲಿ ಕನ್ನಡೇತರ ಭಾಷೆಗಳೇ ಮೆರೆಯುತ್ತಿದ್ದು ಕನ್ನಡ ಮೂಲೆಗುಂಪಾಗುತ್ತಿರುವುದು ಅತ್ಯಂತ ಶೋಚನೀಯವೆನ್ನುವ ಅವರು 'ಕನ್ನಡೇತರರು ಕರ್ನಾಟಕದಲ್ಲಿ ನೆಲಸುವುದನ್ನು ನಾನು ವಿರೋಧಿಸುವುದಿಲ್ಲ. ಆದರೆ ಅವರು ಕನ್ನಡವನ್ನು ತಮ್ಮ ಭಾಷೆಯಾಗಿ ಸ್ವೀಕರಿಸಿ ವ್ಯವಹಾರಮಾಧ್ಯಮವನ್ನಾಗಿ ಬಳಸಬೇಕು, ಕನ್ನಡಕ್ಕೆ ಪ್ರಾಶಸ್ತ್ಯವನ್ನು ನೀಡಬೇಕೆ'ಂದು ವಾದಿಸುತ್ತಾರೆ. ಕನ್ನಡಕ್ಕೆ ರಾಷ್ಟ್ರೀಯ ಸ್ಥಾನಮಾನಗಳು ಲಭ್ಯವಾಗಿದ್ದರೂ ಇನ್ನೂ ಕೇಂದ್ರ ಸರಕಾರ ಆ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿಲ್ಲವೆಂದು ವಿಷಾದಿಸುತ್ತಾರೆ. ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಜ್ಞಾನಪೀಠ ಪ್ರಶಸ್ತಿಗಿಂತಲೂ ಹಿರಿದಾದ ಪ್ರಶಸ್ತಿಗಳು ಸಲ್ಲಬೇಕು. ದೇವರಿಗೆ ಬಂಗಾರದ ಕಿರೀಟವನ್ನು ತೊಡಿಸುವ ಸರಕಾರ ಸಾಹಿತ್ಯಕ್ಷೇತ್ರವನ್ನು ಏಕೆ ಪ್ರೋತ್ಸಾಹಿಸಬಾರದೆಂದು ಸವಾಲು ಹಾಕಿದ್ದಾರೆ.

ಸಮ್ಮೇಳನಾಧ್ಯಕ್ಷತೆಯ ಅತ್ಯುನ್ನತ ಪದದಲ್ಲಿ ವಿರಾಜಮಾನರಾಗುವ ಅವಕಾಶ ಲಭಿಸಿದ ಬಗ್ಗೆ ಗೀತಾರವರ ಪ್ರತಿಕ್ರಿಯೆ ಅವರ ಪ್ರಾಂಜಲ ಮನಸ್ಸು

ಹಾಗೂ ನಿರಾಡಂಬರಪ್ರಿಯತೆಗೆ ಸಾಕ್ಷಿ. 'ನಾನು ಸಮ್ಮೇಳನದ ಅಧ್ಯಕ್ಷೆಯಾಗುವ ನಿರೀಕ್ಷೆ ಇಟ್ಟುಕೊಂಡವಳಲ್ಲ. ಅದಾಗಿ ಬಂದಿರುವುದು ನನಗೆ ಸಂತಸವನ್ನು ತಂದಿದೆ.'

### ಪ್ರಶಸ್ತಿ ಮತ್ತು ಪದವಿಗಳು

ಗೀತಾನಾಗಭೂಷಣರು ತಾವು ಯಾವುದೇ ಪ್ರಶಸ್ತಿ ಪದವಿಗಳಿಗಾಗಿ ಹಾತೊರೆದವರಲ್ಲವೆಂದು ಹೇಳಿದರೂ ಅವೆಲ್ಲವೂ ಅವರನ್ನು ಹುಡುಕಿಕೊಂಡು ಬಂದಿವೆ. ಅನೇಕ ಸಂಘ, ಸಂಸ್ಥೆಗಳು ಅತ್ಯುನ್ನತ ಪ್ರಶಸ್ತಿ, ಪುರಸ್ಕಾರಗಳನ್ನು ಅವರ ಮಡಿಲಿಗೆ ಹಾಕಿವೆ. ಹಂಪಿ ವಿ.ವಿ. ಅವರನ್ನು ನಾಡೋಜರೆಂದು ಗೌರವಿಸಿದೆ. ಗುಲ್ಬರ್ಗಾ ವಿ.ವಿ. ಗೌರವ ಡಾಕ್ಟರೇಟ್ ಪದವಿ ನೀಡಿದೆ.

'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನಲ್ಲದೆ ಮಾಣಿಕ ಬಾಯಿ ಪಾಟೀಲ್ ಪ್ರತಿಷ್ಠಾನದ ಪ್ರಶಸ್ತಿ, ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ, ಸರ್. ಎಂ. ವಿಶ್ವೇಶ್ವರಯ್ಯ ದಶಮಾನೋತ್ಸವ ಸಾಹಿತ್ಯ ಪ್ರಶಸ್ತಿಗಳನ್ನು ಪಡೆದ ಗೀತಾರವರು ತಮ್ಮ ಸಮಗ್ರ ಕೃತಿಗಳಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಬಿ. ಸರೋಜಾದೇವಿ ಸಾಹಿತ್ಯ ಪ್ರಶಸ್ತಿ, ಬಸವರಾಜ ಕಟ್ಟೀಮನಿ ಕಾದಂಬರಿ ಪ್ರಶಸ್ತಿ, ರಾಣಿ ಕಿತ್ತೂರು ಚೆನ್ನಮ್ಮ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಬಳಗ ನೀಡಿದ ಅನುಪಮಾ ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ಆರ್ಯಭಟ ಪ್ರಶಸ್ತಿ, ವರ್ಷದ ಉತ್ತಮ ಲೇಖಕಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ರತ್ನಮ್ಮ ಸಾಹಿತ್ಯ ಪ್ರಶಸ್ತಿ, ಗೊರೂರು ಪ್ರಶಸ್ತಿ, ಧರ್ಮಸ್ಥಳದ ಸಾಹಿತ್ಯ ಪ್ರಶಸ್ತಿ, ಪ್ರೊ. ಆಲಗುರ ಪ್ರಶಸ್ತಿ, ಉತ್ತಮ ಉಪನ್ಯಾಸಕಿ ಪ್ರಶಸ್ತಿ, ಗುಲ್ಬರ್ಗಾದ ಎಸ್. ಆರ್. ಪಾಟೀಲ್ ಮಹಾಂತ ಜ್ಯೋತಿ' ಪ್ರತಿಷ್ಠಾನದ ಕಾಯಕ ರತ್ನ ಪ್ರಶಸ್ತಿಗಳೆಲ್ಲ ಅವರ ಹಿರಿಮೆಯ ಕಿರೀಟಕ್ಕೆ ಗರಿ ಮೂಡಿಸಿವೆ. ಅವರ 'ಆಘಾತ' ಮತ್ತು 'ದಂಗೆ' ಕಾದಂಬರಿಗಳಿಗೆ ಅನುಕ್ರಮವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಮತ್ತು ರಾಜಾರಾಮ್ ದತ್ತಿ ಪ್ರಶಸ್ತಿಗಳು ಸಂದರೆ 'ನೋವು' ಕಾದಂಬರಿಗೆ ಮಾರ್ದನಿ ಪತ್ರಿಕೆಯ ಉತ್ತಮ ಕಾದಂಬರಿ ಬಹುಮಾನ, 'ಧುಮ್ಮಸು' ಕಾದಂಬರಿಗೆ ಉಮಾಪತಿ ಚುಕ್ಕಿ ಪ್ರತಿಷ್ಠಾನ ಸಿರವಾರದ ಪ್ರಶಸ್ತಿಗಳು ಲಭಿಸಿವೆ.

ಭಾರತೀಯ ಭಾಷಾ ಪರಿಷದ್ ಕೋಲ್ಕತ್ತಾದ 'ರಚನಾ ಸಮಗ್ರ ಪ್ರಶಸ್ತಿ'ಯನ್ನು ಪಡೆಯುವುದರ ಮೂಲಕ ಆ ಪ್ರಶಸ್ತಿಯನ್ನು ಪಡೆದ ಕನ್ನಡದ ಮೊತ್ತಮೊದಲ ಮಹಿಳಾ ಸಾಹಿತಿ ಎಂಬ ಹೆಗ್ಗಳಿಕೆಯೂ ಗೀತಾರವರ ಪಾಲಿಗೆ ಸಂದಿದೆ. ಸಮೂಹಮಾಧ್ಯಮಗಳು, ಶಿಕ್ಷಣ ಸಮಿತಿಗಳು, ಸಂಘಟನೆಗಳು ಅವರ ಸಂದರ್ಶನಗಳನ್ನು ಮಾಡಿವೆ. ವಿವಿಧ ಸಾರ್ವಜನಿಕ ಮತ್ತು ಶಿಕ್ಷಣ ಸಂಘ, ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ. ಅನೇಕ ಪತ್ರಿಕೆಗಳಲ್ಲಿ ಅವರ ಕೃತಿಗಳ ಬಗ್ಗೆ ಪ್ರಶಂಸನೀಯವಾದ ವರದಿಗಳು ಪ್ರಕಟವಾಗಿವೆ. ಸಂಯುಕ್ತ ಕರ್ನಾಟಕದಲ್ಲಿ ವಾರದ ವ್ಯಕ್ತಿಯಾಗಿ ಅವರು ಪರಿಚಯಗೊಂಡಿದ್ದಾರೆ. ಅವರ ಕೃತಿಗಳು ಅಧ್ಯಯನಕ್ಕಾಗಿ ಆಯ್ಕೆಯಾಗಿವೆ. ಅವರ ಕೃತಿಗಳ ಬಗ್ಗೆ ಅನೇಕ ವಿಚಾರಸಂಕಿರಣಗಳು ನಡೆದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಆಗಸ್ಟ್ 2004ರಲ್ಲಿ, ಲೋಹಿಯಾ ಪ್ರಕಾಶನ ಬಳ್ಳಾರಿಯಿಂದ ಮಾರ್ಚ್ 2005ರಲ್ಲಿ ಈ ವಿಚಾರ ಸಂಕಿರಣಗಳು ನಡೆದರೆ ವಿಚಾರ ಸಂಕಿರಣಕ್ಕೆ ಸಂಬಂಧಿಸಿದಂತೆ 'ಮಹಿಳಾ ಮಾರ್ಗ' (ಸಂ. ಸಬೀಹಾ ಭೂಮಿಗೌಡ ಮತ್ತು ಬಸವರಾಜ ಸೂಳಿಭಾವಿ–ಲಡಾಯಿ ಪ್ರಕಾಶನ), 'ಗೀತಾ ನಾಗಭೂಷಣ– ಕಲ್ಬುರ್ಗಿಯ ಸ್ಪಂದನ'(ಸಂ. ಡಾ. ಸರಸ್ವತಿ ಚಿಮ್ಮಲಗಿ) ಇತ್ಯಾದಿ ಕೃತಿಗಳೂ ಪ್ರಕಟವಾಗಿವೆ. ಅನೇಕ ಶಾಲಾ, ಕಾಲೇಜು, ವಿ.ವಿ. ಗಳಲ್ಲಿ ಅವರ ಕೃತಿಗಳು ಪಠ್ಯವಾಗಿವೆ. ಅವರನ್ನು ಕುರಿತು ಪಿಎಚ್. ಡಿ ಅಧ್ಯಯನಗಳು ನಡೆಯುತ್ತಿವೆ.

ಬೆಂಗಳೂರು, ಗುಲ್ಬರ್ಗಾ, ಧಾರವಾಡ ಆಕಾಶವಾಣಿಗಳಲ್ಲಿ ಗೀತಾರವರು ಬರೆದ ಸುಮಾರು 16 ಕತೆಗಳೂ 15 ನಾಟಕಗಳೂ ಪ್ರಸಾರಗೊಂಡಿವೆ. ಅವರ ಕಾದಂಬರಿಗಳು ಮರಾಠಿ, ತೆಲುಗು, ತಮಿಳು ಭಾಷೆಗಳಿಗೆ ಅನುವಾದಗೊಂಡಿವೆ. ಚಲನಚಿತ್ರಗಳಾಗಿ ಜನಪ್ರಿಯತೆಯನ್ನು ಗಳಿಸಿವೆ. ಅನೇಕ ಕಾದಂಬರಿಗಳು ದೂರದರ್ಶನದಲ್ಲಿ ಧಾರಾವಾಹಿಯಾಗಿ ಹರಿದಿವೆ. ವಿಭಿನ್ನವಾದ ಪ್ರತಿರೋಧದ ನೆಲೆಯಲ್ಲಿ ಅರಳುವ ಇವರ ಬರವಣಿಗೆಯ ಹಾದಿ ದುರ್ಗಮವಾಗಿದ್ದರೂ ತಮ್ಮ ಕ್ರಾಂತಿಕಾರೀ ನಿಲುವಿನಿಂದಾಗಿ ಅನೇಕ ನಿಂದೆ, ಅವಮಾನ, ಬೆದರಿಕೆಗಳನ್ನು ಅನುಭವಿಸಬೇಕಾಗಿ ಬಂದರೂ ತಮ್ಮ ವಿಚಾರಧಾರೆಗಳಿಗೆ ಬದ್ಧರಾಗಿದ್ದುಕೊಂಡೇ ಸಮಸ್ಯೆಗಳನ್ನು ಎದುರಿಸಿ ಗಟ್ಟಿಗೊಳ್ಳುತ್ತ ಸಾಗಿದ ಗೀತಾ ನಾಗಭೂಷಣರ ಬದುಕು, ಬರಹಗಳು ಓದುಗರ ಕುತೂಹಲ ಮತ್ತು ವೈಚಾರಿಕ ಪ್ರಜ್ಞೆಯನ್ನು ಮೀಟಿ ಸಾಮಾಜಿಕ ಸಂಚಲನವನ್ನುಂಟುಮಾಡಿವೆ. 'ಕಲ್ಬುರ್ಗಿಯ ಸ್ಪಂದನ'ವನ್ನು ಸಂಪಾದಿಸಿದ ಡಾ. ಸರಸ್ವತಿ ಚಿಮ್ಮಲಗಿಯವರು ಗೀತಾರ ಧೈರ್ಯ, ಎದೆಗಾರಿಕೆ,

ಆತ್ಮವಿಶ್ವಾಸಗಳನ್ನು ಕೊಂಡಾಡುತ್ತ 'ಈ ನಿಲವು ಅಸಾಧಾರಣವಾದುದು ಕೆಸರಿನಿಂದ ಮೇಲೆದ್ದ ತಾವರೆಯಂತೆ ಗೀತಾನಾಗಭೂಷಣರು ಬಡತನ, ದೌರ್ಜನ್ಯಗಳ ಕೆಸರಿನಿಂದ ಮೇಲೆ ಬಂದು ಅರಳಿದವರು, ಕನ್ನಡ ಕಾದಂಬರಿಲೋಕದಲ್ಲಿ ಬೆಳಗಿದ ಪೂರ್ಣಚಂದ್ರ, ಬಂಡಾಯದ ಹರಿಕಾರ್ತಿ ಎಂದು ಪ್ರಶಂಸಿಸಿದ್ದಾರೆ.

**ಸಮಾರೋಪ**

ಒಟ್ಟಿನಲ್ಲಿ ಸಾಹಿತ್ಯ ರಚನೆಯ ಮೂಲಕ ಓದುಗ ವಿಮರ್ಶಕ ವಲಯವನ್ನು ಶ್ರೀಮಂತಗೊಳಿಸಿದ ಗೀತಾ ನಾಗಭೂಷಣರು ಕನ್ನಡ ನಾಡು ಕಂಡ ಅಪರೂಪದ ಬರಹಗಾರ್ತಿ. ಬಸವರಾಜ ಕಟ್ಟೀಮನಿ, ಚಂದ್ರಶೇಖರ ಕಂಬಾರ ಮುಂತಾದ ಪ್ರಗತಿಶೀಲ ಬರಹಗಾರರಿಂದ ಸ್ಫೂರ್ತಿ ಪಡೆದು ಸಾಹಿತ್ಯ ರಚನೆಗೆ ಕಾಲಿಟ್ಟರೂ ತಮ್ಮ ಬದುಕಿನ ಬವಣೆಗಳಿಂದ ಕೆರಳಿದ ಕ್ರಾಂತ ಮನಸ್ಸು ಸಾಹಿತ್ಯದ ನೆಲೆಗಳನ್ನು ಅತ್ಯಂತ ವಿಶಿಷ್ಟವೂ ವಿನೂತನವೂ ಆಗಿ ನೇರ್ಪುಗೊಳಿಸಿರುವುದು ಗೀತಾರವರ ಅತ್ಯುನ್ನತ ಸಾಧನೆಯಾಗಿದೆ.

ಊಳಿಗಮಾನ್ಯ ಬದುಕಿಗೆ ತಮ್ಮನ್ನು ಸಮರ್ಪಿಸಿ ಬಡತನ, ಮೂಢನಂಬಿಕೆ, ಅಜ್ಞಾನ, ಅತ್ಯಾಚಾರಗಳ ಕತ್ತಲೆಯಲ್ಲಿ ಕೊಳೆಯುತ್ತಿದ್ದ ತಿರಸ್ಕೃತ ಸಮುದಾಯವನ್ನು ಉನ್ನತಿಸುವ ಕಾಳಜಿ ಅವರ ಬರವಣಿಗೆಯ ಪ್ರೇರಕ ಶಕ್ತಿಯಾಗಿದೆ. ಜಾತ್ಯತೀತ ಧೋರಣೆ, ಸ್ವಾತಂತ್ರ್ಯದ ಹಪಾಹಪಿ, ಅಕ್ಷರದಾಹ, ಸ್ವಾಭಿಮಾನ, ಸಮಾನತೆ ಇತ್ಯಾದಿ ಹತ್ತು ಹಲವು ಹಂಬಲ, ಆಶೋತ್ತರಗಳು, ಪ್ರಗತಿಪರ ನಿಲುವುಗಳು ಅವರ ಕೃತಿಗಳ ಒಡಲಲ್ಲಿ ಹಾಸುಹೊಕ್ಕಾಗಿವೆ. ದೇವಾಲಯದಲ್ಲಿ ಅರ್ಚಕನಾಗುವ ವಿಚಾರ, ಮಠದ ಬಾವಿಯಿಂದ ನೀರು ತರುವ ವಿಚಾರ, ಅಂತರ್ಜಾತೀಯ ವಿವಾಹ ಮುಂತಾದ ಕ್ರಾಂತಿಕಾರಕ ಆಶಯಗಳೊಂದಿಗೆ ಜಮೀನ್ದಾರರ ಅಹಂಕಾರ, ಕ್ರೌರ್ಯ, ಹಿಂಸಾಚಾರ, ಲೈಂಗಿಕ ದಬ್ಬಾಳಿಕೆ, ದೌರ್ಜನ್ಯಗಳನ್ನು ಪ್ರತಿರೋಧಿಸುವ ಮೂಲಕ ಅಭಿವ್ಯಕ್ತಿಸಿದ ವೈಚಾರಿಕ ಚಿಂತನೆ, ಸ್ತ್ರೀಪರ ಕಾಳಜಿಗಳು ಅವರ ಕೃತಿಗಳ ಮೌಲ್ಯವನ್ನು ಹೆಚ್ಚಿಸಿವೆ. ಒಂದು ಜನಾಂಗದ ಬದುಕಿನಲ್ಲಿ ಬೀಡುಬಿಟ್ಟಿದ್ದ ಅತ್ಯಂತ ಹೇಯವಾದ ಅನಿಷ್ಟಪದ್ಧತಿಯನ್ನು ಸಾಹಿತ್ಯದ ಮೂಲಕ ಸಮೂಲ ನಾಶಗೊಳಿಸಲು ಪ್ರಯತ್ನಿಸಿದ ಅಗ್ರ ಲೇಖಕಿ ಗೀತಾ. ದೇವದಾಸಿ, ಜೋಗತಿ, ಬೆತ್ತಲೆ ಮೆರವಣಿಗೆಗಳನ್ನು ಧಾರ್ಮಿಕ ಮೂಢನಂಬಿಕೆಯ ಪರಿವೇಶಕ್ಕೆ ಒಳಪಡಿಸಿ

ಅವರು ನಡೆಸಿದ ಅಧ್ಯಯನ, ನಿಷ್ಠುರವಾಗಿ ಬಹಿರಂಗ ಪಡಿಸಿದ ವಿಚಾರಗಳು ಅತ್ಯಮೂಲ್ಯವಾಗಿದ್ದು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆಯೆನಿಸಿದೆ.

ಸ್ವಾತಂತ್ರ್ಯಪೂರ್ವ ಭಾರತದ ಸಮಾಜದ ಚಿತ್ರಣವನ್ನು ಗರ್ಭೀಕರಿಸಿಕೊಂಡು ಓದುಗರ ಸಹಾನುಭೂತಿ ಮತ್ತು ವಿಶ್ವಾಸವನ್ನು ಗಳಿಸಿಕೊಂಡ ಗೀತಾರವರ ಕೃತಿಗಳನ್ನು ಸ್ವಾತಂತ್ರ್ಯೋತ್ತರ ಕಾಲಸ್ಥಿತಿಯೊಂದಿಗೆ ಸಮೀಕರಿಸಿದರೆ ದಲಿತಜನಾಂಗದ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದನ್ನು ಗಮನಿಸಬಹುದು. ಸರಕಾರದ ಕಾಯಿದೆಯಿಂದ ಭೂಮಾಲೀಕತ್ವ ಶ್ರೀಮಂತ ಜಮೀನ್ದಾರರಿಂದ ಉಳುವವನಿಗೆ ಹಸ್ತಾಂತರಗೊಂಡ ಬಳಿಕ ಎಷ್ಟೋ ಮೇಲುವರ್ಗದ ಕುಟುಂಬಗಳು ಕೂಡ ಬಡತನದ ರೇಖೆಗಿಂತಲೂ ಕೆಳಗಿಳಿದು ಉಣ್ಣುವುದಕ್ಕೂ ಉಡುವುದಕ್ಕೂ ಪಾಡುಪಡುವ ಸ್ಥಿತಿಯುಂಟಾಗಿದೆ. ಆಸ್ತಿ ಪರಭಾರೆಯಾದ ಖೇದ ಒಂದು ಕಡೆ ಬದುಕು ದುಸ್ಸಾಧ್ಯವಾದ ಅತಂತ್ರ ಸ್ಥಿತಿ ಇನ್ನೊಂದು ಕಡೆ ಹೀಗೆ ನ್ಯಾಯದ ತಕ್ಕಡಿ ಬದಲಾದ ಪರಿಸ್ಥಿತಿಯನ್ನು ಗಮನಿಸುವಾಗ ಈ ಶೋಷಣೆ ಮತ್ತು ಶೋಷಿತ ಸ್ಥಿತಿ ಯಾವುದೇ ಜಾತಿಗಾಗಲೀ, ವರ್ಗಕ್ಕಾಗಲೀ ಸೀಮಿತವಲ್ಲವೆಂಬುದನ್ನು ಗಮನಿಸಬೇಕಾಗಿದೆ. ತೋಳ ಕುರಿಮರಿ ನ್ಯಾಯದಂತೆ ಒಂದು ಕಾಲದಲ್ಲಿ ಶೋಷಣೆಯ ಪರಮಾವಧಿಯಲ್ಲಿ ನೊಂದವರೂ ಅವಕಾಶ ಸಿಕ್ಕಿದಾಗ ಶೋಷಕರ ಕತ್ತಿ ಮಸೆಯಲು ಹಿಂಜರಿಯುವುದಿಲ್ಲ. ಈ ನಿಟ್ಟಿನಲ್ಲೂ ವಿಚಾರಜಾಗೃತಿಯನ್ನು ಮೂಡಿಸಬೇಕಾಗಿದೆ. ಜಾಗತೀಕರಣ, ಉದಾರೀಕರಣ, ಭ್ರಷ್ಟಾಚಾರ, ಭಯೋತ್ಪಾದನೆ ಇತ್ಯಾದಿ ಬಹುಸಂಖ್ಯಾತ ಜನವರ್ಗದ ಭವಿಷ್ಯವನ್ನು ತಲ್ಲಣಗೊಳಿಸುವ ಕರಾಳಮುಖಗಳತ್ತ ಚಿಂತನೆಯ ಕ್ಷ-ಕಿರಣವನ್ನು ಹರಿಯಿಸಬೇಕಾಗಿದೆ. ತಮ್ಮ ಸೃಜನಶೀಲ ಕಲೆಯ ಕತ್ತಿಯಿಂದ ಬದುಕನ್ನು ಬಿಗಡಾಯಿಸಬಹುದಾದ ಅಂಥ ಕಲ್ಲುಮುಳ್ಳುಗಳ ನಿವಾರಣೆಯ ಕಡೆಗೂ ಗೀತಾರವರು ಕ್ರಿಯಾಶೀಲರಾಗುತ್ತಾರೆಂದು ಆಶಿಸಬಹುದಾಗಿದೆ.

ಇದುವರೆಗೆ ತಾವು ಕಂಡುಂಡ ಜೀವನಾನುಭವಗಳನ್ನು ತಮ್ಮ ಬರಹಗಳ ಜೀವದ್ರವ್ಯವಾಗಿ ಆರಿಸಿದ್ದೇನೆಂದು ಹೇಳಿದ ಗೀತಾ ನಾಗಭೂಷಣರು ಅಲ್ಲ ತುಂಬಿನಿಂತ ಬಡತನ, ಬರಗಾಲ, ಬಾಲ್ಯವಿವಾಹ, ಅನಕ್ಷರತೆ, ನಿರುದ್ಯೋಗ, ನಿರ್ವಸತಿ ಇತ್ಯಾದಿ ಸಮಸ್ಯೆಗಳ ಆಳಕ್ಕೆ ತಮ್ಮ ಶೋಧನೆಯ ಪಾತಾಳ ಗರಡಿಯನ್ನು ಯಾಕೆ ಇಳಿಸಲಿಲ್ಲವೆನ್ನುವುದು ಅಚ್ಚರಿ ಹುಟ್ಟಿಸಿದರೂ ಲೈಂಗಿಕ ಶೋಷಣೆಗೆ ಸಂಬಂಧಿಸಿದಂತೆ ಇಷ್ಟು ವ್ಯಾಪಕವಾಗಿ, ಇಷ್ಟು ತಲಸ್ಪರ್ಶಿಯಾಗಿ

ಸ್ಪಂದಿಸಿದ ಇನ್ನೊಬ್ಬ ಲೇಖಕಿ ಹುಟ್ಟಿಲ್ಲವೆನ್ನುವುದೇ ಗೀತಾ ನಾಗಭೂಷಣರ ಸಾಧನೆಗೆ ಕೋಡು ಮೂಡಿಸುತ್ತದೆ. ಅದಕ್ಕಾಗಿ ಸಮಸ್ತ ಸಹೃದಯ ಲೋಕ ಅವರನ್ನು ಅಭಿನಂದಿಸುತ್ತದೆ.

**ಡಾ. ಪ್ರಮೀಳಾ ಮಾಧವ್**
ಶ್ರೀಸದನ, 88/ಎ
ವಿಠ್ಠಲ್ ನಗರ, ಬೆಂಗಳೂರು– 560111
ಮೊ: 9845921610